ಕನ್ನಡ ಸಾಹಿತ್ಯ

3
ಸಂಚಿಕೆ

017

ಸ್ನಾತಕೋತ್ತರ ಪದವಿ ಪೂರ್ವಸಿದ್ಧತಾ ಕಾರ್ಯಕ್ರಮ

ಎಂಪಿಪಿ

MPP

MASTER'S PREPARATORY PROGRAMME

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮಾನಸ ಗಂಗೋತ್ರಿ, ಮೈಸೂರು - 570 006

ಉನ್ನತ ಶಿಕ್ಷಣಕ್ಕಾಗಿ ಇರುವ ಅವಕಾಶಗಳನ್ನು ಹೆಚ್ಚಿಸುವುದಕ್ಕೆ ಮತ್ತು ಶಿಕ್ಷಣವನ್ನು ಪ್ರಜಾತಂತ್ರೀಕರಿಸುವುದಕ್ಕೆ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಆರಂಭಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 1986

The Open University system has been initiated in order to augment opportunities for higher education and as instrument of democrating education.

National Education Policy 1986

ಮುಕ್ತ ವಿಶ್ವವಿದ್ಯಾನಿಲಯವು ದೂರಶಿಕ್ಷಣ ಪದ್ಧತಿಯಲ್ಲಿ ಬಹುಮಾಧ್ಯಮಗಳನ್ನು ಉಪಯೋಗಿಸುತ್ತದೆ. ....ವಿದ್ಯಾಕಾಂಕ್ಷಿಗಳನ್ನು ಜ್ಞಾನ ಸಂಪಾದನೆಗಾಗಿ ಕಲಿಕಾ ಕೇಂದ್ರಕ್ಕೆ ಕೊಂಡೊಯ್ಯುವ ಬದಲು, ಜ್ಞಾನ ಸಂಪತ್ತನ್ನು ವಿದ್ಯೆ ಕಲಿಯುವವರ ಬಳಿ ಕೊಂಡೊಯ್ಯುವ ವಾಹಕವಾಗಿದೆ.

ಡಾ. ಕುಳಂದೈಸ್ವಾಮಿ

"The Open University system makes use of Multimedia in distance education system. .... it is vehicle which transports knowledge to the place of learners rather than transport to the place of learning.

Dr. Kulandai Swamy

ವಿಶ್ವಮಾನವ ಸಂದೇಶ

ಪ್ರತಿಯೊಂದು ಮಗುವು ಹುಟ್ಟುತ್ತಲೇ - ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪ ಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು.

ಮನುಜ ಮತ, ವಿಶ್ವ ಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ, ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜ ಮತ. ಆ ಪಥ ಈ ಪಥ ಅಲ್ಲ; ವಿಶ್ವ ಪಥ. ಆ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಸಂಕುಚಿತ ಮತದ ಆಂಶಿಕ ದೃಷ್ಟಿ ಅಲ್ಲ; ಭೌತಿಕ ಪಾರಮಾರ್ಥಿಕ ಎಂಬ ಭಿನ್ನದೃಷ್ಟಿ ಅಲ್ಲ; ಎಲ್ಲವನ್ನು ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ.

ಕುವೆಂಪು

Gospel of Universal Man

Every Child, at birth, is the universal man. But, as it grows, we turn it into "a petty man". It should be the function of education to turn it again into the enlightened "universal man".

The Religion of Humanity, the Universal Path, the Welfare of All, Reconciliation, the Integral Vision- these ***five mantras*** should become View of the Future. In other words, what we want henceforth is not this religion or that religion, but the Religion of Humanity ; not this path or that path, but the Universal Path ; not the well-being of this individual or that individual, but the Welfare of All ; not turning away and breaking off from one another, but reconciling and uniting in concord and harmony ; and, above all, not the partial view of a narrow creed, not the dual outlook of the material and the spiritual, but the Integral Vision of seeing all things with the eye of the Divine.

Kuvempu

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸ ಗಂಗೋತ್ರಿ
ಮೈಸೂರು - 570 006

ಎಂ.ಪಿ.ಪಿ.
ಕನ್ನಡ ಸಾಹಿತ್ಯ

ಸಂಚಿಕೆಗಳು	ವಿಷಯಗಳು	
1	ಕನ್ನಡ ಸಾಹಿತ್ಯ ಚರಿತ್ರೆ ಹಳಗನ್ನಡ ಸಾಹಿತ್ಯ ಚಂಪೂ ಸಾಹಿತ್ಯ - ವಚನ ಸಾಹಿತ್ಯ	ಘಟಕ - 1 ಕನ್ನಡ ಸಾಹಿತ್ಯದ ಪ್ರಾಚೀನತೆ ಘಟಕ - 2 ೧ನೇ ನಾಗವರ್ಮ, ನಾಗಚಂದ್ರ, ನಯಸೇನ, ನೇಮಿಚಂದ್ರ, ರುದ್ರಭಟ್ಟ, ಜನ್ನ ಮತ್ತು ಆಂಡಯ್ಯ ಘಟಕ - 3 ವಚನ ಸಾಹಿತ್ಯ : ಹಿನ್ನೆಲೆ, ಉಗಮ, ಬೆಳವಣಿಗೆ, ಲಕ್ಷಣ ಘಟಕ - 4 ಪ್ರಮುಖ ವಚನಕಾರರು, ವಚನ ಸಾಹಿತ್ಯದ ಕೊಡುಗೆ
2	ಕನ್ನಡ ಸಾಹಿತ್ಯ ಚರಿತ್ರೆ ನಡುಗನ್ನಡ ಸಾಹಿತ್ಯ	ಘಟಕ - 1 ರಗಳೆ : ಸ್ವರೂಪ, ಪ್ರಭೇದಗಳು ಘಟಕ - 2 ಕವಿ ಹರಿಹರ ಮತ್ತು ಆತನ ಕೃತಿಗಳು ಘಟಕ - 3 ಷಟ್ಪದಿ ಸಾಹಿತ್ಯ - ಪರಿಚಯ, ರಾಘವಾಂಕ : ಕವಿ, ಕೃತಿಗಳು ಘಟಕ - 4 ಷಟ್ಪದಿ ಕವಿಗಳು : ಕುಮಾರವ್ಯಾಸ, ಚಾಮರಸ, ಕುಮಾರವಾಲ್ಮೀಕಿ
3	ಕನ್ನಡ ಸಾಹಿತ್ಯ ಚರಿತ್ರೆ ನಡುಗನ್ನಡ ಸಾಹಿತ್ಯ	ಘಟಕ - 1 ದಾಸ ಸಾಹಿತ್ಯ : ಶ್ರೀಪಾದರಾಜರು, ಪುರಂದರ, ಕನಕ, ಜಗನ್ನಾಥದಾಸರು ಮೊದಲಾದವರು ಘಟಕ - 2 ತ್ರಿಪದಿ ಸಾಹಿತ್ಯ : ಪರಿಚಯ, ಸರ್ವಜ್ಞ ಕವಿ ಘಟಕ - 3 ಸಾಂಗತ್ಯ ಸಾಹಿತ್ಯ - ೧ : ದೇಪರಾಜ, ಶಿಶುಮಾಯಣ, ನಿಜಗುಣಶಿವಯೋಗಿ, ಕನಕದಾಸರು ಘಟಕ - 4 ಸಾಂಗತ್ಯ ಸಾಹಿತ್ಯ - ೨ : ನಂಜುಂಡ ಕವಿ, ರತ್ನಾಕರವರ್ಣಿ, ಸಂಚಿಯ ಹೊನ್ನಮ್ಮ
4	ಕನ್ನಡ ಸಾಹಿತ್ಯ ಚರಿತ್ರೆ ಆಧುನಿಕ ಕನ್ನಡ ಸಾಹಿತ್ಯ	ಘಟಕ - 1 ಹೊಸಗನ್ನಡದ ಅರುಣೋದಯ : ಭಾಗ - ೧ ಘಟಕ - 2 ಹೊಸಗನ್ನಡ ಅರುಣೋದಯ : ಭಾಗ - ೨ ಘಟಕ - 3 ನವೋದಯ ಮತ್ತು ಪ್ರಗತಿಶೀಲ ಸಾಹಿತ್ಯ ಘಟಕ - 4 ನವ್ಯ ಮತ್ತು ದಲಿತ ಬಂಡಾಯ ಸಾಹಿತ್ಯ
5	ಕನ್ನಡ ಸಾಹಿತ್ಯ ಚರಿತ್ರೆ ಆಧುನಿಕ ಕನ್ನಡ ಸಾಹಿತ್ಯ	ಘಟಕ - 1 ಭಾವಗೀತೆ, ಕಾದಂಬರಿ ಘಟಕ - 2 ಸಣ್ಣ ಕಥೆ : ಸ್ವರೂಪ, ಲಕ್ಷಣ ಮತ್ತು ಇತಿಹಾಸ ಘಟಕ - 3 ನಾಟಕ : ವಸ್ತು, ಸಂವಿಧಾನ, ರಂಗಭೂಮಿ, ನಾಟಕ ಪರಂಪರೆ ಘಟಕ - 4 ಪ್ರಬಂಧ, ವಿಮರ್ಶೆ
6	ಛಂದಸ್ಸು	ಘಟಕ - 1 ಲಯ, ಯತಿ, ಪ್ರಾಸ, ಪಾದ, ಮಾತ್ರಾಗಣ ಸ್ವರೂಪ, ಕನ್ನಡ ಛಂದೋಗ್ರಂಥಗಳ ಪರಿಚಯ ಘಟಕ - 2 ವರ್ಣವೃತ್ತಗಳು, ಖ್ಯಾತ ಕರ್ಣಾಟಕಗಳು; ಮಾತ್ರಾವೃತ್ತಗಳು, ಕಂದ, ರಗಳೆ;ಅಂಶವೃತ್ತಗಳು ಘಟಕ - 3 ಹೊಸಗನ್ನಡ ಛಂದಸ್ಸು - ೧ : ಗಣವಿನ್ಯಾಸ, ಪ್ರಯೋಗಗಳು, ಸ್ವರಾಘಾತ, ಗಣಪರಿವೃತ್ತಿ ಘಟಕ - 4 ಹೊಸಗನ್ನಡ ಛಂದಸ್ಸು - ೨ : ಮಾತ್ರೆ, ಮುಡಿ, ಪದ್ಯಗಣ
7	ಭಾರತೀಯ ಕಾವ್ಯಮೀಮಾಂಸೆ	ಘಟಕ - 1 ಮೀಮಾಂಸೆಯ ಉಗಮ, ಕಾವ್ಯದ ಆಕರ, ಪರಿಕರ, ಸಹೃದಯ, ಕಾವ್ಯ ಲಕ್ಷಣ ಇತ್ಯಾದಿ ಘಟಕ - 2 ಪ್ರಸ್ಥಾನಗಳು : ಅಲಂಕಾರ, ರೀತಿ, ಧ್ವನಿ , ಔಚಿತ್ಯ, ಮೀಮಾಂಸಕರು ಘಟಕ - 3 ರಸಸಿದ್ಧಾಂತ, ರಸಪ್ರಭೇದಗಳು ಘಟಕ - 4 ಧ್ವನಿ ಸಿದ್ಧಾಂತ, ಧ್ವನಿ ಪ್ರಭೇದಗಳು ಘಟಕ - 5 ಔಚಿತ್ಯ ತತ್ವ
8	ಸಾಹಿತ್ಯ ವಿಮರ್ಶೆ	ಘಟಕ - 1 ಪಾಶ್ಚಿಮಾತ್ಯ ವಿಮರ್ಶಕರ ಪರಿಚಯ, ವಿಮರ್ಶೆಯ ಪರಿಚಯ ಘಟಕ - 2 ವಿಮರ್ಶೆಯ ಸ್ವರೂಪ ಘಟಕ - 3 ವಿಮರ್ಶೆಯ ವಿಧಾನಗಳು - 1 ಘಟಕ - 4 ವಿಮರ್ಶೆಯ ವಿಧಾನಗಳು - 2
9	ಕನ್ನಡ ಭಾಷೆಯ ಚರಿತ್ರೆ	ಘಟಕ - 1 ಭಾಷೆ : ಸ್ವರೂಪ, ಲಕ್ಷಣ, ವರ್ಗೀಕರಣ, ದ್ರಾವಿಡ ಭಾಷೆಗಳು, ದ್ರಾವಿಡ ಭಾಷಾವರ್ಗೀಕರಣ ಘಟಕ - 2 ಕನ್ನಡ ಕರ್ಣಾಟಕ ಶಬ್ದ ನಿಷ್ಪತ್ತಿ, ಕನ್ನಡ ಸಂಸ್ಕೃತ - ಸಂಬಂಧ, ಪ್ರಾಂತ ಭೇದಗಳು ಇತ್ಯಾದಿ ಘಟಕ - 3 ವರ್ಣಮಾಲೆ, ನಾಮಪದ, ಲಿಂಗ, ವಚನ, ವಿಭಕ್ತಿ, ಕ್ರಿಯಾಪದ, ಗುಣವಾಚಕ, ಅವ್ಯಯ ಇತ್ಯಾದಿ ಘಟಕ - 4 ಶಬ್ದಕೋಶ ಬೆಳವಣಿಗೆ, ದೇಶ್ಯ - ಅನ್ಯದೇಶ್ಯ ಪದಗಳು
10	ವ್ಯಾಕರಣ	ಘಟಕ - 1 ಶಬ್ದಮಣಿದರ್ಪಣಂ : ವ್ಯಾಕರಣ ಪರಿಚಯ, ವರ್ಣಮಾಲೆ ಘಟಕ - 2 ಸಂಧಿಪ್ರಕರಣ, ನಾಮಪ್ರಕರಣ ಘಟಕ - 3 ಸಮಾಸ ಪ್ರಕರಣ, ತದ್ಧಿತ ಪ್ರಕರಣ ಘಟಕ - 4 ಆಖ್ಯಾತ, ಧಾತು, ಅಪಭ್ರಂಶ, ಅವ್ಯಯ ಪ್ರಕರಣ

ಸಂಚಿಕೆ-3

ನಡುಗನ್ನಡ ಸಾಹಿತ್ಯ

ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

ಪ್ರೊ.ಕೆ.ಸುಧಾರಾವ್
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಡೀನ್ (ಶೈಕ್ಷಣಿಕ) ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಪ್ರೊ. ಬಿ.ಎಸ್. ನಾಗರಾಜ ಭಟ್ — ಸಂಪಾದಕರು
ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮೈಸೂರು.

ಡಾ. ಡಿ.ಟಿ. ಬಸವರಾಜ್ — ಸಂಪಾದಕರು / ಸಂಯೋಜಕರು
ಅಧ್ಯಕ್ಷರು,
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮೈಸೂರು.

ಪಠ್ಯಕ್ರಮ ನಿರೂಪಕರು — ಸಂಚಿಕೆ - 3

ಡಾ. ಎಸ್.ಸುಂದರಮ್ಮ — ಘಟಕ 1 ಮತ್ತು 2
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

ಡಾ. ಎ. ರಂಗಸ್ವಾಮಿ — ಘಟಕ 3 ಮತ್ತು 4
ಅಧ್ಯಾಪಕರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

ಪ್ರಕಾಶಕರು

ಶ್ರೀ ವಿ. ರಾಮಣ್ಣ
ಕುಲಸಚಿವರು (ಆಡಳಿತ)

ಕ.ರಾ.ಮು.ವಿ.,ಯ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕೋರ್ಸ್‌ಗಳ ಹೆಚ್ಚಿನ ವಿವರಗಳನ್ನು
ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸಗಂಗೋತ್ರಿ, ಮೈಸೂರು - 570 006 ಇಲ್ಲಿಂದ ಪಡೆಯಬಹುದು.

ಪ್ರಿಯ ವಿದ್ಯಾರ್ಥಿ,

ಕನ್ನಡ ಎಂ.ಎ., ವ್ಯಾಸಂಗಕ್ಕಾಗಿ ನಮ್ಮ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಪಡೆದಿರುವ ತಮ್ಮನ್ನು ನಮ್ಮ ಕನ್ನಡ ವಿಭಾಗದ ಅಧ್ಯಾಪಕ ವೃಂದ ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ.

ತಮ್ಮ ಕೈಯಲ್ಲಿರುವ ಈ ಸಾಮಗ್ರಿಯು ನಮ್ಮಲ್ಲಿ 'ಮುಕ್ತ' ಪದ್ಧತಿಯಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆಂದೇ ವಿಶೇಷವಾಗಿ ಸಿದ್ಧಪಡಿಸಿದುದಾಗಿದೆ. ತಾವು ತಮ್ಮ ಸ್ವಂತ ಇಚ್ಛೆ ಮತ್ತು ಪರಿಶ್ರಮದಿಂದ ಕನ್ನಡ ಸಾಹಿತ್ಯವನ್ನು ವ್ಯಾಪಕವಾಗಿ ಓದಿಕೊಂಡಿದ್ದೀರಿ ಮತ್ತು ಅಭಿಮಾನವನ್ನೂ ಬೆಳೆಸಿಕೊಂಡಿದ್ದೀರಿ ಎಂದು ಭಾವಿಸಿದ್ದೇವೆ. ಇದನ್ನು ತುಂಬು ಮನಸ್ಸಿನಿಂದ ನಾವು ಗೌರವಿಸುತ್ತೇವೆ ಕೂಡ. ಈ ಬಗೆಯಲ್ಲಿ ತಾವು ಓದುವಿಕೆಯನ್ನು ಮಾಡಿದವರಾಗಿದ್ದರೂ ಅದು ಕೆಲವೊಮ್ಮೆ ಒಂದು ಶಿಸ್ತಿಗೆ ಒಳಪಟ್ಟ ಅಧ್ಯಯನವಾಗದೆಯೂ ಇರಬಹುದು. ಇಂತಹ ಸ್ಥಿತಿಯಿಂದ ನಿರ್ದಿಷ್ಟ ಶಿಸ್ತಿನ ಪದ್ಧತಿಗೆ ಪ್ರವೇಶ ಪಡೆದಾಗ ತಮಗೆ ಕೆಲಮಟ್ಟಿಗೆ ಶೈಕ್ಷಣಿಕ ತೊಡಕು (ಕೆಲವರಿಗಾದರೂ) ಎದುರಾಗಬಹುದು. ಈ ಕೊರತೆಯನ್ನು ನೀಗುವ ಸಲುವಾಗಿ *'ಸ್ನಾತಕೋತ್ತರ ಪದವಿ ಪೂರ್ವಸಿದ್ಧತಾ ಕಾರ್ಯಕ್ರಮ'* **[*Master's Preparatory Programme (MPP)*]** ವನ್ನು ಮುಕ್ತಪದ್ಧತಿಯ ವಿದ್ಯಾರ್ಥಿಗಳಿಗೆ ರೂಪಿಸಲಾಗಿದೆ. ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯಲ್ಲಿ ಒಬ್ಬ ವಿದ್ಯಾರ್ಥಿ (ಬಿ.ಎ., ಪದವಿಯವರೆಗೆ) ವ್ಯಾಸಂಗ ಮಾಡಿರುವ ವಸ್ತು-ವಿಷಯಗಳ ಸ್ಥೂಲ ಮಾಹಿತಿಯನ್ನು ಈ (ಎಂಪಿಪಿ) ಸಾಮಗ್ರಿಯಲ್ಲಿ ಅಳವಡಿಸಲಾಗಿದೆ. ಮುಕ್ತ ಪದ್ಧತಿಯಲ್ಲಿ ಪ್ರವೇಶ ಪಡೆದ ತಮಗೆ ಈ ಸಾಮಗ್ರಿಯು ಕನ್ನಡ ಎಂ.ಎ. ವ್ಯಾಸಂಗಕ್ಕೆ ಸೂಕ್ತ ತಳಹದಿಯನ್ನು ನೀಡುವುದರೊಂದಿಗೆ ಆತ್ಮವಿಶ್ವಾಸವನ್ನು ಮೂಡಿಸುತ್ತದೆ.

ಕನ್ನಡ ಸಾಹಿತ್ಯ ಕುರಿತ 10 ಸಂಚಿಕೆಗಳಲ್ಲಿ ಇದು 3 ನೆಯದು. ಇದರಲ್ಲಿ ಕೀರ್ತನ ಸಾಹಿತ್ಯ, ಸಾಂಗತ್ಯ, ತ್ರಿಪದಿ ಸಾಹಿತ್ಯ ಪ್ರಕಾರಗಳನ್ನು ಅದರ ಪ್ರಾತಿನಿಧಿಕ ಕವಿ ಮತ್ತು ಕೃತಿಗಳ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ.

ಈ ಸಾಮಗ್ರಿಯಲ್ಲಿನ ವಿಷಯಗಳನ್ನು ಸೂಕ್ಷ್ಮವಾಗಿ ತಾವು ಓದಬೇಕು, ಒಂದೊಂದು ಅಂಕಗಳಿಗೆ ಉತ್ತರಿಸಬಹುದಾದ 'ವಸ್ತುನಿಷ್ಠ' (Objective Type) ಪ್ರಶ್ನೆಗಳನ್ನು ತಾವೇ ಸಿದ್ಧಪಡಿಸಿಕೊಂಡು ಉತ್ತರಗಳನ್ನು ಕಂಡುಕೊಂಡು ಈ ಸಾಮಗ್ರಿ ಕುರಿತ ಪರೀಕ್ಷೆಗೆ ಸಿದ್ಧವಾಗಬೇಕು ಎಂದು ಸೂಚಿಸುತ್ತ; ಈ ಸಾಮಗ್ರಿಯ ಓದು ತಮಗೆ ಉದ್ದಿಷ್ಟಫಲವನ್ನು ನೀಡಲಿ ಎಂದು ಆಶಿಸುತ್ತೇವೆ.

ಅಧ್ಯಾಪಕ ವೃಂದದ ಪರವಾಗಿ
ತಮ್ಮ ವಿಶ್ವಾಸಿ
ಡಾ. ಡಿ.ಟಿ. ಬಸವರಾಜ್
ಅಧ್ಯಕ್ಷರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

ಸಂಚಿಕೆ - 3
ಕನ್ನಡ ಸಾಹಿತ್ಯ ಚರಿತ್ರೆ - ನಡುಗನ್ನಡ ಸಾಹಿತ್ಯ

ಘಟಕ - 1
ಕೀರ್ತನೆಗಳು

ಪರಿವಿಡಿ :

1.0 ಉದ್ದೇಶ

- ಕನ್ನಡ ಸಾಹಿತ್ಯದಲ್ಲಿರುವ ದಾಸಸಾಹಿತ್ಯದ ರೂಪರೇಖೆಗಳನ್ನು ಗುರುತಿಸುವುದು.
- ಕೀರ್ತನೆಗಳ ಹುಟ್ಟು ಬೆಳವಣಿಗೆಯನ್ನು ಕಂಡುಕೊಳ್ಳುವುದು.
- ದಾಸಸಾಹಿತ್ಯದ ಸ್ವರೂಪ, ಲಕ್ಷಣಗಳನ್ನು ಅರ್ಥಮಾಡಿಕೊಳ್ಳುವುದು.
- ದ್ವೈತಮತದ ಹಿನ್ನೆಲೆಯನ್ನು ತಿಳಿದುಕೊಳ್ಳುವುದು. ಭಾಗವತಧರ್ಮದ ಬಗ್ಗೆ ಅರಿತುಕೊಳ್ಳುವುದು.
- ದಾಸ ಸಾಹಿತ್ಯ ನಿರ್ಮಾಪಕರೆನ್ನಿಸಿಕೊಂಡಿರುವ ಪುರಂದರದಾಸರು ಮತ್ತು ಇತರ ಹರಿದಾಸರ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಳ್ಳುವುದು.
- ಹರಿದಾಸರ ಜೀವನ ದರ್ಶನವೇನು ಎಂದು ಶೋಧಿಸುವುದು.
- ಕೀರ್ತನೆಗಳಲ್ಲಿ ಕಂಡು ಬರುವ ವೈಶಿಷ್ಟ್ಯವನ್ನು ಮನನ ಮಾಡುವುದು ಮುಂತಾದ ಅಂಶಗಳು ಈ ಘಟಕದ ಉದ್ದೇಶದಲ್ಲಿ ಸೇರಿವೆ.

1.1 ಪೀಠಿಕೆ

ಕನ್ನಡ ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಭಾರತೀಯ ಭಾಷೆಗಳಲ್ಲಿ ಸಂಸ್ಕೃತ ಸಾಹಿತ್ಯವನ್ನು ಹೊರತುಪಡಿಸಿ ನೋಡಿದರೆ ತಮಿಳು, ಕನ್ನಡ ಭಾಷಾ ಸಾಹಿತ್ಯಗಳು ಬಹಳ ಪ್ರಾಚೀನವಾದವು. ಕನ್ನಡದಲ್ಲಿ ಮಹಾಕಾವ್ಯ ರಚನೆ ಪ್ರಾರಂಭವಾದ ಕಾಲದಲ್ಲಿ ಇಂಗ್ಲೀಷ್ ಭಾಷೆಯು ಇನ್ನೂ ಕಾಡು ಭಾಷೆಯಾಗಿತ್ತು. ವೈವಿಧ್ಯಮಯ ವಸ್ತು, ಛಂದಸ್ಸು, ದರ್ಶನ ಇತ್ಯಾದಿಗಳಿಂದ ಕೂಡಿದ ಕನ್ನಡ ಸಾಹಿತ್ಯದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಹುಟ್ಟಿ ಬೆಳೆದ ವಚನ ಸಾಹಿತ್ಯ ಮತ್ತು ಹದಿನೈದನೆ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ದಾಸ ಸಾಹಿತ್ಯ ಇವೆರಡೂ ಅಸಾಧಾರಣ ಸ್ವರೂಪ, ಲಕ್ಷಣಗಳನ್ನು ಹೊಂದಿವೆ. ಇವುಗಳನ್ನು ಚಳುವಳಿಗಳೆಂದೂ ಕೂಡ ಕರೆಯಲಾಗುತ್ತದೆ. ವಚನ ಸಾಹಿತ್ಯ ಚಳುವಳಿ ಮತ್ತು ದಾಸ ಸಾಹಿತ್ಯ ಚಳುವಳಿ ಎಂದು ಕರೆಯುವುದು ವಿಚಿತ್ರವಾಗಿ ಕೇಳಿಸುತ್ತದೆ. ವಚನಗಳನ್ನು ಮತ್ತು ಕೀರ್ತನೆಗಳನ್ನು ಬರೆದವರನ್ನು ಸಾಹಿತಿ ಕವಿ ಎಂದು ಕರೆಯುವ ಬದಲು ಶರಣರೆಂದು, ದಾಸರೆಂದು ಕರೆಯುತ್ತೇವೆ. ಶಿವ ಮತ್ತು ವಿಷ್ಣು ಎಂಬ ನಾಮರೂಪ ಭೇದವನ್ನು ಬಿಟ್ಟರೆ ದೇವರಿಗೆ ಯಾವ ಭೇದವಿದೆ. ಒಂದು ಕೆರೆಗೆ ಹೋದ ವಿವಿಧ ಭಾಷೆಯನ್ನಾಡುವ ಮಹಿಳೆಯರು 'ನೀರು, ನೀಳ್ಳು, ತಣ್ಣಿ, ಪಾನಿ, ವಾಟರ್, ಜಲಂ......' ಎಂದು ಹೇಳುವುದನ್ನು ಕೇಳಿದಾಗ ಏನನ್ನಿಸುತ್ತದೆ. ಕೆರೆಯಲ್ಲಿರುವ ನೀರು ಮಾತ್ರ ಒಂದೇ ಆಗಿರುತ್ತದೆ. 'ಏಕಂ ಸತ್, ವಿಪ್ರ ಬಹುದಾ ವದಂತಿ' ಎಂಬ ಮಾತು ತುಂಬ ಹಿಂದಿನದು, ಇರುವುದು ಒಂದೇ ವಸ್ತು ಆದರೆ ವಿದ್ವಾಂಸರು ಹಲವು ಹೆಸರುಗಳಿಂದ ಕರೆಯುತ್ತಾರೆ. ಬೇರೆ ಬೇರೆ ಭಾಷೆಗಳ ಜನರು ನೀರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಶರಣರು ಮತ್ತು ದಾಸರು ಮೊದಲು ಭಕ್ತರು ಅನಂತರ ಸಾಹಿತಿಗಳು. ನಾವು ಕರೆಯುವುದರಿಂದಾಗಿ ಅವರು ಸಾಹಿತಿಗಳು ಇಲ್ಲದಿದ್ದರೆ ಅವರು ಭಕ್ತರೇ. ಅವರು ತಮ್ಮ ಮತ್ತು ತಮ್ಮ ಸುತ್ತ ಇರುವವರ ಒಳಿತಿಗಾಗಿ, ಉದ್ಧಾರಕ್ಕಾಗಿ ಪ್ರಯತ್ನ ಮಾಡಿದರು. ಅಂತಹ ಪ್ರಯತ್ನಕ್ಕೆ ವಚನಗಳು, ಕೀರ್ತನೆಗಳು ಮಾಧ್ಯಮಗಳಾದುವು. ಅವರು ಉದ್ದೇಶವನ್ನು ಇಟ್ಟುಕೊಂಡು ಸಾಹಿತ್ಯ ರಚನೆ ಮಾಡಲಿಲ್ಲ. ಅವರು ಬರೆದದ್ದು, ಬರೆಸಿದ್ದು, ಹಾಡಿದ್ದು ಸಾಹಿತ್ಯವೇ ಆಯಿತು.

ಶರಣರಿಗೆ, ದಾಸರಿಗೆ ತಮ್ಮ ಅಧ್ಯಾತ್ಮ ಸಾಧನೆಯು ಬಹಳ ಮುಖ್ಯವಾಗಿತ್ತು. ಅವರ ಜೀವನದ ಉಪ ಉದ್ದೇಶವೆಂಬಂತೆ ಹೊರ ಹೊಮ್ಮಿದ ಶಬ್ದಗಳು ತಾವಾಗಿಯೇ ಮುಂದಿನ ಪೀಳಿಗೆಯವರಿಗಾಗಿ

ಉಳಿದುಕೊಂಡು ಬಲ್ಲವರ ದೃಷ್ಟಿಯಲ್ಲಿ ಗಮನಾರ್ಹವಾದ ಬರವಣಿಗೆ, ಸಾಹಿತ್ಯ ಎಂದು ಕರೆಸಿಕೊಂಡಿತು. ವರ್ತಮಾನದಲ್ಲಿ ಚೆನ್ನಾಗಿ ಬದುಕಿದರೆ ಅದು ಭವಿಷ್ಯವನ್ನು ಉತ್ತಮಪಡಿಸುತ್ತದೆ ಎಂಬಂತೆ ಶರಣರು ದಾಸರು ಬದುಕಿದರು. ಅಂತಹ ಮಹಾನ್ ಸಾಧಕರು ಆಡಿದ ಮಾತು ಹೇಗೆ ಮುತ್ತಾಗಿ ಮಾರ್ಪಟ್ಟಿತು ಎಂಬುದೇ ಆಶ್ಚರ್ಯಕರವಾದುದು. ದಾಸರು ಬರೆದುದನ್ನು ದಾಸಸಾಹಿತ್ಯ ಅಥವಾ ಕೀರ್ತನೆಗಳು ಎಂದು ಕರೆಯಲಾಗಿದೆ.

1.2 ಕೀರ್ತನೆಗಳ ಉಗಮ, ವಿಕಾಸ

ಕೀರ್ತನೆಗಳು ಹೇಗೆ ರೂಪು ತಾಳಿದವು ಎನ್ನುವುದನ್ನು ತಿಳಿಯಲು ಅವುಗಳ ಮೂಲವನ್ನು ಮೊದಲು ಶೋಧಿಸಬೇಕು. ಏಕೆಂದರೆ ಪ್ರತಿಯೊಂದು ಕಾರ್ಯಕ್ಕೂ ಒಂದು ಕಾರಣವಿರಲೇಬೇಕು ಎಂದು ನಾವು ತಿಳಿದಿದ್ದೇವೆ. ಪ್ರಾಚೀನ ಕರ್ನಾಟಕದಲ್ಲಿ ದ್ವೈತಮತ ಶ್ರೀಮನ್ ಮಧ್ವಾಚಾರ್ಯರಿಗಿಂತ ಮೊದಲೇ ಅಸ್ತಿತ್ವಕ್ಕೆ ಬಂದಿತು. ದ್ವೈತ ಮತವನ್ನು ದ್ವೈತ ದರ್ಶನವೆಂದೂ ಕರೆಯಬಹುದು. ವೈದಿಕ ಸಂಪ್ರದಾಯದಲ್ಲಿ ದ್ವೈತ, ವಿಶಿಷ್ಟಾದ್ವೈತ, ಅದ್ವೈತ ಎಂಬ ಮೂರು ದರ್ಶನಗಳಿವೆ. ಮೊದಲನೆಯದರಲ್ಲಿ ಭಗವಂತನೇ ನಮ್ಮ ಪ್ರಭು, ನಾವೆಲ್ಲ ಅವನ ಸೇವಕರು, ದಾಸರು , ನಾವೆಂದಿಗೂ ಅವನೇ ಆಗಲಾರೆವು ಎಂಬ ತತ್ತ್ವವಿದೆ. ಎರಡನೆಯದರಲ್ಲಿ ಭಗವಂತನೇ ಸರ್ವಸ್ವ, ಪೂರ್ಣಬ್ರಹ್ಮ, ನಾವು ಅವನ (ಅದರ) ಒಂದು ಕಿಂಚಿತ್ ಅಂಶ ಮಾತ್ರ, ಎಂದಾದರೂ ನಾವು ಪೂರ್ಣದೊಡನೆ ಸೇರಿಕೊಳ್ಳಬಲ್ಲೆವು ಎಂಬುದು ವಾದದ ತಾತ್ಪರ್ಯವಾಗಿದೆ. ಮೂರನೆಯದು ಅದ್ವೈತ ಮತ. ಭಗವಂತನಿಗೂ (ಬ್ರಹ್ಮಕ್ಕೂ) ನಮಗೂ ಭೇದವೂ ಇಲ್ಲ, ಕೇವಲ ಅಜ್ಞಾನದಿಂದ ನಾವು ಅವನಿಂದ ಬೇರೆ ಎಂದು ಭಾವಿಸಿಕೊಂಡಿದ್ದೇವೆ. ನಾವು ಯಾವಾಗಲೂ ಅವನಿಂದ ಬೇರೆ ಆಗಿಯೇ ಇಲ್ಲ, ನಮ್ಮೊಳಗೆ ಅವನೇ ಇದ್ದಾನೆ, ಅಹಂ ಬ್ರಹ್ಮಾಸ್ಮಿ ಇತ್ಯಾದಿ ವಾದಗಳಿಂದ ಕೂಡಿದೆ.

ಮೊದಲನೆಯದಾದ ದ್ವೈತಮತದಲ್ಲಿ ಭಗವಂತ ನಮ್ಮ ಒಡೆಯ, ಪ್ರಭು ಅವನು ಹೇಳಿದಂತೆ ಕೇಳುವ ಸೇವಕರು, ದಾಸರು ಎಂಬ ಭಾವನೆಯೇ ದಾಸಸಾಹಿತ್ಯಕ್ಕೆ(ಕೀರ್ತನೆ) ಮೂಲ ಕಾರಣವಾಗಿದೆ. ಸೇವಕರಾದ ನಾವು ದಾಸರಂತೆ ಪ್ರಭುವನ್ನು ಅನುಸರಿಸಬೇಕು. ಪ್ರಭುವಿನ ಸೇವೆ ಮಾಡಬೇಕು, ಅವನ ಕೃಪೆಯನ್ನು ಸಂಪಾದಿಸಬೇಕು. ಕಡೆಗೆ ಅವನ ಸಾನ್ನಿಧ್ಯವನ್ನು ಸೇರಬೇಕು ಎಂದು ಆಶಿಸುತ್ತಾರೆ. ಒಂದು ಭಕ್ತಿ ಸಂಪ್ರದಾಯದ ಪ್ರಕಾರ ಪಂಚ ವಿಧ ಭಕ್ತಿ ಎಂಬುದು ಭಗವಂತನನ್ನು ಭಕ್ತನು ಯಾವ ಯಾವ ರೀತಿಯಲ್ಲಿ ಪೂಜಿಸಬಹುದು ಎಂಬುದನ್ನು ವಿವರಿಸುತ್ತದೆ. ಅವುಗಳು ಯಾವುವೆಂದರೆ ದಾಸ್ಯ, ಸಖ್ಯ, ವಾತ್ಸಲ್ಯ, ಮಾಧುರ್ಯ ಮತ್ತು ಶಾಂತ ಎಂಬುವು. ದಾಸ್ಯ ಭಕ್ತಿಯು ಹರಿದಾಸರಿಗೆ ತುಂಬ ಪ್ರಿಯವಾದುದು. ಅವರು ಒಮ್ಮೊಮ್ಮೆ ತಾವು 'ದಾಸರ ದಾಸನ ದಾಸಾನುದಾಸ ನಾನು' ಎಂದು ಹೇಳುತ್ತಾರೆ. ಎಲ್ಲಿಯಾದರೂ ಅಹಂಕಾರ ತಲೆ ಎತ್ತಿ ಬಿಡುತ್ತದೆಯೋ ಎಂಬ ಭಯ ಅವರಿಗೆ ಇರುತ್ತದೆ. ಹರಿದಾಸರು ಮತ್ತು ಭಕ್ತಿ ಎಂಬ ಶಬ್ದಗಳು ಸದಾ ಜೊತೆಯಾಗಿಯೇ ಇರುತ್ತವೇನೋ ಎಂಬ ಭಾವನೆಯೂ ಉಂಟಾಗುತ್ತದೆ. ಭಕ್ತಿ ಎಂದರೆ ಏನು ಎಂಬುದನ್ನು ನಾವು ಮೊದಲು ತಿಳಿದುಕೊಳ್ಳಬೇಕು. ಅನಂತರ ದಾಸ್ಯ ಭಕ್ತಿ ಸಂಪ್ರದಾಯದ ಕಡೆ ನೋಡಬಹುದು. ಅದರ ಶಬ್ದಶಃ ಅರ್ಥವು ಸೇವೆ, ಆರಾಧನೆ ಎಂಬುದನ್ನು ತಿಳಿಸುತ್ತದೆ. ಅದನ್ನು ದೇವರ ಸೇವೆ, ದೇವರ ಆರಾಧನೆ ಎಂದು ತಿಳಿದುಕೊಳ್ಳಬೇಕು. ದೇವರು ವಿಶ್ವಕ್ಕೆಲ್ಲ ಪ್ರಭು, ಸಕಲ ಜೀವರಾಶಿಗಳನ್ನು ಪೊರೆಯುವವನು, ಈ ಲೌಕಿಕ ಜೀವನದ ಕಷ್ಟ ಸಂಕಟಗಳಿಂದ ಪಾರಾಗಲು ಮತ್ತು ಮೋಕ್ಷವನ್ನು ಪಡೆಯಲು ಅವನ ಅನುಗ್ರಹವನ್ನು ಸಂಪಾದಿಸಬೇಕು, ಅದಕ್ಕೆ ಭಕ್ತಿಯು ಶ್ರೇಷ್ಠವಾದ ಸಾಧನವಾಗಿದೆ ಎಂಬುದು ಭಕ್ತರ ಶ್ರದ್ಧೆಯಾಗಿದೆ. ಭಗವಂತನನ್ನು ಮನುಷ್ಯರೂಪದಲ್ಲಿ ಕಲ್ಪಿಸಿಕೊಂಡು (ಸಗುಣ ಬ್ರಹ್ಮ ಎಂದು ಕರೆಯುತ್ತಾರೆ) ಅವನನ್ನು ಭಕ್ತಿಯಿಂದ ಸ್ಮರಿಸಿದರೆ, ಮಗು ತಾಯಿಯನ್ನು ಅನುಸರಿಸುವಂತೆ ಭಕ್ತನೂ ಅನುಸರಿಸಿದರೆ, ಅವನ ದರ್ಶನಕ್ಕೆ ಹಂಬಲಿಸಿದರೆ, ಕಣ್ಣೀರು ಸುರಿಸಿದರೆ ಭಗವಂತನ ಮನಸ್ಸು ಕರಗುತ್ತದೆ, ತಾಯಿಯ ಹಾಗೆ ಭಕ್ತನೆಂಬ

ಮಗುವನ್ನು ಎತ್ತಿ ಸಂತೈಸುತ್ತಾನೆ. ಕೇಳಿದ್ದನ್ನೆಲ್ಲಾ ಕೊಡುತ್ತಾನೆ. ಅಂತಹ ಭಾಗ್ಯವು ನಮಗೆ ಲಭಿಸಬೇಕು ಎಂದು ಹರಿದಾಸರು ಹಾರೈಸುತ್ತಾರೆ. ದೇವರ ಹೆಸರನ್ನು (ಇಲ್ಲಿ ವಿಷ್ಣು, ಹರಿ, ಶ್ರೀಹರಿ, ನಾರಾಯಣ ಇತ್ಯಾದಿ) ದೇವರ ಗುಣವನ್ನು, ದೇವರ ಶಕ್ತಿಯನ್ನು ಮುಂತಾದುವನ್ನು ಕುರಿತು ಕೀರ್ತಿಸಬೇಕು ಎಂಬ ಆಸೆಯೇ ಕೀರ್ತನೆಗಳ ಸೃಷ್ಟಿಗೆ ಮೂಲ ಕಾರಣವಾಗಿದೆ.

ಭಕ್ತಿಯು ಅನಾದಿಯಾದುದು, ಅನಂತವಾದುದೂ ಕೂಡ. ಮನುಷ್ಯನ ಸ್ವಭಾವದಲ್ಲಿಯೇ ಭಕ್ತಿಗೆ ಅವಕಾಶವಿದೆ. ಭಕ್ತಿಯನ್ನು ಪ್ರಯತ್ನಪೂರ್ವಕವಾಗಿ ಕಳೆದುಕೊಳ್ಳುವ ಸ್ವಾತಂತ್ರ್ಯವೂ, ಶಕ್ತಿಯೂ ಮನುಷ್ಯನಿಗೆ ಇದೆ. ಹರಿದಾಸರು ಸ್ವಭಾವಸಿದ್ಧವಾದ ಭಕ್ತಿಯನ್ನು ಗುರುತಿಸಿ, ನಾನಾ ವಿಧದಲ್ಲಿ ಅದನ್ನು ಹಾಡಿ ಕೀರ್ತಿಸಿ, ನರ್ತಿಸಿ ಪ್ರಕಟಿಸಿದ್ದಾರೆ. ಅವರು ಭಗವಂತನನ್ನು ಕುರಿತು ರಚಿಸಿದ ಹಾಡುಗಳು ಕೀರ್ತನೆಗಳೆನ್ನಿಸಿಕೊಂಡಿವೆ. ಕೀರ್ತನೆಗಳು ಸಮೃದ್ಧವಾಗಿ ಕಂಡು ಬಂದ ನಂತರ ಅವುಗಳಿಗೆ ದಾಸಸಾಹಿತ್ಯ ಎಂಬ ಪ್ರತ್ಯೇಕ ಶೀರ್ಷಿಕೆಯೂ ಅಗತ್ಯವೆನ್ನಿಸಿತು. ಹಾಡು, ಉಗಾಭೋಗ, ಸುಳಾದಿ, ಕಂದ, ಸೀಸಪದ್ಯ ಇತ್ಯಾದಿಗಳೆಲ್ಲವೂ ಸಾಧಾರಣವಾಗಿ ಕೀರ್ತನೆಗಳು ಎಂಬ ಸಾಧಾರಣೀಕೃತ ಹೆಸರಿನಿಂದ ಕರೆಯಲ್ಪಟ್ಟಿವೆ. ಈಗ ನಾವು ದೇವರನಾಮ ಎಂದು ಕರೆಯುವ ರಚನೆಗಳು ಕೀರ್ತನೆಗಳೇ ಆಗಿವೆ. ಏಕೆಂದರೆ ಕೀರ್ತನೆ ಇರುವುದೇ ದೇವರನಾಮದ ಬಗ್ಗೆ. ಕೀರ್ತನೆ ಎಂಬ ಶಬ್ದಕ್ಕೆ ಹೊಗಳುವುದು ಎಂಬ ಅರ್ಥವೇ ಇದೆ. ದೇವರಿಗೆ ಸಂಬಂಧಿಸಿದುದೆಲ್ಲವನ್ನೂ ಕೂಡ ಭಕ್ತ ಹೃತ್ಪೂರ್ವಕವಾಗಿ ಹೊಗಳುತ್ತಾನೆ, ರಾಗವಾಗಿ ಹಾಡುತ್ತಾನೆ, ಅದಕ್ಕೆ ತಾಳಗಳು ಸೇರುತ್ತವೆ. ತಾಳಮೇಳಗಳಿಂದ ಕೂಡಿದ ಹಾಡು ಆಕರ್ಷಕವಾಗುತ್ತದೆ. ತಾಳಮೇಳಗಳಿಲ್ಲದ ಹಾಡನ್ನು 'ಕೇಳನೊ ಹರಿ ತಾಳನೊ' ಎಂದು ದಾಸರೇ ಹೇಳುತ್ತಾರೆ. ದಾಸರ ಕೈಯಲ್ಲಿ ತಂಬೂರಿ, ತಾಳ, ಚಿಟಿರಿ ಇತ್ಯಾದಿಗಳು ಇರುವುದನ್ನು ಚಿತ್ರದಲ್ಲಿ ನಾವು ನೋಡಿದ್ದೇವಲ್ಲವೆ. ರಾಗತಾಳ ಸಮನ್ವಿತವಾದುದು ಮನಸ್ಸನ್ನು ಸೆರೆಹಿಡಿಯುತ್ತದೆ. ಮೌನದಲ್ಲಿ ಪ್ರತಿಷ್ಠಿತರಾದ ಯೋಗಿಗಳನ್ನು ಹೊರತುಪಡಿಸಿ ಸಾಮಾನ್ಯ ಜನರನ್ನು ನೋಡಿದಾಗ ಅವರೆಲ್ಲರೂ ಸಂಗೀತದ ಅಂಶಕ್ಕೆ ಪ್ರೀತಿಯನ್ನು ತೋರಿಸುತ್ತಾರೆ. ಭಕ್ತಿಯನ್ನು ನೀರಸವಾದುದನ್ನಾಗಿ ಅಥವಾ ಕಠಿಣವಾದುದನ್ನಾಗಿ ಮಾಡದೆ ಸುಲಭದ ಭಕುತಿಯನ್ನಾಗಿ ಮಾಡಲು ಕೀರ್ತನೆಗಳು ರಾಗ ತಾಳದ ಮಾಯೆಯನ್ನು ಬೀಸುತ್ತವೆ. ಕೀರ್ತನೆಗಳು ಶಾಸ್ತ್ರೀಯ ಸಂಗೀತದ ಹಾಗೆ ಪಾಂಡಿತ್ಯದ ಪ್ರದರ್ಶನವಾಗಿರುವುದಿಲ್ಲ. ಒಂದು ರೀತಿ ಇಂದಿನ ಸುಗಮ ಸಂಗೀತ, ಲಘು ಸಂಗೀತದ ಹಾಗೆ ಸಾಮಾನ್ಯರನ್ನು ರಂಜಿಸುತ್ತವೆ. ಭಕ್ತಿಗೆ ಸುಲಭವಾಗಿ ಒಲಿಯದ ಲೌಕಿಕ ಜನರನ್ನು ಕೀರ್ತನೆಗಳ ನಾದ ಮಾಧುರ್ಯದಿಂದ ಆಕರ್ಷಿಸಿ ಹಾಡನ್ನು ಕೇಳುವಂತೆ ಮಾಡಿದರೆ ಅರ್ಥ ಅವರಿಗೆ ನಿಧಾನವಾಗಿ ತಿಳಿಯುತ್ತದೆ. ಭಾವನೆಗೆ ಸ್ಪಂದಿಸುವ ಮನುಷ್ಯನು ಕೀರ್ತನೆಗಳಿಗೆ ಕಿವಿಗೊಡುವುದರಲ್ಲಿ ಸಂಶಯವಿಲ್ಲ. ಇಂತಹ ಕೀರ್ತನೆಯನ್ನು ರಚಿಸುವ ಪದ್ಧತಿಯು ಯಾವಾಗ ಪ್ರಾರಂಭವಾಯಿತು. ಯಾರಿಂದ ಪ್ರಾರಂಭವಾಯಿತು, ಹೇಗೆ ಬೆಳೆಯಿತು ಎಂಬೆಲ್ಲಾ ಪ್ರಶ್ನೆಗಳು ನಮ್ಮ ಮನಸ್ಸಿನೊಳಗೆ ಹುಟ್ಟಿಕೊಳ್ಳುತ್ತವೆ.

ಕೀರ್ತನೆಗಳ ರಚನೆ ಯಾವಾಗ ಪ್ರಾರಂಭವಾಯಿತು ಎಂಬ ಪ್ರಶ್ನೆಗೆ ಉತ್ತರ ಕೊಡುವುದು ಸುಲಭವಲ್ಲ. ಕ್ರಿ.ಶ. 9ನೇ ಶತಮಾನದಲ್ಲಿ ಅಚಲಾನಂದ ಎಂಬ ಹರಿದಾಸರು ಮೊದಲು ಕೀರ್ತನೆ ಬರೆದರು ಎಂಬ ವಾದವು ಇದೆ. ಆದರೆ ಅವರ ಕಾಲದ ಬಗ್ಗೆ ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಾಗಿಲ್ಲ. ಮಧ್ವಾಚಾರ್ಯರ ಹೆಸರನ್ನು ಅಚಲಾನಂದದಾಸರು ಹೇಳುವುದರಿಂದಾಗಿ ಅವರ ಕಾಲವು ಹನ್ನೆರಡು ಅಥವಾ ಹದಿಮೂರನೆ ಶತಕಕ್ಕೆ ಸರಿದು ಬರುತ್ತದೆ. ಅವರ ಹೆಸರಿನಲ್ಲಿ ಕೆಲವು ಉಗಾಭೋಗಗಳು, ಸುಳಾದಿಗಳು, ಕೀರ್ತನೆಗಳು ದೊರೆಯುತ್ತವೆ. ಮಧ್ವಾಚಾರ್ಯರ ಶಿಷ್ಯರಾದ ನರಹರಿತೀರ್ಥರು ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿದವರಲ್ಲಿ ಮೊದಲಿಗರೆಂದು ಹೇಳುವುದೂ ಇದೆ. ಕೆಲವು ವಿದ್ವಾಂಸರು ಈ ಅಭಿಪ್ರಾಯವನ್ನು ಒಪ್ಪಿಕೊಳ್ಳುವುದಿಲ್ಲ. ಮೂಲತಃ ನರಹರಿತೀರ್ಥರು ಕನ್ನಡಿಗರಲ್ಲ. ಅವರು ಕಳಿಂಗ ರಾಜ್ಯದಿಂದ (ಇಂದಿನ ಒರಿಸ್ಸಾ) ಉಡುಪಿಗೆ ಬಂದು ಕನ್ನಡ ಕಲಿತರು. ಆದ್ದರಿಂದ ಅವರು ವ್ಯವಹರಿಸುವಷ್ಟು ಕನ್ನಡ ಕಲಿತಿರಲು ಸಾಧ್ಯವೇ ವಿನಾ ಕೀರ್ತನೆಗಳನ್ನು ರಚಿಸುವಷ್ಟರ ಮಟ್ಟಿಗೆ ಭಾಷಾ

ಪ್ರಭುತ್ವ ಬಂದಿರಲು ಸಾಧ್ಯವಿಲ್ಲ ಎನ್ನುವುದು ಕೆಲವರ ಅಭಿಪ್ರಾಯವಾಗಿದೆ. ಅವರು ಸಂಸ್ಕೃತದಲ್ಲಿ ಪಂಡಿತರಾಗಿದ್ದರು ಎನ್ನುವುದು ನಿಜವಾದರೂ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿದ್ದರೆಂದು ವಾದಿಸುವುದಕ್ಕೆ ಸದ್ಯಕ್ಕೆ ದೊರೆಯುವ ಸಾಕ್ಷ್ಯಾಧಾರಗಳು ಸಾಲದು ಎಂಬ ಭಾವನೆಯಿದೆ.

ಆದ್ದರಿಂದ ಮಧ್ವರು ಹದಿಮೂರನೇ ಶತಮಾನದಲ್ಲಿ ತೋರಿಸಿದ ದಾರಿ, ವೈಷ್ಣವ ಭಕ್ತಿಯ ಪರಿಣಾಮ ನರಹರಿತೀರ್ಥರ ಕಾಲದಲ್ಲಿ ಅಗೋಚರವಾಗಿ ಪ್ರಭಾವ ಬೀರಿದರೂ, ಅದರ ಪ್ರಕಟಣೆಯು ಕೀರ್ತನೆಗಳ ರೂಪದಲ್ಲಿ ಆದುದು ನರಹರಿಯವರ ನಂತರವೇ ಎಂದು ತಿಳಿಯಬೇಕಾಗುತ್ತದೆ. ಈ ಕಾರಣದಿಂದಾಗಿ ಶ್ರೀಪಾದರಾಜರನ್ನು ಪ್ರಥಮ ಕೀರ್ತನಕಾರರೆಂದು ಕರೆಯಲಾಗಿದೆ. ಪೀಠಾಧಿಪತಿಗಳಾದವರು ಸಂಸ್ಕೃತವನ್ನು ಬಿಟ್ಟು ಬೇರೆ ಭಾಷೆಯಲ್ಲಿ ಮಾತನಾಡುವುದು ನಿಷಿದ್ಧವಾಗಿದ್ದ ಕಾಲ ಅದು. ಅದು ಕನ್ನಡದ ಮೇಲಿನ ಅನಾದರವಲ್ಲ. ಆ ಕಾಲದ ಸಂಪ್ರದಾಯ ಹಾಗಿತ್ತು. ಸಂಸ್ಕೃತವು ದೇವಭಾಷೆ ಎಂಬ ನಂಬಿಕೆ ಬಲವಾಗಿತ್ತು. ಎಲ್ಲ ಭಾಷೆಗಳೂ ಮಾನವ ಸೃಷ್ಟಿ ಎಂಬ ಇಂದಿನ ವೈಜ್ಞಾನಿಕ ತಿಳುವಳಿಕೆ ಆಗ ಇರಲು ಸಾಧ್ಯವಿರಲಿಲ್ಲ. ಶ್ರೀಪಾದರಾಜರು ಅಂತಹ ಕಾಲದಲ್ಲಿಯೂ ಧೈರ್ಯದಿಂದ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿ, ಪೂಜಾ ಸಮಯದಲ್ಲಿ ಹಾಡುವುದನ್ನು ರೂಢಿಗೆ ತಂದರು.

> 'ನೀನೆ ಬಲ್ಲಿದನೋ ರಂಗಾ ನಿನ್ನ ದಾಸರು ಬಲ್ಲಿದರೋ
> ನಾನಾ ತೆರದಿ ನಿಧಾನಿಸಿ ನೋಡಲು ನೀನೇ ಭಕ್ತರಾಧೀನನಾದ ಮೇಲೆ.....'

> 'ಏಕೆ ದೂರುವಿರಿ ರಂಗಯ್ಯನ,
> ಏಕೆ ದೂರುವಿರಿ'

> 'ಬೆಂದ ಸಂಸಾರದಿ ಬಂದು ನೊಂದು ಬಳಲಿದೆನಯ್ಯ
> ನಂದನಂದನ ಕಾಯೊ ರಂಗ ವಿಠಲ.....'

ಮೇಲಿನ ರಚನೆಗಳನ್ನು ನೋಡಿದರೆ ಅವುಗಳು ಕೇವಲ ಪ್ರಾರಂಭದ ರಚನೆಗಳಂತೆ ಕಾಣಿಸುವುದಿಲ್ಲ. ಕೀರ್ತನೆಗಳ ಸ್ವರೂಪವು ಆಗಲೇ ಸಿದ್ಧವಾಗಿ ಬಿಟ್ಟಿದೆಯೆಂಬ ಭಾವನೆಯೂ ಮೂಡುತ್ತದೆ. ಶ್ರೀಪಾದರಾಜರು ಸಂಸ್ಕೃತದಲ್ಲಿಯೂ ಕೃತಿ ರಚನೆ ಮಾಡಿದ್ದಾರೆ. ಕೀರ್ತನೆಗಳನ್ನು ಮಾತ್ರವಲ್ಲದೆ, ಸುಳಾದಿ, ಉಗಾಭೋಗ, ವೃತ್ತನಾಮ, ಇತ್ಯಾದಿಗಳನ್ನು ಮೊದಲ ಬಾರಿಗೆ ಬೆಳಕಿಗೆ ತಂದರು. ಮುಂದಿನ ಕೀರ್ತನಕಾರರಿಗೆ ಸರಿಯಾದ ಮಾರ್ಗದರ್ಶನ ಸಿಗುವಂತೆ ಮಾಡಿದರು. ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆ ಸಾಹಿತ್ಯದ ಕಿರುಹೊಳೆಯು ಮುಂದೆ ಮಹಾನದಿಯಾಗಿ ವಿಸ್ತಾರವಾದುದನ್ನು ನೋಡಬಹುದು. ಇದಕ್ಕೆ ಅನೇಕ ಹರಿದಾಸರು ತಮ್ಮ ಅನುಭವಾಮೃತವನ್ನು ತುಂಬಿದುದು ಮುಖ್ಯ ಕಾರಣ. ಹಲವಾರು ಹರಿದಾಸರು ಅನೇಕ ಮೂಲಗಳಿಂದ, ಹಿನ್ನೆಲೆಗಳಿಂದ, ವೃತ್ತಿಗಳಿಂದ ಬಂದವರಾದುದರಿಂದ ಕೀರ್ತನ ಸಾಹಿತ್ಯವು ಸಮೃದ್ಧವಾಯಿತು. ದ್ವೈತ ತತ್ವವನ್ನು ಸಂಸ್ಕೃತ ತಿಳಿಯದ ಜನರಿಗೆ ಸರಳವಾದ ಕನ್ನಡದಲ್ಲಿ ತಿಳಿಸುವ ಕಾರ್ಯವನ್ನು ಹರಿದಾಸರು ಯಶಸ್ವಿಯಾಗಿ ನಿರ್ವಹಿಸಿದರು. ಕೀರ್ತನ ಸಾಹಿತ್ಯವು ವಿಕಾಸವಾಗಲು ವೈವಿಧ್ಯಮಯ ವಿಷಯ, ವಸ್ತು, ಶೈಲಿ, ದೇಸಿ ಇತ್ಯಾದಿಗಳು ಕಾರಣವಾಗಿವೆ. ಸಾಮಾನ್ಯವಾಗಿ ದಾಸ ಸಾಹಿತ್ಯದ ಬೆಳವಣಿಗೆಯನ್ನು ಮೂರು ಹಂತಗಳಲ್ಲಿ ಗುರುತಿಸಲಾಗಿದೆ. ಶ್ರೀಪಾದರಾಜ ಯುಗ, ವಿಜಯದಾಸ ಯುಗ, ಮುದ್ದು ಮೋಹನ ವಿಠಲ ಯುಗ ಎಂಬ ಹಂತಗಳು ಕಂಡು ಬರುತ್ತವೆ. ಪ್ರಮುಖ ಹರಿದಾಸರುಗಳು ಒಬ್ಬೊಬ್ಬರೂ ಸಾವಿರಾರು ಕೃತಿಗಳನ್ನು ರಚಿಸಿದರು. ಪುರಂದರದಾಸರು ನಾಲ್ಕು ಲಕ್ಷದ ಎಪ್ಪತ್ತೈದು ಸಾವಿರ ಕೀರ್ತನೆಗಳನ್ನು ರಚಿಸಿದರು ಎಂಬ ಪ್ರತೀತಿಯೂ ಇದೆ. ಕೀರ್ತನೆಗಳು ಸಂಗೀತ ಪ್ರಧಾನವಾಗ ತೊಡಗಿದುದು ಅವುಗಳ ಜನಪ್ರಿಯತೆಗೂ ಕಾರಣವಾಯಿತು. ಹರಿದಾಸರು ಕೀರ್ತನೆಗಳನ್ನು ಬೆಳೆಸುವ ದಾರಿಯಲ್ಲಿ ಸಂಗೀತ ಮತ್ತು ಸಾಹಿತ್ಯ ಭಾಗಗಳ ಸಮತೋಲನವನ್ನು ಕಂಡುಕೊಂಡರು. ಬೇರೆ ಬೇರೆ ರಾಗತಾಳಗಳಲ್ಲಿ, ವಿವಿಧ ಛಂದಸ್ಸುಗಳಲ್ಲಿ ಕೃತಿ ರಚನೆ ಮಾಡಿದರು. ಪದ, ಸುಳಾದಿ, ಉಗಾಭೋಗ, ಶ್ಲೋಕ, ಕಂದ, ವೃತ್ತ, ದ್ವಿಪದಿ, ತ್ರಿಪದಿ, ಚೌಪದಿ,

ಷಟ್ಪದಿ, ರಗಳೆ ಇತ್ಯಾದಿ ಪ್ರಕಾರಗಳಲ್ಲಿ ದಾಸ ಸಾಹಿತ್ಯ ಬೆಳೆಯಿತು. ಮುಖ್ಯವಾಗಿ ಕನ್ನಡವನ್ನು ಸಂಗೀತದ ಭಾಷೆಯನ್ನಾಗಿ ಮಾಡಿದುದು ಅತ್ಯಂತ ಅಮೂಲ್ಯವಾದ ಕಾರ್ಯ ಎನ್ನಬಹುದು.

ಹರಿದಾಸರು ಹದಿನೈದನೆ ಶತಮಾನದಿಂದ ಹದಿನೆಂಟನೇ ಶತಮಾನದ ಅವಧಿಯಲ್ಲಿ ಹೆಚ್ಚಾಗಿ ಕಾಣಿಸಿಕೊಂಡರು. ಆ ಅವಧಿಯಲ್ಲಿ ಕರ್ನಾಟಕದಲ್ಲಿ ಬಹುತೇಕ ನಡುಗನ್ನಡವು ಕವಿಗಳ ಪ್ರಯೋಗದ ಭಾಷೆಯಾಗಿತ್ತು. ವಚನ ಸಾಹಿತ್ಯದ ಪ್ರಭಾವವೂ ದಾಸ ಸಾಹಿತ್ಯದ ಮೇಲೆ ಬಿದ್ದಿರುವುದನ್ನು ನಾವು ನೋಡಬಹುದಾಗಿದೆ. ಉಗಾಭೋಗ ಎಂಬ ಪ್ರಕಾರವು ಹೆಚ್ಚು ಕಡಿಮೆ ವಚನಗಳ ಬಂಧವನ್ನು ಹೋಲುತ್ತದೆ. ಪ್ರಾಸವು ಕೀರ್ತನೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಆದಿ ಪ್ರಾಸ, ಒಳ ಪ್ರಾಸ, ಅಂತ್ಯ ಪ್ರಾಸಗಳನ್ನು ಪ್ರಯೋಗಿಸಿದ್ದಾರೆ. ಚಿತ್ರಕವಿತೆಯನ್ನು ನೆನಪಿಗೆ ತರುವ ರಚನೆಗಳನ್ನೂ ದಾಸ ಸಾಹಿತ್ಯದಲ್ಲಿ ನಾವು ಕಾಣಬಹುದು. ಪ್ರಪಂಚದಲ್ಲಿ ನಾವು ಕಾಣುವ ದೈನಂದಿನ ಘಟನೆಗಳನ್ನು ಯಥಾವತ್ತಾಗಿ ದಾಸರು ವರ್ಣಿಸಿದ್ದಾರೆ. ಪ್ರೌಢ ಸಾಹಿತ್ಯದ ಲಕ್ಷಣಗಳನ್ನು ಒಡಮೂಡಿಸಬೇಕೆಂಬ ಆಸೆಯಾಗಲೀ, ಪ್ರಯತ್ನವಾಗಲಿ ಅವರಿಗೆ ಇರಲಿಲ್ಲ. ಜನರಿಗೆ ತಿಳಿಯಬೇಕು ಎಂಬುದೇ ಅವರ ಏಕೈಕ ಉದ್ದೇಶವಾಗಿತ್ತು. ಆದ್ದರಿಂದ ಅವರು ದೇಸಿಯನ್ನು ಪ್ರಯೋಗಿಸುವುದನ್ನು ರೂಢಿಗೆ ತಂದರು. ಬೇರೆ ಬೇರೆ ಕಸುಬಿನವರು ಬಳಸುವ ಶಬ್ದಗಳನ್ನು ಪ್ರಾಸಂಗಿಕವಾಗಿ ದಾಸರೂ ಪ್ರಯೋಗಿಸಿದ್ದಾರೆ. ಇದರಿಂದಾಗಿ ಜನರಿಗೆ ಸಾಹಿತ್ಯವು ತುಂಬಾ ಹತ್ತಿರವಾಗುವ ಗುಣವನ್ನು ಪಡೆದುಕೊಂಡಿತು. ದೇಸಿಯನ್ನು ಸ್ವೀಕರಿಸಿದ ದಾಸರು ಅದಕ್ಕೆ ಸಂಬಂಧಿಸಿದಂತೆ ಬರುವ ಗಾದೆಗಳನ್ನು, ದೃಷ್ಟಾಂತಗಳನ್ನೂ ಕೂಡ ಬಳಸಿಕೊಂಡರು. ಹೀಗೆ ಮಾಡಿ ಜನರ ಆಡುಭಾಷೆಗೆ ಉತ್ತಮವಾದ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟರು. ಹೀಗೆ ಕಲ್ಪಿಸಿಕೊಟ್ಟವರ ಸಂಖ್ಯೆಯೂ ಸುಮಾರು ಇನ್ನೂರನ್ನೂ ದಾಟುತ್ತದೆ. ಎಲ್ಲರೂ ಒಂದೇ ಮಟ್ಟದ, ಸಾಮರ್ಥ್ಯದ ವ್ಯಕ್ತಿಗಳಾಗಿರಲಿಲ್ಲ. ಆದ್ದರಿಂದ ಶ್ರೀಪಾದರಾಜರಿಂದ ಪುರಂದರ ದಾಸರ ಕಾಲದವರೆಗೆ ಚೆನ್ನಾಗಿ ವಿಕಾಸ ಹೊಂದುತ್ತಿದ್ದ ದಾಸ ಸಾಹಿತ್ಯವು, ಅವರ ಕಾಲದ ನಂತರ ಕೊಂಚ ಇಳಿಮುಖವಾದಂತೆ ತೋರುತ್ತದೆ. ಮೊದಲು ಹರಿದಾಸರಿಗೆ ಹಂಪೆಯು (ವಿಜಯನಗರ ಎಂದರೂ ಸರಿ) ಕೇಂದ್ರವಾಗಿದ್ದರೆ ಎರಡನೆಯ ಹಂತದಲ್ಲಿ ಮಂತ್ರಾಲಯ (ರಾಯಚೂರು) ಕೇಂದ್ರವಾಗುತ್ತದೆ. ಮೊದಲನೆಯ ಅವಧಿಯಲ್ಲಿ ದಾಸರು ಹೆಚ್ಚಾಗಿ ಪಂಡರಾಪುರದ ವಿಠ್ಠಲನನ್ನು ನೆನೆಯುತ್ತಾರೆ. ಎರಡನೆಯ ಹಂತದವರು ತಿರುಪತಿಯ ವೆಂಕಟರಮಣನ ಕಡೆಗೆ ತಿರುಗುತ್ತಾರೆ. ಅಷ್ಟೇ ಅಲ್ಲ ; ಮೊದಲನೆಯ ಹಂತದವರು ಭಕ್ತಿ-ಭಕ್ತ, ಬದುಕು, ಅಂತರಂಗ, ಬಹಿರಂಗ, ಸಮಾಜ ಸುಧಾರಣೆ ಇತ್ಯಾದಿಗಳ ಬಗ್ಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಾರೆ. ಎರಡನೆಯ ಹಂತದವರು ದ್ವೈತ ತತ್ವ ಪ್ರಚಾರಕ್ಕೆ ಉಳಿದ ವಿಷಯಗಳಿಗಿಂತ ಸ್ವಲ್ಪ ಹೆಚ್ಚು ಮಹತ್ವವನ್ನು ಕೊಟ್ಟಂತೆ ತೋರುತ್ತದೆ. ಇದಕ್ಕೆ ಕಾರಣವೂ ಇದೆ. ವಿಜಯನಗರ ಸಾಮ್ರಾಜ್ಯವು ನಾಶವಾದ ನಂತರ ಜನಜೀವನದಲ್ಲಿ ಭಕ್ತಿ, ಶಾಂತಿ ಇತ್ಯಾದಿಗಳಿಗಿಂತ ಗೊಂದಲ, ಹೊಟ್ಟೆಪಾಡು, ಅಭದ್ರತೆ ಇತ್ಯಾದಿಗಳು ಪ್ರಧಾನವಾಗಿ ಬಿಟ್ಟವು. ಆಗ ಹರಿದಾಸರು ದ್ವೈತ ಮತದ ತತ್ತ್ವಗಳನ್ನು ಜನರಿಗೆ ತಿಳಿಸಿ ಹೇಳಬೇಕಾದ ಅಗತ್ಯವು ಒದಗಿ ಬಂದಿತು.

ಹರಿದಾಸ ಪರಂಪರೆಯಲ್ಲಿ ಕವಯಿತ್ರಿಯರು ಪುರುಷರಷ್ಟು ಸಂಖ್ಯೆಯಲ್ಲಿ ಕಂಡು ಬರುವುದಿಲ್ಲ. ಮಹಿಳೆಯರು ಪುರುಷರ ಹಾಗೆ ದೀಕ್ಷೆ ಪಡೆದು, ಮಧುಕರ ವೃತ್ತಿ ಹಿಡಿದು ಜೀವನ ನಡೆಸದೆ ಇದ್ದಿರಬಹುದು. ಆದರೂ ಅವರ ಕೃತಿಗಳನ್ನು ನೋಡಿ ದಾಸಸಾಹಿತ್ಯಕ್ಕೆ ಸೇರಿಸಬಹುದೆಂದು ತಿಳಿಯಲಾಗಿದೆ. ಅಂತಹ ಮಹಿಳೆಯರಲ್ಲಿ ಗಲಿಗಲಿಯ ಅವ್ವ, ಬಾಗಮ್ಮ, ಗಿರಿಯಮ್ಮ, ಭೀಮವ್ವ, ಲಕ್ಷ್ಮೀದೇವಮ್ಮ ಮುಂತಾದವರನ್ನು ಪ್ರಮುಖರೆಂದು ಕರೆಯಬಹುದು.

ಇದುವರೆಗೆ ದಾಸ ಸಾಹಿತ್ಯ (ಕೀರ್ತನೆಗಳು) ಬೆಳೆದು ಬಂದ ದಾರಿಯನ್ನು ನೋಡಿದ್ದೀರಿ. ಇದನ್ನು ನೋಡಿದಾಗ ಒಂದು ವಿಷಯ ಮನಸ್ಸನ್ನು ಸೆಳೆಯುತ್ತದೆ. ಅದು ಏನೆಂದರೆ ನಾವು ನೋಡುವ, ಓದುವ ಹರಿದಾಸರು ನೂರಕ್ಕೆ ತೊಂಬತ್ತರಷ್ಟು ಉತ್ತರ ಕರ್ನಾಟಕ ಎನ್ನಿಸಿಕೊಳ್ಳುವ ಪ್ರದೇಶಕ್ಕೆ ಸೇರಿದವರು ಎನ್ನುವುದು. ಇದಕ್ಕೆ ಕಾರಣವನ್ನು ಸುಲಭವಾಗಿ ಊಹಿಸಬಹುದು. ಹಂಪೆಯಾಗಲಿ, ಮಂಚಾಲೆ (ಮಂತ್ರಾಲಯ)ಯಾಗಲೀ ಇರುವುದೇ ಆ ಪ್ರದೇಶದಲ್ಲಿ. ಆದರೂ ಭಾಷೆಯಲ್ಲಿ ಪ್ರಾದೇಶಿಕ ರೂಪವು

ಹೆಚ್ಚಾಗಿ ಕಾಣಿಸುವುದಿಲ್ಲ. ಎಲ್ಲರಿಗೂ ಸುಲಭವಾಗಿ ಅರ್ಥವಾಗುವ ಸರಳ ಗ್ರಾಂಥಿಕ ಭಾಷೆಯನ್ನು ದೇಸಿಯ ಜೊತೆಗೆ ಬಳಸಿರುವುದು ಕಂಡು ಬರುತ್ತದೆ.

1.3 ಪ್ರಮುಖ ಕೀರ್ತನಕಾರರು

ಹರಿದಾಸ ಸಾಹಿತ್ಯದ ಬಗ್ಗೆ ತಿಳಿಸುವಾಗ ದಾಸಕೂಟ ಮತ್ತು ವ್ಯಾಸಕೂಟ ಎಂಬ ಎರಡು ನುಡಿಗಟ್ಟುಗಳಿಗೆ ವಿವರಣೆಯನ್ನು ಕೊಡಬೇಕಾಗುತ್ತದೆ. ದಾಸಕೂಟ ಎಂಬ ಶಬ್ದವನ್ನು ಯಾರು ಮೊದಲು ಸೃಷ್ಟಿಸಿದರು ಎನ್ನುವುದು ತಿಳಿದು ಬಂದಿಲ್ಲ : ಬಹುಶಃ ದಾಸ ಸಾಹಿತ್ಯವು ವಿಕಾಸವಾಗುತ್ತಿದ್ದ ಕಾಲದಲ್ಲಿ ಈ ಪದದ ಬಳಕೆ ರೂಢಿಗೆ ಬಂದಿರಬಹುದು. ಸರಳವಾಗಿ ಹೇಳುವುದಾದರೆ ಹರಿದಾಸರ ಸಮೂಹಕ್ಕೆ ದಾಸಕೂಟ ಎಂಬ ಹೆಸರು ಸಲ್ಲುತ್ತದೆ. ಇವರು ಸಾಮಾನ್ಯ ಜನರಿಗೆ ತಿಳಿಯುವಂತೆ ಸಾಹಿತ್ಯ ರಚನೆ ಮಾಡಿದರು. ಸಂಸ್ಕೃತ ಭಾಷೆಯನ್ನು ಇವರು ಬಳಸಿಕೊಳ್ಳಲಿಲ್ಲ, ದ್ವೈತದ ಪ್ರತಿಪಾದನೆಯನ್ನು ಪ್ರೌಢ ರೀತಿಯಲ್ಲಿ ಮಾಡಲು ಪ್ರಯತ್ನಿಸಲಿಲ್ಲ. ಮಧ್ವಮತದಲ್ಲಿ ಶ್ರದ್ಧೆಯಿಟ್ಟು, ದಾಸ ದೀಕ್ಷೆಯನ್ನು ಪಡೆದು ಹರಿಭಕ್ತಿ ಪ್ರಚಾರ ಕಾರ್ಯವನ್ನು ಮಾಡಿದ ಹರಿದಾಸರ ಅನೌಪಚಾರಿಕ ಸಂಘವೇ ದಾಸಕೂಟ ಎನ್ನಿಸಿಕೊಂಡಿತು. ಇವರಲ್ಲಿ ಸುಮಾರು ಆರುನೂರು ಜನರಿದ್ದಾರೆ ಎಂಬ ಅಭಿಪ್ರಾಯವಿದೆ. ದಾಸಕೂಟದ ಹಾಗೆ ಪ್ರಚಾರಕ್ಕೆ ಬಂದ ಇನ್ನೊಂದು ನುಡಿಗಟ್ಟು ಎಂದರೆ ವ್ಯಾಸಕೂಟ ಎಂಬುದು. ವ್ಯಾಸ ಎಂದರೆ ವೇದವ್ಯಾಸರು. ಇವರಿಂದ ಪ್ರಣೀತವಾದ ಶಾಸ್ತ್ರ, ಸಾಹಿತ್ಯಗಳನ್ನು ಬಲ್ಲವರು ಪಂಡಿತರಾಗಿದ್ದರು. ಬುದ್ಧಿಜೀವಿಗಳಾಗಿದ್ದರು. ವ್ಯಾಸತೀರ್ಥರಿಂದ ಸ್ಥಾಪಿತವಾದ ಕೂಟವನ್ನು ವ್ಯಾಸಕೂಟ ಎಂದು ಕರೆಯಲಾಗುತ್ತಿದೆ. ಈ ನುಡಿಗಟ್ಟು ಒಟ್ಟಾರೆ ಮಧ್ವ ಸಿದ್ಧಾಂತದ ಬಗ್ಗೆ, ಶಾಸ್ತ್ರೀಯವಾದ ಗ್ರಂಥರಚನೆ, ವ್ಯಾಖ್ಯಾರ್ಥ, ಪ್ರವಚನ ಇತ್ಯಾದಿಗಳನ್ನು ಮಾಡಿದ ಪಂಡಿತರ ಸಮೂಹವೇ ವ್ಯಾಸಕೂಟ ಎನ್ನಿಸಿಕೊಳ್ಳುತ್ತದೆ. ದಾಸಕೂಟ ಮತ್ತು ವ್ಯಾಸಕೂಟಗಳು ಎಂಬ ಪ್ರತ್ಯೇಕತೆಯು ಶ್ರೀವ್ಯಾಸತೀರ್ಥರ ಮತ್ತು ಪುರಂದರ ದಾಸರ ಕಾಲದಿಂದ ಪ್ರಚಲಿತವಾದುವು ಎಂಬ ನಂಬಿಕೆಯೂ ಇದೆ. ಎರಡೂ ಕೂಟಗಳ ಗುರಿ ಮಾತ್ರ ಒಂದೇ ಆಗಿತ್ತು. ದ್ವೈತ ಮತದ ಮತ್ತು ಹರಿಭಕ್ತಿಯ ಪ್ರಚಾರ. ದಾಸಕೂಟದಲ್ಲಿ ಬರುವ ಪ್ರಮುಖ ಕೀರ್ತನಕಾರರ ಪರಿಚಯವನ್ನು ಮಾಡಿಕೊಳ್ಳೋಣ.

ದೇಸಿಯ ಜೊತೆಗೆ ಬಳಸಿರುವುದು ಕಂಡು ಬರುತ್ತದೆ.

1.3.0 ಶ್ರೀಪಾದರಾಜರು : (1406-1504)

ಶ್ರೀ ಪಾದರಾಜರನ್ನು ಹರಿದಾಸ ಪಿತಾಮಹ ಎಂದು ಕರೆಯುವುದು ಕಂಡುಬರುತ್ತದೆ. ಅವರು ಹರಿದಾಸ ಪರಂಪರೆಯನ್ನು ಹುಟ್ಟಿಹಾಕಿದರೆಂದು ನಂಬಲಾಗಿದೆ. ಅವರನ್ನು ಪ್ರಥಮ ಕೀರ್ತನಕಾರರೆಂದೂ ತಿಳಿಯಲಾಗಿದೆ. ಅವರು ಸನ್ಯಾಸಿಗಳಾಗುವ ಮೊದಲಿನ ಹೆಸರು ಲಕ್ಷ್ಮೀನಾರಾಯಣ. ಅವರ ಸ್ಥಳ ಚನ್ನಪಟ್ಟಣದ ಬಳಿ ಇರುವ ಅಬ್ಬೂರು. ತಂದೆಯ ಹೆಸರು ಶೇಷಗಿರಿಯಪ್ಪ, ತಾಯಿಯ ಹೆಸರು ಗಿರಿಯಮ್ಮ. ಬಾಲಕ ಲಕ್ಷ್ಮೀನಾರಾಯಣ ಹಸುಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೊತ್ತಿದ್ದನು. ಒಂದು ದಿನ ಹಸು ಕರುಗಳ ಹಿಂದೆ ಬರುತ್ತಿರುವಾಗ ಭೇಟಿಯಾದ ಸ್ವರ್ಣವರ್ಣತೀರ್ಥ ಎಂಬ ಸ್ವಾಮಿಗಳ ಕೃಪಾಶೀರ್ವಾದದಿಂದ ಜೀವನದ ದಿಕ್ಕು ಬದಲಾಯಿಸಿ ಬಿಟ್ಟಿತು. ಉತ್ತರಾದಿ ಮಠದ ರಘುನಾಥ ತೀರ್ಥರು ಲಕ್ಷ್ಮೀನಾರಾಯಣ ವಟುವಿನ ಪಾಂಡಿತ್ಯಕ್ಕೆ ಬೆರಗಾಗಿ ಅವರಿಗೆ ಶ್ರೀಪಾದರಾಜ ಎಂದು ಕರೆದು ಪ್ರಶಂಸಿಸಿದರು. ತಮಿಳುನಾಡಿನ ಶ್ರೀರಂಗದಲ್ಲಿ ಕೆಲವು ವರ್ಷಗಳನ್ನು ಕಳೆದು, ಅಲ್ಲಿಂದ ಸಂಚಾರ ಹೊರಟು ಆಗ ವಿಜಯನಗರ ಸಾಮ್ರಾಜ್ಯದ ಭಾಗವಾಗಿದ್ದ ಮುಳಬಾಗಿಲಿಗೆ ಬಂದರು. ಆ ಸ್ಥಳದ ಮೇಲೆ ಪ್ರೀತಿಹುಟ್ಟಿ ಒಂದು ಮಠವನ್ನು ಕಟ್ಟಿ ನೆಲೆಸಿದರು. ಮುಳಬಾಗಿಲನ್ನು ದ್ವೈತ ಸಿದ್ಧಾಂತದ ಮುಖ್ಯ ಕೇಂದ್ರವನ್ನಾಗಿಸಿದರು. ವ್ಯಾಸರಾಯರು ಅವರ ಶಿಷ್ಯರಾಗಿರಲು ಮುಳಬಾಗಿಲಿಗೇ ಬಂದರು. ಅವರು

ಕೇವಲ ಮತ ಸಿದ್ಧಾಂತ ಗುರುಗಳಾಗಿದ್ದಿದ್ದರೆ ಈಗ ಇರುವ ಕೀರ್ತಿ ಅವರಿಗೆ ಇರುತ್ತಿತ್ತೋ ಇಲ್ಲವೋ ತಿಳಿಯದು. ಆದರೆ ಅವರು ಶ್ರೀರಂಗದಲ್ಲಿದ್ದಾಗ ಗಮನಿಸಿದ ಒಂದು ಅಂಶ ಅವರನ್ನು ಸದಾ ಕಾಡುತ್ತಿತ್ತು. ಅದು ಏನೆಂದರೆ ತಮಿಳುನಾಡಿನಲ್ಲಿ ಜನರು ತಮಿಳು ಭಾಷೆಗೆ ಕೊಡುತ್ತಿದ್ದ ಪ್ರಾಧಾನ್ಯತೆಯನ್ನು ನೋಡಿದ್ದರು. ಅದೇ ರೀತಿ ಕನ್ನಡಿಗರು ಕನ್ನಡಕ್ಕೆ ಏಕೆ ಪ್ರಾಮುಖ್ಯತೆಯನ್ನು ಕೊಡಬಾರದು ಎಂದು ಆಲೋಚಿಸಿದರು. ರಂಗವಿಠಲ ಎಂಬ ಅಂಕಿತದಿಂದ ಚಿಕ್ಕ ಚಿಕ್ಕ ಹಾಡುಗಳನ್ನು ರಚಿಸಿ ಪೂಜಾ ಸಮಯದಲ್ಲಿ ತಾವೇ ಹಾಡಲು ಪ್ರಾರಂಭಿಸಿದರು. ಹಾಗೆ ಮಾಡಲು ಆ ಕಾಲದಲ್ಲಿ ತುಂಬಾ ಧೈರ್ಯವು ಬೇಕಾಗಿತ್ತು. ಪೂಜಾ ಸಮಯದಲ್ಲಿ ಸಂಸ್ಕೃತವನ್ನು ಬಿಟ್ಟು ಕನ್ನಡವನ್ನು ಬಳಸುವಂತಿರಲಿಲ್ಲ. ಶ್ರೀಪಾದರಾಜರು ಪ್ರಸಿದ್ಧ ವಿದ್ವಾಂಸರು, ದೊಡ್ಡ ಅನುಭಾವಿಗಳು, ರಾಜನ ಪ್ರೀತಿಗೆ ಪಾತ್ರರಾದವರು. ಆದ್ದರಿಂದ ಅವರ ಪದ್ಧತಿಗೆ ಯಾವ ಅಡ್ಡಿಯೂ ಉಂಟಾಗಲಿಲ್ಲ. ಇದು ಕನ್ನಡ ಹರಿದಾಸ ಸಾಹಿತ್ಯಕ್ಕೆ ನಾಂದಿಯಾಯಿತು. ಸುಳಾದಿ, ಪದ, ಉಗಾಭೋಗ, ವೃತ್ತನಾಮ, ದಂಡಕ ಎಲ್ಲವೂ ಸೇರಿದಂತೆ ಸುಮಾರು ನೂರು ಕೃತಿಗಳು ಲಭಿಸಿವೆ. ಇದೇನೂ ಕಡಿಮೆ ಮಹತ್ವದ ಮಾತಲ್ಲ. ಅವರ ಕೃತಿಗಳಲ್ಲಿ ಹರಿಸ್ತುತಿ, ಭಕ್ತಿಯ ಶ್ರೇಷ್ಠತೆ, ನೀತಿ ತತ್ವ ಇತ್ಯಾದಿಗಳಿವೆ. ಶ್ರೀ ಕೃಷ್ಣನ ಮಹಿಮೆಯನ್ನು ಕುರಿತು ಗೋಪಿಗೀತೆ, ವೇಣುಗೀತೆ, ಭ್ರಮರಗೀತೆ ಇವುಗಳನ್ನು ಬರೆದಿದ್ದಾರೆ. ಮಧ್ವಾಚಾರ್ಯರನ್ನು ಕುರಿತು 'ಮಧ್ವನಾಮ' ಎಂಬ ಕೃತಿಯನ್ನು ಬರೆದಿದ್ದಾರೆ. ರುಕ್ಮಿಣೀ ಸತ್ಯಭಾಮ ಸಂವಾದ, ಲಕ್ಷ್ಮೀ ಪ್ರಾದುರ್ಭಾವ ದಂಡಕ, ಮಧ್ವನಾಮ, ಭ್ರಮರ ಗೀತೆ ಇವು ದೀರ್ಘವಾದ ಕೃತಿಗಳು. 'ವಾಗ್ವಜ್ರ' ಎಂಬ ಸಂಸ್ಕೃತ ಗ್ರಂಥವನ್ನು ರಚಿಸಿರುವರೆಂದು ಹೇಳಲಾಗುತ್ತದೆ.

'ಕಂಗಳಿವ್ಯಾತಕೆ ಕಾವೇರಿ ರಂಗನ ನೋಡದ' ; 'ಭೂಷಣಕೆ ಭೂಷಣ ಇದು ಭೂಷಣ' ;

'ಉತ್ತಮರ ಸಂಗ ಎನಗಿತ್ತು ಸಲಹೊ' ; 'ನೀನೆ ಬಲ್ಲಿದನೊ ರಂಗ ನಿನ್ನ ದಾಸರು ಬಲ್ಲಿದರೊ' ಮುಂತಾದ ಕೀರ್ತನೆಗಳನ್ನು ಅವುಗಳ ಆತ್ಮೀಯ ಭಾವ ಸ್ಪಂದನಕ್ಕೋಸ್ಕರ ನೋಡಲೇಬೇಕು.

'ಭಕ್ತಿಬೇಕು, ವಿರಕ್ತಿಬೇಕು ಸರ್ವ
ಶಕ್ತಿ ಬೇಕು ಮುಂದೆ ಮುಕ್ತಿಯ ಬಯಸುವಗೆ
....
ರಂಗವಿಠಲನ್ನ ಬಿಡದೆ ನೆರೆ ನಂಬಿರಬೇಕು.'

ಶ್ರೀಪಾದರಾಜರ ಹಾಡುಗಳಲ್ಲಿ ಭಾವುಕತೆಯನ್ನು ಕಾಣಬಹುದು. ಅವರ ಕೃತಿಗಳು ಭಜನೆಯ ಉದ್ದೇಶದಿಂದ ರಚಿತವಾದುವು. ಅವರು ಮಠಾಧಿಪತಿಗಳಾಗಿದ್ದುಕೊಂಡು ಕನ್ನಡದಲ್ಲಿ ಕೃತಿಗಳನ್ನು ರಚಿಸಿ, ಪೂಜಾಸಮಯದಲ್ಲಿ ಹಾಡಿ, ಹಾಡಿಸಿ ಮುಂದಿನವರಿಗೆ ಒಳ್ಳೆಯ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು.

1.3.1 ವ್ಯಾಸರಾಯರು : (1447-1539)

ವ್ಯಾಸರಾಯರು ಕಾವೇರಿ ತೀರದಲ್ಲಿರುವ ಬನ್ನೂರಿನಲ್ಲಿ ಹುಟ್ಟಿದವರು. ತಂದೆಯ ಹೆಸರು ಬಲ್ಲಣ್ಣ ಸುಮತಿ, ತಾಯಿಯ ಹೆಸರು ಅಕ್ಕಮ್ಮ. ಅವರ ತಂದೆಯು ಮಗನನ್ನು ಶ್ರೀ ಬ್ರಹ್ಮಣ್ಯ ತೀರ್ಥರಿಗೆ ಒಪ್ಪಿಸಿದ ಬಳಿಕ ಅವರ ಬಳಿ ವಿದ್ಯಾಭ್ಯಾಸವು ನಡೆಯಿತು. ಸುಮಾರು ಹದಿನೈದು ವರ್ಷಗಳ ಕಾಲ ಶ್ರೀಪಾದರಾಜರ ಬಳಿ ವೇದಾಂತ ವಿದ್ಯೆಯನ್ನು ಕಲಿತರು. ಅವರು ವಿಜಯನಗರದ ರಾಜ ಸಾಳ್ವ ನರಸಿಂಹನ ಮಂತ್ರಿಗಳ ಆಹ್ವಾನದ ಮೇರೆಗೆ ವಿಜಯನಗರಕ್ಕೆ ಬಂದರು. ಕೃಷ್ಣದೇವರಾಯನು ಅಧಿಕಾರ ವಹಿಸಿಕೊಂಡ ಬಳಿಕ ಅವರ ಕೀರ್ತಿಯೂ ಹೆಚ್ಚಾಯಿತು. ಅವರು ಹರಿಹರರಲ್ಲಿ ಭೇದವೆಣಿಸಲಿಲ್ಲ. ಹಾಗೆಯೇ ಶ್ರೀಪಾದರಾಜರ ಪರಂಪರೆಯನ್ನು ಮುಂದುವರಿಸಿದರು. ಶ್ರೀಕೃಷ್ಣ ಎಂಬ ಅಂಕಿತದಲ್ಲಿ ನೂರಾರು ಹಾಡುಗಳನ್ನು ರಚಿಸಿದ್ದಾರೆ. ಅವರು ಮಾಡಿದ ಅತ್ಯಂತ ಅಮೂಲ್ಯವಾದ ಕಾರ್ಯವೆಂದರೆ ಪುರಂದರದಾಸರು, ಕನಕದಾಸರು ಮುಂತಾದವರನ್ನು ಒಳಗೊಂಡ ಹರಿದಾಸರ ಗುಂಪನ್ನು ಕಟ್ಟಿ ಬೆಳೆಸಿದರು. ಈ ಗುಂಪು ಮುಂದೆ ದಾಸಕೂಟ ಎಂದು ಪ್ರಸಿದ್ಧವಾಯಿತು. ಅವರು ಕನ್ನಡದಲ್ಲಿ ಸುಳಾದಿ, ಪದಗಳನ್ನು ಕೂಡ ರಚಿಸಿದ್ದಾರೆ. ಸುಮಾರು 102 ಕೀರ್ತನೆಗಳು ಅವರ ಹೆಸರಿನಲ್ಲಿ ಪ್ರಕಟವಾಗಿವೆ. ಶ್ರೀಪಾದರಾಜರಿಂದ

ಪ್ರಾರಂಭವಾದ ವೃತ್ತನಾಮವನ್ನು ಸರಳವಾದ ಭಾಷೆಯಲ್ಲಿ ಭಗವದ್ಗೀತೆಯನ್ನು ರಚಿಸುವುದರ ಮೂಲಕ ಹೆಚ್ಚು ರೂಢಿಗೆ ತಂದರು.

'ಎಂದಿಗಾದರೂ ಒಮ್ಮೆ ಕೊಡುಕಂಡ್ಯ ಹರಿಯೆ
ಬೃಂದಾವನ ಪತಿ ದಯದಿಂದಲೆನಗೆ' || ಪ ||

'ಎಂದೆಂದೆನ್ನ ಮನದಿಂದ ಅಗಲದಿರೋ
ನಂದನಂದನನೆ ಆನಂದ ಮೂರುತಿಯೆ' || ಪ ||

ವ್ಯಾಸರಾಯರು ವ್ಯಾಸಕೂಟಕ್ಕೆ ಸೇರಿದವರಾದರೂ ದಾಸಕೂಟವನ್ನು ಬೆಳೆಸಿದವರು. ಭಕ್ತಿ, ಜ್ಞಾನಗಳಿಗೆ, ಪ್ರಾಧಾನ್ಯ ಕೊಟ್ಟಿದ್ದರು. 'ಅಂತರಂಗದಲಿ ಹರಿಯ ಕಾಣದವ ಹುಟ್ಟು ಕುರುಡನೊ', 'ಹರಿದಾಸರ ಸಂಗಕ್ಕೆ ಎಣೆಯುಂಟೆ', 'ನಿನ್ನಿಂದ ನಿನ್ನ ದಾಸರೆ ಮಿಗಿಲೊ' ಎಂದು ಹಾಡಿರುವುದನ್ನು ಕಾಣಬಹುದು.

1.3.2 ವಾದಿರಾಜರು : (1480-1600)

ಉಡುಪಿಯ ಅಷ್ಟಮಠಗಳ ಪರಂಪರೆಯಲ್ಲಿ ಒಂದಾದ ಸೋದೆ ಮಠಕ್ಕೆ ವಾದಿರಾಜರು ಮಠಾಧಿಪತಿಗಳಾಗಿದ್ದರು. ಇವರ ಸ್ಥಳ ಕುಂದಾಪುರ ಬಳಿಯ ಹೂವಿನ ಕೆರೆ. ತಂದೆ ರಾಮಾಚಾರ್ಯ ಮತ್ತು ತಾಯಿ ಸರಸ್ವತಿ. ಇವರಿಗೆ 'ಪ್ರಸಂಗಾಭರಣ ತೀರ್ಥ' ಎಂಬ ಬಿರುದು ಇದ್ದಿತು. ಏಕೆಂದರೆ ವ್ಯಾಕ್ಯಾರ್ಥ ಚರ್ಚೆಯಲ್ಲಿ ತುಂಬಾ ನಿಪುಣರಾಗಿದ್ದರು. ಸಂಸ್ಕೃತ, ಕನ್ನಡ ಎರಡು ಭಾಷೆಗಳಲ್ಲಿಯೂ ಪಂಡಿತರಾಗಿದ್ದರು. ಮಧ್ವಮತದ ಬಗ್ಗೆ ವಿವರಣೆ ನೀಡಿದ ಶ್ರೇಷ್ಠರಲ್ಲಿ ಇವರೂ ಒಬ್ಬರಾಗಿದ್ದಾರೆ. ಕಾಲು ನಡಿಗೆಯಲ್ಲಿ ಭಾರತದ ಪುಣ್ಯಕ್ಷೇತ್ರಗಳನ್ನೆಲ್ಲಾ ನೋಡಿ ಬಂದ ದೃಢಚಿತ್ತವುಳ್ಳವರು. ಹೀಗೆ ಸಂಚಾರ ಮಾಡಿ ಬಂದ ನಂತರ 'ತೀರ್ಥ ಪ್ರಬಂಧ' ಎಂಬ ಕೃತಿಯನ್ನು ರಚಿಸಿದರು. ಅದು ಯಾತ್ರಿಕ ಮಹಾಶಯರಿಗೆ ಒಂದು ಕೈಪಿಡಿಯಂತೆ ಕಂಡು ಬರುತ್ತದೆ. 'ಶ್ರೀಯುಕ್ತಿ ಮಲ್ಲಿಕಾ', 'ಸರಸ ಭಾರತಿ ವಿಲಾಸ', 'ರುಕ್ಮಿಣೀಶ ವಿಜಯ', 'ಲಕ್ಷ್ಮೀ ಶೋಭಾನೆ', 'ವೈಕುಂಠ ವರ್ಣನೆ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳ ಅಂಕಿತ 'ಹಯವದನ'.

'ಒಲ್ಲೆ ದುರಿತಗಳೊಲ್ಲೆ ಒಲ್ಲೆ
ಪುಲ್ಲನಾಭನ ಸ್ಮರಣೆಯಿಲ್ಲದೆ ಇರಲೊಲ್ಲೆ' || ಪ ||

ಕುದುರೆ ಬಂದಿದೆ ಚೆಲುವೆ
ಕುದುರೆ ಬಂದಿದೆ || ಪ ||

ಈ ಹಾಡನ್ನು ಶಿಶುನಾಳ ಷರೀಫ್ ಸಾಹೇಬರು ಓದಿದ್ದರೆಂದು ತೋರುತ್ತದೆ. ಅವರ 'ಎಂಥ ಮೋಜಿನ ಕುದುರಿ' ಎಂಬ ಸೊಗಸಾದ ಪದಕ್ಕೆ ಇಲ್ಲಿಂದ ಸ್ಫೂರ್ತಿ ಸಿಕ್ಕಿದ್ದರೂ ಸಿಕ್ಕಿರಬಹುದು. ವಾದಿರಾಜರು ದೇಸಿಶೈಲಿಯಲ್ಲಿ ರಚಿಸಿರುವ ಕೆಳಕಂಡ ಪದವನ್ನು ನೋಡಿ -

ಹ್ಯಾಂಗೆ ಕೊಟ್ಟನು ಹೆಣ್ಣ ಸಾಗರನು ಈವರೆಗೆ | ಪ |
ಶೃಂಗಾರ ಪುರುಷರು ಬಹು ಮಂದಿಯಿರಲು | ಅ. ಪ |

ಹೀಗೆ ವಾದಿರಾಜರ ಗೀತೆಗಳು ಜನಸಾಮಾನ್ಯರನ್ನೂ ಕೂಡ ಆಕರ್ಷಿಸಬಲ್ಲವು. ಅವರ ಕೃತಿಗಳಲ್ಲಿ ದಾಸ್ಯಭಾವವೇ ಅಧಿಕವಾಗಿದ್ದರೂ ವಾತ್ಸಲ್ಯ ಗೀತೆಗಳು. ವಿರಹ ಗೀತೆಗಳು, ಸಾಮಾಜಿಕ ಗೀತೆಗಳು, ವಿಡಂಬನಾತ್ಮಕ ಗೀತೆಗಳೂ ಕೂಡ ಸಾಕಷ್ಟು ಸಂಖ್ಯೆಯಲ್ಲಿ ಇವೆ.

1.3.3 ಪುರಂದರದಾಸರು : (1484-1564)

'ದಾಸರೆಂದರೆ ಪುರಂದರದಾಸರಯ್ಯ' ಎಂದು ಅವರ ಗುರುಗಳಾದ ವ್ಯಾಸರಾಯರೇ ಮನತುಂಬಿ ಹೊಗಳಿದ್ದಾರೆ. ದಾಸಸಾಹಿತ್ಯದಲ್ಲಿ ಅದ್ವಿತೀಯ ಸಾಧನೆಯನ್ನು ಮಾಡಿದ್ದಾರೆ. ಹರಿದಾಸ ಸಾಹಿತ್ಯ ಸಾರ್ವಭೌಮ ಎನ್ನಿಸಿಕೊಂಡಿದ್ದಾರೆ. ಇವರ ಮೊದಲಿನ ಹೆಸರು ಶ್ರೀನಿವಾಸ ನಾಯಕ. ಇವರ ತಂದೆಯ ಹೆಸರು ವರದಪ್ಪ ನಾಯಕ ಎಂದು ತಿಳಿದು ಬರುತ್ತದೆ. ಆದರೆ ತಾಯಿಯ ಹೆಸರು ಸರಿಯಾಗಿ ತಿಳಿದು ಬರುವುದಿಲ್ಲ. ಪ್ರಸಿದ್ಧ ವ್ಯಕ್ತಿಗಳ ಸುತ್ತಲೂ ಅಲೌಕಿಕ ಘಟನೆಗಳನ್ನು ಹೆಣೆಯಲಾಗುತ್ತದೆ, ಪವಾಡಗಳನ್ನು ತುಂಬಲಾಗುತ್ತದೆ. ವಚನ ಸಾಹಿತ್ಯದಲ್ಲಿ ಬಸವಣ್ಣನವರು ಶ್ರೇಷ್ಠರಾದಂತೆ ದಾಸಸಾಹಿತ್ಯದಲ್ಲಿ ಪುರಂದರದಾಸರು ಶ್ರೇಷ್ಠರಾಗಿದ್ದಾರೆ.

ಪುರಂದರದಾಸರ ಜೀವನವೃತ್ತಾಂತವು ಐತಿಹ್ಯಗಳಿಂದ ಕೂಡಿರುವಂತೆ ತೋರುತ್ತದೆ. ಈಗ ತಿಳಿದಿರುವಂತೆ ಅವರು ಆಭರಣಗಳ ಅಂಗಡಿಯ ಮಾಲೀಕರಾಗಿದ್ದರು. ಅವರ ಜಿಪುಣತನವು ಜನರ ಮನೆಮಾತಾಗಿತ್ತು. ಆದರೆ ಅವರ ಪತ್ನಿ ಸರಸ್ವತಿಬಾಯಿಯವರು ತುಂಬಾ ಉದಾರಿಗಳಾಗಿದ್ದರು. ಆದರೆ ಶ್ರೀಹರಿಯೆ ವೇಷಧರಿಸಿ ಬಂದು ಶ್ರೀನಿವಾಸ ನಾಯಕನಿಗೆ ಸರಸ್ವತಿ ಬಾಯಿಯ ಮೂಲಕ ಔದಾರ್ಯದ ಪಾಠ ಕಲಿಸಿದರೆಂದು ಹೇಳಲಾಗುತ್ತದೆ. ಇದರಿಂದ ವೈರಾಗ್ಯವನ್ನು ಸ್ವೀಕರಿಸಿದ ಶ್ರೀನಿವಾಸನಾಯಕರು ಪುರಂದರ ದಾಸರಾಗಿ ಶ್ರೀಹರಿಯ ಸೇವೆಗೆ ಜೀವನವನ್ನು ಮುಡಿಪಾಗಿಟ್ಟರೆಂದು ತಿಳಿದು ಬರುತ್ತದೆ. ವ್ಯಾಸರಾಯರು ಪುರಂದರ ದಾಸರಿಗೆ 'ಪುರಂದರ ವಿಠಲ' ಎಂಬ ಅಂಕಿತವನ್ನು ಕೊಟ್ಟಿದ್ದರಿಂದ ಅವರ ಹೆಸರು ಪುರಂದರ ದಾಸರು ಎಂದಾಗಿರಬಹುದು. ಅವರು ರಚಿಸಿರುವ ಕೃತಿಗಳ ಪೈಕಿ ಇದುವರೆಗೆ ಒಂದು ಸಾವಿರಕ್ಕೂ ಹೆಚ್ಚು ಕೃತಿಗಳು ಸಿಕ್ಕಿವೆ. ಒಂದು ಹೇಳಿಕೆಯ ಪ್ರಕಾರ ಅವರು 4,75,000 ಕೃತಿಗಳನ್ನು ರಚಿಸಿದ್ದಂತೆ ತಿಳಿಯುತ್ತದೆ.

ಪುರಂದರದಾಸರ ರಚನೆಗಳು ಸ್ವಾನುಭವ ಪ್ರಾಮಾಣ್ಯದಿಂದ ಆನಂದದಾಯಕವಾಗಿರುವುದರಿಂದ ಉತ್ತಮ ಸಾಹಿತ್ಯವೆನಿಸಿಕೊಂಡಿದೆ. ಇಲ್ಲಿ ಅವರ ಕೆಲವು ರಚನೆಗಳ ಕೆಲವು ಸಾಲುಗಳನ್ನು ನೋಡಬಹುದು.

'ಅಮ್ಮಾ ನಿಮ್ಮ ಮನೆಗಳಲ್ಲಿ ನಮ್ಮ ರಂಗನ ಕಾಣಿರೇನೆ' || ಪ ||
'ಯಾದವ ನೀ ಬಾ ಯದು ಕುಲ ನಂದನ
ಮಾಧವ ಮಧುಸೂದನ ಬಾರೊ'
....
'ಉದರ ವೈರಾಗ್ಯವಿದು ನಮ್ಮ
ಪದುಮನಾಭನಲಿ ಲೇಶ ಭಕುತಿಯಿಲ್ಲ'

ಪುರಂದರದಾಸರ ರಚನೆಯ ವ್ಯಾಪ್ತಿ ಇಷ್ಟಕ್ಕೇ ಸೀಮಿತವಾಗಿಲ್ಲ. ಸುತ್ತಮುತ್ತಲಿನ ಜನರ ಬದುಕಿನ ಕಡೆಗೆ, ಮನುಷ್ಯರ ಸ್ವಭಾವದ ಕಡೆಗೆ ಹರಿದಿದೆ. ಕೀರ್ತನೆಗಳ ಸಂಖ್ಯೆ, ವಿಷಯ ವೈವಿಧ್ಯ, ಸೂಕ್ಷ್ಮ ಭಾವನೆಗಳ ಮತ್ತು ತತ್ತ್ವಗಳ ನಿರೂಪಣೆ ಮುಂತಾದವುಗಳಿಂದ ಅವರು ದಾಸರಲ್ಲಿ ವಿಶಿಷ್ಟರಾಗಿದ್ದಾರೆ. ಸಂಗೀತ ಶಾಸ್ತ್ರ ಕ್ಷೇತ್ರದಲ್ಲಿ ಅವರು ನಡೆಸಿದ ಪ್ರಯೋಗಗಳಿಂದ ಅವರು 'ಕರ್ನಾಟಕ ಸಂಗೀತ ಪಿತಾಮಹ' ಎನ್ನಿಸಿಕೊಂಡಿದ್ದಾರೆ. ಹರಿದಾಸ ಸಾಹಿತ್ಯದ ಪ್ರಾಶಸ್ತ್ಯವನ್ನು ಉಜ್ವಲವಾಗಿ ಬೆಳಗಿದ ಕೀರ್ತಿ ಪುರಂದರದಾಸರಿಗೆ ಸಲ್ಲುತ್ತದೆ.

1.3.4 ಕನಕದಾಸರು : (1507-1607)

ದಾಸ ಸಾಹಿತ್ಯದ ಅಶ್ವಿನೀ ದೇವತೆಗಳೆಂದು ಪುರಂದರ ದಾಸರು ಮತ್ತು ಕನಕದಾಸರು ಪರಿಗಣಿಸಲ್ಪಟ್ಟಿದ್ದಾರೆ. ಕನಕದಾಸರು ಹರಿದಾಸರ ಪೈಕಿ ಕವಿಗಳು ಎನ್ನಿಸಿಕೊಂಡಿದ್ದಾರೆ. ಅದು ಭಾಷೆಯಲ್ಲಿ ಬರೆದ ಸತ್ವಪೂರ್ಣ ಕೃತಿಕಾರರಾಗಿದ್ದಾರೆ. ಅವರು ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ

ಬಾಡ ಎಂಬ ಗ್ರಾಮದಲ್ಲಿ ಹುಟ್ಟಿದರು ಮತ್ತು ಹಾವೇರಿ ತಾಲ್ಲೂಕಿನ (ಈಗ ಜಿಲ್ಲೆಯಾಗಿದೆ) ಕಾಗಿನೆಲೆಯಲ್ಲಿ ನೆಲಸಿದರು. ಅವರ ತಂದೆಯ ಹೆಸರು ಬೀರಪ್ಪ, ತಾಯಿಯ ಹೆಸರು ಬಚ್ಚಮ್ಮ. ಅವರ ಪ್ರಾರಂಭದ ಹೆಸರು ತಿಮ್ಮಪ್ಪ. ತಿಮ್ಮಪ್ಪನಿಗೆ ಚಿನ್ನದ ನಿಧಿಯು ದೊರೆತಿದ್ದರಿಂದ ಅವನಿಕೆ ಕನಕ ನಾಯಕ ಎಂಬ ಬಿರುದು ಸಿಕ್ಕಿತು. ಅದೇ ಹೆಸರಿನ ಮೂಲದಿಂದ ಕನಕದಾಸರು ಎಂಬ ಹೊಸ ಹೆಸರು ಪ್ರಾಪ್ತವಾಯಿತು. ಹೆಂಡತಿ ಮತ್ತು ಮಗು ಅಕಾಲ ಮರಣಕ್ಕೆ ಗುರಿಯಾದುದು ಕನಕನಾಯಕನಿಗೆ ವೈರಾಗ್ಯ ಹುಟ್ಟಲು ಕಾರಣವಾಯಿತು. ವ್ಯಾಸರಾಯರ ಶಿಷ್ಯರಾದ ಕನಕದಾಸರು 'ಆದಿಕೇಶವ' ಎಂಬ ಅಂಕಿತವನ್ನು ಇಟ್ಟುಕೊಂಡು ರಚನೆಗಳನ್ನು ಮಾಡಿದ್ದಾರೆ. ಕೀರ್ತನೆಗಳನ್ನು ಮಾತ್ರವಲ್ಲದೆ ಮೋಹನ ತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತ್ರೆ, ಹರಿಭಕ್ತಿಸಾರ ಎಂಬ ಕೃತಿಗಳು ದೊರೆತಿವೆ. ನೃಸಿಂಹಸ್ತವ ಎಂಬ ಕೃತಿಯು ದೊರೆತಿಲ್ಲ. ತಿರುಕನ ಕನಸು ಎಂಬ ಪದ್ಯವೂ ಅವರ ರಚನೆ ಎಂದು ಹೇಳಲಾಗುತ್ತಿದೆ. ಕನಕನ ಮುಂಡಿಗೆ ಎಂಬುದು ವಿದ್ವಾಂಸರಿಗೂ ಸವಾಲಾಗಿದೆ. ಪುರಂದರ ದಾಸರಷ್ಟು ಕೀರ್ತನೆಗಳನ್ನು ಕನಕದಾಸರು ರಚಿಸದಿದ್ದರೂ ಕಾವ್ಯಗುಣದ ದೃಷ್ಟಿಯಿಂದ ಪುರಂದರದಾಸರ ಕೃತಿಗಳಿಗೆ ಸಮಾನವಾಗಿವೆ. ಅವರ ರಚನೆಗಳ ಕೆಲವು ಸಾಲುಗಳನ್ನು ಇಲ್ಲಿ ನೋಡಬಹುದು.

'ಈತನೀಗ ವಾಸುದೇವನು ಲೋಕದೊಡೆಯ || ಪ ||
ದಾಸಗೊಲಿದು ತೇರನೇರಿ ತೇಜಿ ಹಿಡಿದು ನಡೆಸಿದಾತ'

'ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು || ಪ ||
ಪದುಮನಾಭನ ಪಾದದೊಲುಮೆ ಎನಗಾಯಿತು'

ಜಾತಿಯ ಮೇಲಿನಿಂದ ಅಂತಸ್ತನ್ನು ಅಳೆಯುವ ಕಾಲದಲ್ಲಿ ಕನಕದಾಸರು ಬದುಕಿದ್ದರು. ಅವರು 'ನಾವು ಕುರುಬರು ನಮ್ಮ ದೇವರು ಬೀರಯ್ಯ ; ಕಾವ ನಮ್ಮಜ್ಜ ನರಕುರಿ ಹಿಂಡುಗಳ' ಎಂಬ ಪದದಲ್ಲಿ ಅಸ್ಪಷ್ಟತೆಯಿದೆ. ದೇವರು ಮನುಷ್ಯರೆಂಬ ಕುರಿಗಳನ್ನು ಕಾಯುವ ಕುರುಬ, ಅವನ ವಂಶಕ್ಕೆ ಸೇರಿದವನು ನಾನು ಎಂಬ ಅರ್ಥದಲ್ಲಿ ತೆಗೆದುಕೊಂಡರೆ ವಿಷಯ ಕ್ಲಿಷ್ಟವಾಗುತ್ತದೆ.

'ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು
ಬಟ್ಟೆಗಾಗಿ - ತುತ್ತು ಹಿಟ್ಟಿಗಾಗಿ' || ಪ ||

'ಎಲ್ಲಿಂದ ಬಂದೆ ಮುಂದೆತ್ತ ಪಯಣ
ಇಲ್ಲಿ ನಿನಗೆಷ್ಟು ದಿನವಾಲಸ್ಯ ಮರುಳೆ' || ಪ ||

ಮೇಲೆ ಹೇಳಲಾಗಿರುವ ಕೀರ್ತನೆಗಳಲ್ಲಿ ಕನಕದಾಸರ ವಾಸ್ತವ ಪ್ರಜ್ಞೆಯೂ ತಾತ್ವಿಕ ನಿಲುವೂ ವ್ಯಕ್ತವಾಗುತ್ತದೆ. ಅವರು ಕೀರ್ತನೆಗಳನ್ನು ಮಾತ್ರವಲ್ಲದೆ ಕಾವ್ಯಗಳನ್ನು ರಚಿಸಿದ್ದಾರೆ. 'ಮೋಹನ ತರಂಗಿಣಿ'ಯು ಸಾಂಗತ್ಯ ರೂಪದಲ್ಲಿದೆ. ಇದರಲ್ಲಿ ಉಷಾ-ಅನಿರುದ್ಧರ ಪ್ರೇಮವೇ ಮುಖ್ಯ ವಸ್ತುವಾಗಿದೆ. ಪರೋಕ್ಷವಾಗಿ ಕೃಷ್ಣಚರಿತೆಯನ್ನೂ ಕಾಣುತ್ತೇವೆ. 'ನಳಚರಿತ್ರ'ಯು ಭಾಮಿನಿ ಷಟ್ಪದಿ ಛಂದಸ್ಸಿನಲ್ಲಿದೆ. ವಿಧಿವಿಲಾಸದ ಮಹಿಮೆಯನ್ನು ಕುರಿತು ದಾಸರು ಮನಮುಟ್ಟುವಂತೆ ಹೇಳುತ್ತಾರೆ. 'ರಾಮಧಾನ್ಯ ಚರಿತೆ'ಯಲ್ಲಿ ರಾಮನ ಮತ್ತು ರಾಗಿಯ ಕಥೆಗಳೆರಡೂ ಒಂದರೊಡನೊಂದು ಸೇರಿಕೊಂಡಿವೆ. ಬಡವ, ಬಲ್ಲಿದ ಎಂಬ ಬೇಧ ಭಾವ ಸರಿಯಲ್ಲ ಎನ್ನುವುದು ಈ ಕಾವ್ಯದ ಧ್ವನಿಯಾಗಿದೆ. 'ಹರಿಭಕ್ತಿ ಸಾರ'ವು ಭಾಮಿನಿ ಷಟ್ಪದಿಯಲ್ಲಿದೆ. ಇದು ಆತ್ಮ ನಿವೇದನೆಯ ಕಾವ್ಯ ಎನ್ನಬಹುದು. ಭಕ್ತರುಗಳ ಬದುಕಿನ ಸ್ಫೂರ್ತಿ ಈ ಕಾವ್ಯದ ಚೈತನ್ಯವಾಗಿದೆ. ಕನಕದಾಸರು ಪುರಂದರದಾಸರ ಜೊತೆಯಲ್ಲಿ ಸೇರಿಹೋಗಿರುವಂತೆ, ಕನಕ-ಪುರಂದರ ಎಂಬ ನುಡಿಗಟ್ಟು ಕೂಡ ಪ್ರಸಿದ್ಧವಾಗಿದೆ.

1.3.5 ಮಹಿಪತಿದಾಸರು : (1611-1681)

ಮಾಹಿಪತಿದಾಸರು ಬಾಗಿಲುಕೋಟೆಯವರು. ಅವರ ತಂದೆಯ ಹೆಸರು ಕೊನೇರಿರಾಯರು, ತಾಯಿಯ ಹೆಸರು ತಿಳಿಯದು. ಕೊನೇರಿರಾಯರು ವಿಜಾಪುರದ ಆದಿಲ್‌ಷಾಹನ ದಿವಾನರಾಗಿದ್ದರು.

ಸಂಸಾರದಲ್ಲಿದ್ದುಕೊಂಡೇ ಪಾರಮಾರ್ಥಿಕ ಔನ್ನತ್ಯವನ್ನು ಸಾಧಿಸಿದ್ದರು. ಇಂಥ ಮಹಾವ್ಯಕ್ತಿಯ ಎರಡನೆಯ ಮಗನೇ ಮಹಿಪತಿದಾಸರು. ಅವರು ದಿವಾನರ ಕಛೇರಿಯಲ್ಲಿ ಗುಮಾಸ್ತನಾಗಿ ಉದ್ಯೋಗಕ್ಕೆ ಸೇರಿಕೊಂಡರು. ಮಹಿಪತಿದಾಸರು ತಿಮ್ಮವ್ವ ಎಂಬ ಕನ್ಯೆಯನ್ನು ವಿವಾಹವಾಗಿದ್ದರು. ಅವರು ತಮ್ಮ ಉದ್ಯೋಗದಲ್ಲಿ ತೋರಿಸಿದ ದಕ್ಷತೆ, ಪ್ರಾಮಾಣಿಕತೆಯನ್ನು ಕಂಡು ಬಾದಶಹನು ದಿವಾನ ಪದವಿಯನ್ನು ನೀಡಿದನು. ಅವರು ಲೌಕಿಕ ಜೀವನದ ಭಾಗ್ಯವನ್ನು ಅನುಭವಿಸುತ್ತಿರುವ ಕಾಲದಲ್ಲಿ ಫಕೀರನೊಬ್ಬನು ಬಂದು ಪವಾಡವನ್ನು ಮಾಡಿ 'ರಾಯರೆ ಇನ್ನೆಷ್ಟು ದಿನ ಈ ತಾಫೇದಾರಿ? ಸಾರವಾಡದ ಭಾಸ್ಕರ ಗುರುಗಳನ್ನು ನೋಡಿ' ಎಂದು ಹೇಳಿದನು. ಭಾಸ್ಕರ ಗುರುಗಳ ಕೃಪೆಯನ್ನು ಪಡೆದು ಲೌಕಿಕ ಜೀವನವನ್ನು ತ್ಯಜಿಸಿ ಹರಿದಾಸರಾದರು.

ಅವರು ರಚಿಸಿರುವ ಕೀರ್ತನೆಗಳಲ್ಲಿ 'ತರಳಮಹಿಪತಿ, ಮಹಿಪತಿಸುತ, ಮಹಿಪತಿನಂದನ, ಮಹಿಪತಿತನಯ' ಮುಂತಾದ ಅಂಕಿತಗಳನ್ನು ಬಳಸಿದ್ದಾರೆ.

ಕರುಣಿಸೊ ಗುರು ಎನಗೆ
ಅರೆಗಳಿಗೆ ನೀ ಎನ್ನ ಹೃದಯದಿಂದಗಲದ ಹಾಂಗೆ । ಪ ।

ಮಹಿಪತಿದಾಸರು ಸಂಸಾರವನ್ನು ತ್ಯಜಿಸಬೇಕೆಂದು ಹೇಳಿದವರಲ್ಲ. 'ಇದ್ದರಿರಬೇಕು ಸಂಸಾರಸುಖದಲ್ಹೀಗೆ ಪದ್ಮಪತ್ರವು ಜಲದೊಳಗಿದ್ಹಾಂಗೆ' ಎನ್ನುತ್ತಾರೆ. ಪುರಂದರದಾಸರ, ಕನಕದಾಸರ ಪ್ರಭಾವವು ಅವರ ಮೇಲೆ ಬಿದ್ದಿತ್ತು ಎಂದು ಹೇಳಬಹುದು. ಅವರ ಕೀರ್ತನೆಗಳಲ್ಲಿ ವಾತ್ಸಲ್ಯ ಭಾವದವು ತುಂಬಾ ಕಡಿಮೆ. 'ಎಂಥ ಮಗನೆ ನಿಮ್ಮ ಗೋಪಮ್ಮ ಇವ ನೋಡಮ್ಮ ನವನೀತ ಚೋರ' ಎಂಬಂತಹ ಕೀರ್ತನೆಗಳು ಕಡಿಮೆ.

1.3.6 ವಿಜಯದಾಸರು : (1687-1755)

ಹರಿದಾಸ ಸಾಹಿತ್ಯದ ಎಡನೆಯ ಘಟ್ಟವನ್ನು ಪರಿಶೀಲಿಸುವಾಗ ಮೊದಲು ಕೇಳಿಬರುವ ಹೆಸರು ಎಂದರೆ ವಿಜಯದಾಸರ ಹೆಸರು. ಪುರಂದರ, ಕನಕರ ನಂತರ ಸುಮಾರು ನೂರು ವರ್ಷಗಳ ಕಾಲ ದಾಸ ಸಾಹಿತ್ಯ ವಿಶೇಷವಾಗಿ ಬೆಳೆಯಲಿಲ್ಲ. ವಿಜಯನಗರ ಸಾಮ್ರಾಜ್ಯವು ನಾಶವಾದ ಬಳಿಕ ದೇಶದಲ್ಲಿ ಉಂಟಾದ ಕ್ಷೋಭೆಯೂ ಕೂಡ ಇದಕ್ಕೆ ಕಾರಣವಾಗಿದೆ. ದಾಸ ಸಾಹಿತ್ಯವು ಪುನಃ ಚಾಲನೆ ಪಡೆದು ಪುನರುಜ್ಜೀವಿತಗೊಂಡಿದ್ದು ವಿಜಯದಾಸರಿಂದ ಎಂದರೆ ತಪ್ಪಾಗಲಾರದು. ವಿಜಯದಾಸರು ರಾಯಚೂರು ಜಿಲ್ಲೆಯ ಚೀಕಲಪರಿವಿಯ ಬಡ ಕುಟುಂಬವೊಂದರಲ್ಲಿ ಜನ್ಮ ತಾಳಿದರು. ತಂದೆಯ ಹೆಸರು ಶ್ರೀನಿವಾಸಪ್ಪ, ತಾಯಿಯ ಹೆಸರು ಕೂಸಮ್ಮ. ಇವರ ಪೂರ್ವನಾಮ 'ದಾಸಪ್ಪ' ಎಂದು. ವಿಜಯದಾಸರ ಬಾಲ್ಯವು ಜನರ ತಿರಸ್ಕಾರದಲ್ಲಿ ಕಳೆಯಿತು. ದಾಸಪ್ಪನ ವಿವಾಹವು ಅರಳಮ್ಮ ಎಂಬ ವಧುವಿನೊಡನೆ ನಡೆಯಿತು. ಬಡತನದಿಂದಾಗಿ ದಂಪತಿಗಳು ಊರುಬಿಟ್ಟು ದೇಶಾಟನೆಗೆ ತೊಡಗಿದರು. ಇವರು ಮಾಧ್ವಮತದ ತತ್ವಗಳ ಪ್ರಚಾರವನ್ನು ವಿಶೇಷವಾಗಿ ಮಾಡಿದವರಲ್ಲಿ ಒಬ್ಬರಾಗಿದ್ದಾರೆ. ಇವರು ಅನೇಕ ತತ್ವಭೂಯಿಷ್ಠ ಸುಳಾದಿಗಳನ್ನು ರಚಿಸಿರುವುದರಿಂದ ಇವರನ್ನು ಸುಳಾದಿದಾಸರು ಎಂದು ಕರೆಯುವುದೂ ಉಂಟು. ಇವರ ವ್ಯಕ್ತಿತ್ವವು ತುಂಬಾ ದೊಡ್ಡದು. ಇವರ ಪ್ರೇರಣೆಯಿಂದ ಎಷ್ಟೋ ಮುಮುಕ್ಷುಗಳು ಹರಿದಾಸರಾಗಿ ಬೆಳಕಿಗೆ ಬಂದರು. ಇದರಿಂದ ಹರಿದಾಸ ಸಾಹಿತ್ಯ ವಾಹಿನಿಯು ತುಂಬಿ ಹರಿಯತೊಡಗಿತು. ಇವರ ರಚನೆಗಳ ಅಂಕಿತವು ವಿಜಯ ವಿಠ್ಠಲ ಎಂಬುದು.

ಅಂತರಂಗದ ಕದವು ತೆರೆಯಿತಿಂದು ।ಪ।
ಎಂಥ ಪುಣ್ಯದ ಫಲವು ಪ್ರಾಪ್ತಿ ದೊರಕಿತೊ ಎನಗೆ ।ಅ.ಪ.।

ಪುರಂದರದಾಸರ, ಕನಕದಾಸರ ರಚನೆಗಳ ನಂತರ ಎಷ್ಟೊ ಕಾಲ ಕಳೆದು ಹೋದ ಬಳಿಕ ಹೆಚ್ಚು, ಕಡಿಮೆ ಅಷ್ಟೇ ಜನಪ್ರಿಯತೆಯನ್ನು ವಿಜಯದಾಸರ ಕೀರ್ತನೆಗಳು ಪಡೆದುಕೊಂಡುವು.

'ಕೈಲಾಸವಾಸ ಗೌರೀಶ ಈಶ' 'ಸದಾ ಎನ್ನ ಹೃದಯದಲ್ಲಿ ವಾಸ ಮಾಡೊ ಶ್ರೀ ಹರಿ' 'ದಾಸರ ಭಾಗ್ಯವಿದು', 'ಹೊಲೆಯನಾವನೊ ಈ ಕಲಿಯುಗದೊಳಗೆ' ಮುಂತಾದ ಉತ್ತಮವಾದ ರಚನೆಗಳನ್ನು ಮಾಡಿದ್ದಾರೆ. ವಿಜಯದಾಸರು ಕೀರ್ತನೆಗಳನ್ನು ರಚಿಸುವುದರಲ್ಲಿ ಶಬ್ದ ಜೋಡಣೆಗೆ, ಪ್ರಾಸಕ್ಕೆ, ಉಪಮೆಗಳಿಗೆ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ.

1.3.7 ಪ್ರಸನ್ನ ವೆಂಕಟದಾಸರು : (1680-1752)

ವೆಂಕಟದಾಸರು ಬಾಗಲಕೋಟೆಯ ಕಾಖಂಡಕೀ ಎಂಬ ಊರಿನವರು. ಅವರ ತಂದೆಯವರು ಬಾಗಲಕೋಟೆಯಲ್ಲಿ ವಾಸಿಸಲು ತೊಡಗಿದ ನಂತರ ಅವರನ್ನು ಕಾಖಂಡಕಿ ನರಸಪ್ಪಯ್ಯನವರು ಎಂದು ಜನರು ಕರೆಯುತ್ತಿದ್ದರು. ವೆಂಕಟದಾಸರ ತಾಯಿಯ ಹೆಸರು ಲಕ್ಷ್ಮೀಬಾಯಿ. ವೆಂಕಟದಾಸರ ಬಾಲ್ಯದ ದಿನಗಳು ಸುಖದಿಂದ ಕೂಡಿರಲಿಲ್ಲ. ತಂದೆ ತಾಯಿಗಳನ್ನು ಬೇಗನೆ ಕಳೆದುಕೊಂಡರು. ವೆಂಕಟದಾಸರು ದನಕರುಗಳನ್ನು ಮೇಯಿಸುವುದು, ಮನೆ ಕೆಲಸಗಳಲ್ಲಿ ಅತ್ತಿಗೆಗೆ ಸಹಾಯ ಮಾಡುವುದು ಇತ್ಯಾದಿಗಳನ್ನು ಮಾಡುತ್ತಿದ್ದರು. ಒಮ್ಮೆ ಬೇಸರದಿಂದ ಮನೆಬಿಟ್ಟು ತಿರುಪತಿಗೆ ಬಂದಾಗ ಕೆಲವು ಹರಿದಾಸರು ಪರಮಾತ್ಮನ ಸೇವೆಯನ್ನು ಮಾಡುತ್ತಿದ್ದುದನ್ನು ಕಂಡು ಸ್ಫೂರ್ತಿ ಉಂಟಾಗಿ ತಾನೂ ಹರಿದಾಸನಾಗಬೇಕೆಂದು ಆಸೆ ಹುಟ್ಟಿತು. ಜನಾರ್ದನಾಚಾರ್ಯ ಎಂಬ ವಿದ್ವಾಂಸರ ಬಳಿ ವಿದ್ಯಾಭ್ಯಾಸ ಮಾಡಿದರು. ಬಾಗಲಕೋಟೆಗೆ ಹಿಂತಿರುಗಿ ಬಂದು ಹರಿಭಕ್ತಿ ಪ್ರಸಾರ ಕಾರ್ಯದಲ್ಲಿ ಮಗ್ನರಾದರು. ವೆಂಕಟದಾಸರು ವಿವಾಹವಾಗಿದ್ದರೆಂದೂ, ಅವರಿಗೆ ವೆಂಕಟಕೃಷ್ಣಾಚಾರ್ಯನೆಂಬ ಮಗ ಇದ್ದನೆಂದೂ ತಿಳಿದುಬರುತ್ತದೆ. ಅವರು ತಮ್ಮ ಕೃತಿಗಳಿಗೆ 'ಪ್ರಸನ್ನವೆಂಕಟ' ಎಂಬ ಅಂಕಿತವನ್ನು ಕೊಟ್ಟಿದ್ದಾರೆ. ಸುಮಾರು 400 ಕ್ಕಿಂತ ಹೆಚ್ಚು ಕೀರ್ತನೆಗಳು ಲಭಿಸಿವೆ. ಅವರು ಆರು ಕಾವ್ಯಗಳನ್ನು ಕೂಡ ರಚಿಸಿದ್ದಾರೆ. ಅವುಗಳೆಂದರೆ ಭಾಮಿನಿ ಷಟ್ಪದಿಯಲ್ಲಿರುವ 'ಸಮಸ್ತ ನಾಮ ಮಣಿಗಣ ಷಟ್ ಚರಣ ಪದ್ಯ ಮಾಲಾ', 'ನಾರದರು ಕೊರವಂಜಿಯಾಗಿ ವಷ ತಾಳ್ದ ಚರಿತ್ರೆ', 'ಶ್ರೀ ಕೃಷ್ಣ ಪಾರಿಜಾತ', 'ಭ್ರಮರಗೀತೆ', 'ನಾರಾಯಣ ಪಂಜರ' ಮತ್ತು 'ಪ್ರಸನ್ನ ವೆಂಕಟ ಭಾಗವತ'.

ವೆಂಕಟದಾಸರು ಮೃದು ಸ್ವಭಾವದ ವ್ಯಕ್ತಿ ಎಂಬುದು ಅವರ ಬರವಣಿಗೆಯಿಂದ ತಿಳಿಯುತ್ತದೆ. ಅವರ ಕೆಲವು ರಚನೆಗಳ ಸಾಲುಗಳನ್ನು ಇಲ್ಲಿ ನೋಡಬಹುದು.

ಸುಳಿದನ್ಯಾರೆ ಈಗ ಸುಳಿದನ್ಯಾರೆ । ಪ ।
ಕೆಳದಿ ಎನ್ನುಪ್ಪರಿಗೆಯ ಮುಂದೆ
ಹೊಳೆವ ಹೊಂಬಕ್ಕಿಯ ಮ್ಯಾಲೆ
ಥಳಥಳಿಪ ಮಿಂಚಿನಂತೆ । ಅ.ಪ. ।

ವೆಂಕಟದಾಸರು ವಾತ್ಸಲ್ಯಭಾವವನ್ನು ಪ್ರಕಟಿಸುವ ಗೀತೆಗಳನ್ನು ಬರೆದಿದ್ದಾರೆ.

'ಬ್ಯಾಡಿರವ್ವಾ ಎನ್ನ ಕಂದನ್ನ ದೂರಬ್ಯಾಡಿರೆ ಗಾರು
ಮಾಡಿ ಚೋರನೆಂದು ಸಾರಿ ತಂದ ದುರುಳನೆನ್ನ । ಪ ।
....'

ಶಿಶುವಿನ ತೊದಲು ಭಾಷೆಯಲ್ಲಿಯೇ ಬರೆದಿರುವ ಬಹಳ ವಿಶಿಷ್ಟವಾದ ಒಂದು ಪದವನ್ನು ನೋಡಬಹುದು.

'ಎತ್ತೋದೆಯಮ್ಮಾ ನಂಗನ್ನೆತ್ತಿಕೊ ಅಮ್ಮಾ ಬಾಲು
ವತ್ತು ಅತ್ತುಬಂದೀನೆ ಇತ್ತೆ ಅಮ್ಮಿ ತಂದೇನೆ । ಪ ।
....'

ಅವರ ಕೀರ್ತನೆಗಳ ವಸ್ತು ಹಿಂದಿನ ದಾಸರದಕ್ಕಿಂತ ಭಿನ್ನವಾಗಿಲ್ಲ. ಮಾಧ್ವ ಸಂತತಿಯ ಗುರುಗಳನ್ನು, ಹನುಮಾದಿಗಳನ್ನು ಸ್ಮರಿಸಿದ್ದಾರೆ. ಸಂಸಾರದ ನಶ್ವರತೆಯನ್ನು ಉದಾಹರಣೆಗಳೊಡನೆ ಸ್ಮರಿಸಿದ್ದಾರೆ. 'ಸ್ಥಿರವಲ್ಲ ಈ ಕಾಯ, ಈ ದೇಹ ಮನವೇ ಗಾಳಿದೀಪಾ' ಎಂದು ಹೇಳಿದ್ದಾರೆ. ಹರಿಯೇ ಸರ್ವೋತ್ತಮನೆಂದು ಸಾರುವ ದಾಸರು ಸೃಷ್ಟಿಯ ಪ್ರತಿಯೊಂದು ವ್ಯಾಪಾರದಲ್ಲೂ ಹರಿಯ ಇರುವಿಕೆಯನ್ನು ಗುರುತಿಸುತ್ತಾರೆ. ಸಜ್ಜನರ ಸಂಗದ ಮಹತ್ವವನ್ನು ವಿಧವಿಧವಾಗಿ ವರ್ಣಿಸಿದ್ದಾರೆ. ಇವರ ಕೃತಿಗಳಲ್ಲಿ ಆಕರ್ಷಣೀಯ ಭಾಗಗಳೆಂದರೆ ಶ್ರೀಕೃಷ್ಣನನ್ನು ಕುರಿತು ಬರೆದಿರುವ ಪದಗಳು. ಸಮಾಜದ ಡೊಂಕನ್ನು ತಿದ್ದುವ, ವಿಮರ್ಶಿಸುವ ಕಾರ್ಯವನ್ನು ಅವರು ಹೆಚ್ಚಾಗಿ ಮಾಡಿಲ್ಲ.

1.3.8 ಗೋಪಾಲದಾಸರು : (1721-1762)

ಇವರು ವಿಜಯದಾಸರ ಶಿಷ್ಯರು. ರಾಯಚೂರು ಜಿಲ್ಲೆಯ ಮೊಸರುಕಲ್ಲು ಎಂಬ ಊರಿನಲ್ಲಿ ಜನ್ಮತಾಳಿದರು. ಇವರ ತಂದೆಯ ಹೆಸರು ಮುರಾರಿ, ತಾಯಿಯ ಹೆಸರು ವೆಂಕಮ್ಮ. ಬೇಗನೆ ವಿಧವೆಯಾದ ವೆಂಕಮ್ಮ ಮಕ್ಕಳೊಡನೆ ಸಂಕಾಪುರ ಎಂಬಲ್ಲಿಗೆ ಬಂದು ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿಸಿದಳು. ವಿಜಯದಾಸರ ಪೂರ್ವದ ಹೆಸರು ಭಾಗಣ್ಣ. ಭಾಗಣ್ಣ ಜನರಿಗೆ ಭವಿಷ್ಯ ಹೇಳುವ ಉದ್ಯೋಗವನ್ನು ಹಿಡಿಯುವ ಆಸೆ ಇದ್ದಿತು. ಉತ್ತನೂರು ಎಂಬಲ್ಲಿಗೆ ತಾಯಿ ಮತ್ತು ಮೂರು ಜನ ತಮ್ಮಂದಿರೊಡನೆ ಬಂದು ನೆಲಸಿ ಅದೇ ಉದ್ಯೋಗವನ್ನು ಅವಲಂಬಿಸಿ ಚೆನ್ನಾಗಿ ಸಂಪಾದಿಸಿದರು. ಅವರು ಸಂಸಾರಿಗಳೆ ಅಥವಾ ಬ್ರಹ್ಮಚಾರಿಗಳೆ ಎಂಬುದು ಸ್ಪಷ್ಟವಾಗಿ ತಿಳಿಯದು. ಯೋಗಾಯೋಗದಿಂದ ಅವರಿಗೆ ವಿಜಯದಾಸರ ದರ್ಶನ ದೊರೆತು ಅವರಿಂದ 'ಗೋಪಾಲವಿಠಲ' ಎಂಬ ಅಂಕಿತವನ್ನು ಸ್ವೀಕರಿಸಿದರು. ಅಂದಿನಿಂದ ಗೋಪಾಲದಾಸ ಎಂಬ ಹೆಸರನ್ನು ಇಟ್ಟುಕೊಂಡು ಪ್ರಸಿದ್ಧರೂ ಆದರು. ಅವರ ಕೃತಿಗಳ ಕೆಲವು ಸಾಲುಗಳನ್ನು ಇಲ್ಲಿ ನೋಡೋಣ.

'ಏಕೆ ಮಮತೆ ಕೊಟ್ಟು ದಣಿಸುವಿ ರಂಗ
ನೀ ಕರುಣದಿ ಎನ್ನ ಪಾಲಿಸೊ ಕೃಷ್ಣ | ಪ |
....'

'ಆವ ರೋಗವೊ ಎನಗೆ ದೇವ ಧನ್ವಂತ್ರಿ
ಸಾವಧಾನದಿ ಕೈಯ ಪಿಡಿದು ನೀ ನೋಡಯ್ಯ | ಪ |
....'

ನಂಬಿ ನೀ ಕೆಡದಿರು ಇಹಲೋಕ ಸುಖವೆಂಬ ಕಂಬಳಿಯೊಳ ಬುತ್ತಿ
ನಿಂಬೆಲೆಯಾಗಿನೂಟ ಪರಲೋಕ ಸುಖಸಾರ ವೆಂಬೋದೆ ನಿಜಭಕುತಿ | ಪ |

ಗೋಪಾಲದಾಸರ ಕೃತಿಗಳಲ್ಲಿ ವಾತ್ಸಲ್ಯ, ಮಧುರ, ಸಖ್ಯ ಮುಂತಾದುವುಗಳಿಗಿಂತ ಶಾಂತಭಾವ ಮತ್ತು ದಾಸ್ಯ ಭಾವಗಳೇ ಅಧಿಕ. 'ಎಲ್ಲಿ ನೋಡಲು ನೀನಿಲ್ಲದ ಸ್ಥಳವಿಲ್ಲ', 'ನಿನ್ನ ನಾಮಸ್ಮರಣೆ ಎನಗೆ ತೀರ್ಥಯಾತ್ರೆಗಳಯ್ಯ', 'ಭೋಗ ತೀರಿಸಿ ದಾಸನಾಗಮಾಡೊ' ಮುಂತಾದುವುಗಳನ್ನು ನೋಡಬಹುದು.

1.3.9 ಜಗನ್ನಾಥದಾಸರು : (1728-1809)

ಜಗನ್ನಾಥದಾಸರು ರಾಯಚೂರು ಜಿಲ್ಲೆಯ ಬ್ಯಾಗವಟ್ಟಿ ಗ್ರಾಮದಲ್ಲಿ ಜನ್ಮತಾಳಿದರು. ಇವರ ತಂದೆ ತಾಯಿಗಳ ಹೆಸರು ನರಸಿಂಹಾರ್ಯ ಮತ್ತು ಲಕ್ಷ್ಮೀಬಾಯಿ. ದಾಸರ ಮೊದಲಿನ ಹೆಸರು ಶ್ರೀನಿವಾಸ. ಅವರ ವಿದ್ಯಾಭ್ಯಾಸ ಮಂತ್ರಾಲಯದ ಪೀಠಾಧಿಪತಿಗಳಾದ ಶ್ರೀ ವರದೇಂದ್ರ ತೀರ್ಥರ ಬಳಿ ನಡೆಯಿತು. ಚಿಕ್ಕ ವಯಸ್ಸಿನಲ್ಲಿಯೇ ಮಹಾಪಂಡಿತನೆಂಬ ಹೆಸರು ಸಂಪಾದಿಸಿದರು. ಇವರಿಗೆ ಪಾಂಡಿತ್ಯದ ಅಹಂ ಇದ್ದುದರಿಂದ ವಿಜಯದಾಸರನ್ನು ಹಾಸ್ಯ ಮಾಡಿದ್ದೂ ಉಂಟು. ವಿಜಯದಾಸರು ಶ್ರೀನಿವಾಸನ ಅಹಂ

ಬಿಡಿಸಿ ಅವನನ್ನು ಶ್ರೇಷ್ಠ ವ್ಯಕ್ತಿಯನ್ನಾಗಿ ಮಾಡಬೇಕೆಂದು ನಿರ್ಧರಿಸಿದರು. ಅವರ ಉಪಾಯವು ಫಲಿಸಿ ಶ್ರೀನಿವಾಸನು ವಿಜಯದಾಸರ ಬಗ್ಗೆ ಭಕ್ತಿ, ಗೌರವವನ್ನು ತಾಳಿದನು. ವಿಜಯದಾಸರ ಪ್ರೇರಣೆಯಿಂದ ಗೋಪಾಲದಾಸರು ಶ್ರೀನಿವಾಸನಿಗೆ ಸುಮಾರು ನಲವತ್ತು ವರ್ಷಗಳ ಆಯುಷ್ಯವನ್ನೇ ದಾನ ಮಾಡಿದರು. ಕ್ರಮೇಣ ಶ್ರೀನಿವಾಸನಲ್ಲಿದ್ದ ಅಹಂಕಾರವು ಮಾಯವಾಯಿತು. ಜಗನ್ನಾಥ ದಾಸ ಎಂಬ ಹೆಸರನ್ನಿಟ್ಟು ಕೊಂಡು ಹರಿದಾಸರಾದರು. 'ಜಗನ್ನಾಥ ವಿಠಲ' ಎಂಬ ಅಂಕಿತದಲ್ಲಿ ಕೃತಿ ರಚನೆ ಮಾಡಿದರು. 'ಹರಿಕಥಾಮೃತಸಾರ' ಎಂಬ ಕಾವ್ಯವನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದರು. 'ತಂತ್ರಸಾರ' ಎಂಬ ಗ್ರಂಥವನ್ನು ರಚಿಸಿದರು. ಅನೇಕ ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಚಿಸಿದರು. ತ್ರಿಪದಿ ರೂಪದಲ್ಲಿ 'ತತ್ತ್ವ ಸುವ್ವಾಲಿ'ಗಳನ್ನೂ ಬರೆದರು. ಅವರ ಕೀರ್ತನೆಗಳ ಕೆಲವು ಸಾಲುಗಳು ಹೀಗಿವೆ -

> 'ತಟಿತ್ ಕೋಟಿ ನಿಭಕಾಯ ಜಗನ್ನಾಥ
> ವಿಠಲಯ್ಯ ವಿಠಲಯ್ಯ ।ಪ।

ವಿಜಯದಾಸರನ್ನು ಕುರಿತು ಭಕ್ತಿಯಿಂದ ಹೀಗೆ ಸ್ತುತಿಸಿದ್ದಾರೆ -

> 'ರತುನ ದೊರಕಿತಲ್ಲಾ ಎನಗೆ ದಿವ್ಯ
> ರತುನ ದೊರಕಿತಲ್ಲಾ
> ....' ।ಪ।

ಗೋಪಾಲದಾಸರಿಂದ ಆಯುಷ್ಯವನ್ನು ಸ್ವೀಕರಿಸಿದುದನ್ನು ಕೃತಜ್ಞತೆಯಿಂದ ಸ್ಮರಿಸಿದ್ದ ಜಗನ್ನಾಥದಾಸರು ಉತ್ತಮ ಕೀರ್ತನೆಗಳನ್ನು ರಚಿಸಿ ಪ್ರಸಿದ್ಧರಾಗಿರುವುದು ಇಂದಿಗೂ ಅವರ ಪದಗಳು ಜನಪ್ರಿಯವಾಗಿರುವುದರಿಂದ ತಿಳಿಯುತ್ತದೆ. ಜಗನ್ನಾಥದಾಸರು ಶಾಸ್ತ್ರಗಳನ್ನು ವಿವರಿಸುವಾಗ ಶೈಲಿಯು ಗಡುಸಾಗುತ್ತದೆ. ಭಕ್ತಿ ಭಾವಪ್ರಧಾನವಾದಾಗ ಸೊಗಸಾದ ಪದ್ಯಗಳನ್ನು ರಚಿಸುತ್ತಾರೆ. 'ಕಂಡೆ ಕಂಡೆ ಕೃಷ್ಣನ', 'ವಾರಿಜಾಸನು ಇವನ್ಯಾರು ಹೇಳಮ್ಮ', 'ಗತಿಯಾವುದೆನೆಗೆ ಶ್ರೀ ಪತಿಯೆ ಪೇಳೊ', 'ರೋಗ ಹರನೆ ಕೃಪಾಸಾಗರ ಶ್ರೀ ಗುರು ರಾಘವೇಂದ್ರ ಪರಿಪಾಲಿಸೊ'ಇತ್ಯಾದಿಗಳನ್ನು ನೋಡಬಹುದು.

1.3.10 ಹೆಳವನ ಕಟ್ಟೆ ಗಿರಿಯಮ್ಮ

ಹರಿದಾಸ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ ಮಹಿಳೆಯರು ಕಡಿಮೆಯಾದರೂ ಗಲಗಲಿಯ ಅವ್ವ, ಭಾಗಮ್ಮ, ಹರಪನಹಳ್ಳಿ ಭೀಮವ್ವ, ಚೆಲ್ಲಮ್ಮ, ಗಣಪಕ್ಕ, ಸುಂದರಮ್ಮ, ಲಕ್ಷ್ಮೀಬಾಯಿ ಮುಂತಾದವರ ಹೆಸರುಗಳು ಕೇಳಿ ಬರುತ್ತವೆ. ಇಂಥವರ ಪೈಕಿ ಹೆಳವನ ಕಟ್ಟೆ ಗಿರಿಯಮ್ಮ ಪ್ರಸಿದ್ಧಳು. ಈಕೆಯು ಧಾರವಾಡ ಜಿಲ್ಲೆಯ ರಾಣೆಬೆನ್ನೂರಿನಲ್ಲಿ ಜನ್ಮ ತಾಳಿದಳು. ತಂದೆಯ ಹೆಸರು ಭೀಷ್ಮಪ್ಪ. ಆಕೆಯನ್ನು ತಾಲ್ಲೂಕಿನ ಮಲೆಬೆನ್ನೂರಿನ ತಿಪ್ಪರಸ ಎಂಬಾತನಿಗೆ ಕೊಟ್ಟು ವಿವಾಹವಾಗಿತ್ತು. ಆದರೆ ಅವರು ಬಾಲ್ಯದಿಂದಲೂ ವಿರಕ್ತಿಯನ್ನು ಬೆಳೆಸಿಕೊಂಡಿದ್ದರು. ಕೊರಮನ ಹಳ್ಳಿಯ ಬಳಿ ರಂಗನಾಥಸ್ವಾಮಿಯ ಗುಡಿಯಿದ್ದುದರಿಂದ ಗಿರಿಯಮ್ಮ ಆ ದೇವರ ಭಕ್ತಳಾದಳು. ಆ ಸ್ಥಳಕ್ಕೆ ಹೆಳವನ ಕಟ್ಟೆ ಎಂಬ ಹೆಸರಿದ್ದುದರಿಂದ ಅವಳಿಗೂ ಹೆಳವನ ಕಟ್ಟೆ ಗಿರಿಯಮ್ಮ ಎಂಬ ಹೆಸರು ಬಂದಿತು. ಅವಳಿಗೆ ಪರಮಾತ್ಮನಲ್ಲಿ ವಾತ್ಸಲ್ಯ ಭಕ್ತಿ ಇದ್ದಿತು. ದೇವರನ್ನು ತನ್ನ ಮಗ ಎಂದು ತಿಳಿದು ಅದನ್ನು ತನ್ನ ಕೃತಿಗಳಲ್ಲಿ ಪ್ರಕಟಿಸಿದ್ದಾಳೆ. ಆಕೆಯ ಕೃತಿಗಳಲ್ಲಿ 'ಬ್ರಹ್ಮಕೊರವಂಜಿ', 'ಲವಕುಶರ ಕಾಳಗ', ಉದ್ದಾಲಕನ ಹಾಡು', 'ಕೃಷ್ಣ ಕೊರವಂಜಿ' ಎಂಬ ಕಥನ ಕಾವ್ಯಗಳೂ, 'ಚಂದ್ರಹಾಸ ಚರಿತೆ', ಸೀತಾ ಕಲ್ಯಾಣ' ಎಂಬ ಸಾಂಗತ್ಯ ಕೃತಿಗಳೂ ಸೇರಿವೆ. 'ಶಂಕರಗಂಡನ ಹಾಡು', 'ನಾರದ ಕೊರವಂಜಿ' ಎಂಬ ದೊಡ್ಡ ಹಾಡುಗಳನ್ನು ರಚಿಸಿದ್ದಾಳೆ. ಆಕೆಯು ವಿರಾಗಿಣಿಯಾದುದರಿಂದ ಗಂಡನಿಗೆ ಬೇರೆ ಮದುವೆ ಮಾಡಿಸಿ ಭಕ್ತರಿಂದ 'ಅವ್ವ' ಎಂದು ಕರೆಸಿಕೊಳ್ಳುತ್ತಿದ್ದಳು. ಗೋಪಾಲದಾಸರು ಇವಳ ಭಕ್ತಿಯನ್ನು ಮೆಚ್ಚಿಕೊಂಡಿದ್ದರು. ಗಿರಿಯಮ್ಮನನ್ನು ಯಶೋದೆಯ ಅವತಾರವೆಂದೂ ಕರೆಯುವುದುಂಟು. ಈಕೆಯ ಕೃತಿಗಳ ಅಂಕಿತ 'ಹೆಳವನ ಕಟ್ಟೆ ಶ್ರೀರಂಗ'. ಈಕೆಯ ಕೆಲವು ಕೃತಿಗಳ ಸಾಲುಗಳನ್ನು ಇಲ್ಲಿ ನೋಡಬಹುದು.

ಮನವೆನ್ನ ಮಾತು ಕೇಳದು ಮಂದ ಜ್ಞಾನದಿ
ತನುವಿನಾಶೆಯು ಬಿಡಲೊಲ್ಲದು ।ಪ।

'ವನಜನಾಭನೆ ನಿನ್ನ ನಾಮಸ್ಮರಣೆ ಮಾಡದೆ
ಕಂಡ ಕಡೆಗೆ ಅಲೆಯುತಲಿದೆ
....'

ಗಿರಿಯಮ್ಮನ ರಚನೆಗಳು ವಿದ್ಯಾವಂತರ ನಡುವೆಗಿಂತ ಹೆಚ್ಚಾಗಿ ಹಳ್ಳಿಯ ಹೆಣ್ಣು ಮಕ್ಕಳ ಬಾಯಿಯಲ್ಲಿ ಸುಳಿದಾಡುತ್ತವೆ.

1.4 ಸ್ವಪರೀಕ್ಷೆ ಪ್ರಶ್ನೆಗಳು

೧. ಕೀರ್ತನೆಗಳ ಉಗಮದ ಬಗ್ಗೆ ತಿಳಿಸಿ.

....

....

....

....

೨. ಭಾಗವತ ಧರ್ಮ ಎಂದರೇನು?

....

....

....

....

೩. ಸುಳಾದಿ, ಉಗಾಭೋಗ ಎಂದರೇನು?

....

....

....

....

೪. ದಾಸಕೂಟದ ವೈಶಿಷ್ಟ್ಯವೇನು?

....

....

....

....

....

೫ ಪುರಂದರ ದಾಸರು ದಾಸರಲ್ಲಿ ಶ್ರೇಷ್ಠರಾದುದು ಹೇಗೆ?

....

....

....

....

1.5 ಸಾರಾಂಶ

ಕರ್ನಾಟಕದಲ್ಲಿ ಹರಿದಾಸ ಪಂಥವು ವಿಕಾಸ ಹೊಂದಿದ ಬಳಿಕ ಸುಮಾರು ಇನ್ನೂರಕ್ಕೂ ಹೆಚ್ಚು ಹರಿದಾಸರು ಕೀರ್ತನೆಗಳನ್ನು ರಚಿಸಿರುವುದು ತಿಳಿದುಬರುತ್ತದೆ. ಯಾವ ದಾಸರು ಎಷ್ಟು ಹಾಡುಗಳನ್ನು ರಚಿಸಿದ್ದಾರೆ ಎನ್ನುವುದು ತಿಳಿಯುವುದಿಲ್ಲ. ಅವರು ರಚಿಸಿರುವ ಹಾಡುಗಳನ್ನು, ಪದಗಳನ್ನು ನೋಡಿದರೆ ಅವರಿಗೆ ಜೀವದಯೆ ಪ್ರಧಾನವಾಗಿತ್ತೆಂಬುದು ತಿಳಿಯುತ್ತದೆ. ದಾಸರಲ್ಲಿ ಬಹುಪಾಲು ಸಂಸಾರಿಗಳಾಗಿದ್ದರು, ಸಂಸಾರದಲ್ಲಿದ್ದು ಕ್ರಮೇಣ ಪಕ್ವವಾಗಿ ಭಕ್ತಿ ವೈರಾಗ್ಯಗಳನ್ನು ಅಳವಡಿಸಿಕೊಂಡವರು. ಹಲವರು ಸಂಗೀತವನ್ನು ತಮ್ಮ ಕೀರ್ತನೆಗಳಿಗೆ ಬಳಸಿಕೊಂಡರು. ಕಾಲಿಗೆ ಗೆಜ್ಜೆ ಕಟ್ಟಿ ಕುಣಿಯುತ್ತಾ ಸಂಚಾರ ಮಾಡುತ್ತಿದ್ದರು. ದಾಸರಲ್ಲಿ ಅನೇಕರು ಉತ್ತಮ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಇನ್ನು ಉಳಿದವರು ತಮ್ಮ ಹೃದಯದ ಭಕ್ತಿ ವೈರಾಗ್ಯಗಳನ್ನು ಪ್ರಕಟಿಸಿದ್ದಾರೆ. ಭಾಗವತ, ಭಾರತ, ರಾಮಾಯಣ ಮತ್ತು ಪುರಾಣಗಳಿಂದ ಘಟನೆಗಳನ್ನು, ಸನ್ನಿವೇಶಗಳನ್ನು ಆರಿಸಿಕೊಂಡು ಶ್ರೀಹರಿಯ ಅಥವಾ ಶ್ರೀ ಕೃಷ್ಣನ ಮಹಿಮೆಯನ್ನು ಕೊಂಡಾಡಿದ್ದಾರೆ. ಅನೇಕ ದಾಸರು ಒಂದೇ ವಿಷಯವನ್ನು ಕುರಿತು ಒಂದೇ ರೀತಿಯಲ್ಲಿ ಬರೆದಿದ್ದಾರೆ. ಅವರ ದೃಷ್ಟಿಯಲ್ಲಿ, ಸೃಷ್ಟಿಯಲ್ಲಿ ಸ್ವೋಪಜ್ಞತೆಯು ಕಡಿಮೆ ಎನ್ನಿಸುತ್ತದೆ. ಕಥೆಯ ನಿರೂಪಣೆಗೆ ಮಾತ್ರ ಅವರು ಮನಸ್ಸು ಕೊಟ್ಟಿದ್ದಾರೆ. ಆದರೆ ಶ್ರೇಷ್ಠ ಸಾಹಿತ್ಯವನ್ನು ನಿರ್ಮಿಸಿದ ಹರಿದಾಸರು ಕೆಲವರಾದರೂ ಇದ್ದಾರೆ. ಒಂದು ಮಾತನ್ನು ಇಲ್ಲಿ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಯಾವ ಹರಿದಾಸರೇ ಆಗಲಿ ಜೀವನ ಸಾಧನೆಯಲ್ಲಿ ಉನ್ನತ ಮಟ್ಟವನ್ನು ಮುಟ್ಟಿದ್ದವರು. ಅವರಿಗೆ ಹಾಡು, ಪದ ಇತ್ಯಾದಿಗಳು ಮುಖ್ಯವಾಗಿರಲಿಲ್ಲ. ಭಕ್ತಿಯ, ವೈರಾಗ್ಯದ, ಜ್ಞಾನದ ನಿಧಿಯು ಮುಖ್ಯವಾಗಿತ್ತು. ಆಧ್ಯಾತ್ಮಿಕ ಸಾಧನೆಯಲ್ಲಿ ಅವರು ಮುಂದುವರಿದಿದ್ದರು. ಅವರ ಬದುಕೇ ಜನರಿಗೆ ಮೌನ ರೀತಿಯ ಮಾರ್ಗದರ್ಶಿಯಾಗಿರುತ್ತಿತ್ತು. ಜನರೂ ಕೂಡ ದಾಸರ ಜೀವನ ಶೈಲಿಗೆ ಮಾರು ಹೋಗಿ ಬೆಲೆ ಕೊಡುತ್ತಿದ್ದರು. ದಾಸರು ಇಹಲೋಕದ ಜೀವನವನ್ನು ತಿರಸ್ಕಾರದಿಂದ ಕಾಣುತ್ತಿರಲಿಲ್ಲ. ಅವರು ಈಸಬೇಕು ಇದ್ದು ಜೈಸಬೇಕು ಎಂಬ ನಂಬಿಕೆಯುಳ್ಳವರು. ಸಂಸಾರವೆಂದೆಂಬ ಭಾಗ್ಯವಿರಲಿ ಎಂದು ಹೇಳಿದವರು. ಅವರಿಗೆ ಈ ಲೋಕದ ಸುಖದ ಕ್ಷಣಿಕತೆಯ ಬಗ್ಗೆ, ಆ ಸುಖದ ಹಿಂದೆಯೇ ಬರುವ ದುಃಖದ ಬಗ್ಗೆ ಖಚಿತವಾದ ತಿಳಿವಳಿಕೆಯಿದ್ದಿತು. ನಂಬದಿರು ಈ ದೇಹ ಸ್ಥಿರವಲ್ಲ, ಎಚ್ಚರಿಕೆ ಈ ಭಾಗ್ಯ ಯಾರಿಗೂ ಸ್ಥಿರವಲ್ಲ ಎಂದು ಆತ್ಮೀಯ ವಾಣಿಯಲ್ಲಿ ತಿಳಿಸುತ್ತಿದ್ದರು. ಜನರ ನಂಬಿಕೆಗಳು, ಪದ್ಧತಿಗಳು ಅವಿಚಾರದಿಂದ ಕೂಡಿದ್ದರೆ ಅದನ್ನು ಸರಿಪಡಿಸಲು ಪ್ರೀತಿಯಿಂದ ಪ್ರಯತ್ನಿಸುತ್ತಿದ್ದರು. 'ಮಡಿಮಡಿಯೆಂದಡಿಗಡಿಗ್ಹಾರುತಿಹ ಮಡಿ ಮಾಡುವ ಬಗೆ ಬೇರುಂಟೋ', 'ಏನು ವ್ರತವೇನು ಸಾಧನೆಗಳೇನೊ ಸ್ವಾನುಭವದ ಜ್ಞಾನಿ ಹೀನ ಮಾನವೇನೆ', 'ಜಪವ ಮಾಡಿದರೇನು ತಪವ ಮಾಡಿದರೇನು ವಿಪರೀತ ಕಪಟಗುಣ ಕಲುಷವಿದ್ದವರು', ಶ್ವಾನು ಬೂದಿಯೊಳಿರಲು ಶಿವಭಕ್ತ ನೆನಬಹುದೆ, ಕಾನನ ದೊಳಿಹ ಕಾಗೆ ವನವಾಸಿಯೇ' ಎಂದು ಕಟುವಾಗಿ ನುಡಿದಿರುವುದು ಜನತೆಯ ಹಿತಕ್ಕಾಗಿಯೇ ಎಂದು ತಿಳಿಯಬೇಕು. ಮಾನವರ ಉತ್ತಮ ನಡತೆಗಳಾವುವೆಂಬುದನ್ನು ಅವರು ತಮ್ಮ ಹಾಡುಗಳಲ್ಲಿ ನಿರೂಪಿಸಿದ್ದಾರೆ. ಅವರು ಸಮಾಜ ಸುಧಾರಣೆಯ ಉದ್ದೇಶವನ್ನು ಹೊಂದಿದ್ದುದು ಅತ್ಯಂತ ಸ್ಪಷ್ಟವಾದ

ಅಂಶವಾಗಿದೆ. ಯಾರು ಏನಾದರೇನಂತೆ ತನಗೆ ಶ್ರೀ ಹರಿಯ ಕೃಪೆ ದೊರೆತರೆ ಸಾಕು ಎಂದು ಭಾವಿಸಿದವರಲ್ಲ. ಇಹ ಲೋಕದ ಭೋಗ ಭಾಗ್ಯಗಳಿಗಿಂತಲೂ ಮಿಗಿಲಾದುದನ್ನು ಸಾಧಿಸಬೇಕಾದುದು ಮನುಷ್ಯನ ಧರ್ಮ ಎಂದು ಅವರು ನಂಬಿದ್ದರು, ಉಪದೇಶಿಸಿದ್ದರು.

ದಾಸ ಸಾಹಿತ್ಯವು ಸಂಸ್ಕೃತದಲ್ಲಿದ್ದ ಆಧ್ಯಾತ್ಮ ಜ್ಞಾನವನ್ನು ಕನ್ನಡದ ಮೂಲಕ ಜನಸಾಮಾನ್ಯರಿಗೆ ಹಂಚಿದುದು ಅಮೋಘವಾದ ಕಾರ್ಯವಾಗಿದೆ. ಹರಿದಾಸರ ಹಾಡುಗಳು, ಪದಗಳು, ಎಲ್ಲವನ್ನೂ ಕೀರ್ತನೆಗಳು ಎಂದು ಒಟ್ಟಾರೆ ಕರೆಯುವುದು ಸೌಕರ್ಯದ ದೃಷ್ಟಿಯಿಂದ. ಏಕೆಂದರೆ ಹರಿದಾಸರು ಎಂದರೆ ಅವರು ಹಾಡಿದ್ದು, ಬರೆದದ್ದು ಹೆಚ್ಚಾಗಿ ಕೀರ್ತನೆಗಳು ಎಂಬ ಭಾವನೆ ತಟ್ಟನೆ ಮೂಡುತ್ತದೆ. ಕೀರ್ತನೆಗಳ ಸಾಮಾನ್ಯ ಸ್ವರೂಪಕ್ಕಿಂತ ಭಿನ್ನವಾದ 'ಸುಳಾದಿ' ಮತ್ತು 'ಉಗಾಭೋಗ' ಎಂಬ ಎರಡು ಪ್ರಕಾರಗಳಿವೆ. ಹರಿದಾಸರು ಈ ಮಟ್ಟಿನಲ್ಲಿಯೂ ಪದಗಳನ್ನು ರಚಿಸಿದ್ದಾರೆ. ಇಲ್ಲಿ ಉದಾಹರಣೆಗೆ ಸುಳಾದಿಯನ್ನು ನೋಡಿ.

'ಧನದಿಂದ ನೆಂಟರು ಕೆಲವರು ಏನಗಿನ್ನು
ತನುವಿನ ನೆಂಟರು ಕೆಲವರು ಎನಗಿನ್ನು
ಮನದಿಂದ ನೆಂಟರು ಕೆಲವರು ಎನಗಿನ್ನು
....
ಕ್ಷಣ ಬಿಡದಲೆ ಕಾಯ್ದ ಗೋಪಾಲವಿಠಲ'

ಇದರಲ್ಲಿ ಪಲ್ಲವಿ, ಅನುಪಲ್ಲವಿ, ಚರಣಗಳು ಎಂಬ ಭೇದವಿರುವುದಿಲ್ಲ. ಕೊನೆಯಲ್ಲಿ 'ಜತೆ' ಎಂಬ ಎರಡು ಸಾಲುಗಳ ಜೋಡಿ ಇರುತ್ತದೆ.

ಉಗಾಭೋಗಕ್ಕೆ ಒಂದು ಉದಾಹರಣೆ :

'ಆರಿಗಾರಾಗುವರೊ ಆಪತ್ತು ಕಾಲಕ್ಕೆ
ಆರಿಗಾರೊದಗುವರೊ ಸಂಪತ್ತು ಕಾಲಕ್ಕೆ
ಆರಿಂದ ಬಪ್ಪುದು ಆರಿಂದ ತಪ್ಪುವುದು
ಆರಿಸಿ ನೋಡುವುದು ಇದರ ಕಾರಣವನು, ಇದ
ಕಾರು ವಾರಣದಲಿ ನೋಡಿ
ಆರೋಪಿಸಲು ಎಲ್ಲ ಭಾರ ಅವಗೆ
ಕಾರುಣ್ಯ ಮಾರುತಿ ಗೋಪಾಲವಿಠಲ
ಈ ರೀತಿ ಅರಿದವಗೆ, ಇಲ್ಲೆಪೊರೆವ'

ಇದು ಪದಕ್ಕಿಂತ, ಹಾಡಿಗಿಂತ ಚಿಕ್ಕದು. 4 ಅಥವಾ 6 ಸಾಲುಗಳಿರುವುದು ಸಾಮಾನ್ಯ. ಕೆಲವೊಮ್ಮೆ ಸ್ವಲ್ಪ ಹೆಚ್ಚಿಗೆ ಇರಬಹುದು. ಪಲ್ಲವಿ, ಅನುಪಲ್ಲವಿ ಇರುವುದಿಲ್ಲ. ಕೆಲವು ಸಲ ಮೊದಲ 2 ಸಾಲನ್ನು ಪಲ್ಲವಿ ಎಂದೂ ಉಳಿದ ಭಾಗವನ್ನು ಚರಣ ಎಂದೂ ಕರೆಯುವುದುಂಟು.

ದಾಸರ ಕೀರ್ತನೆಗಳಲ್ಲಿ ಪ್ರಾಸದ ಸೌಂದರ್ಯವನ್ನು ಸ್ಪಷ್ಟವಾಗಿ ಗುರುತಿಸಬಹುದು. ಕನ್ನಡ ನುಡಿಯ ಸೊಬಗು, ಸಂಭ್ರಮ, ಶಬ್ದ ಜೋಡಣೆ ಮುಂತಾದ ಅಂಶಗಳನ್ನು ಹರಿದಾಸರ ಕೃತಿಗಳಲ್ಲಿ ಕಾಣಬಹುದು. ದಾಸರ ಕೀರ್ತನೆಗಳಲ್ಲಿ ದೇಶಿಯ ಸೌಂದರ್ಯವನ್ನು ಗುರುತಿಸಬಹುದು. ದೇಸಿ ಎಂದಾಗ ಹಳ್ಳಿಗರ ಆಡುಭಾಷೆ ಮತ್ತು ಅದರ ಎಲ್ಲ ಅಂಶಗಳು ಸೇರಿಕೊಂಡಿರುತ್ತವೆ. ನಾಗರಿಕರ ಶಿಷ್ಟಭಾಷೆಗೂ ಗ್ರಾಮೀಣರ ದೇಸಿಗೂ ಇರುವ ವ್ಯತ್ಯಾಸವನ್ನು ಮೇಲುನೋಟಕ್ಕೆ ಗುರುತಿಸಬಹುದು. ಉದಾಹರಣೆಗೆ 'ಇಟ್ಟಾಂಗೆ ಇರುವೆನೋ ಹರಿಯೇ ಎನ್ನ ದೊರೆಯೇ' 'ಬ್ಯಾಡ ಮಧುರೆಗೆ ಪೋಗ ಬ್ಯಾಡೆಲವೋ ಶ್ರೀ ಕೃಷ್ಣ' 'ಕೇಳಿದ್ಯಾ ಕೌತುಕವನ್ನು ಕೇಳಿದ್ಯಾ' 'ಎಲ್ಯಾಡಿ ಬಂದ್ಯೋ ಎನ್ನ ರಂಗಯ್ಯ ನೀ' 'ಹ್ಯಾಂಗೆ ಕೊಟ್ಟನು ಹೆಣ್ಣ ಸಾಗರನು ಈ ಪರಿಗೆ' 'ಲೊಳಲೊಟ್ಟೆ ಎಲ್ಲಾ ಲೊಳಲೊಟ್ಟೆ' 'ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಮುಂತಾದ ಕೀರ್ತನೆಗಳನ್ನು ನೋಡಬಹುದು. ಪುರಂದರದಾಸರ ಕೃತಿಗಳಲ್ಲಿ ದೇಸಿಯು

ತನ್ನ ಇರುವಿಕೆಯನ್ನು ಸಂಭ್ರಮದಿಂದ ತೋರಿಸಿಕೊಳ್ಳುತ್ತದೆ. ಕನಕದಾಸರ ರಚನೆಗಳಲ್ಲಿಯೂ ದೇಸಿಯನ್ನು ತುಂಬಾ ಸಹಜವಾಗಿ ಬಳಸಿರುವುದನ್ನು ಕಾಣುತ್ತೇವೆ. ದಾಸಕೂಟದ ಹರಿದಾಸರು ದೇಸಿಗೆ ಮಾರುಹೋಗದೆ ಇದ್ದಿದ್ದರೆ ಜನಸಾಮಾನ್ಯರನ್ನು ಈ ಪ್ರಮಾಣದಲ್ಲಿ ರಂಜಿಸುವುದು ಸಾಧ್ಯವಾಗುತ್ತಿರಲಿಲ್ಲ. ಇನ್ನು ಹರಿದಾಸರು ಕರ್ನಾಟಕ ಸಂಗೀತ ಮತ್ತು ನೃತ್ಯ ಕ್ಷೇತ್ರಗಳಿಗೆ ಕೊಟ್ಟಿರುವ ಕೊಡುಗೆಯೂ ವಿಶಿಷ್ಟವಾದುದು. ಉಪದೇಶಗಳನ್ನು ಜನರಿಗೆ ಕೊಟ್ಟರೆ ಬಹುಬೇಗ ಮರೆತುಹೋಗಿ ಬಿಡಬಹುದು - ಎಂಬ ಆಲೋಚನೆಯೂ ಅವರಿಗೆ ಬಂದಿತ್ತು. ಆದರೆ ಸಂಗೀತವನ್ನು ಬಳಸಿಕೊಂಡರೆ ಜನರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಉಂಟಾಗುತ್ತದೆಂದು ಅವರು ತಿಳಿದಿದ್ದರು. ಪುರಂದರದಾಸರು ತಾಳ ವಿಧಾನಗಳನ್ನು ಬದಲಾಯಿಸಿ ಸುಲಭವಾಗಿಸಿದರು. ಸಂಗೀತ ಬಂಧಗಳನ್ನು ಸಪ್ತ ತಾಳಗಳ ಚೌಕಟ್ಟಿನಲ್ಲಿಟ್ಟು ತೋರಿಸಿದರು. ಸಂಗೀತಾಭ್ಯಾಸಿಗಳು ಅಲಂಕಾರಗಳ ಅಭ್ಯಾಸದ ಬಳಿಕ ಗೀತೆಗಳು ಎಂಬ ಪ್ರಬಂಧಗಳನ್ನು ಕಲಿಯುತ್ತಾರೆ. ಸಂಗೀತದಲ್ಲಿ ಗೀತೆ ಎಂಬುದಕ್ಕೆ ಪಲ್ಲವಿ, ಚರಣಗಳಿಂದ ಕೂಡಿದ ಬಂಧಗಳು ಎಂಬ ಅರ್ಥವಿದೆ. ದಾಸರ ಕೀರ್ತನೆಗಳಲ್ಲಿ ಹೆಚ್ಚು ಭಾಗ ಛಾಪು ತಾಳಗಳಲ್ಲಿವೆ. ಅದರಲ್ಲಿ ಖಂಡ ಛಾಪು ಮತ್ತು ಮಿಶ್ರ ಛಾಪು ಎಂದು ಎರಡು ಬಗೆ. ಕೀರ್ತನೆಗಳ ರಚನೆ ಮಾಡಿದ ಹರಿದಾಸರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಂಗೀತ ಕಲಿಕೆಗೆ ಪ್ರೇರಣೆ ನೀಡಿದರು. ಕರ್ನಾಟಕ ಸಂಗೀತ ಪಿತಾಮಹ ಎನ್ನಿಸಿಕೊಂಡಿರುವ ಪುರಂದರ ದಾಸರಿಂದ ಕನ್ನಡ ವಾಙ್ಮಯಕ್ಕೆ ಆದ ಉಪಕಾರ ಅಪಾರವಾದುದು. ದಾಸ ಸಾಹಿತ್ಯದ ಪ್ರಾರಂಭದ ಕಾಲದಲ್ಲಿ ಈಗ ಇರುವಷ್ಟು ರಾಗಗಳು ಬಳಕೆಯಲ್ಲಿರಲಿಲ್ಲ. ಜನ ಸಾಮಾನ್ಯರಿಗೆ ಕಷ್ಟವಾಗಬಾರದೆಂದು ರಾಗಗಳ ಸಂಖ್ಯೆಯನ್ನು ಸೀಮಿತಗೊಳಿಸಿರಬಹುದು. ಕೀರ್ತನೆಗಳು ಹಾಡುವ ಸಲುವಾಗಿ ರಚಿತವಾದ ಬಂಧಗಳು. ಅವುಗಳಲ್ಲಿ ಸಂಗೀತಕ್ಕಿಂತ ಸಾಹಿತ್ಯಕ್ಕೆ ಹೆಚ್ಚು ಪ್ರಾಧಾನ್ಯ. ವೈವಿಧ್ಯಪೂರ್ಣ ಭಕ್ತಿ ನಿರೂಪಣೆಯ ದೃಷ್ಟಿಯಲ್ಲಿ ದಾಸರ ರಚನೆಗಳು ವಿಶಿಷ್ಟವಾದುವು. ಅವರ ಭಾವಕ್ಕೆ ತಕ್ಕ ರಚನೆಗಳೂ ಇವೆ. ಒಮ್ಮೆ ದುಃಖ ಭಾವದಿಂದ ಪರಮಾತ್ಮನನ್ನು ಬೇಡುತ್ತಾರೆ. ಇನ್ನೊಮ್ಮೆ ತಮ್ಮ ಪಾಪಗಳಿಗೆ ಕ್ಷಮೆ ಕೇಳುತ್ತಾರೆ. ಮತ್ತೊಮ್ಮೆ ದೈವದ ಅಸಾಮಾನ್ಯ ಕೃಪೆಯನ್ನು ನೆನೆಯುತ್ತಾರೆ, ಮಗದೊಮ್ಮೆ ದೇವರನ್ನು ತಮ್ಮ ಸಖನೆಂದು ಭಾವಿಸುತ್ತಾರೆ. ಆದರೆ ದೇವರು ಪ್ರಭು ತಾವು ಅವನ ಸೇವಕರು ಎಂಬ ಭಾವವೇ ಹೆಚ್ಚಾಗಿ ಪ್ರಕಟವಾಗಿದೆ. 'ಆಡಿದನೋ ರಂಗ ಅದ್ಭುತದಿಂದಲಿ' ಮುಂತಾದ ಹಾಡುಗಳು ನೃತ್ಯಕ್ಕೆ ಅಳವಟ್ಟರೆ ತುಂಬಾ ರಂಜಿಸುತ್ತವೆ. ದಾಸರ ಹಾಡುಗಳು ನೃತ್ಯಕ್ಕೆಂದು ರಚಿತವಾಗಿಲ್ಲವಾದರೂ ಅವರು ಗೆಜ್ಜೆ ಕಟ್ಟಿಕೊಂಡು ಭಕ್ತಿಭಾವದಿಂದ ಕುಣಿಯುತ್ತಿದ್ದರು. ಆದ್ದರಿಂದ ಈ ಲಕ್ಷಣವನ್ನು ನೋಡಿದ ನೃತ್ಯ ಕಲಾವಿದರು ದಾಸರ ಕೀರ್ತನೆಗಳನ್ನು ನೃತ್ಯ ಸಂಯೋಜನೆಗೆ ಬಳಸಿಕೊಂಡರು.

ಹರಿದಾಸ ಸಾಹಿತ್ಯವನ್ನು ಯಾರೇ ಆಗಲಿ ಮತೀಯ ವಾಙ್ಮಯ ಎಂದು ಹೇಳುವಂತಿಲ್ಲ. ಮತವನ್ನು ಮೀರಿದ ತತ್ತ್ವ, ನೀತಿ, ಧರ್ಮ ಜೀವನ ಮೌಲ್ಯಗಳನ್ನು ಅದು ಒಳಗೊಂಡಿದೆ. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ದಾಸ ಸಾಹಿತ್ಯಕ್ಕೆ ವಿಶಿಷ್ಟವಾದ ಸ್ಥಾನವಿದೆ. ಶಾಶ್ವತವಾದ ಸ್ಥಾನವಿದೆ.

1.6 ಸ್ವಪರೀಕ್ಷೆ ಪ್ರಶ್ನೆಗಳಿಗೆ ಉತ್ತರಗಳು

೧) ಕೀರ್ತನೆಗಳು ಹರಿದಾಸರು ಕನ್ನಡದಲ್ಲಿ ರಚಿಸಿರುವ ಪದಗಳು, ಹಾಡುಗಳು. ಈ ರಚನೆಗಳ ಸೃಷ್ಟಿಯು ಯಾವಾಗ ಆಯಿತು ಎನ್ನುವುದನ್ನು ಹೇಳಲು ಸಾಧ್ಯವಾಗುವುದಿಲ್ಲ. ಕ್ರಿ.ಶ. ಒಂಭತ್ತನೇ ಶತಮಾನದಲ್ಲಿದ್ದ ಅಚಲಾನಂದ ಎಂಬುವವರು ಕೀರ್ತನೆ ರಚನೆ ಮಾಡಿದವರಲ್ಲಿ ಪ್ರಥಮರು ಎಂಬ ವಾದವಿದೆ. ಅವರ ಕಾಲದ ಬಗ್ಗೆ ಸಮಂಜಸವಾದ ತೀರ್ಮಾನ ಕಂಡುಬರುವುದಿಲ್ಲ. ಅವರನ್ನು ಹದಿಮೂರನೇ ಶತಮಾನದವರೆಂದು ಕೆಲವರು

ಹೇಳುತ್ತಾರೆ. ನರಹರಿತೀರ್ಥರೆಂಬುವರು ಮೊದಲು ಕನ್ನಡದಲ್ಲಿ ಕೀರ್ತನೆಗಳನ್ನು ಬರೆದರು ಎಂಬ ಅಭಿಪ್ರಾಯವೂ ಇದೆ. ಆದರೆ ಸಮರ್ಪಕವಾದ ಸಾಕ್ಷ್ಯಾಧಾರಗಳಿಲ್ಲ ಎಂಬ ವಾದವೂ ಇದೆ. ಆದ್ದರಿಂದ ಶ್ರೀಪಾದ ರಾಜರೇ ಕೀರ್ತನೆಗಳ ಆದ್ಯ ಪ್ರವರ್ತಕರು ಎಂಬ ಭಾವನೆ ಬೆಳೆದು ಬಂದಿದೆ.

೨) ಭಾಗವತ ಎನ್ನುವುದು ಪುರಾಣ ಕೃತಿ. ಅದನ್ನು ಪುರಾಣ ಕಾವ್ಯವೆಂದು ಕರೆಯಬಹುದು. ಅದರಲ್ಲಿ ಶ್ರೀಕೃಷ್ಣನ ಚರಿತ್ರೆ ಬರುತ್ತದೆ. ಇದೇ ಭಾಗವತದ ತಿರುಳು ಎನ್ನಬಹುದು. ಭಕ್ತಿಯು ಇದರಲ್ಲಿ ಮಡುಗಟ್ಟಿರುತ್ತದೆ. ಶ್ರೀ ಕೃಷ್ಣನ ಜೀವನ ಚರಿತ್ರೆಯ ಭಾಗವು ಹರಿದಾಸರಿಗೆ ಮತ್ತು ಕವಿಗಳಿಗೆ ವಸ್ತುಗಳನ್ನು ನೀಡುವ ಗಣಿಯಾಗಿದೆ. ಶ್ರೀಕೃಷ್ಣನನ್ನು ನಾನಾ ರೀತಿಯಲ್ಲಿ, ಸ್ವರೂಪದಲ್ಲಿ ಸ್ತುತಿಸುವ ಒಲಿಸಿಕೊಳ್ಳುವ ಪ್ರಯತ್ನವನ್ನು ಭಕ್ತರು ಮಾಡುತ್ತಾರೆ. ಹೀಗೆ ಶ್ರೀಕೃಷ್ಣನನ್ನು ಭಜಿಸುವವರನ್ನು ಭಾಗವತರೆಂದೂ ಕರೆಯುತ್ತಿದ್ದರು. ಅವರು ಅನುಸರಿಸುತ್ತಿದ್ದ ಮಾರ್ಗವನ್ನು ಭಾಗವತ ಧರ್ಮ ಎಂದು ಕರೆಯಲಾಗುತ್ತಿತ್ತು.

೩) ಹರಿದಾಸರು ರಚಿಸಿದ ಕೃತಿಗಳನ್ನು ಕೀರ್ತನೆ, ಸುಳಾದಿ, ಉಗಾಭೋಗ ಎಂದು ಅವುಗಳ ಬಾಹ್ಯ ಲಕ್ಷಣಗಳ ಆಧಾರದ ಮೇಲೆ ವಿಂಗಡಿಸಿದ್ದಾರೆ. ಕೀರ್ತನೆಗಳಲ್ಲಿ ಪಲ್ಲವಿ, ಅನುಪಲ್ಲವಿ, ಚರಣಗಳು ಇರುತ್ತವೆ. ಆದರೆ ಸುಳಾದಿ ಎಂಬ ರಚನೆಗಳಲ್ಲಿ ಪಲ್ಲವಿ, ಅನುಪಲ್ಲವಿ ಇರುವುದಿಲ್ಲ. ಚರಣಗಳು ಎಂಬ ಭೇದ ಇರುವುದಿಲ್ಲ. ಕೊನೆಯಲ್ಲಿ 'ಜತೆ' ಎಂಬ ಎರಡು ಸಾಲುಗಳ ಜೋಡಿ ಇರುತ್ತದೆ. ಉಗಾಭೋಗದಲ್ಲಿಯೂ ಪಲ್ಲವಿ, ಅನುಪಲ್ಲವಿ ಇರುವುದಿಲ್ಲ. ಆದರೆ ಕೆಲವು ಸಲ ಮೊದಲನೆಯ ಎರಡು ಸಾಲುಗಳನ್ನು ಪಲ್ಲವಿಯಾಗಿ ತೆಗೆದುಕೊಳ್ಳುವುದುಂಟು, ಉಳಿದ ಭಾಗವನ್ನು ಚರಣವೆಂದು ಕರೆಯುತ್ತಾರೆ. ಉಗಾಭೋಗ ನಾಲ್ಕಾರು ಸಾಲುಗಳಷ್ಟೇ ಇರುತ್ತದೆ.

೪) ಹರಿದಾಸ ಚಳುವಳಿಯು ಹದಿನೈದನೇ ಶತಮಾನದಲ್ಲಿ ಪ್ರಾರಂಭವಾದ ನಂತರ ಶ್ರೀಕೃಷ್ಣನ ಭಕ್ತರಲ್ಲಿ ಎರಡು ಪ್ರತ್ಯೇಕ ಕರ್ತವ್ಯಗಳನ್ನು ನಿರ್ವಹಿಸುವವರು ಅನೌಪಚಾರಿಕ ಸಂಘ ಅಥವಾ ಕೂಟಗಳನ್ನು ಏರ್ಪಡಿಸಿಕೊಂಡರು. ಸಂಸ್ಕೃತ, ದ್ವೈತ ತತ್ತ್ವ ಇತ್ಯಾದಿಗಳನ್ನು ತಿಳಿದು, ಚರ್ಚಿಸಿ, ಹರಿಸರ್ವೋತ್ತಮತ್ವವನ್ನು ಎತ್ತಿ ಹಿಡಿಯುವ ಪಂಡಿತರು ವ್ಯಾಸಕೂಟವೆಂಬ ಸಂಘವನ್ನು ಮಾಡಿಕೊಂಡರು. ಜನಸಾಮಾನ್ಯರಿಗೆ ಭಕ್ತಿ, ವೈರಾಗ್ಯಗಳನ್ನು ಜೀವನದ ಸಾತ್ವಿಕ ಹಾದಿಯನ್ನು ಹಾಡುಗಳ ಮೂಲಕ ಪರಿಚಯ ಮಾಡಿಕೊಟ್ಟು, ಹರಿಭಕ್ತಿ ಪ್ರಸಾರ, ಪ್ರಚಾರ ಮಾಡುವವರು ದಾಸಕೂಟ ಎಂಬ ಸಂಘವನ್ನು ಮಾಡಿಕೊಂಡರು. ಎರಡೂ ಕೂಟಗಳು ಪರಸ್ಪರ ಪೂರಕವಾಗಿ ಪೋಷಕವಾಗಿ ಕೆಲಸ ಮಾಡುತ್ತಿದ್ದುವು.

೫) ಪುರಂದರ ದಾಸರು ವ್ಯಾಸರಾಯರಿಂದ 'ದಾಸರೆಂದರೆ ಪುರಂದರ ದಾಸರಯ್ಯ' ಎಂಬ ಹೊಗಳಿಕೆಗೆ ಪಾತ್ರರಾಗಿದ್ದರು. ಅವರು ಅತಿ ಹೆಚ್ಚು ಕೀರ್ತನೆಗಳನ್ನು ರಚಿಸಿದರು. ಕರ್ನಾಟಕ ಸಂಗೀತ ಎಂಬ ಪ್ರಕಾರವು ಬೆಳೆದು ವಿಕಾಸಗೊಳ್ಳಲು ಕಾರಣರಾದರು. ಇಡೀ ಜೀವನವನ್ನು ಹರಿಗೆ ಸಮರ್ಪಿಸಿ ಇತರರಿಗೂ ಮಾರ್ಗದರ್ಶಕರಾದರು. ಅವರ ಭಕ್ತಿ, ವೈರಾಗ್ಯಗಳಿಂದಾಗಿ ಹರಿದಾಸ ಸಾರ್ವಭೌಮ ಎನ್ನಿಸಿಕೊಂಡರು.

1.7 ಪರಾಮರ್ಶನ ಗ್ರಂಥಗಳು

೧. ಹರಿದಾಸ ಭಕ್ತಿ ಸಾಧನೆ - ಬುರ್ಲಿ ಬಿಂದು ಮಾಧವ

೨. ಹರಿಭಕ್ತಿ ವಾಹಿನಿ - ಜಿ. ವರದರಾಜರಾವ್

೩. ಪುರಂದರ ದಾಸರು - ಆರ್. ಎಸ್. ಪಂಚಮುಖಿ

೪. ಹರಿದಾಸ ಸಾಹಿತ್ಯ ಸಮೀಕ್ಷೆ - (ಸಂ) ಜಿ. ವರದರಾಜರಾವ್

೫. ಹರಿದಾಸ ಸಾಹಿತ್ಯ ಸುಧೆ - ಅರಳು ಮಲ್ಲಿಗೆ ಪಾರ್ಥಸಾರಥಿ

ಸಂಚಿಕೆ - 3
ಕನ್ನಡ ಸಾಹಿತ್ಯ ಚರಿತ್ರೆ - ನಡುಗನ್ನಡ ಸಾಹಿತ್ಯ

ಘಟಕ - 2
ತ್ರಿಪದಿ ಸಾಹಿತ್ಯ : ಪರಿಚಯ, ಸರ್ವಜ್ಞಕವಿ

ಪರಿವಿಡಿ :

2.0 ಉದ್ದೇಶ

- ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತ್ರಿಪದಿ ಸಾಹಿತ್ಯವು ಗಮನಾರ್ಹವಾದ ಸ್ಥಾನವನ್ನು ಪಡೆದುಕೊಂಡಿದೆ. ತ್ರಿಪದಿ ಛಂದಸ್ಸಿನಲ್ಲಿ ಕಾವ್ಯಗಳು ರಚಿತವಾಗಿವೆಯೇ ಎಂಬುದನ್ನು ಕಂಡುಕೊಳ್ಳುವುದು.

- ಕಥನ ಕಾವ್ಯಗಳು ಮಹಾ ಕಾವ್ಯವಾಗಿ ಪರಿವರ್ತನೆ ಹೊಂದುವುದರಿಂದ ತ್ರಿಪದಿಯಲ್ಲಿ ಅಂತಹ ಸಾಧನೆ ನಡೆದಿದೆಯೆ ಎಂಬುದನ್ನು ಪರಿಶೀಲಿಸುವುದು.

- ಸರ್ವಜ್ಞನು ರಚಿಸಿರುವ ತ್ರಿಪದಿ ರೂಪದ ವಚನಗಳನ್ನು ಕುರಿತು ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡುವುದು ಈ ಘಟಕದ ಉದ್ದೇಶವಾಗಿದೆ.

2.1 ಪೀಠಿಕೆ

ತ್ರಿಪದಿಗಳು ಮೂರು ಸಾಲಿನ ಪುಟ್ಟ ಪದ್ಯಗಳು ಎಂಬುದನ್ನು ನೀವು ಈಗಾಗಲೇ ತಿಳಿದಿದ್ದೀರಿ. ಅಂಶಗಣದಿಂದ ಕೂಡಿದ್ದ ತ್ರಿಪದಿಗಳು ಕ್ರಮೇಣ ಮಾತ್ರಾಗಣಗಳಾಗಿ ಪರಿವರ್ತನೆ ಹೊಂದಿದ ನಂತರ ಈ ಛಂದಸ್ಸನ್ನು ಕಾವ್ಯರಚನೆಗೆ ಬಳಸಿಕೊಂಡ ನಿದರ್ಶನಗಳಿವೆ. ಜನಪದ ತ್ರಿಪದಿಗಳು, ಸರ್ವಜ್ಞನ ತ್ರಿಪದಿಗಳು ಮುಂತಾದುವು ಬಹುಪಾಲು ಮುಕ್ತಕಗಳೇ ಆಗಿವೆ. ಒಂದೊಂದು ತ್ರಿಪದಿಯು ಒಂದೊಂದು ವಿಷಯದ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸುವುದನ್ನು ನೋಡುತ್ತೇವೆ. ಒಂದು ತ್ರಿಪದಿಗೂ ಇನ್ನೊಂದಕ್ಕೂ ಸಂಬಂಧವಿರುವುದಿಲ್ಲ. ಒಂದು ಕಥಾವಸ್ತುವನ್ನು ತೆಗೆದುಕೊಂಡು ತ್ರಿಪದಿಯಲ್ಲಿ ಬರೆಯಲು ಹೊರಟರೆ ಮಾತ್ರ ಒಂದು ತ್ರಿಪದಿಗೂ ಇನ್ನೊಂದಕ್ಕೂ ಕಥೆಯ ಕೊಂಡಿಯು ಇರುತ್ತದೆ. ಮುಕ್ತಕಗಳಲ್ಲಿ ಕಥೆಯು ಮುಂದುವರಿಯಲು ಅಲ್ಲಿ ಕಥೆಯೇ ಇರುವುದಿಲ್ಲ. ಆದ್ದರಿಂದ ಕಾವ್ಯಗಳ ರಚನೆಯಲ್ಲಿ ತ್ರಿಪದಿಯ ಪಾತ್ರ ಕಡಿಮೆ ಎನ್ನಿಸುತ್ತದೆ. ಒಂದೊಂದು ತ್ರಿಪದಿಯೆ ಕಾವ್ಯವಾಗಲಾರದೇ ಎನ್ನುವ ಮಾತು ಅರ್ಥಪೂರ್ಣವಾದುದೇನೋ ನಿಜ. ಆದರೆ ಇಲ್ಲಿ ತ್ರಿಪದಿಯಲ್ಲಿ ಎಷ್ಟು ಜನ ದೊಡ್ಡ ಕವಿಗಳು ಕಾವ್ಯರಚನೆ ಮಾಡಿದ್ದಾರೆ ಎನ್ನುವುದು ಮುಖ್ಯವಾದುದು.

2.2 ಶಾಸನಗಳಲ್ಲಿ ತ್ರಿಪದಿ

ಜನಪದ ಗೀತೆಗಳಲ್ಲಿ ತ್ರಿಪದಿಗಳು ಅಧಿಕ ಭಾಗವನ್ನು ಪಡೆದುಕೊಂಡಿವೆ. ಆದರೆ ಜನಪದ ಗೀತೆಗಳ ಕಾಲವನ್ನು ನಿರ್ಧರಿಸುವುದು ಕಷ್ಟವಾದುದು. ಮೌಖಿಕ ಸಂಪ್ರದಾಯದಲ್ಲಿ ಬೆಳೆದು ಉಳಿದು ಬಂದಿರುವ ಜನಪದ ಗೀತೆಗಳ ಕರ್ತೃಗಳಾಗಲೀ, ರಚಿಸಿದ ಕಾಲವಾಗಲಿ ತಿಳಿಯುವುದಿಲ್ಲ. ಆದರೆ ಶಾಸನಗಳಲ್ಲಿ ಬಳಕೆಯಾಗಿರುವ ತ್ರಿಪದಿಗಳ ಕಾಲವು ಖಚಿತವಾಗಿ ತಿಳಿಯುತ್ತದೆ. ತ್ರಿಪದಿಯು ದೊರೆತಿರುವ ಮೊದಲನೆಯ ಶಾಸನವೆಂದರೆ ಕ್ರಿ.ಶ. ೭೦೦ರ ಬಾದಾಮಿ ಶಾಸನ. ಶಾಸನ ಮಾತ್ರ ಪ್ರಾಚೀನವಲ್ಲ. ತ್ರಿಪದಿಯೂ ಅಷ್ಟೇ ಪ್ರಾಚೀನವಾದುದು ಅದಕ್ಕಿಂತ ಹಿಂದೆ ತ್ರಿಪದಿಗಳು ದೊರೆತಿಲ್ಲ ಅದು ಹೀಗಿದೆ:

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆಱನಲ್ಲ.

ಇದು ಕಪ್ಪೆ ಅರಭಟ್ಟನ ಶಾಸನ ಎಂದು ಹೆಸರಾಗಿದೆ. ಆತನು ಎಂತಹ ವ್ಯಕ್ತಿ ಎಂಬುದನ್ನು ಇದರಲ್ಲಿ ಕಾವ್ಯಾತ್ಮಕವಾಗಿ ವರ್ಣಿಸಲಾಗಿದೆ. ಅವನು ಒಳ್ಳೆಯವರಿಗೆ ಒಳ್ಳೆಯವನು, ಕೆಟ್ಟವರಿಗೆ

ಕೆಟ್ಟವನು. ಅವನು ದುಷ್ಟರಿಗೆ ಸರಿಯಾಗಿ ಪಾಠವನ್ನು ಕಲಿಸುವಂತಹವನು. ಅವನು ಸಾಕ್ಷಾತ್ ಮಾಧವನೇ ಆಗಿದ್ದನೆಂದು ವರ್ಣಿಸಲಾಗಿದೆ.

ಅಲ್ಲಿಯೇ ಇರುವ ಇನ್ನೊಂದು ತ್ರಿಪದಿಯನ್ನು ನೋಡಬಹುದು:

ಒಳ್ಳಿತ್ತ ಕಯ್ಯೊರಾರ್ ಪೊಲ್ಲದು ಮದರಂತೆ
ಬಲ್ಲಿತ್ತು ಕಲಿಗೆ ವಿಪರೀತ ಪುರಾಕೃತ
ಮಿಲ್ಲಿ ಸಂಧಿಕ್ಕುಮದು ಬಂದು.

ಒಳ್ಳೆಯ ಮತ್ತು ಕೆಟ್ಟ ಕಾರ್ಯಗಳ ಫಲವನ್ನು ಮುಂದಿನ ಜನ್ಮದಲ್ಲಿಯೇ ಅನುಭವಿಸಬೇಕಾಗುತ್ತದೆ ಎಂಬುದು ಇದರ ತಾತ್ಪರ್ಯ. ಜನಪದರ ರಚನೆಯಲ್ಲದ ಇಂತಹ ತ್ರಿಪದಿಗಳನ್ನು ಕವಿಗಳೇ ರಚಿಸಿಕೊಟ್ಟಿರಬಹುದು ಎಂದು ಹೇಳಿದರೆ ತಪ್ಪಾಗಲಾರದು.

ಸುಮಾರು ಕ್ರಿ.ಶ. ೧೨೦೦ ರವರೆಗೆ ಸಿಕ್ಕಿರುವ ಶಾಸನಗಳಲ್ಲಿ ತ್ರಿಪದಿಗಳು ಇರುವುದನ್ನು ಗಮನಿಸಬೇಕು. ತ್ರಿಪದಿಗಳಿಗೆ ಮನ್ನಣೆ ಇಲ್ಲದಿದ್ದರೆ ಇಂತಹ ಅವಕಾಶ ಸಿಗುತ್ತಿರಲಿಲ್ಲ. ಕ್ರಿ.ಶ. ೮೦೦ರ ಹುಮಚ ಶಾಸನ, ಕ್ರಿ.ಶ. ೧೧೦೦ ರ ನೀರಗುಂದದ ಶಾಸನ, ಕ್ರಿ.ಶ. ೮೦೦ರ ಸೊರಬದ ಶಾಸನ, ಕ್ರಿ.ಶ. ೧೨೦೦ರ ನಾಗಮಂಗಲದ ಶಾಸನ ಮುಂತಾದುವುಗಳಲ್ಲಿ ತ್ರಿಪದಿಗಳು ಸ್ಥಾನವನ್ನು ಪಡೆದಿವೆ. ಮಡಕಶಿರಾ ಶಾಸನದಲ್ಲಿರುವ ತ್ರಿಪದಿ ಹೀಗಿದೆ:

ಗಣ್ಡವಾತಿನ ಪೆಂಪಂ ಕಣ್ಣು ಕೇಳ್ವೆಲ್ಲರುಂ
ಮಣ್ಡಲದೊಳಗೆ ಪೊಗಟ್ಟಪ್ಪರೆ ಜೆಯಮ್ಮ
ಗಣ್ಡಗಟ್ಟಳೆಯಾದೊಂ ಭುವನದೊಳ್

ಇದು ಎರೆಯಮ್ಮ ಎಂಬಾತನನ್ನು ಹೊಗಳುವ ಪದ್ಯ. ಇಡೀ ಮಂಡಲದಲ್ಲಿಯೇ ಅವನಂತಹ ವೀರರಿಲ್ಲವೆಂಬುದು ಮನೆಮಾತಾಗಿ ಬಿಟ್ಟಿತ್ತು ಎಂದು ಅದು ತಿಳಿಸುತ್ತದೆ.

ಕ್ರಿ.ಶ. ೯೭೦ರ ಸವಡಿ ಶಾಸನದಲ್ಲಿ ಕಂಡು ಬರುವ ತ್ರಿಪದಿ ಹೀಗಿದೆ.

ಬಲವರ್ಮಂ ತನ್ನೆ ತಾಯ್ಸಲೆ ಪ್ರಗುಳೆಯಬ್ಬೆ
ಕುಲವಧು ತನಗೆ ಯರಗಬ್ಬೆಯೆನೆ ಪೆಂಪು
ಸಲೆಸತಿಧರೆಗೆ ಗಟ್ಟುಗನ

ಗಟ್ಟುಗ ಎಂಬಾತನ ತಂದೆ ಬಲವರ್ಮ, ತಾಯಿ ಪ್ರಗುಳೆಯಬ್ಬೆ ಮತ್ತು ಆತನ ಪತ್ನಿ ಯರಗಬ್ಬೆ ಈ ತ್ರಿಪದಿಯ ಶೈಲಿಯನ್ನು ನೋಡಿದರೆ ಈ ಛಂದಸ್ಸಿನಲ್ಲಿ ಕಥನ ಕವನವನ್ನು ಬರೆಯಬಹುದಾದ ಸಾಧ್ಯತೆಯು ಕಂಡುಬರುತ್ತದೆ.

ಚಿಕ್ಕಮಗಳೂರಿನ ಕ್ರಿ.ಶ. ೧೦೬೦ರ ಶಾಸನದಲ್ಲಿ ಬಂದಿರುವ ತ್ರಿಪದಿ ಹೀಗಿದೆ.

ಮಲ್ಲಮಲ್ಲಿಯ ಸೂಟಿನೆಲ್ಲರು ಪೊಗಟ್ಟಿನ್ತು
ಮಲ್ಲಗಾಯದೊಳ್ ಪಿಡಿದೊತ್ತಿ ಕಟ್ಟಲ್ಕೇ
ಬಲ್ಲನೀ ಖಚರ ಚೂಡಾವಣಿ

ಮಲ್ಲಾಮಲ್ಲಿ ಎಂಬುದು ಕುಸ್ತಿಯ ಪರ್ಯಾಯ ನಾಮವಾಗಿದೆ. ಕುಸ್ತಿ ಪಟುಗಳ ಕಾಳಗವನ್ನು ತ್ರಿಪದಿಯಲ್ಲಿ ಸೂಚಿಸಲಾಗಿದೆ. ಖಚರ ಚೂಡಾಮಣಿ ಎಂದಿರುವುದನ್ನು ನೋಡಿದರೆ ಅದು ರಾಜನ ಬಿರುದಿರಬೇಕು ಅಥವಾ ಪೌರಾಣಿಕ ಕಥಾನಕದ ಒಂದು ಸನ್ನಿವೇಶ ಇರಬಹುದು ಎನ್ನಿಸುತ್ತದೆ.

ನಡುಗನ್ನಡವು ನಿಧಾನವಾಗಿ ನೆಲೆಯೂರುತ್ತಿದ್ದ ಸೂಚನೆಗಳನ್ನು ಮುಂದಿನ ತ್ರಿಪದಿಯಲ್ಲಿ ಕಾಣಬಹುದು. ಶಿಕಾರಿಪುರದ ಶಾಸನವನ್ನು ಗಮನಿಸಿರಿ (೧೧೫೦)

ಅದು ಕರ್ಮಭೂಮಿಯಪ್ಪುದರಿಂದವಲ್ಲಿ ಮಾ
ಡಿದ ಕರ್ಮ ಬೀಜಂ ಶತಕೋಟಿ ಫಳವನೀ
ವುದು ಬಿತ್ತಿ ಬೆಳೆವದೆಜನಂತೆ.

ಕರ್ಮಭೂಮಿ ಎಂದು ಈ ಪ್ರಪಂಚವನ್ನು ಕರೆಯುತ್ತಾರೆ. ಜೈನ ಪುರಾಣಗಳಲ್ಲಿ ಭೋಗಭೂಮಿ ಮತ್ತು ಕರ್ಮಭೂಮಿ ಎಂಬ ಮಾತುಗಳು ಬರುತ್ತವೆ. ನಮ್ಮ ಈ ಪ್ರಪಂಚವು ಕರ್ಮಭೂಮಿಯಾಗಿ ಇರುವುದರಿಂದ ಇಲ್ಲಿ ಮಾಡಿದ ಕರ್ಮವು ಫಲವನ್ನು ನೀಡುವಾಗ ಅದೆಷ್ಟೋ ಕೋಟಿ ಪಟ್ಟು ಅಧಿಕವಾಗಿರುತ್ತದೆ ಎಂಬ ವಿಚಾರವನ್ನು ಇದು ಒಳಗೊಂಡಿದೆ.

2.3 ಕಾವ್ಯಗಳಲ್ಲಿ ತ್ರಿಪದಿ

ಪ್ರಾಚೀನ ಚಂಪೂ ಕಾವ್ಯಗಳಲ್ಲಿ ಅಪರೂಪಕ್ಕೆ ಎಂಬಂತೆ ತ್ರಿಪದಿಗಳು ದೊರೆಯುತ್ತವೆ. ಪಂಪ ಕವಿಯ ಆದಿಪುರಾಣದಲ್ಲಿರುವ ತ್ರಿಪದಿ ಹೀಗಿದೆ:

ವರದತ್ತಂ ಮೊದಲಾಗೆ ಧರಣೀಶರವರ್ಗೆಲ್ಲಂ
ಸುರಲೋಕಂ ಸುವಿಧಿ ಯೊಡನಾದುದಂತುಟೆ
ನೆರೆದರನಿತೀ ಸುರಲೋಕಂ

ಸುವಿಧಿಯ ಜೊತೆಯಲ್ಲಿ ವರದತ್ತ ಮೊದಲಾದ ರಾಜರು ಸುರಲೋಕಕ್ಕೆ ಹೋದ ವಿಷಯವನ್ನು ಈ ತ್ರಿಪದಿಯು ತಿಳಿಸುತ್ತದೆ.

ಪೊನ್ನಕವಿಯ 'ಶಾಂತಿ ಪುರಾಣ' ದಲ್ಲಿರುವ ತ್ರಿಪದಿಗಳಲ್ಲಿ ಕೆಲವನ್ನು ಚೆನ್ನಾಗಿ ಹಾಡಬಹುದಾಗಿದೆ. ರನ್ನಕವಿಯ 'ಗದಾಯುದ್ಧ' ದಲ್ಲಿ ಒಂದು ತ್ರಿಪದಿ ಇದೆ. ಅದು ಕೆಟ್ಟುಹೋಗಿರುವ ಕಂದ ಪದ್ಯ ಎಂಬ ವಾದವೂ ಇದೆ. ಸಾಮಾನ್ಯವಾಗಿ ಚಂಪೂ ಕಾವ್ಯಗಳ ಮಧ್ಯೆ ವೈವಿಧ್ಯಕ್ಕೋಸ್ಕರ ತ್ರಿಪದಿಗಳನ್ನು ರಚಿಸಿರುವುದು ಕಂಡುಬರುತ್ತದೆ. ಹೀಗೆ ಪಂಡಿತ ಕವಿಗಳು ರಚಿಸಿರುವ ತ್ರಿಪದಿಗಳು ಎಷ್ಟೋ ಬದಲಾವಣೆಯ ಅಂಶಗಳನ್ನು ಅಳವಡಿಸಿಕೊಂಡಿವೆ.

ಬಂಧುವರ್ಮ ಕವಿಯ 'ಜೀವ ಸಂಬೋಧನೆ' ಎಂಬ ಕಾವ್ಯದಲ್ಲಿ ಹಲವು ತ್ರಿಪದಿಗಳಿವೆ. ಪಂಪ ಪೊನ್ನ ಮೊದಲಾದವರ ಹಾಗೆ ಒಂದು ಎರಡು ತ್ರಿಪದಿ ರಚನೆಗೆ ಮಾತ್ರ ಮನಸ್ಸು ಮಾಡದೆ, ತ್ರಿಪದಿಗಳನ್ನು ಒಳ್ಳೆಯ ಮಾಧ್ಯಮವನ್ನಾಗಿ ಮಾಡಿಕೊಳ್ಳುವ ಪ್ರಯತ್ನವನ್ನು ನೋಡಬಹುದು. ನಾಗದತ್ತ ಎಂಬಾತನು ವ್ರತಗಳನ್ನು ಸ್ವೀಕರಿಸಿದಾಗ ಅವನ ತಂದೆ ತಾಯಿಗಳು ಬುದ್ಧಿ ಹೇಳುವ ಸಂದರ್ಭದ ಒಂದು ತ್ರಿಪದಿಯನ್ನು ನೋಡಬಹುದು.

ಇನ್ನೆಗಂ ಕೂರ್ಮೆಯಿಂ ನಿನ್ನ ಮಚ್ಚನೆ ಮಚ್ಚಿ
ದೆನ್ನನಿಂತುಳಿಯೆ ಬಿಸುಟೊಂದು ಪಾಪಮಂ
ನೀನ್ನೋಂತ ನೋಂಪಿ ಕಿಡಿಕುಮೇ

ಇದುವರೆಗೆ ಪ್ರೀತಿಯಿಂದ ನಿನ್ನನ್ನು ನೋಡಿಕೊಂಡೆವು. ಈಗ ನಮ್ಮನ್ನು ನೀನು ತ್ಯಜಿಸಿದರೆ ನಿನಗೆ ಪಾಪ ಸುತ್ತಿಕೊಳ್ಳುತ್ತದೆ. ಅಂತಹ ಪಾಪವನ್ನು ನೀನು ಕೈಗೊಳ್ಳುವ ವ್ರತವು ಪರಿಹರಿಸಲು ಶಕ್ತವಾಗಿದೆಯೇ ಎಂದು ತಾಯಿಯು ಅವನನ್ನು ಕೇಳುತ್ತಾಳೆ. ಇದನ್ನು ನೋಡಿದರೂ ತ್ರಿಪದಿಯು ಕಥನ ಕಾವ್ಯಕ್ಕೆ ಒಗ್ಗುವಂತೆ ಕಾಣುತ್ತದೆ.

'ಗುರು ಬೋಧಾಮೃತ' ಎಂಬ ಚಿಕ್ಕ ಕೃತಿಯನ್ನು ಮಹಲಿಂಗದೇವ ಎಂಬಾತನು ರಚಿಸಿದ್ದಾನೆ. ಇದು ತ್ರಿಪದಿ ಛಂದಸ್ಸಿನಲ್ಲಿರುವುದು ವಿಶೇಷ. ಏಕೆಂದರೆ ತ್ರಿಪದಿಯಲ್ಲಿ ಪೂರ್ಣರೂಪದ ಕಾವ್ಯವೇ ರಚಿತವಾಗಿಲ್ಲ ಎಂಬ ಮಾತು ಸಾಮಾನ್ಯವಾಗಿ ಕೇಳಿಬರುತ್ತದೆ. ಮಹಲಿಂಗನು ಧಾರ್ಮಿಕ ತತ್ತ್ವಗಳನ್ನು ಗುರುಶಿಷ್ಯ ಸಂವಾದ ರೂಪದಲ್ಲಿ ವಿವರಿಸಿದ್ದಾನೆ. ಈತನು ಪುರಾಣಗಳನ್ನು, ಶರಣರ ಅನುಭಾವವನ್ನು ಗ್ರಹಿಸಿ ತನ್ನದೇ ಆದ ವಿಧಾನದಲ್ಲಿ ಬರೆದಿದ್ದಾನೆ.

'ಚಂದನೆಯ ಕಥೆ' ಎಂಬುದು ಒಂದು ಕಥನ ಕಾವ್ಯ. ಇದನ್ನು ಬರೆದ ಕವಿಯ ಹೆಸರು ತಿಳಿಯುವುದಿಲ್ಲ. ಚಂದನೆ ಎಂಬಾಕೆ ಶೋಷಣೆಗೆ ಒಳಗಾಗಿದ್ದವಳು. ಅವಳು ಧೈರ್ಯವಂತೆ ಆದರೂ ಪರರ ನಿಂದೆಯನ್ನು ಸಹಿಸಲಾರಳು. ಜನರು ಇತರರನ್ನು ನಿಂದಿಸುವುದರಲ್ಲಿ ಏನೋ ತೃಪ್ತಿಯನ್ನು ಕಾಣುತ್ತಾರೆಂಬುದು ಅನುಭವಿಗಳೂ ತಿಳಿದೇ ಇದ್ದಾರೆ. ಚಂದನೆ ಹೇಳುವ ಮಾತು ಹೀಗಿದೆ.

'ಅಂಜೆನು ಸಿಂಹಕ್ಕೆ ಅಂಜೆ ಮಾತಂಗಕ್ಕೆ
ಅಂಜೆನಂಜಿಸುವ ಸಿಡಿಲಿಗೆ -ಕೆಳೆಯಳೆ
ಅಂಜುವೆ ಪರರ ನಿಂದೆಗೆ'

'ಸೌಂದರ್ಯ ಕಥಾರತ್ನ' ಎಂಬ ಕಾವ್ಯದಲ್ಲಿ ಸುಮಾರು ೨೦೦ ತ್ರಿಪದಿಗಳಿವೆ ಎಂಬುದು ಗಮನಾರ್ಹವಾದ ವಿಷಯ. ಇದನ್ನು ಕ್ರಿ.ಶ. ೧೫೦೦ ರಲ್ಲಿದ್ದ ರಾಮೇಂದ್ರ ಎಂಬ ಕವಿ ರಚಿಸಿದ್ದಾನೆ. ಕ್ಷೇಮೇಂದ್ರನು ಬರೆದುದನ್ನು (ಬಹುಶಃ ಸಂಸ್ಕೃತದಲ್ಲಿ) ತಾನು ಕನ್ನಡಕ್ಕೆ ಅನುವಾದಿಸಿದ್ದೇನೆಂದು ಕವಿಯು ಹೇಳಿಕೊಂಡಿದ್ದಾನೆ.

ಕ್ಷೇಮೇಂದ್ರ ಪೇಳಿದ ಪೂರ್ವ ಕಥೆಯ
ಪ್ರೇಮದಿಂ ಕಾಕೋಳಲಧಿಪ ರಾಮೇಂದ್ರ
ಭೂಮೀಶ್ವರ ನೊರೆದನು.

ಕಾಕೋಳಲು ಎಂಬ ಪಟ್ಟಣ ಅಥವಾ ಚಿಕ್ಕ ಸಂಸ್ಥಾನದಲ್ಲಿ ರಾಜನಾಗಿದ್ದ ರಾಮೇಂದ್ರನು ಹೀಗೆ ಹೇಳಿಕೊಂಡಿದ್ದಾನೆ. ಕ್ಷೇಮೇಂದ್ರ ಎಂದರೆ 'ಔಚಿತ್ಯ ವಿಚಾರ ಚರ್ಚಾ' ಕೃತಿಯ ಕರ್ತೃವೇ ಆಗಿರಬಹುದೆ ಎಂಬ ಸಂದೇಹವಿದೆ. ಆತನು ಯಾವ ಛಂದಸ್ಸಿನಲ್ಲಿ ರಚಿಸಿದನೆಂಬುದು ತಿಳಿಯುವುದಿಲ್ಲ. ರಾಮೇಂದ್ರ ಅದರ ತಾತ್ಪರ್ಯವನ್ನು ತ್ರಿಪದಿಯಲ್ಲಿ ತಿಳಿಸಿರಬಹುದು.

ರಾಮೇಂದ್ರನನ್ನು ಮೀರಿಸಿದ ಕವಿ ಮಲ್ಲಿಕಾರ್ಜುನರಾಯ. ಈತನ 'ಚೋರಕಥೆ' ಯಲ್ಲಿ ೭೦೦ ತ್ರಿಪದಿಗಳಿವೆ. ಇಷ್ಟು ದೊಡ್ಡ ಕಥನ ಕವನವನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯಾಗಿದೆ.

ಚನ್ನಬಸವಶಿವಯೋಗಿಯು ರಚಿಸಿರುವ 'ಆಚರಣೆಯ ತ್ರಿಪದಿ' (೧೭೫೦) ಎಂಬ ಕೃತಿಯಲ್ಲಿ ಆಚಾರಗಳನ್ನು ಜನರು ಅನುಸರಿಸದಿರುವ ಬಗ್ಗೆ ಟೀಕೆಯಿದೆ. ಜನರ ಲೋಪದೋಷಗಳನ್ನು ಕಟುವಾಗಿ ಖಂಡಿಸಿದ್ದಾನೆ.

ಮುಂದೆ ಶರಣನು ಮಾಡಿ ಹಿಂದೆ ನಿಂದಿಸುತ ಮನ
ಬಂದಂತೆ ಶಾಸ್ತ್ರವನು ನೀಡುವ
ಹಂದಿಗೆಲ್ಲಿಯದೊ ಶಿವಯೋಗ

ಜಡೆಮುಡಿಗಳ ತಾಳ್ದು ಮಡದಿಯರ ಕಾಲಡಿಯೊಳ್
ಬುಡಬುಡನೆ ಹೊರಳಿ ಕಪಿಯಾಟವಾಡುವ
ಜಡರಿಗೆಲ್ಲಿಯದೊ ಶಿವಯೋಗ.

ತ್ರಿಪದಿಗಳ ಭಾಷೆಗಳನ್ನು ನೋಡಿದರೆ ನಡುಗನ್ನಡವು ಹೊಸಗನ್ನಡವಾಗಿ ಪರಿವರ್ತನೆಯನ್ನು ಹೊಂದುತ್ತಿರುವುದು ತಿಳಿಯುತ್ತದೆ. ಜಡೆಮುಡಿ ತಾಳಿರುವವರು ಅರಿಷಡ್ವರ್ಗಾದಿಗಳಿಗೆ ದಾಸರಾಗಿದ್ದುದನ್ನು ತೀಕ್ಷ್ಣವಾಗಿ ಖಂಡಿಸಿರುವುದು ಕಂಡು ಬರುತ್ತದೆ. ತ್ರಿಪದಿಗಳಿಗೆ ಕವಿಯು ಶಿವಯೋಗ ಎಂಬ ಅಂಕಿತವನ್ನು ಕೊಟ್ಟಿದ್ದಾನೆ. ಸರ್ವಜ್ಞ ಎಂಬ ಅಂಕಿತಕ್ಕೆ ಬದಲು ಪರಮಾರ್ಥ ಎಂದು ಹಿರಿಯ ಸಂಶೋಧಕರು ಕೊಟ್ಟಿರುವುದು ಶಿವಯೋಗ ಎಂಬ ಅಂಕಿತಕ್ಕೆ ಸಮಾಧಾನ ಕೊಟ್ಟಂತೆ ತೋರುತ್ತದೆ.

ಚೆನ್ನಕವಿಯು 'ಗುಂಡಬ್ರಹ್ಮಯಗಳ ಚರಿತ್ರೆ' ಯನ್ನು ರಚಿಸಿದ್ದಾನೆ. ಶಿವಭಕ್ತಿಗೆ ಇರುವ ಶಕ್ತಿಯನ್ನು ತೋರ್ಪಡಿಸಲು ಈ ಕಾವ್ಯವನ್ನು ಕವಿಯು ರಚಿಸಿದ್ದಾನೆ. ತನ್ನ ಕಾವ್ಯವು ಎಂತಹದ್ದೆಂಬುದನ್ನು ಹೀಗೆ ಹೇಳಿಕೊಂಡಿದ್ದಾನೆ.

ಹಾಳಾಗಿ ಹೋದವರ ಕಾಳಗದ ಕಥೆಯಲ್ಲ
ಕೋಳು ಹೋದವರ ಕಥೆಯಲ್ಲ ಇದು ಶಿವ ಕಥೆ
ಕೇಳುವವರು ಪುಣ್ಯ ಜನರು

ಈ ತ್ರಿಪದಿಯ ಬಂಧವು ಸಮರ್ಪಕವಾಗಿ ಇರುವಂತೆ ತೋರುವುದಿಲ್ಲ. ಧಾರ್ಮಿಕ ವಿಷಯವನ್ನು ಹೇಳುತ್ತಿದ್ದೇನೆಂಬ ಒಂದು ಬಗೆಯ ಹೆಮ್ಮೆ ಕವಿಗೆ ಇರುವುದರಿಂದ ಮಠಗಳಲ್ಲಿ ಇಂತಹ ಕೃತಿಗೆ ಮಾನ್ಯತೆ ದೊರೆಯುತ್ತದೆ ಎನ್ನಬಹುದು. ಈ ಕೃತಿಯಲ್ಲಿ ಕಥೆಯನ್ನು ಬೆಳೆಸಿರುವುದು ಒಂದು ವಿಶೇಷವೇ ಆಗಿದೆ. ಚೆನ್ನಕವಿಯು 'ಶಿಬಿರಾಯ ಚರಿತ್ರೆ' ಅಥವಾ ಮರೆಹೊಕ್ಕವರ ಕಾವ ಬಿರುದು ಎಂಬ ಕಾವ್ಯವನ್ನು ರಚಿಸಿದ್ದಾನೆ. ಎರಡು ತ್ರಿಪದಿ ಕಾವ್ಯಗಳನ್ನು ಬರೆದ ಹಿರಿಮೆ ಈತನಿಗೆ ಸೇರುತ್ತದೆ.

ಕರ್ನಾಟಕದಲ್ಲಿ ವೀರಶೈವ ಮತವು ಜನರ ಮನಸ್ಸನ್ನು ಗೆದ್ದ ನಂತರ ನಡೆದ ವಚನ ಕ್ರಾಂತಿಯು ಕನ್ನಡಕ್ಕೆ ಒದಗಿದ ಭಾಗ್ಯವಾಗಿದೆ. ಇದನ್ನು ಜನಪದ ಕಾವ್ಯ ಎಂದು ಕರೆದರೂ ತಪ್ಪಾಗುವುದಿಲ್ಲ. ಜನಪದ ಸಾಹಿತ್ಯದಂತೆ ಇಲ್ಲಿಯೂ ಸಹ ಅಕ್ಷರ ವಿದ್ಯೆಯನ್ನು ಕಲಿಯದಿದ್ದವರೂ ವಚನಗಳನ್ನು ರಚಿಸಿ ಹಾಡಿದ್ದಾರೆ. ಶರಣರ ವಚನಗಳಿಗೆ ಆ ಛಂದಸ್ಸು ಒಗ್ಗಿತು. ಅವರು ತಮ್ಮ ದರ್ಶನವನ್ನು ವಚನಗಳಲ್ಲಿ ಪ್ರಕಟಿಸಿದರು. ಕೆಲವು ಶರಣರು ತ್ರಿಪದಿ ರೂಪದ ವಚನಗಳನ್ನು ರಚಿಸಿದ್ದಾರೆ. ತ್ರಿಪದಿಗಳನ್ನು ವಚನಗಳೆಂದು ಕರೆಯುವುದು ಸರ್ವಜ್ಞನ ವಿಷಯದಲ್ಲಿ ವಾಡಿಕೆಯೇ ಆಗಿದೆ. ದೇವರ ದಾಸಿಮಯ್ಯನು ಬಸವಣ್ಣನವರಿಗಿಂತ ಹಿರಿಯ ವ್ಯಕ್ತಿ. ಆತನು ರಚಿಸಿರುವ ವಚನಗಳು ತ್ರಿಪದಿಯನ್ನು ಹೋಲುತ್ತವೆ.

ಈಶನ ಶರಣರು ವೇಶಿಯ ಹೋದರೆ
ಮೀಸಲೋಗರವ ಹೊರಗಿರಿಸಿದಡೆ ಹಂದಿ
ಮೂಸಿ ನೋಡಿದಂತೆ ಕಾಣಾ ರಾಮನಾಥಾ

ಈಶ್ವರನ ಶರಣರು ವ್ಯಭಿಚಾರ ಮಾಡಿದರೆ ನೈವೇದ್ಯಕ್ಕೆ ಸಿದ್ಧಪಡಿಸಿದ ಆಹಾರವನ್ನು ಹಂದಿಯು ಮೂಸಿ ನೋಡಿದಂತೆ ಕೆಡುತ್ತದೆ ಎಂದು ದಾಸಿಮಯ್ಯ ಎಚ್ಚರಿಸಿದ್ದಾನೆ.

ಅಕ್ಕಮಹಾದೇವಿಯು ರಚಿಸಿರುವ ಯೋಗಾಂಗ 'ತ್ರಿವಿಧಿ' ಎಂಬುದು ಒಂದು ಚಿಕ್ಕ ಕೃತಿ. ಇದರಲ್ಲಿ ಸರಳವಾಗಿ ಹೇಳಿರುವ ಆಧ್ಯಾತ್ಮಿಕ ವಿಚಾರಗಳಿವೆ. ಅಕ್ಕನ ವಚನಗಳ ಕಾವ್ಯಕಲೆಯನ್ನು ಇದರಲ್ಲಿ ಕಾಣಲಾಗುವುದಿಲ್ಲ ಎಂದು ವಿಮರ್ಶಕರು ಹೇಳುತ್ತಾರೆ.

ಶರಣರ ನೆಲೆಗಳನು ಅರಿಯುವರೆ ಎನ್ನಳವೆ
ಹರಿಯಜ ಸುರರಿಗಳವಲ್ಲ ವೆಂದೆನಲು
ಒರೆವೆ ನಾನವರ ಕೃಪೆಯಿಂದ

ಅಕ್ಕಮಹಾದೇವಿಯ ಈ ತ್ರಿವಿಧಿಯು ಸಾಂಪ್ರದಾಯಿಕವಾದ ರಚನಾ ಶೈಲಿಯನ್ನು ತೋರಿಸುತ್ತದೆ. ಶರಣರೇ ಅತ್ಯಂತ ಶ್ರೇಷ್ಠ ಅನುಭಾವಿಗಳು ಅವರ ಮನೋಮಾರ್ಗವನ್ನು ತಿಳಿಯುವುದು ವಿಷ್ಣು ಬ್ರಹ್ಮ ದೇವಾದಿದೇವತೆಗಳಿಗೂ ಸಾಧ್ಯವಿಲ್ಲ. ಶರಣರ ಕೃಪೆಯಿಂದ ಮಾತ್ರ ಅವರ ಬಗ್ಗೆ ತಿಳಿದಷ್ಟು ತಿಳಿಸುತ್ತೇನೆ. ಎಂಬುದು ಇದರ ತಾತ್ಪರ್ಯ. ತ್ರಿಪದಿಯನ್ನು ಕೈಬಿಡದೆ ಬಳಸಿಕೊಂಡಿರುವುದಕ್ಕೆ ಜನಪದ ಗೀತೆಗಳ ಜನಪ್ರಿಯತೆಯೇ ಕಾರಣ ಇರಬಹುದು. ಜನರು ಜನಪದ ಗೀತೆಗಳನ್ನು ಹಾಡಿಕೊಳ್ಳುತ್ತಿದ್ದುದು ಕವಿಗಳ ಗಮನಕ್ಕೆ ಬಂದಾಗ ತಾವೂ ಹಾಗೆ ರಚಿಸಬಹುದು ಎಂಬ ಅಪೇಕ್ಷೆ ಮತ್ತು ಜನರು ಹಾಡಿ ಅರ್ಥ ಮಾಡಿಕೊಳ್ಳಲಿ ಎಂಬ ಸದಾಶಯವು ಅವರ ಮನಸ್ಸಿನಲ್ಲಿರುತ್ತದೆ.

ತ್ರಿವಿಧಿಗಳು ಎಂಬ ಹೆಸರಿನಲ್ಲಿ ವಚನಕಾರರು ಬರೆದಿರುವ ಪದ್ಯಗಳು ನಾಲ್ಕು ಸಾಲುಗಳಿಂದ ಕೂಡಿರುವುದೂ ಕೂಡ ಕಂಡು ಬರುತ್ತದೆ. ಉದಾಹರಣೆಗೆ ಸಿದ್ಧರಾಮನು ಬರೆದಿರುವ ತ್ರಿವಿಧಿಗಳನ್ನು ನೋಡಬಹುದು.

ಬಸವಾಕ್ಷರತ್ರಯದಿ ಮನವಿಟ್ಟು ನಾನೀಗ
ಅಸುವಳಿದ ಕ್ಷಣದಲ್ಲಿ ನಿತ್ಯನಾದೆ
ಬಸವ ಶಿವಯೋಗದಲಿ ನಿತ್ಯಪದವನು ಕಂಡು
ಬಸವ ನೀನಾನಾದೆ ಯೋಗಿನಾಥ

ಕರ್ಮಯೋಗದ ಬೇರ ನಿರ್ಮೂಲ ಮಾಡಿತ್ತು
ಹಮ್ಮನೇ ಮುರಿಯಿತ್ತು ಯೋಗಿಗಳ
ಚೆನ್ನ ಪ್ರಭುರಾಯಂಗೆ ಅಂಜಿ ಬಂದಿಹ ಮಾಯೆ
ಎನ್ನ ಕಾಡಿತು ಗುರುವೆ ಯೋಗಿನಾಥ

ಇದು ಯೋಗಿನಾಥ ಎಂಬ ಅಂಕಿತವನ್ನು ಒಳಗೊಂಡಿರುವುದರಿಂದ ಮಾತ್ರ ತ್ರಿಪದಿಯ ಲೆಕ್ಕಕ್ಕೆ ತೆಗೆದುಕೊಳ್ಳುವ ತೀರ್ಮಾನಕ್ಕೆ ಬಂದಿರಬಹುದೆಂದು ತೋರುತ್ತದೆ.

ದಾಸ ಸಾಹಿತ್ಯವನ್ನು ನಿರ್ಮಿಸಿರುವ ಹರಿದಾಸರು ದ್ವೈತ ಮತವನ್ನು ಪ್ರಚಾರ ಮಾಡಲು ಜೀವನವನ್ನು ಮೀಸಲಾಗಿಟ್ಟ ಭಕ್ತರು. ಸಂಸ್ಕೃತ ಮತ್ತು ಕನ್ನಡ ಎರಡು ಭಾಷೆಗಳಲ್ಲಿಯೂ ಪಂಡಿತರಾಗಿದ್ದ ವಾದಿರಾಜರು ತ್ರಿಪದಿಗಳನ್ನು ರಚಿಸಿದ್ದಾರೆ.

ಭೂಂ ನಿಗಮದ ಕದ್ದ ಚೋರದೈತ್ಯನ ಗೆದ್ದ
ಸಾರವೇದಗಳ ವಿಧಿಗಿತ್ತ ಮತ್ಸ್ಯವ
ತಾರಗಾರುತಿಯ ಬೆಳಗಿರೆ

ಹದಿನೈದನೆ ಶತಮಾನದಲ್ಲಿದ್ದ ವಾದಿರಾಜರು ರಚಿಸಿರುವ ತ್ರಿಪದಿಗಳನ್ನು ಸರಾಗವಾಗಿ ಹಾಡಬಹುದು. ಹಾಡುಗಳನ್ನು ರಚಿಸಿ ಪ್ರಸಿದ್ಧರಾಗಿದ್ದವರು. ತ್ರಿಪದಿಗಳನ್ನು ಹಾಡಬಹುದಾದ ಮಟ್ಟಿನಲ್ಲಿ ಬರೆದಿದ್ದಾರೆ. ಅವರು ವಿವಿಧ ರೀತಿಯ ಲಯಗಳನ್ನು ತಂದಿದ್ದಾರೆ.

ವಾದಿರಾಜರ ಹಾಗೆಯೇ ಜಗನ್ನಾಥದಾಸರೂ ಕೂಡ ತ್ರಿಪದಿಗಳನ್ನು ರಚಿಸಿದ್ದಾರೆ. ಅವರು ಅವುಗಳನ್ನು ತತ್ವ ಸುವ್ವಾಲಿಗಳೆಂದು ಕರೆದಿದ್ದಾರೆ. ಇವುಗಳನ್ನು ಸುವ್ವೀ ಹಾಡು, ಸುವ್ವೀಯ ತಿವದಿ ಎಂದೂ ಕರೆಯಲಾಗಿದೆ. ಬತ್ತ ಕುಟ್ಟುವಾಗ ಪಲ್ಲವಿಯ ರೀತಿಯಲ್ಲಿ ಸುವ್ವೀ ಸುವ್ವೀ ಸುವ್ವಾಲೇ ಎಂದು ಹಾಡುವುದನ್ನು ವಿಮರ್ಶಕರು ಗುರುತಿಸಿದ್ದಾರೆ.

ಆಧುನಿಕ ಕಾಲದಲ್ಲಿಯೂ ಕವಿಗಳು ತ್ರಿಪದಿಗಳನ್ನು ರಚಿಸಿದ್ದಾರೆ. 'ಶ್ರೀ' ಯವರು ಜನಪದ ಸಾಹಿತ್ಯದ ಬಗ್ಗೆ ಅಭಿಮಾನದಿಂದ ಮಾತನಾಡಿದ ನಂತರ ಶಿಷ್ಟ ಕವಿಗಳು ಜನಪದ ಸಾಹಿತ್ಯದ ಕಡೆ ಹೆಚ್ಚು ಗಮನಕೊಡಲು ಪ್ರಾರಂಭಿಸಿದರು. ತೀ.ನಂ.ಶ್ರೀ ಅವರು ರಚಿಸಿರುವ ತ್ರಿಪದಿ ಹೀಗಿದೆ.

ಚೆನ್ನೆ ತೌರೂರಿಗೆ ಹೋದಳು ಅವನಿಗೆ
ತನ್ನ ಮಂಚದಲಿ ಮನಸಿಲ್ಲ ಅದರಿಂದ
ಇನ್ನೂ ದೀವಿಗೆಯೇ ಆರಿಲ್ಲ.

ತ್ರಿಪದಿಗಳಲ್ಲಿ ದ್ವಿತೀಯ ಪ್ರಾಸವು ಕಡ್ಡಾಯವಲ್ಲ. ಜನಪದರು ಅದನ್ನು ಬುದ್ಧಿಪೂರ್ವಕವಾಗಿ ಕಡ್ಡಾಯ ಮಾಡಿಕೊಂಡಿರಲಿಲ್ಲ. ಶಿಷ್ಟ ಕವಿಗಳು ಬರೆಯುವಾಗ ಪ್ರಾಸವನ್ನು ತರಬಹುದೆಂಬ ಭಾವನೆಯು ಮೂಡಿದುದರಿಂದ ಅದನ್ನು ಅನುಸರಿಸಿದ್ದಾರೆ.

ಆಧುನಿಕ ಕವಿಗಳಲ್ಲಿ ಎಸ್.ವಿ. ಪರಮೇಶ್ವರ ಭಟ್ಟರು ಕನ್ನಡ ಛಂದಸ್ಸುಗಳನ್ನು ಹೆಚ್ಚಾಗಿ ಬಳಸಿಕೊಂಡವರು. ಸಾಂಗತ್ಯ, ತ್ರಿಪದಿ, ಏಳೆ ಮುಂತಾದ ಛಂದೋ ವೈವಿಧ್ಯವನ್ನು ಅವರು ತಮ್ಮ ರಚನೆಗಳಿಗೆ ಅಳವಡಿಸಿಕೊಂಡಿದ್ದಾರೆ. ಅವರ ತ್ರಿಪದಿಗಳ ಸಂಕಲನ 'ಸುರಗಿ ಸುರಹೊನ್ನೆ' ಎಂಬ ಕೃತಿಯು ಒಂದು ಉತ್ತಮ ಕೃತಿಯಾಗಿದೆ.

ವಾದವು ಗಂಡು ಸಂವಾದವು ಹೆಣ್ಣು
ಮೋದವು ಮಗುವು ಕಾವ್ಯವು ಅದರೊಂದು
ನಾದವು ಕೇಳೆ ಸರಸಿಯೆ

ಇಲ್ಲಿ ಸರಸಿಯೆ ಎಂಬುದು ಅಂಕಿತವಾಗಿ ಬಂದಿದೆ.

ತ್ರಿಪದಿ ಛಂದಸ್ಸಿನಲ್ಲಿ ಮಹಾಕಾವ್ಯವು ಬಂದಿರುವುದು ೨೦ನೇ ಶತಮಾನದಲ್ಲಿ ಎನ್ನಬಹುದು. ಶ್ರೀಮತಿ ಜಯದೇವಿ ತಾಯಿ ಲಿಗಾಡೆ ಅವರು ತ್ರಿಪದಿಯಲ್ಲಿ 'ಸಿದ್ಧರಾಮೇಶ್ವರ ಪುರಾಣ' ವನ್ನು ರಚಿಸಿದ್ದಾರೆ.

ನೋಡದ ಒಡಲಿನ ಸಿಡಿಲು ಮಿಂಚಿನ ಕಾಂತಿ
ಗಡಗಡನಾದ ನಿನಾದ ಮಾ ಬೆಳಗು
ನೋಡುವರ ಕಣ್ಣು ಕುಕ್ಕಿದುವು

ಬಹುಪಾಲು ಸ್ತ್ರೀಯರ ಸ್ವತ್ತಾಗಿದ್ದ ತ್ರಿಪದಿ ಛಂದಸ್ಸನ್ನು ಲಿಗಾಡೆಯವರೂ ಕೂಡ ಬಳಸಿಕೊಂಡಿರುವುದು ಒಂದು ಯೋಗಾಯೋಗದ ವಿಷಯವಾಗಿದೆ.

ತ್ರಿಪದಿಗಳನ್ನು ಕುರಿತು ಆಲೋಚಿಸುವಾಗ ಜನಪದ ಗೀತೆಗಳನ್ನು ಯಾರೂ ಮರೆಯುವಂತಿಲ್ಲ. ಹಿತ್ತಲಗಿಡ ಮದ್ದಲ್ಲ ಎಂಬಂತೆ ಜನಪದರ ರಚನೆಗಳನ್ನು ಹಿಂದೆ ಕನ್ನಡದ ದೊಡ್ಡ ಪಂಡಿತ ಕವಿಗಳು ಪುರಸ್ಕರಿಸುತ್ತಿರಲಿಲ್ಲ. ಹಿಂದಿನ ಕೆಲವು ಶತಮಾನಗಳಲ್ಲಿ ಚಿಕ್ಕ ಕವಿಗಳು ತ್ರಿಪದಿಯಲ್ಲಿ ಕಾವ್ಯಗಳನ್ನು ರಚಿಸಿದ್ದಾರೆ. ಅವರನ್ನು ಗಣ್ಯ ಕವಿಗಳೆಂದು ಸಮಕಾಲೀನರೂ ತಿಳಿಯಲಿಲ್ಲ. ಕವಿ ಕಾವ್ಯ ವಿಮರ್ಶೆ ಮಾಡುವವರೂ ಭಾವಿಸಲಿಲ್ಲ. ಅವಿದ್ಯಾವಂತ ವರ್ಗದ ಶ್ರಮ ಜೀವಿಗಳು ತಮ್ಮ ಕಾಯಕದ ನಡುವೆ ಬೇಸರ ಪರಿಹಾರಕ್ಕೆ, ನೋವನ್ನು ಸಂತೋಷವನ್ನು ವ್ಯಕ್ತಪಡಿಸುವುದಕ್ಕೆ ಹಾಡುತ್ತಿದ್ದರು. ಅವರ ಹಾಡು ತ್ರಿಪದಿ ರೂಪದಲ್ಲಿ ಇರುತ್ತಿದ್ದವು.

ಜನಪದ ಸಾಹಿತ್ಯವು ಸಮೃದ್ಧವಾಗಿರುವುದನ್ನು ಇಂದು ಎಲ್ಲರೂ ತಿಳಿದವರಾಗಿದ್ದಾರೆ. ಜನಪದ ಸಾಹಿತ್ಯದ ಸಂಗ್ರಹಕಾರರು, ವಿಮರ್ಶಕರು ವಿಶೇಷವಾದ ಕೆಲಸವನ್ನು ಮಾಡಿದ್ದಾರೆ. ಈ ತ್ರಿಪದಿಗಳಲ್ಲಿ

ಆಲಂಕಾರಿಕರು ಹೇಳುವ ಸ್ವಭಾವೋಕ್ತಿಯೇ ಪ್ರಧಾನವಾಗಿದೆ. ವರ್ಣನೆ ಮಾಡಲು ಅಥವಾ ಒಂದೇ ವಿಷಯವನ್ನು ವಿಸ್ತರಿಸಲು ಜನಪದ ಕವಿ ಮನಸ್ಸು ಮಾಡಿಲ್ಲ. ಬಿಡಿ ಬಿಡಿ ರಚನೆಗಳಾದ್ದರಿಂದ ಪರಿಪೂರ್ಣತೆಯ ಕಡೆ ಗಮನ ಕೊಡಬೇಕಾಗುತ್ತದೆ. ಕವಿಯು ಒಂದು ಮಾತನ್ನು ಅನಗತ್ಯವಾಗಿ ಹೇಳುವುದಿಲ್ಲ. ಜೀವನದ ಎಲ್ಲ ಮುಖಗಳ ಬಗ್ಗೆಯೂ ಜನಪದ ತ್ರಿಪದಿಗಳು ರಚಿತವಾಗಿವೆ. ದೇವರ ಬಗ್ಗೆ, ಜೀವನದ ಬಗ್ಗೆ, ಸಾವುನೋವುಗಳ ಬಗ್ಗೆ ಎಲ್ಲ ಒಳ್ಳೆಯ ಕೆಟ್ಟ ನಡವಳಿಕೆಗಳ ಬಗ್ಗೆ ಅವರು ಕಾವ್ಯ ಕಟ್ಟಿದ್ದಾರೆ. ಆದರೆ ತಾತ್ವಿಕ ಜಿಜ್ಞಾಸೆಯ ಬಗ್ಗೆ ಅವರು ಸಹಜವಾಗಿಯೇ ತ್ರಿಪದಿಗಳನ್ನು ರಚಿಸಲಿಲ್ಲ.

ಕುಟ್ಟು ಬೀಸುವ ಹಾಡ ಯಾವಾಕಿ ಕಲಿಸಾಳ
ಕೃಷ್ಣನ ತಂಗಿ ಸುಭದ್ರಿ ಕಲಿಸ್ಯಾಳ
ಕೃಷ್ಣನ ಮೇಲೆ ಪದಗೋಳ

ಆದಾವ ನಮ ಜೋಳ ಉಳಿದಾವ ನಮ ಹಾಡು
ಈಗ ಸಾಕವ್ವ ನಿನಕಲ್ಲು ಕೈಯಾಗ
ಹಾಕಿದುಂಗುರ ಸವಿದಾವ

ಸಮೃದ್ಧವಾಗಿರುವ ಜನಪದ ಗೀತೆಗಳ ಬಗ್ಗೆ ಎಷ್ಟು ವಿವರಿಸಿದರೂ ಮುಗಿಯುವಂತೆ ಕಾಣುವುದಿಲ್ಲ. ಅದರ ಬಗ್ಗೆ ಓದಬೇಕಾದ ಚಿಕ್ಕ ದೊಡ್ಡ ಕೃತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗಿವೆ. ಆಸಕ್ತಿಯುಳ್ಳವರು ಅವುಗಳನ್ನು ಓದಬಹುದು.

2.4 ಸರ್ವಜ್ಞಕವಿ, ಕೃತಿಯ ಪರಿಚಯ

ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವನ್ನು ಉಳ್ಳ ಕನ್ನಡ ಸಾಹಿತ್ಯವು ವೈವಿಧ್ಯತೆಯಲ್ಲಿ, ಅದು ವಸ್ತು ಇರಬಹುದು, ಛಂದಸ್ಸಿರಬಹುದು, ಶೈಲಿ ಇರಬಹುದು, ವೈಶಿಷ್ಟ್ಯವನ್ನು ಪ್ರಕಟಿಸಿದೆ. ವೈದಿಕ ಮತದ ಅನುಸಾರವಾಗಿ ಬೆಳೆದ ಸಾಹಿತ್ಯವು ಬೌದ್ಧಮತ, ಜೈನಮತ ಪರವಾದ ಸಾಹಿತ್ಯದಿಂದ ಇನ್ನಷ್ಟು ಸಮೃದ್ಧವಾಯಿತು. ಬೇರೆ ಬೇರೆ ಬಣ್ಣದ ನೀರಿನ ನದಿಗಳು ಕನ್ನಡ ಸಾಹಿತ್ಯ ಸಾಗರವನ್ನು ಬಂದು ಸೇರಿದುವು. ಕವಿಗಳನ್ನು ಕ್ರಾಂತದರ್ಶಿಗಳು ಎನ್ನುತ್ತಾರೆ. ಹೊಸದನ್ನು ನಿರ್ಮಿಸುವ ಅವರ ಚೈತನ್ಯಕ್ಕೆ ಮಿತಿ ಎಂಬುದು ಇರುವುದಿಲ್ಲ. ಶಿಷ್ಟ ಅಥವಾ ಮಾರ್ಗ ಸಾಹಿತ್ಯದ ನಿಯಮಗಳನ್ನು ಮೀರಿ ಜನರಿಗೆ ಸಮೀಪವಾದ ವಸ್ತು ಶೈಲಿ ಛಂದಸ್ಸುಗಳನ್ನು ಬಳಸಿ ಸಾಹಿತ್ಯ ರಚನೆ ಮಾಡಿದ್ದಾರೆ. ಹಲವಾರು ಪಕ್ಷಪಾತ ವರ್ತನೆಗಳನ್ನು ನಿವಾರಿಸಿದ್ದಾರೆ. ಹದಿಮೂರನೆಯ ಶತಮಾನದ ಕವಿಯಾದ ಹರಿಹರನು ರಗಳೆ ಕಾವ್ಯಗಳನ್ನು ರಚಿಸಿ ಜನಪರ ಕವಿ ಎನಿಸಿಕೊಂಡನು. ಶಿವಶರಣರ ವಚನ ಸಾಹಿತ್ಯವು ಇತರ ಕವಿಗಳ ಮೇಲೆ ಅದ್ಭುತವಾದ ಪ್ರಭಾವವನ್ನು ಬೀರಿದುದು ನಿಚ್ಚಳವಾಗಿ ಕಂಡು ಬರುತ್ತದೆ. ವಚನೋತ್ತರ ಸಾಹಿತ್ಯದ ದಿಕ್ಕುದೆಸೆಗಳು ಬದಲಾವಣೆ ಹೊಂದಿದುದೂ ಕೂಡ ಶರಣರು ರಚಿಸಿದ ಸಾಹಿತ್ಯದಿಂದ. ಜೀವನಕ್ಕೂ ಕವಿಗಳ ಕೃತಿಗಳಿಗೂ ಇದ್ದ ಹೆಚ್ಚು ಅಂತರವು ತುಂಬಾ ಕಡಿಮೆಯಾಯಿತು. ಪೌರಾಣಿಕ, ಅತಿಮಾನುಷ, ಅಸಹಜ ಅಂಶಗಳು ಕಡಿಮೆಯಾಗುತ್ತಾ ಬಂದುವು. ಅಸಂಬದ್ಧ ಅಸಂಗತವಾದ ವಿವರಣೆ ನಿರೂಪಣೆಗಳೂ ಕೂಡ ಕಡಿಮೆಯಾದುವು. ಜನಜೀವನವನ್ನು ಸುಧಾರಿಸಬೇಕು, ಸಾಹಿತ್ಯವು ಜನರ ಭಾಷೆಗೆ ಸಮೀಪವಾಗಬೇಕು ಎಂಬ ಒಂದು ಸಾಮಾಜಿಕ ಬದ್ಧತೆಯನ್ನು ಹೆಚ್ಚುಹೆಚ್ಚಾಗಿ ರೂಢಿಸಿಕೊಂಡದ್ದು ಕಂಡು ಬರುತ್ತದೆ. ಇಂತಹ ವಾತಾವರಣವು ನೆಲೆಸಿದ್ದಾಗ ಕವಿಗಳಿಗೆ ಜನಪರವಾಗುವ ಧೈರ್ಯವು ಬಂದಿತು. ಅಂತಹ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಾಣಿಸಿಕೊಂಡು 'ಸರ್ವಜ್ಞ' ಎಂಬ ಹೆಸರಿನಿಂದ ಪ್ರಸಿದ್ಧನಾಗಿರುವ ಕವಿಯ ನಿಜವಾದ ಹೆಸರು ಯಾರಿಗೂ ತಿಳಿಯದು. ಸರ್ವಜ್ಞ ಎಂಬುದು ಆತನ ವಚನಗಳಿಗೆ ಇಟ್ಟುಕೊಂಡ ಅಂಕಿತವಾಗಿದೆ. ಅಂಕಿತವನ್ನು ಕವಿಯ ಹೆಸರು ಎಂದು ತೆಗೆದುಕೊಳ್ಳುವುದು ಸರಿಯೆ ಎಂಬ ಪ್ರಶ್ನೆ ಹುಟ್ಟುತ್ತದೆ. ಏಕೆಂದರೆ 'ಮಂಕುತಿಮ್ಮನ ಕಗ್ಗ' ಎಂಬ ಕಾವ್ಯದ

ಪದ್ಯಗಳ ಕೊನೆಯಲ್ಲಿ ಮಂಕುತಿಮ್ಮ ಎಂಬುದು ಅಂಕಿತವಾಗಿ ಬರುತ್ತದೆ. ಅಂಕಿತವನ್ನು ಕವಿಯ ಹೆಸರೆಂದು ತೆಗೆದುಕೊಳ್ಳಲಾಗದು. ಕವಿಯ ಹೆಸರು ಡಿ.ವಿ. ಗುಂಡಪ್ಪ ಎಂದು ಗೊತ್ತಿರುವುದರಿಂದ ಅಂತಹ ಅಪಾಯ ಉಂಟಾಗಿಲ್ಲ. ಕೆಲವರು ಸರ್ವಜ್ಞ ಎಂಬ ಅಂಕಿತದ ಜಾಗದಲ್ಲಿ ಪರಮಾರ್ಥ ಎಂಬ ಅಂಕಿತ ಇರಬೇಕು ಎನ್ನುತ್ತಾರೆ. ಸರ್ವಜ್ಞನ ಕಾಲ, ದೇಶ ವಿಚಾರಗಳು ಖಚಿತವಾಗಿ ತಿಳಿಯುವುದಿಲ್ಲ. ಆತನ ರಚನೆಗಳನ್ನು ಆಧರಿಸಿ ಕವಿಯ ಕಾಲವನ್ನು ಸುಮಾರು ೧೬೦೦ ಎಂದು ತಿಳಿಯಲಾಗಿದೆ. ಶ್ರೀ ಚನ್ನಪ್ಪ ಉತ್ತಂಗಿಯವರು ಸರ್ವಜ್ಞನ ಬಗ್ಗೆ ಸಂಶೋಧನೆ ನಡೆಸಿದುದರ ಪರಿಣಾಮವಾಗಿ ಕೆಲವು ಅಂಶಗಳು ತಿಳಿದು ಬಂದಿವೆ. ಕವಿಯ ಸ್ಥಳ ಅಂಬಲೂರು ಎಂದೂ ತಂದೆಯ ಹೆಸರು ಬಸವರಸ (ಮಲ್ಲರಸ) ಎಂದೂ, ತಾಯಿಯ ಹೆಸರು ಮಾಳವ್ವ ಎಂದೂ ತಿಳಿದು ಬರುತ್ತದೆ. ಅಂಬಲೂರು ಇಂದಿನ ಧಾರವಾಡ ಜಿಲ್ಲೆಗೆ ಸೇರಿದ ಗ್ರಾಮವಾಗಿದೆ. ಇಷ್ಟನ್ನು ಬಿಟ್ಟರೆ ಬೇರೆ ಕೌಟುಂಬಿಕ ವಿಚಾರಗಳು ತಿಳಿಯುವುದಿಲ್ಲ. ಅವನು ಸಂಸಾರಿಯಾಗಿರಲಿಲ್ಲವೆಂದೂ ಸರ್ವಸಂಗ ಪರಿತ್ಯಾಗಿಯಾಗಿ ಊರೂರು ತಿರುಗುತ್ತ ದೈವಚಿಂತನೆಯಲ್ಲಿ ಮುಳುಗಿದ್ದನೆಂದು ನಂಬಲಾಗಿದೆ.

ವಚನಗಳು ಎಂಬ ಶಬ್ದದ ಮೂಲಕ ನಾವು ಬಸವಯುಗದ ಶರಣರ ರಚನೆಗಳ ನೆನಪನ್ನು ತಂದುಕೊಂಡು ಬಿಡುತ್ತೇವೆ. ಆದರೆ ಇಲ್ಲಿ ಸರ್ವಜ್ಞನು ಬರೆದಿರುವ ತ್ರಿಪದಿಗಳನ್ನು ಸರ್ವಜ್ಞನ ವಚನಗಳೆಂದು ಕರೆಯುವುದು ರೂಢಿಗೆ ಬಂದಿದೆ. ಸರ್ವಜ್ಞನ ವಚನ ಎಂಬುದನ್ನು ಸರ್ವಜ್ಞ 'ಉವಾಚ' ಎಂಬಂತೆ ಅರ್ಥ ಮಾಡಿಕೊಳ್ಳಬೇಕು. ಬಸವಾದಿ ಪ್ರಮಥರು ಅಪ್ರಯತ್ನವಾಗಿ ತನ್ಮಯವಾಗಿ ಬರೆದಂತೆ ಸರ್ವಜ್ಞನೂ ಕೂಡ ಬರೆದಿದ್ದಾನೆ. ಆ ಕಾರಣದಿಂದಲೂ ತ್ರಿಪದಿಗಳನ್ನು ವಚನಗಳೆಂದು ಕರೆದಿರಬಹುದು. ಸರ್ವಜ್ಞನು ಒಬ್ಬ ಅನುಭಾವಿ ಅತನು ಒಬ್ಬ ದಾರ್ಶನಿಕ ಜೀವನದ ಉದ್ದೇಶವನ್ನು ಗ್ರಹಿಸಿ ಆ ಉದ್ದೇಶವನ್ನು ಇತರರಿಗೂ ತಿಳಿಸಲು ವಚನಗಳನ್ನು ಹಾಡುತ್ತಾ ಊರೂರು ತಿರುಗುತ್ತಿದ್ದನು. ಕೈಯಲ್ಲಿ ಒಂದು ಕಪ್ಪರ, ಮಾನಮುಚ್ಚಲು ಒಂದು ಕೌಪೀನ, ಹೆಗಲಿನ ಮೇಲೆ ಒಂದು ಕಂಬಳಿ ಇರುವ ಚಿತ್ರವನ್ನು ಕಲ್ಪಿಸಿ ಚಿತ್ರಿಸಲಾಗಿದೆ. ಸುಮಾರು ಎರಡು ಸಾವಿರ ಸರ್ವಜ್ಞನ ವಚನಗಳು ಬೆಳಕು ಕಂಡಿವೆ. ಇನ್ನೂ ಎಷ್ಟು ಲುಪ್ತವಾಗಿವೆಯೋ ತಿಳಿಯುವುದಿಲ್ಲ.

ಸರ್ವಜ್ಞ ತಾನಾಗಿಯೇ ಕಾವ್ಯರಚನೆ ಮಾಡಿದನೆಂದು ಹೇಳುವುದು ಸುಲಭವಲ್ಲ. ಕವಿಯಾಗಬೇಕೆಂಬ ಆಸೆಯೂ ಆತನಿಗೆ ಇದ್ದಿರಲಾರದು. ಅವನು ಆಡಿದ ಮಾತು. ಹಾಡಿದ ಪದ್ಯ ಕಾವ್ಯವಾಗಿ ನಿಂತು ಬಿಟ್ಟವು. ಸರ್ವಜ್ಞನಿಗೆ ಸೂಕ್ಷ್ಮ ನಿರೀಕ್ಷಣ ದೃಷ್ಟಿ ಇದ್ದಿತು. ಊರೂರು ಸುತ್ತಿ ಪಡೆದುಕೊಂಡ ಅನುಭವವೇನೂ ಸಾಮಾನ್ಯವಲ್ಲ. ಕೆಲವರು ಸರ್ವಜ್ಞನನ್ನು ತಮಿಳಿನ ತಿಳುವಳ್ಳುವರ್‌ಗೆ ಮತ್ತು ತೆಲುಗಿನ ವೇಮನನಿಗೆ ಹೋಲಿಸುತ್ತಾರೆ. ಸರ್ವಜ್ಞನ ವಚನಗಳಲ್ಲಿ ದೇಸಿಯ ಲಕ್ಷಣವಿದೆ. ಆತನ ಮಾತು ಒರಟಾಗಿರುವಂತೆ ತೋರುತ್ತದೆ. ಚಿಕ್ಕಂದಿನಿಂದ ತನ್ನ ಜನ್ಮದ ಬಗ್ಗೆ ಕೆಲವರಿಂದ ಹಂಗಿಗೆ ಗುರಿಯಾಗಿ ಅಸಹನೆಯನ್ನು ಒಳಗೇ ತುಂಬಿಕೊಂಡಿದ್ದಿರಬಹುದು. ಅದು ತ್ರಿಪದಿಗಳ ಮೂಲಕ ಹೊರಹೊಮ್ಮಿರುವುದನ್ನು ಚೆನ್ನಾಗಿ ಗುರುತಿಸಬಹುದು. ಆತನು ತನ್ನ ಆಲೋಚನಾ ಪ್ರವಾಹಕ್ಕೆ ತ್ರಿಪದಿ ಮಾಧ್ಯಮವನ್ನೇ ಆರಿಸಿಕೊಂಡದ್ದು ಏಕೆ ಎಂಬ ಪ್ರಶ್ನೆಯು ಹುಟ್ಟಬಹುದು. ಬಹುಶಃ ತ್ರಿಪದಿಯು ಜನಪದ ಸಾಹಿತ್ಯದ ಮಾಧ್ಯಮವಾಗಿದ್ದುದು, ಕಿರಿದರಲ್ಲಿ ಪಿರಿಅರ್ಥವನ್ನು ಒಳಗೊಳ್ಳುವ ಸಾಮರ್ಥ್ಯವಿದ್ದುದು, ಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವ ಸೌಲಭ್ಯವನ್ನು ಹೊಂದಿದ್ದು ಈ ಆಯ್ಕೆಗೆ ಕಾರಣವಾಗಿರಬಹುದು. ಸರ್ವಜ್ಞನು ಉದ್ದೇಶಪೂರ್ವಕವಾಗಿ ಕಾವ್ಯರಚನೆ ಮಾಡುವುದರಲ್ಲಿ ತೊಡಗಲಿಲ್ಲ. ಒಂದು ಕ್ರಮವನ್ನು ಅನುಸರಿಸಿ ಇಷ್ಟು ಅಧ್ಯಾಯಗಳು, ಅಧ್ಯಾಯದಲ್ಲಿದ್ದಷ್ಟು ಪದ್ಯಗಳು, ವಸ್ತು ವಿನ್ಯಾಸ, ಮುಂತಾದ ಯಾವ ನಿಯಮಕ್ಕೂ ಆತನು ಕಟ್ಟುಬಿದ್ದಿಲ್ಲ. ಸಹೃದಯರು ಸರ್ವಜ್ಞನ ವಚನಗಳನ್ನು ಓದಿ ಅವುಗಳ ವಸ್ತು ವಿಷಯಗಳನ್ನು ಗ್ರಹಿಸಿ, ಸಂಕಲಿಸಿ ಶೀರ್ಷಿಕೆಗಳನ್ನು ನೀಡಬಹುದು. ಉದಾಹರಣೆಗೆ ೧. ಗುರು-ದೇವರು-ಧರ್ಮ ೨. ಇಂದ್ರಿಯ ಮನಸ್ಸುಗಳ ನಿಯಂತ್ರಣ ೩. ವಿಧಿ ಮತ್ತು ಕರ್ಮ ೪. ಜನರ ನಡವಳಿಕೆ ೫. ತ್ಯಾಗ ಔದಾರ್ಯ ೬. ಸಂಸಾರ ೭. ನೀತಿವಂತಿಕೆ ೮. ಸಂಕೀರ್ಣ ಹೀಗೆ

ವಿಂಗಡಿಸಿರುವುದು ಕೇವಲ ನಮ್ಮ ಓದಿಗೋಸ್ಕರ ಎಷ್ಟೋ (ತ್ರಿಪದಿಗಳು) ವಚನಗಳು ಯಾವ ವಿಭಾಗಕ್ಕೆ ಸೇರಬೇಕು ಎನ್ನುವ ಬಗ್ಗೆ ಗೊಂದಲವನ್ನು ಉಂಟು ಮಾಡುತ್ತವೆ. ಅದಕ್ಕೆ ಅತಿ ಮಹತ್ವ ಕೊಡದೆ ಸರ್ವಜ್ಞನ ವಚನಗಳ ಸ್ವಾರಸ್ಯವನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು.

ಹರ ತೆನ್ನೊಳಿದ್ದು ಗುರು ತೋರದೆ ತಿಳಿವುದೇ
ಮರದೊಳಗಗ್ನಿಯಿರುತಿರ್ದು ತನ್ನ ತಾ
ನರಿಯದೇಕೆಂದ ಸರ್ವಜ್ಞ

(ದೇವರು ನಮ್ಮೊಳಗೆ ಇದ್ದರೂ ಗುರು ತೋರಿಸದಿದ್ದರೆ ತಿಳಿಯುವುದಿಲ್ಲ. ಮರದೊಳಗೆ ಅಗ್ನಿ ಇರುವುದನ್ನು ಮರ ತಿಳಿಯುವುದೇ ಇಲ್ಲ.)

ಶ್ವಾನ ತೆಂಗಿನ ಕಾಯ ತಾನು ಮೆಲಬಲ್ಲುದೇ
ಹೀನ ಮನದವನಿಗುಪದೇಶ ವಿತ್ತಡೆ
ಹಾನಿ ಕಾಣಯ್ಯ ಸರ್ವಜ್ಞ

(ನಾಯಿಗೆ ತೆಂಗಿನ ಕಾಯಿಯನ್ನು ಕೊಟ್ಟರೆ ಅದು ತಿನ್ನಲು ಸಾಧ್ಯವೆ. ಹೀನ ಸಂಸ್ಕಾರದ ವ್ಯಕ್ತಿಗೆ ಉಪದೇಶವನ್ನು ಕೊಟ್ಟರೆ ಅದು ವ್ಯರ್ಥವಾಗುತ್ತದೆ.)

ಕಲ್ಲಿನಲಿ ಮಣ್ಣಿನಲಿ ಮುಳ್ಳಿನಾ ಮೊನೆಯಲ್ಲಿ
ಎಲ್ಲಿ ನೆನೆದಲ್ಲಿ ಶಿವನಿರ್ಪ ಅವ ನೀನಿ
ದ್ದಲ್ಲಿಯೇ ಇರುವ ಸರ್ವಜ್ಞ

* * *

ನಿತ್ಯ ನೀರ್ಮುಳುಗುವವನು ಹತ್ತಿದೆಡೆ ಸ್ವರ್ಗವನು
ಎತ್ತಿ ಜನ್ಮವನು ಜಲದಿಪ್ಪ ಕಪ್ಪೆಯು
ಹತ್ತದೇಕೆಂದ ಸರ್ವಜ್ಞ

(ಸ್ನಾನ, ಮಡಿ ಕಲ್ಪನೆಯನ್ನು ಸರ್ವಜ್ಞನು ವಿಮರ್ಶಿಸಿದ್ದಾನೆ. ನಿತ್ಯ ಸ್ನಾನ ಮಾಡಿದ ಮಾತ್ರಕ್ಕೆ ಸ್ವರ್ಗಸಿಗುತ್ತದೆಯೆ? ಹಾಗಾದರೆ ಸದಾ ನೀರಿನಲ್ಲಿ ಇರುವ ಕಪ್ಪೆಗೆ ಏಕೆ ಸ್ವರ್ಗವು ಸಿಗುವುದಿಲ್ಲ ಎಂದು ಪ್ರಶ್ನಿಸುತ್ತಾನೆ.)

ಚಿತ್ತವಿಲ್ಲದೆ ಗುಡಿಯ ಸುತ್ತಿದೊಡೆ ಫಲವೇನು
ಎತ್ತು ಗಾಣವನು ಹೊತ್ತು ತಾ ನಿತ್ಯದಿ
ಸುತ್ತು ಬಂದಂತೆ ಸರ್ವಜ್ಞ

* * *

ಮನುಷ್ಯನು ದುರಹಂಕಾರಿಯಾಗಲು ನೂರಾರು ಕಾರಣಗಳಿರುತ್ತವೆ. ಅವನು ತನಗಿಂತ ದೊಡ್ಡದೊಂದಿದೆ ಎಂದು ಅರಿಯದಿರುವುದೇ ಇದಕ್ಕೆ ಆದಿ ಕಾರಣ. ದೇವತೆಗಳು, ಚಕ್ರವರ್ತಿಗಳು, ಯೋಧರು ಇತ್ಯಾದಿಗಳು ತಮ್ಮ ಹಟದಂತೆ ನಡೆಯಲು ಸಾಧ್ಯವಿಲ್ಲ ಎಂಬುದು ಸರ್ವಜ್ಞನ ಎಚ್ಚರಿಕೆಯ ನುಡಿಯಾಗಿದೆ.

ಆಡುವಾ ಮಕ್ಕಳಿಗೆ ಊಡುವಾ ತಾಯಂತೆ
ಮಾಡಿದ ಕರ್ಮ ಬಳಿವಿಡಿದು ಪಿಡಿದಂತು
ಊಡುತ್ತಲಿಹುದು ಸರ್ವಜ್ಞ

ಹೆತ್ತಾತನರ್ಜುನನು ಮುತ್ತಯ್ಯ ದೇವೇಂದ್ರ
ಮತ್ತೆ ಮಾತುಲನು ಹರಿಯಿರಲಭಿಮನ್ಯು
ಸತ್ತನೇಕಯ್ಯ ಸರ್ವಜ್ಞ

(ಅಭಿಮನ್ಯು ಅರ್ಜುನನ ಮಗ, ಇಂದ್ರನ ಮೊಮ್ಮಗ, ಸೋದರ ಮಾವ ಶ್ರೀ ಕೃಷ್ಣ, ಹೀಗಿದ್ದರೂ ಅವನು ಏಕೆ ಸತ್ತ) ಎಂದು ಪ್ರಶ್ನಿಸುತ್ತಾನೆ.

* * *

ಜಾತಿಹೀನರ ಮನೆಯ ಜ್ಯೋತಿ ತಾಹೀನವೆ
ಜಾತಿವಿಜಾತಿಯೆನಬೇಡ ದೇವನೊಲಿ
ದಾತನೇ ಜಾತ ಸರ್ವಜ್ಞ

(ಜಾತಿಭೇದವನ್ನು ಸರ್ವಜ್ಞನು ಕಟುವಾಗಿ ಖಂಡಿಸುತ್ತಾನೆ)

ಎಲುವಿಲ್ಲ ನಾಲಗಗೆ ಬಲವಿಲ್ಲ ಬಡವಂಗೆ
ತೊಲೆಕಂಬವಿಲ್ಲ ಗಗನಕ್ಕೆ ದೇವರಲಿ
ಕುಲಭೇದವಿಲ್ಲ ಸರ್ವಜ್ಞ

ದಂತಪಂಕ್ತಿಯ ನಡುವೆ ಎಂತಿರ್ಪುದದು ಜಿಹ್ವೆ
ಅಂತು ದುರ್ಜನರ ಬಳಸಿನಲಿ ಸಜ್ಜನನು
ನಿಂತಿರ್ದ ನೋಡು ಸರ್ವಜ್ಞ

(ಮೇಲಿನ ವಚನಗಳು ಅತ್ಯಂತ ಸರಳವಾಗಿದ್ದರೂ ಗಹನವಾದ ವಿಷಯವನ್ನು ತಿಳಿಸುತ್ತವೆ. ಸರ್ವಜ್ಞನ ಲೋಕಾನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಹಲ್ಲು ಮತ್ತು ನಾಲಗೆ ಅಕ್ಕಪಕ್ಕ ಇರಲೇಬೇಕು. ಅದು ಅನಿವಾರ್ಯ ಬೇಕೆಂದರೂ ದೂರವಾಗುವಂತಿಲ್ಲ. ಸ್ವಲ್ಪ ಜೋಕೆ ತಪ್ಪಿದರೂ ನಾಲಗಗೆ ನೋವುಂಟಾಗುತ್ತದೆ. ಸಜ್ಜನರ ದುರ್ಜನರ ಇರುವಿಕೆಯನ್ನು ಇದು ಸೊಗಸಾಗಿ ನಿರೂಪಿಸುತ್ತದೆ.)

ದಯವೇ ಧರ್ಮದ ಮೂಲವಯ್ಯ ಎಂಬುದು ಶಿವಶರಣರ ನುಡಿ. ಧರ್ಮದ ಸಾರಸರ್ವಸ್ವ ದಾನದಲ್ಲಿದೆ. ಸಾಮಾಜಿಕ ರೋಗಗಳಿಗೆ ದಾನಕ್ಕಿಂತ ಉತ್ತಮವಾದ ಔಷಧವಿಲ್ಲ. ದಾನದಿಂದ ಅನ್ಯಾಯ, ಅಪಕಾರ, ಅಸೂಯೆ ಇತ್ಯಾದಿ ಬೆಂಕಿಗಳು ನಂದುತ್ತವೆ. ದಾನಿಯು ದೇವರಂತೆಯೇ ನೀಡುತ್ತಾನೆ.

ಈವಂಗೆ ದೇವಂಗೆ ಆವುದಂತರವಯ್ಯ
ದೇವನು ಜಗಕೆ ಕೊಡುವನು ಕೈಯಾರೆ
ಈವನೆ ದೇವ ಸರ್ವಜ್ಞ

ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಹೊಯ್ವರೇ
ಕೊಡಬೇಡ ಕೊಡದೆ ಇರಬೇಡ ಧರ್ಮವ
ಬಿಡಬೇಡವೆಂದ ಸರ್ವಜ್ಞ

(ಸಣ್ಣ ಹಳರೆಣ್ಣೆ ದೀಪದಲ್ಲಿ ಎಣ್ಣೆ ಮುಗಿಯುತ್ತ ಬಂದಾಗ ದೊಡ್ಡ ಡ್ರಮ್ ಅನ್ನು ಎತ್ತಿ ಅದರಿಂದ ಎಣ್ಣೆ ಹಾಕುತ್ತಾರೆಯೆ? ಎಷ್ಟು ಕಡಿಮೆ ಹಾಕಬೇಕೋ ಅಷ್ಟನ್ನೇ ಹಾಕುವುದು ಹಿತವಾದುದು. ಕೊಡುವವನೆ ಬಡವನಾಗುವಷ್ಟು ಕೊಡಬೇಕಾಗಿಲ್ಲ. ಎಷ್ಟು ಅಲ್ಪ ಪ್ರಮಾಣದಲ್ಲಿ ಆದರೂ ಸರಿ ದಾನಮಾಡಬೇಕು.)

* * *

ಮನುಷ್ಯನು ಜೀವನದಲ್ಲಿ ಏನೇ ಆಗಿರಲಿ, ಅವನ ನಡೆನುಡಿಗಳು ಬಹಳ ಮುಖ್ಯವಾದುವು. ಯಾವುದು ಅಹಿತ, ಯಾವುದು ವಿಹಿತ ಎಂಬುದನ್ನು ಅರಿತು ಅಳವಡಿಸಿಕೊಂಡು ಬದುಕಬೇಕು. ಯಾವುದು ಕೆಟ್ಟದ್ದು ಯಾವುದು ಒಳ್ಳೆಯದು ಎಂಬುದನ್ನು ತಿಳಿಯುವ ವಿವೇಕ ಇರಬೇಕು. ವಿವೇಕವಿಲ್ಲದ ಸಾಧುವೂ ಕೆಟ್ಟ, ಸಂಸಾರಿಯೂ ಕೆಟ್ಟ. ಸರ್ವಜ್ಞನು ತನ್ನ ಲೋಕಾನುಭವದ ಬೆಳಕಿನಲ್ಲಿ ಎಲ್ಲವನ್ನೂ ತೋರಿಸಿ ಕೊಟ್ಟಿದ್ದಾನೆ.

ಸತ್ಯರಿಗೆ ಧರೆಯೆಲ್ಲ ಮಸ್ತಕದಿ ಎರಗುವುದು
ಹೆತ್ತ ತಾಯ್ಮಗನ ಕರೆವಂತೆ ಶಿವನವರ
ನೆತ್ತಿಕೊಂಬನು ಸರ್ವಜ್ಞ.

ಅಲಸಿಕೆಯಲಿರುವಂಗೆ ಕಲಸಲಂಬಲಿಯಿಲ್ಲ
ಕೆಲಸಕೆ ಅಲಸದಿರುವವನೆ ಬೇರಿಂದ
ಹಲಸು ಕಾತಂತೆ ಸರ್ವಜ್ಞ

(ಯಾರು ಸೋಮಾರಿಯೋ ಅವನಿಗೆ ಉಪ್ಪು ಹಾಕಿ ಕಲಸಿಕೊಳ್ಳಲು (ರಾಗಿ) ಅಂಬಲಿಗೂ ಗತಿ ಇರುವುದಿಲ್ಲ. ಯಾರು ದುಡಿಯುತ್ತಾನೋ ಅವನಿಗೆ ಬದುಕು ಎಂಬುದು ಬುಡದಿಂದ ತುದಿವರೆಗೆ ಹಲಸಿನ ಕಾಯಿಗಳು ಮರದಲ್ಲಿ ತುಂಬಿ ಬೆಳೆಯುವ ಹಾಗೆ ಇರುತ್ತದೆ. ಇದು ಒಂದು ಸುಂದರವಾದ ರೂಪಕ ಎಂಬುದನ್ನು ಮರೆಯುವಂತಿಲ್ಲ.)

ಆನೆ ಬೀದಿಲಿ ಬರಲು ಶ್ವಾನ ತಾ ಬೊಗಳುವುದು
ಶ್ವಾನನಂತಾನೆ ಬೊಗಳಿದರೆ ಆನೆಯ
ಮಾನವೇ ಹಾನಿ ಸರ್ವಜ್ಞ.

(ಇದು ಎಷ್ಟು ಅರ್ಥಪೂರ್ಣವಾದುದು ನೋಡಿ. ಆನೆ ಹೋಗುವಾಗ ನಾಯಿಗಳು ಬೊಗಳುವುದನ್ನು ನೋಡುತ್ತೇವೆ. ಆದರೆ ಗಮನಕೊಟ್ಟು ಗ್ರಹಿಸುವುದಿಲ್ಲ. ಅದು ದಿನ ನಿತ್ಯ ಅಂದರೆ ನಾವು ನೋಡಿದಾಗಲೆಲ್ಲಾ ನಡೆಯುವ ಕ್ರಿಯೆ ಅಷ್ಟೆ. ಒಂದು ಕ್ಷಣ ನಾವು ಆನೆಯತ್ತ ನೋಡಿ ಮನಸ್ಸಿನಲ್ಲಿ ಆನೆಯೂ ಹಿಂದಿರುಗಿ ಬೊಗಳಿದರೆ ಹೇಗಿರುತ್ತದೆ ಎಂದು ಕಲ್ಪಿಸಿಕೊಳ್ಳುವುದಿಲ್ಲ. ಈಗ ಕಲ್ಪಿಸಿಕೊಂಡು ಓದಿ ನೋಡಿ. ನಾಯಿಗೆ ಏನೂ ಆಗುವುದಿಲ್ಲ. ಆದರೆ ಆನೆಯ ಮಾನ ಹೋಗುತ್ತದೆ. ಏಕೆ? ನಮ್ಮ ದೃಷ್ಟಿಯಲ್ಲಿ ಆನೆ ಗಂಭೀರವಾದ ಮಹಾನ್ ಶಕ್ತಿಯುತ ಪ್ರಾಣಿ, ನಾಯಿ ಸದಾ ಕ್ಷುದ್ರ ಜೀವಿ. ಆದ್ದರಿಂದ ನಾವು ನಮಗೇ ತಿಳಿಯದಂತೆ ಆನೆಯಿಂದ ಕೆಲವು ವರ್ತನೆಗಳನ್ನು ನಿರೀಕ್ಷಿಸುತ್ತೇವೆ. ಸರ್ವಜ್ಞ ಕೇವಲ ನೋಡಲಿಲ್ಲ-ಪ್ರಜ್ಞೆಗೆ ತಂದುಕೊಂಡ)

* * *

ಸರ್ವಜ್ಞನು ಕೆಲವು ಸಾರ್ವತ್ರಿಕ ಸತ್ಯಗಳನ್ನು ಕುರಿತು ಬರೆದಿದ್ದಾನೆ. ಅವುಗಳು ಅನುಸರಣೀಯವೂ ಆಗಿವೆ. ಅಲ್ಲಲ್ಲಿ ಕೆಲವು ಸಾಂಪ್ರದಾಯಿಕ ನಂಬಿಕೆಗಳನ್ನು ತಾನೂ ನಂಬಿದವನಂತೆ ಬರೆದಂತಿದೆ. ಅವನ ಸ್ವಭಾವಕ್ಕೆ ವ್ಯಕ್ತಿತ್ವಕ್ಕೆ ಬಗ್ಗದ ಮಾತುಗಳನ್ನು ಅವನು ಬಳಸಿರುವುದರ ಬಗ್ಗೆ ಸಂದೇಹವೂ ಉಂಟಾಗುತ್ತದೆ. ಏಕೆಂದರೆ ಪ್ರಸಿದ್ಧರಾದವರ ಹೆಸರಿನಲ್ಲಿ ಬೇರೆಯವರು ತಾವೇನನ್ನಾದರೂ ಬರೆದು ಅವರ ಹೆಸರಿಗೆ ಸೇರಿಸುವುದು ಕಂಡು ಬರುತ್ತದೆ. ಅವುಗಳಲ್ಲಿ ಕೆಲವು ತಾರ್ಕಿಕವಾಗಿರುವುದಿಲ್ಲ. ಕೆಲವು ವರದಿಗಳಂತೆ ಇರುತ್ತವೆ. ಇನ್ನು ಕೆಲವು ಸರ್ವಜ್ಞನ ವ್ಯಕ್ತಿತ್ವಕ್ಕೆ ವಿರುದ್ಧವಾದಂತೆಯೂ ಇರುತ್ತವೆ.

ಹಸಿಯದಿರೆ ಉಣಬೇಡ ಹಸಿದು ಮತ್ತಿರಬೇಡ
ಬಿಸಿಬೇಡ ತಂಗಳುಣಬೇಡ ವೈದ್ಯರಾ
ಬೆಸನವೇ ಬೇಡ ಸರ್ವಜ್ಞ

(ಹಸಿಯದಿದ್ದರೂ ಸದಾ ತಿನ್ನುವವರು ನಮ್ಮ ಮಧ್ಯೆ ಇದ್ದಾರೆ. ಅನಗತ್ಯವಾಗಿ ಏನೇನೋ ಕಾರಣಗಳಿಂದ ಹಸಿಯುವವರೂ ಇದ್ದಾರೆ. ಅತಿಯಾದ ಬಿಸಿ ಆಹಾರವಾಗಲೀ, ತಂಗಳಾಗಲಿ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದೂ ಹೇಳಿರುವುದು ಸಮರ್ಪಕವಾಗಿದೆ.)

ಏನ ಮನ್ನಿಸದಿರಲು ಸೀನ ಮನ್ನಿಸಬೇಕು
ಸೀನ ಮನ್ನಿಸದೆ ಹೋದರೆ ಹೋದಲ್ಲಿ
ಹಾನಿಯೇ ಬಕ್ಕು ಸರ್ವಜ್ಞ

(ಈ ವಚನದ ಬಗ್ಗೆ ಸಂದೇಶ ಮೂಡುತ್ತದೆ. ಸೀನು ಏಕೆ ಬರುತ್ತದೆ ಎಂಬುದನ್ನು ವಿಜ್ಞಾನವು ಸ್ಪಷ್ಟಪಡಿಸಿದೆ. ಆದ್ದರಿಂದ ಅದರ ಬಗ್ಗೆ ಇದ್ದ ಹಳೆಯ ನಂಬಿಕೆಗಳು ಈಗ ಇರುವುದು ಸಾಧ್ಯವಿಲ್ಲ. ಸರ್ವಜ್ಞನು ವೈಚಾರಿಕತೆಯಿಂದ ಬರೆಯುವ ರೀತಿಯನ್ನು ಕಂಡಿರುವುದರಿಂದ ನಮಗೆ ಇಂತಹ ರಚನೆಗಳು ಸರ್ವಜ್ಞನು ಬರೆದದ್ದಲ್ಲವೇನೋ ಎಂಬ ಆಲೋಚನೆಯು ಬರುತ್ತದೆ. ಆದರೆ ನಾನೂರು ವರ್ಷಗಳ ಹಿಂದೆ ತಾನೂ ಕೂಡ ಅಂತಹ ನಂಬಿಕೆಗಳನ್ನು ಒಪ್ಪಿಕೊಂಡಿರಬಹುದೇನೋ ಎಂಬ ಆಲೋಚನೆಯೂ ಮೂಡಬಹುದು.)

ಕರೆಯದಲೆ ಬರುವವನ ಬರೆಯದಲೆ ಓದುವವನ
ಬರಿಗಾಲಿನಿಂದ ನಡೆಯುವವನ ಕರೆತಂದು
ಕೆರದಲ್ಲಿ ಹೊಡೆಯೆಂದ ಸರ್ವಜ್ಞ

(ಇಂತಹ ರಚನೆಗಳ ಬಗ್ಗೆ ಸಂದೇಹ ಬರುವುದು ಸಹಜವೆನಿಸುತ್ತದೆ. ಬರಿಗಾಲಿನಲ್ಲಿ ನಡೆಯುವವನನ್ನು ಹಿಡಿದುಕೊಂಡು ಬಂದು ಚಪ್ಪಲಿಯಿಂದ ಹೊಡೆಯಬೇಕು ಎಂದು ಹೇಳಿರುವುದು ನಮ್ಮಲ್ಲಿ ಸಂದೇಹವನ್ನು ಮೂಡಿಸುತ್ತದೆ. ಇದು ಸರ್ವಜ್ಞನು ಬರೆದದ್ದಲ್ಲವೇನೋ ಎಂಬ ಆಲೋಚನೆಯೂ ಹುಟ್ಟುತ್ತದೆ.)

* * *

ಸರ್ವಜ್ಞನು ಕೆಲವು ಒಗಟುಗಳನ್ನು ತ್ರಿಪದಿರೂಪದಲ್ಲಿ ಹೇಳಿದ್ದಾನೆ. ಒಗಟುಗಳು ಜಾನಪದ ಸಾಹಿತ್ಯದಲ್ಲಿ ಒಂದು ಭಾಗವನ್ನು ಪಡೆದುಕೊಂಡಿವೆ. ಜನಪದರು ಬುದ್ಧಿವಂತಿಕೆಯಿಂದ ರೂಪಿಸಿದ್ದ ಒಗಟುಗಳನ್ನು ಸರ್ವಜ್ಞನು ಕೇಳಿಸಿಕೊಂಡು ಅವುಗಳನ್ನು ಇಲ್ಲಿ ನಿರೂಪಿಸಿದ್ದಾನೆ.

ಹತ್ತು ಸಾವಿರದ ಕಣ್ಣು ನೆತ್ತಿಲಾದರು ಬಾಲ
ಹುತ್ತಿನ ಹುಳವ ಹಿಡಿಯುವುದು ಕವಿ ಜನರ
ಮೊತ್ತವಿದ ಹೇಳಿ ಸರ್ವಜ್ಞ

(ನವಿಲು)

ನೆತ್ತಿಯಲಿ ಉಂಬುವುದು ಸುತ್ತಲೂ ಸುರಿಸುವುದು
ಎತ್ತಿದರೆ ಎರಡು ಹೋಳಹುದು ಕವಿಗಳಿದ
ಕುತ್ತರವ ಹೇಳಿ ಸರ್ವಜ್ಞ

(ರಾಗಿಕಲ್ಲು)

ಹಲ್ಲುಂಟು ಮೃಗವಲ್ಲ ಸೊಲ್ಲು ಸೋಜಿಗವಲ್ಲ
ಕೊಲ್ಲುವುದು ತನ್ನ ನಂಬಿದರ ಇದನರಿದು
ಬಲ್ಲವರು ಹೇಳಿ ಸರ್ವಜ್ಞ

(ಗರಗಸ)

ಸರ್ವಜ್ಞನ ಕಾವ್ಯವನ್ನು ಸಾರ್ವತ್ರಿಕ ನೀತಿ ಕಾವ್ಯ ಎಂದು ಕರೆಯಬಹುದು. ನೀತಿ ಕಾವ್ಯ ಎನ್ನುವುದರ ಜೊತೆಗೆ ವಿಡಂಬನ ಕಾವ್ಯ ಎಂದರೂ ತಪ್ಪಾಗದು. ನೀತಿ ಮತ್ತು ವಿಡಂಬನೆ ಎರಡೂ ಸರ್ವಜ್ಞನ ವಚನಗಳಲ್ಲಿವೆ. ಅವನಿಗೆ ಲೋಕದ ಸುಖದುಃಖಗಳೆರಡೂ ಚೆನ್ನಾಗಿ ಗೊತ್ತು. ದುಃಖದ ಕಡೆ ನೋಡದೆ ರಾತ್ರಿ ಕಂಡ ಬಾವಿಗೆ ಹಗಲು ಹೊತ್ತೇ ಬೀಳಬೇಡಿ ಎಂದು ಹೇಳುವ ವಿಧಾನವನ್ನು ನೋಡುತ್ತೇವೆ. ಒಟ್ಟಾರೆ ಕಂಡದ್ದನ್ನು ಕಂಡಂತೆ ಹೇಳುವ ಸರ್ವಜ್ಞನ ನಿರೂಪಣೆಯ ವಿಧಾನವನ್ನು ಎಲ್ಲರೂ ಮೆಚ್ಚಿದ್ದಾರೆ ಹೀಗೆ ಸರ್ವಜ್ಞನ ವಚನಗಳು ಎಷ್ಟರ ಮಟ್ಟಿಗೆ ಜನಪ್ರಿಯವಾದುವು ಎಂದರೆ, ಅವುಗಳನ್ನು ಓದಿದವರು ತಾವೇ ಕೆಲವು ತ್ರಿಪದಿಗಳನ್ನು ರಚಿಸಿ ಸರ್ವಜ್ಞ ಎಂಬ ಅಂಕಿತವನ್ನು ಸೇರಿಸಿಬಿಟ್ಟಿದ್ದಾರೆ. ಸಂಶೋಧಕರು ಶ್ರಮವಹಿಸಿ ನಿಜವಾದ ಸರ್ವಜ್ಞನ ತ್ರಿಪದಿಗಳು ಯಾವುವು ಎಂಬುದನ್ನು ಪತ್ತೆ ಮಾಡಿರುವುದು ಕಂಡು ಬರುತ್ತದೆ. ಏಕೆಂದರೆ ಕೆಲವರು ಸೇರಿಸಿರುವ ತ್ರಿಪದಿಗಳು ಸರ್ವಜ್ಞನ ಮನೋಧರ್ಮಕ್ಕೆ ವಿರುದ್ಧವಾದ ಅಭಿಪ್ರಾಯಗಳನ್ನು ಹೊಂದಿರುವುದು ಅನುಮಾನಕ್ಕೆ ಕಾರಣವಾದುವು.

ಕರೆಯದೆ ಬರುವವನ ಬರೆಯದೆ ಓದುವವನ
ಬಲಿಗಾಲಿನಲ್ಲಿ ನಡೆವವನ ಕರೆದಂತು
ಕೆರದಲ್ಲಿ ಹೊಡೆಯೆಂದ ಸರ್ವಜ್ಞ

ಎಂಬಂತಹ ತ್ರಿಪದಿಗಳು ಸಂಶೋಧಕರ ಸಂದೇಹಕ್ಕೆ ಕಾರಣವಾಗಿಬಿಟ್ಟವು. ವಿಚಾರವು ಸ್ಪಷ್ಟವಾಗಿದ್ದರೂ ಸರ್ವಜ್ಞನ ದಾಟಿ ವಿಶಿಷ್ಟವಾದುದು ಎಂಬುದನ್ನು ಪರಿಗಣಿಸಲಾಯಿತು. ಸ್ಥೂಲ ದೃಷ್ಟಿಗೆ ಇದು ಸರ್ವಜ್ಞನ ವಚನವೇ ಹೌದು ಎಂಬ ಭಾವನೆ ಮೂಡುತ್ತದೆ. ಸಂಶೋಧಕರು ಈ ತ್ರಿಪದಿಯನ್ನು ಮತ್ತು ಈ ತೆರನಾದ ತ್ರಿಪದಿಗಳನ್ನು ಬೇರ್ಪಡಿಸಿದ್ದಾರೆ ಇದರ ಬಗ್ಗೆ ಭಿನ್ನಾಭಿಪ್ರಾಯಗಳೂ ಇರುವುದನ್ನು ಕಾಣಬಹುದು.

2.5 ಸ್ವಪರೀಕ್ಷಾ ಪ್ರಶ್ನೆಗಳು

೧. ತ್ರಿಪದಿ ಎಂದರೇನು?

....

....

....

೨. ಮುಕ್ತಕಗಳು ಎಂದರೇನು?

....

....

....

೩. ತ್ರಿಪದಿಯು ದೊರೆತಿರುವ ಮೊದಲನೆಯ ಶಾಸನ ಯಾವುದು?

....

....

....

೪. ಬಾದಾಮಿ ಶಾಸನವು ರಚಿತವಾಗಿರುವ ಇಸವಿ ಯಾವುದು?

೫. ಪಂಪ ಕವಿಯ ಯಾವ ಕಾವ್ಯದಲ್ಲಿ ತ್ರಿಪದಿಗಳಿವೆ?

೬. ಜೀವಸಂಬೋಧನೆ ಕೃತಿಯನ್ನು ರಚಿಸಿದವರು ಯಾರು?

೭. ಅಕ್ಕಮಹಾದೇವಿಯು ತ್ರಿಪದಿಯಲ್ಲಿ ರಚಿಸಿರುವ ಕೃತಿ ಯಾವುದು?

೮. ಸರ್ವಜ್ಞ ಕವಿಯ ಕಾಲ ಯಾವುದು?

೯. ಸರ್ವಜ್ಞನು ರಚಿಸಿರುವ ತ್ರಿಪದಿಗಳನ್ನು ಏನೆಂದು ಕರೆಯುತ್ತಾರೆ?

೧೦. ತ್ರಿಪದಿಯಲ್ಲಿ ಮಹಾಕಾವ್ಯವನ್ನು ಬರೆದಿರುವ ಆಧುನಿಕ ಕವಿ ಯಾರು?

2.6 ಸಾರಾಂಶ

ತ್ರಿಪದಿಯಲ್ಲಿರುವ ಸಾಹಿತ್ಯ ವಿಚಾರವನ್ನು ಮತ್ತು ಸರ್ವಜ್ಞನ ಸಾಹಿತ್ಯ ವಿಚಾರವನ್ನು ಪರಿಚಯ ಮಾಡಿಕೊಂಡಿರಿ. ಒಟ್ಟಾರೆ ತ್ರಿಪದಿಗಳು ಮುಕ್ತಕಗಳೇ ಆಗಿವೆ. ಇಂದಿನ ಚುಟುಕುಗಳನ್ನು ಪತ್ರಿಕೆಗಳಲ್ಲಿ ನೋಡಿರುವಿರಿ. ಮುಕ್ತಕಗಳು ಎಂದರೆ ಒಂದು ವಿಷಯವನ್ನು ಕುರಿತು ತಿಳಿಸುವ ಮೂರು ನಾಲ್ಕು ಸಾಲಿನ ಪದ್ಯಗಳು ತ್ರಿಪದಿಗಳು ಮೂರು ಸಾಲಿನ ಪದ್ಯವಾಗಿದೆ. ಯಾವುದೇ ಪದ್ಯ ಮೂರು ಸಾಲುಗಳಿದ್ದರೆ ತ್ರಿಪದಿ ಎನ್ನಿಸಿಕೊಳ್ಳುವಿದಿಲ್ಲ. ಮೂರು ಸಾಲಿನ ಪದ್ಯವು ಕೆಲವು ಛಂದೋನಿಯಮಗಳನ್ನು ಅನುಸರಿಸಿದರೆ ಮಾತ್ರ ತ್ರಿಪದಿ ಎಂಬ ಹೆಸರನ್ನು ಪಡೆದುಕೊಳ್ಳುತ್ತದೆ. ಕನ್ನಡ ಕವಿಗಳು ತ್ರಿಪದಿ ಛಂದಸ್ಸನ್ನು ಬಳಸಿಕೊಂಡಿದ್ದಾರೆ. ಕೆಲವರು ತಮ್ಮ ಕಾವ್ಯಗಳಲ್ಲಿ ಸಂದರ್ಭೋಚಿತವಾಗಿ, ತ್ರಿಪದಿಗಳನ್ನು ಪ್ರಯೋಗಿಸಿದ್ದಾರೆ. ಕೆಲವರು ಚಿಕ್ಕ ಚಿಕ್ಕ ಕೃತಿಗಳನ್ನು ರಚಿಸಿದ್ದಾರೆ. ಅಂದರೆ ಅಂತಹ ಕೃತಿಗಳು ಕಥನ ಕಾವ್ಯ ಎಂಬ ಹೆಸರನ್ನು ಪಡೆದುಕೊಳ್ಳುತ್ತವೆ. ಜಯದೇವಿತಾಯಿ ಲಿಗಾಡೆಯವರು 'ಸಿದ್ಧರಾಮೇಶ್ವರ ಪುರಾಣ' ಎಂಬ ಮಹಾಕಾವ್ಯವನ್ನು ರಚಿಸಿದ್ದಾರೆ. ಅವರು ೨೦ನೇ ಶತಮಾನದ ಕವಿಗಳು. ಜನಪದ ಕವಿಗಳು ರಚಿಸಿರುವ ತ್ರಿಪದಿಗಳು ತುಂಬಾ ಪ್ರಾಚೀನವಾದುವು. ಅವುಗಳು ಬಾಯಿಯಿಂದ ಬಾಯಿಗೆ ಬಂದುವಾದ್ದರಿಂದ ಅವುಗಳ ರಚನೆಯ ಕಾಲವು ತಿಳಿಯುವುದಿಲ್ಲ. ಆದ್ದರಿಂದ ಅವುಗಳು ಎಷ್ಟು ಪ್ರಾಚೀನವಾದುವು ಎಂಬುದೂ ತಿಳಿಯಬರುವುದಿಲ್ಲ.

ಸರ್ವಜ್ಞ ಕವಿಯು ರಚಿಸಿರುವ ತ್ರಿಪದಿಗಳನ್ನು ಸರ್ವಜ್ಞನ ವಚನಗಳೆಂದು ಕರೆಯುತ್ತಾರೆ. ಬಹುಶಃ ಶಿವಶರಣರು ರಚಿಸಿದ ವಿಶಿಷ್ಟವಾದ ವಾಙ್ಮಯವನ್ನು ವಚನಗಳೆಂದು ಕರೆದುದು ಇದಕ್ಕೆ ಪ್ರೇರಣೆ ಆಗಿರಬಹುದು. ವಚನ ಎಂದರೆ 'ಹೇಳಿದ ಮಾತು' ಎಂದು ಅರ್ಥ. ಅದು ತ್ರಿಪದಿ ರೂಪದಲ್ಲಿ ಇಲ್ಲದೆ ಇದ್ದರೂ ಹಾಗೆಯೇ ಕರೆಯುತ್ತಿದ್ದರು ಎಂದು ನಂಬಬಹುದು. ಆತನು ಪ್ರಪಂಚದ ಎಲ್ಲಾ ವಿಚಾರಗಳನ್ನು ಕುರಿತು ಬರೆದಿದ್ದಾನೆ. ಜನಪದ ಸಾಹಿತ್ಯದಿಂದ ಸರ್ವಜ್ಞ ಕವಿಯು ಪ್ರೇರಣೆಯನ್ನು ಪಡೆದಿರಬಹುದು. ಮನುಷ್ಯರ ಲೋಪದೋಷಗಳನ್ನು ಕುರಿತು ಖಂಡಿಸಿ ಬರೆಯುವಾಗಲೂ ಆತನ ಮನಸ್ಸಿನಲ್ಲಿ ಸಹಾನುಭೂತಿಯೇ ಇರುತ್ತದೆ. ಆತನು ಜನರ ಆಚಾರ ವಿಚಾರಗಳನ್ನು ಸರಿಪಡಿಸುವ ಆಸೆಯನ್ನು ಹೊಂದಿದ್ದನು. ಆದ್ದರಿಂದ ಆತನನ್ನು ಮಾನವತಾವಾದಿ ಎಂದು ಕರೆಯುತ್ತಾರೆ.

2.8 ಸ್ವಪರೀಕ್ಷಾ ಪ್ರಶ್ನೆಗಳಿಗೆ ಉತ್ತರಗಳು

೧. ಸಾಮಾನ್ಯವಾಗಿ ತ್ರಿಪದಿ ಎಂದರೆ ಮೂರು ಸಾಲುಗಳಿರುವ ವೃತ್ತ. (ಪದ್ಯ)

೨. ಮುಕ್ತಕಗಳು ಎಂದರೆ ಬಿಡಿಬಿಡಿಯಾದ ಸ್ವತಂತ್ರವಾದ ವೃತ್ತಗಳು. (ಪದ್ಯ)

೩. ತ್ರಿಪದಿ ಇರುವ ಮೊದಲನೆಯ ಶಾಸನ ಬಾದಾಮಿ ಶಾಸನ.

೪. ಬಾದಾಮಿ ಶಾಸನದ ಕಾಲ ಕ್ರಿ.ಶ. ೭೦೦.

೫. ಪಂಪ ಕವಿಯ ಆದಿಪುರಾಣದಲ್ಲಿ ತ್ರಿಪದಿಗಳಿವೆ.

೬. 'ಜೀವಸಂಬೋಧನೆ' ಯನ್ನು ಬರೆದ ಕವಿಯ ಹೆಸರು ಬಂಧುವರ್ಮ.

೭. ಅಕ್ಕಮಹಾದೇವಿಯು ತ್ರಿಪದಿಯಲ್ಲಿ ರಚಿಸಿರುವ ಕೃತಿಯ ಹೆಸರು 'ಯೋಗಾಂಗ ತ್ರಿವಿಧಿ'.

೮. ಸರ್ವಜ್ಞ ಕವಿಯ ಕಾಲ ಸುಮಾರು ಕ್ರಿ.ಶ. ೧೬೦೦.

೯. ಸರ್ವಜ್ಞನ ತ್ರಿಪದಿಗಳನ್ನು ವಚನಗಳೆಂದು ಕರೆಯುತ್ತಾರೆ.

೧೦. ತ್ರಿಪದಿಯಲ್ಲಿ ಮಹಾಕಾವ್ಯವನ್ನು ರಚಿಸಿರುವವರು ೨೦ನೇ ಶತಮಾನಕ್ಕ ಸೇರಿರುವ ಜಯದೇವಿತಾಯಿ ಲಿಗಾಡೆಯವರು.

2.8 ಹೆಚ್ಚಿನ ಓದಿಗೆ

೧. ಕನ್ನಡ ಕೈಪಿಡಿ - ಮೈಸೂರು ವಿ.ವಿ.

೨. ತ್ರಿಪದಿ, ಅದರ ಸ್ವರೂಪ ಮತ್ತು ಇತಿಹಾಸ - ಎಂ. ಚಿದಾನಂದ ಮೂರ್ತಿ

೩. ವಚನಕಾರರು ಮತ್ತು ತ್ರಿಪದಿ - ಬಿ. ವಿವೇಕ ರೈ.

೪. ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ - ಬೆಂಗಳೂರು ವಿ.ವಿ.

ಟಿಪ್ಪಣಿಗಳು

ಸಂಚಿಕೆ - 3
ಕನ್ನಡ ಸಾಹಿತ್ಯ ಚರಿತ್ರೆ - ನಡುಗನ್ನಡ ಸಾಹಿತ್ಯ

ಘಟಕ - 3
ಸಾಂಗತ್ಯ : ಪ್ರಮುಖ ಕವಿ ಕೃತಿಗಳ ಪರಿಚಯ ದೇಪರಾಜ, ಶಿಶುಮಾಯಣ, ನಿಜಗುಣಶಿವಯೋಗಿ, ಕನಕದಾಸರು

ಪರಿವಿಡಿ :

3.0 ಘಟಕದ ಉದ್ದೇಶ

- ಈ ಘಟಕದಲ್ಲಿ ನೀವು ಸಾಂಗತ್ಯ ಎಂದರೇನು? ಎಂಬುದರ ಬಗ್ಗೆ ಪರಿಚಯ ಮಾಡಿಕೊಳ್ಳುವಿರಿ.
- ಕನ್ನಡ ಸಾಹಿತ್ಯದಲ್ಲಿ ಸಾಂಗತ್ಯ ಪ್ರಕಾರದಲ್ಲಿ ರಚಿತವಾಗಿರುವ ಪ್ರಮುಖ ಕವಿ ಕೃತಿಗಳ ಬಗ್ಗೆ ತಿಳಿದುಕೊಳ್ಳುವಿರಿ.
- ಕನ್ನಡ ಸಾಹಿತ್ಯದಲ್ಲಿ ರಚಿತವಾಗಿರುವ ಮೊತ್ತ ಮೊದಲ ಸಾಂಗತ್ಯ ಕೃತಿ ಯಾವುದೆಂಬುದನ್ನು ಮನಗಾಣುವಿರಿ.
- ಸಾಂಗತ್ಯ ಪ್ರಕಾರದ ಗುಣ ವೈಶಿಷ್ಟ್ಯಗಳನ್ನು ಗುರುತಿಸುವ ಸಾಮರ್ಥ್ಯ ಪಡೆಯುವಿರಿ.
- ದೇಪರಾಜ, ಶಿಶುಮಾಯಣ, ನಿಜಗುಣ ಶಿವಯೋಗಿ, ಕನಕದಾಸರು, ವಿಜಯಣ್ಣ, ಕಲ್ಯಾಣಕೀರ್ತಿ, ತೆರಕಣಾಂಬಿ ಬೊಮ್ಮರಸ ಈ ಕವಿಗಳ ಕಾಲ-ದೇಶ ಹಾಗೂ ಕೃತಿಗಳ ಬಗ್ಗೆ ಪರಿಜ್ಞಾನವನ್ನು ಹೊಂದುವಿರಿ.
- ಈ ಘಟಕದ ಅಧ್ಯಯನದಿಂದ ಸಾಂಗತ್ಯ ಪ್ರಕಾರದ ಇತಿಹಾಸದ ಬಗ್ಗೆ ಸ್ಪಷ್ಟವಾದ ಪರಿಜ್ಞಾನವನ್ನು ಹೊಂದುವ ಸಾಮರ್ಥ್ಯ ಪಡೆಯುವಿರಿ.

3.1 ಪೀಠಿಕೆ

ವಿದ್ಯಾರ್ಥಿ ಮಿತ್ರರೆ, ಇದುವರೆಗಿನ ಘಟಕಗಳ ನಿರಂತರ ಅಭ್ಯಾಸ ಕ್ರಮದಿಂದಾಗಿ ನೀವು ಸಾಹಿತ್ಯ ಚರಿತ್ರೆಯ ಪ್ರಮುಖ ಘಟ್ಟಗಳ ಕವಿಕೃತಿಗಳ ಪರಿಚಯವನ್ನು ಮಾಡಿಕೊಂಡಿದ್ದಿರಿ ಅಲ್ಲವೇ. ಕ್ರಿ.ಶ. ೪೫೦ರ ಹಲ್ಮಿಡಿಶಾಸನದಿಂದ ಪ್ರಾರಂಭಗೊಂಡ ಕನ್ನಡ ಸಾಹಿತ್ಯ ಕೃಷಿ ದಲಿತ ಬಂಡಾಯ ಸಾಹಿತ್ಯ ಪಂಥದವರೆಗೆ ನಿರಂತರವಾಗಿ ಸಾಗಿ ಹುಲುಸಾದ ಫಸಲನ್ನು ಕಂಡಿದೆ. ಈ ಅವಧಿಯಲ್ಲಿ ಕನ್ನಡ ಸಾಹಿತ್ಯ ಕಂಡಿರುವ ಮಜಲುಗಳು, ಘಟ್ಟಗಳು, ಹಲವಾರು. ಆದರೂ ಇಡೀ ಕನ್ನಡ ಸಾಹಿತ್ಯವನ್ನು ಪ್ರಾಚೀನ ಕನ್ನಡ, ಹೊಸಕನ್ನಡವೆಂದು ವಿಭಾಗಿಸಿ ನೋಡುವುದೇ ಪರಿಪಾಠ. ಕನ್ನಡ ಸಾಹಿತ್ಯದ ಆರಂಭ ಕಾಲದಿಂದ ಹೊಸಗನ್ನಡ ಕಾಲದವರೆಗಿನ ಅಂದರೆ ಮುದ್ದಣ (೧೮೬೯-೧೯೦೧) ನವರೆಗಿನ ಸಾಹಿತ್ಯವನ್ನು ಪ್ರಾಚೀನ ಕನ್ನಡ ಸಾಹಿತ್ಯವೆಂದೂ ೨೦ನೆಯ ಶತಮಾನದ ಕನ್ನಡ ಸಾಹಿತ್ಯವನ್ನು ಆಧುನಿಕ ಕನ್ನಡ ಅಥವಾ ಹೊಸಗನ್ನಡ ಸಾಹಿತ್ಯವೆಂದೂ ಹೇಳುವುದಿದೆ. ಆದ್ದರಿಂದ ಒಟ್ಟು ಸಾಹಿತ್ಯವನ್ನು ಪ್ರಾಚೀನ ಕನ್ನಡ ಸಾಹಿತ್ಯ ಆಧುನಿಕ ಕನ್ನಡ ಸಾಹಿತ್ಯವೆಂದೂ ಕರೆಯುತ್ತಿದ್ದೇವೆ. ಪ್ರಾಚಿನ ಕನ್ನಡ ಸಾಹಿತ್ಯವನ್ನು ಮತಧರ್ಮಗಳ ಪ್ರಭಾವ ಅಂದರೆ: ಜೈನಯುಗ, ವೀರಶೈವಯುಗ, ಬ್ರಾಹ್ಮಣಯುಗ ಎಂದೂ; ಭಾಷೆಯ ಸ್ಥಿತ್ಯಂತರ ಅಂದರೆ ಎಂದೂ; ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂದೂ; ಸಾಹಿತ್ಯ ಪ್ರಕಾರಗಳ ಪ್ರಾಧಾನ್ಯ ಅಂದರೆ: ಚಂಪೂ, ವಚನ, ರಗಳೆ, ಷಟ್ಪದಿ, ಕೀರ್ತನೆ, ಸಾಂಗತ್ಯ, ಇತ್ಯಾದಿ; ಯುಗ ಚೈತನ್ಯದ ಸ್ವರೂಪ ಅಂದರೆ, ಕ್ಷಾತ್ರಯುಗ, ಮತಪ್ರಚಾರಕ ಯುಗ, ಸಾರ್ವಜನಿಕ ಯುಗ, ಆಧುನಿಕ ಯುಗ ಎಂದೂ; ಯುಗನಿರ್ಮಾಪಕಪಿ ಅಂದರೆ: ಪಂಪಪೂರ್ವಯುಗ, ಪಂಪಯುಗ, ಬಸವಯುಗ, ಕುಮಾರವ್ಯಾಸ ಯುಗ, ಇತ್ಯಾದಿ ದೃಷ್ಟಿಗಳಿಂದ ವಿಭಜಿಸುವುದುಂಟು. ಆ ವಿಭಜನ ಕ್ರಮಗಳನ್ನು ಕುರಿತ ವಿವರಗಳಾಗಲಿ ವಿಮರ್ಶೆಯಾಗಲಿ ಇಲ್ಲಿ ಅಸಗತ್ಯ ಎನಿಸುತ್ತದೆ. ಇವುಗಳಲ್ಲಿ ಸಾಹಿತ್ಯ ಪ್ರಕಾರಗಳ ಪ್ರಾಧಾನ್ಯದಿಂದ ಸಾಹಿತ್ಯ ಚರಿತ್ರೆಯನ್ನು ವಿಭಾಗಿಸಿ ನೋಡುವ ಕ್ರಮ ಹೀಗಿದೆ: ಚಂಪೂ, ವಚನ, ರಗಳೆ, ಷಟ್ಪದಿ, ಕೀರ್ತನೆ, ಸಾಂಗತ್ಯ. ಈವರೆಗಿನ ಘಟಕಗಳ ಅಧ್ಯಯನದಿಂದ ನೀವು ಈಗಾಗಲೇ ಚಂಪೂ, ವಚನ, ರಗಳೆ, ಷಟ್ಪದಿ, ಕೀರ್ತನೆ ಈ ಪ್ರಕಾರಗಳಲ್ಲಿ ಕೃಷಿಮಾಡಿರುವ ಪ್ರಮುಖ ಕವಿಕೃತಿಗಳ ಪರಿಚಯವನ್ನು ಮಾಡಿಕೊಂಡಿದ್ದೀರಿ.

ಹಾಗೆಯೇ ಪ್ರಕೃತ ಘಟಕದಲ್ಲಿ ನೀವು ಸಾಂಗತ್ಯದ ಉಗಮ ಬೆಳವಣಿಗೆಯ ಜೊತೆಗೆ ಆ ಪ್ರಕಾರದಲ್ಲಿ ಕೃತಿ ರಚಿಸಿ ಪ್ರಸಿದ್ಧಿ ಪಡೆದಿರುವ ಕವಿಗಳ ಬಗ್ಗೆಯೂ ತಿಳಿದುಕೊಳ್ಳುವಿರಿ ಎಂಬುದನ್ನು ಈ ಸಂದರ್ಭದಲ್ಲಿ ನಿಮಗೆ ತಿಳಿಸಲಿಚ್ಛಿಸುತ್ತೇನೆ.

3.2 ಸಾಂಗತ್ಯ

ಸಾಂಗತ್ಯ ಎಂಬ ಹೆಸರನ್ನು ನೀವು ಕೇಳಿದ್ದೀರಾ ಅಲ್ಲವೇ. ಹಾಗಾದರೆ ಸಾಂಗತ್ಯ ಎಂದರೇನು?ಸಾಮಾನ್ಯವಾಗಿ ಸಾಂಗತ್ಯ ಎಂದರೆ ಒಂದು ಸಾಹಿತ್ಯದ ರೂಪ ಅಥವಾ ಛಂದೋಪ್ರಕಾರ. ಆದರೂ ಸಾಂಗತ್ಯ, ಚಂಪೂ, ವಚನ, ರಗಳೆ, ಷಟ್ಪದಿ, ಕೀರ್ತನೆ ಹಾಗೂ ತ್ರಿಪದಿ ಪ್ರಕಾರಗಳಂತೆ ತುಂಬಾ ಪ್ರಾಚೀನವಾದ ಛಂದೋಪ್ರಕಾರವೇನೂ ಅಲ್ಲ. ಹೇಗೆ ಚಂಪೂ, ರಗಳೆ, ಷಟ್ಪದಿಗಳು ಛಂದೋಪ್ರಕಾರಗಳು ಎನಿಸುತ್ತವೆಯೋ ಅಥವಾ ಸಾಹಿತ್ಯದ ರೂಪಗಳು ಎನಿಸುತ್ತವೆಯೋ ಹಾಗೆಯೇ ಸಾಂಗತ್ಯವು ಕೂಡ. ಒಂದು ಛಂದೋಪ್ರಕಾರ ಅಥವಾ ಸಾಹಿತ್ಯದ ರೂಪ ಎನಿಸುತ್ತದೆ. ಸಾಂಗತ್ಯದಲ್ಲಿ ಬರೆದ ಮೊದಲ ಕೃತಿಗಳನ್ನು ಕ್ರಿ.ಶ. ೧೬ ಶತಮಾನದಲ್ಲಿದ್ದನೆನ್ನಲಾದ ಶಿಶುಮಾಯಣನು ಬರೆದಿದ್ದನೆಂದು ಕವಿಚರಿತೆಕಾರರು ಊಹಿಸಿದ್ದರು. ಆದರೆ ಇತ್ತೀಚಿನ ಸಂಶೋಧನೆಗಳ ಪ್ರಕಾರ ದೇಪರಾಜ ಕವಿಯ 'ಸೊಬಗಿನ ಸೋನೆ' (ಕ್ರಿ.ಶ. ೧೪೧೦) ಕನ್ನಡದ ಮೊತ್ತಮೊದಲ ಸಾಂಗತ್ಯ ಕೃತಿಯೆಂದು ನಿರ್ಧಾರವಾಗಿದೆ.

3.2.0 ಸಾಂಗತ್ಯದ ಮೂಲ

ಸಾಂಗತ್ಯದ ಮೂಲದ ಬಗ್ಗೆ ವಿದ್ವಾಂಸರುಗಳಲ್ಲಿ ಏಕಾಭಿಪ್ರಾಯವಿಲ್ಲ. ಹಾಗಾಗಿ ಆ ವಿಚಾರವನ್ನು ತುಸು ಇಲ್ಲಿ ನಾವು ಪರಾಮರ್ಶಿಸುವುದು ಯುಕ್ತ. "ಗೀತಿಕೆಯ ಎರಡು ಪಾದಗಳ ಅಥವಾ ಪಿರಿಯಕ್ಕರದ ಎರಡು ಪಾದಗಳ ರೂಪಾಂತರವೇ ಸಾಂಗತ್ಯವಾಗಿ ತೋರುವುದು" ಎಂದು ಕನ್ನಡ ಕೈಪಿಡಿಕಾರರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಗೀತಿಕೆಯಿಂದ ಸಾಂಗತ್ಯ ಹುಟ್ಟಿತು ಎಂದು ಸಾಧಿಸಿ ತೋರಿಸುವುದು ಅಸಾಧುವಾದದ್ದು. ಛಂದೋಂಬುಧಿಯಲ್ಲಿ ೨,೬ ರ ಸ್ಥಾನಗಳಲ್ಲಿ ಬ್ರಹ್ಮಗಣ, ಉಳಿದೆಡೆಗೆ ಯಾವ ಗಣವೂ ಇರಬಹುದು. ಇದು ಗೀತಿಕೆಯ ಲಕ್ಷಣವೆಂದು ಕಾಣುತ್ತದೆ. ಲಕ್ಷ್ಯಪದ್ಯದ ಪ್ರಕಾರ ಗೀತಿಕೆಗೆ ನಾಲ್ಕು ಪಾದಗಳು ಪ್ರತಿ ಎರಡು ಪಾದಗಳಲ್ಲಿ ಏಳುಗಣಗಳು ಇರುತ್ತವೆ. ಪಿರಿಯಕ್ಕರದ ಒಂದು ಪಾದದಲ್ಲಿಯೇ ಏಳು ಗಣಗಳು ಇರುತ್ತವೆ. ಸಾಂಗತ್ಯದ ಎರಡು ಪಾದಗಳು ಕೂಡಿ ಏಳು ಗಣಗಳು ಬರುತ್ತವೆ. ಅಷ್ಟರಮಟ್ಟಿಗೆ ಗೀತಿಕೆ ಪಿರಿಯಕ್ಕರಗಳಿಗೂ ಸಾಂಗತ್ಯಕ್ಕೂ ಹೋಲಿಕೆ ಸರಿ. ಆದರೆ ಗೀತಿಕೆಯಲ್ಲಿ ೨,೬ರಲ್ಲಿ ಬ್ರಹ್ಮ, ಉಳಿದೆಡೆಗೆ ಬೇಕಾದ ಗಣ. ಪಿರಿಯಕ್ಕರದಲ್ಲಿ ಮೊದಲು ಬ್ರಹ್ಮಗಣ ಆಮೇಲೆ ಐದು ವಿಷ್ಣುಗಣ ಕೊನೆಗೆ ರುದ್ರಗಣ ಬರುವುದು ಸಾಮಾನ್ಯ. ಸಾಂಗತ್ಯದಲ್ಲಿ ಒಂದು ಮತ್ತು ಮೂರನೆ ಪಾದದಲ್ಲಿ ನಾಲ್ಕು ವಿಷ್ಣುಗಣಗಳು ಎರಡು ಮತ್ತು ನಾಲ್ಕನೆಯ ಪಾದದಲ್ಲಿ ಎರಡು ವಿಷ್ಣುಗಣಗಳು ಒಂದು ಬ್ರಹ್ಮಗಣ ಇರುತ್ತವೆ. ಹೀಗಿರುವಾಗ ಗೀತಿಕೆ ಅಥವಾ ಪಿರಿಯಕ್ಕರದ ರೂಪಾಂತರವೇ ಸಾಂಗತ್ಯವೆಂದು ಹೇಳಲು ಬರುವುದಿಲ್ಲ. ಹಾಗಾಗಿ ಏಳೆಯಿಂದ ತ್ರಿಪದಿ ತ್ರಿಪದಿಯಿಂದ ಸಾಂಗತ್ಯ ರೂಪಗೊಂಡಿದೆ ಎಂದು ಹೇಳಲು ಆಸ್ಪದವಿದೆ. ತ್ರಿಪದಿಯಲ್ಲಿ ಎಂದಿನಿಂದಲೂ ಹಾಡುವಾಗ ಇರುವ ಪುನರಾವರ್ತನೆ ಸಾಂಗತ್ಯದ ರಚನೆಗೆ ಸುಲಭವಾಗಿ ದಾರಿಮಾಡಿಕೊಟ್ಟಿರಬಹುದು. ತ್ರಿಪದಿಯ ೬ ಮತ್ತು ೧೦ನೇ ಸ್ಥಾನದಲ್ಲಿದ್ದ ಬ್ರಹ್ಮಗಣವು ಸಾಂಗತ್ಯದಲ್ಲಿ ೭ ಮತ್ತು ೧೪ನೆಯ ಸ್ಥಾನಗಳಿಗೆ ಅಂದರೆ ಎರಡು ಮತ್ತು ನಾಲ್ಕನೆಯ ಪಾದಾಂತ್ಯಕ್ಕೆ ಸರಿಯಿತು ಎನ್ನಬಹುದಾದರೂ ತ್ರಿಪದಿಯಿಂದ ಸಾಂಗತ್ಯ ಹುಟ್ಟಿತು ಎನ್ನುವುದರಲ್ಲಿ ಅನುಮಾನವಿಲ್ಲ. ತ್ರಿಪದಿ ಕಾಲಾನುಕ್ರಮದಲ್ಲಿ ಅಂಶಗಣದಿಂದ ಮಾತ್ರಾಗಣಕ್ಕೆ ತಿರುಗಿತು. ಆದರೆ ಸಾಂಗತ್ಯ ಮಾತ್ರ ಅಂಶಗಣಾತ್ಮಕವಾಗಿಯೇ ಇದ್ದು ಮೊದಲಿನ ಸ್ವಾಚ್ಛಂದವನ್ನು ಸರಾಗತೆಯನ್ನು ಉಳಿಸಿಕೊಂಡು ಬಂದಿದೆ.

3.2.1 ಸಾಂಗತ್ಯ ಎಂದರೇನು?

ಸಾಂಗತ್ಯ ಕನ್ನಡ ಮಟ್ಟುಗಳಲ್ಲೇ ಅನ್ವರ್ಥನಾಮವನ್ನು ಪಡೆದುಕೊಂಡ ಮಟ್ಟು. 'ಸಾಂಗತ್ಯ' ಎಂದರೆ ಸಂಗತಿಯಿಂದ ಕೂಡಿದ್ದು ಎಂದರ್ಥ. ಸಂಗತಿ ಎಂದರೆ 'ಮೇಳದೊಡನೆ ಸಾಗುವ ಗತಿ' ಎಂದರ್ಥ. 'ವಾದ್ಯ ವಿಶೇಷದೊಡನೆ ಸಾಗುವ ಹಾಡಾಗಿರುವುದರಿಂದಲೇ ಸಾಂಗತ್ಯವೆಂಬ ಹೆಸರನ್ನು ಪಡೆದಿರಬೇಕು' ಎಂಬುದಾಗಿ ಡಿ.ಎಸ್. ಕರ್ಕಿ ಅಭಿಪ್ರಾಯಪಟ್ಟಿದ್ದಾರೆ.

3.2.2 ಸಾಂಗತ್ಯ ಕೃತಿಗಳು

ಕನ್ನಡದಲ್ಲಿ ಸಾಂಗತ್ಯ ಕೃತಿಗಳು ಹನ್ನೆರಡನೆಯ ಶತಮಾನದ ತರುವಾಯ ರಚಿತವಾಗಿರುವಂತೆ ತೋರುತ್ತದೆ. ಛಂದಶ್ಶಾಸ್ತ್ರಕಾರರಾದ ೧ನೆಯ ನಾಗವರ್ಮ (೯೯೦), ಮತ್ತು ಜಯಕೀರ್ತಿ(೧೦೫೦) ಇವರ ಕೃತಿಗಳಲ್ಲಿ ಸಾಂಗತ್ಯದ ಪ್ರಸ್ತಾಪ ಕಂಡುಬರುವುದಿಲ್ಲ. ಬಸವಣ್ಣನವರ ಕಾಲಜ್ಞಾನದ ವಚನಗಳಲ್ಲಿ ಸಾಂಗತ್ಯದ ಬಳಕೆ ಆಗಿರುವುದು ಕಂಡು ಬರುತ್ತದೆ. ಕನ್ನಡದಲ್ಲಿ ಸಾಂಗತ್ಯ ಕೃತಿಗಳನ್ನು ರಚಿಸಿದ ಕವಿಗಳಲ್ಲಿ ದೇಪರಾಜ ಮತ್ತು ಶಿಶುಮಾಯಣ ಆದ್ಯರೆನಿಸಿದ್ದಾರೆ. ಕೆಲವು ಕಾಲ ಶಿಶುಮಾಯಣನ 'ತ್ರಿಪುರದಹನ ಸಾಂಗತ್ಯ' ಕೃತಿಯೇ ಕನ್ನಡದ ಮೊತ್ತಮೊದಲ ಸಾಂಗತ್ಯ ಕೃತಿ ಎಂದು ತಿಳಿಯಲಾಗಿತ್ತು. ಆದರೆ ಇತ್ತೀಚಿನ ಸಂಶೋಧನೆಯ ಪ್ರಕಾರ ದೇಪರಾಜನ 'ಸೊಬಗಿನ ಸೊನೆ' (೧೪೧೦) ಸಾಂಗತ್ಯದ ಮೊದಲಕೃತಿಯೆಂದು ತಿಳಿದುಬಂದಿರುತ್ತದೆ. ನಿಜಗುಣಶಿವಯೋಗಿ, ನಂಜುಂಡ, ಕನಕದಾಸ ರತ್ನಾಕರವರ್ಣಿ, ಸಂಚಿಯ ಹೊನ್ನಮ್ಮ ಮೊದಲಾದವರು ಸಾಂಗತ್ಯ ಪ್ರಕಾರದಲ್ಲಿ ಶ್ರೇಷ್ಠಕೃತಿಗಳನ್ನು ರಚಿಸಿರುವ ಕವಿಗಳಾಗಿದ್ದಾರೆ. ಸಾಂಗತ್ಯದಲ್ಲಿ ಕೃತಿ ರಚಿಸಿದ ಕವಿಗಳ ಸಂಖ್ಯೆ ಸುಮಾರು ಇಪ್ಪತ್ತೈದಕ್ಕೂ ಹೆಚ್ಚಿದೆ. ಅವರಲ್ಲಿ ಕೆಲವು ಪ್ರಮುಖ ಕವಿ ಕೃತಿಗಳನ್ನು ಒಂದು ಪಟ್ಟಿಯ ಮೂಲಕ ನಿಮಗೆ ಹೀಗೆ ಪರಿಚಯ ಮಾಡಲಿಚ್ಛಿಸುತ್ತೇನೆ.

ಕವಿಯ ಹೆಸರು	ಕೃತಿಯ ಹೆಸರು	ಕವಿಯ ಕಾಲ
೧. ದೇಪರಾಜ	ಸೊಬಗಿನ, ಸೊನೆ	೧೪೧೦
೨. ಶಿಶುಮಾಯಣ	ಅಂಜನಾ ಚರಿತೆ, ತ್ರಿಪುರದಹನ ಸಾಂಗತ್ಯ	೧೪೨೭
೩. ವಿಜಯಣ್ಣ	ದ್ವಾದಶಾನುಪ್ರೇಕ್ಷೆ	೧೪೩೦
೪. ಕಲ್ಯಾಣಕೀರ್ತಿ	ಕಾಮನ ಕಥೆ	೧೪೩೯
೫. ತೆರಕಣಾಂಬಿ ಬೊಮ್ಮರಸ	ಜೀವಂಧರ ಸಾಂಗತ್ಯ	೧೪೮೫
೬. ನಿಜಗುಣ ಶಿವಯೋಗಿ	ಪರಮಾನುಭವಬೋಧೆ	೧೫೦೦
೭ ಮೂರನೆಯ ಮಂಗರಸ	ನೇಮಿಜಿನೇಶ ಸಾಂಗತ್ಯ	೧೫೦೬
೮. ನಂಜುಂಡ	ಕುಮಾರರಾಮಸಾಂಗತ್ಯ	೧೫೨೫
೯. ಕನಕದಾಸ	ಮೋಹನ ತರಂಗಿಣಿ	೧೫೫೦
೧೦. ಸಾಳ್ವ	ವೈದ್ಯಸಾಂಗತ್ಯ	೧೫೫೦
೧೧. ರತ್ನಾಕರವರ್ಣಿ	ಭರತೇಶವೈಭವ	೧೫೬೦
೧೨. ವಾದಿರಾಜ	ವೈಕುಂಠವರ್ಣನೆ	೧೫೭೦
೧೩. ಪದ್ಮರಸ	ಶೃಂಗಾರ ಕಥೆ	೧೫೯೯
೧೪. ಗೋವಿಂದ ವೈದ್ಯ	ಕಂಠೀರವ ನರಸರಾಜವಿಜಯ	೧೬೫೦
೧೫. ಹೊನ್ನಮ್ಮ	ಹದಿಬದೆಯ ಧರ್ಮ	೧೭೦೦

3.3 ದೇಪರಾಜ (೧೪೧೦)

ದೇಪರಾಜ, ದೇಪಭೂಪ, ದೇಪನರನಾಥ, ದೇಪ ಎಂಬ ಹೆಸರುಗಳಿಂದ ಕರೆಯಲ್ಪಡುವ, ದೇಪರಾಜನು 'ಸೊಬಗಿನ ಸೊನೆ' ಎಂಬ ಸಾಂಗತ್ಯ ಗ್ರಂಥವನ್ನೂ, 'ಅಮರುಕ' ಎಂಬ ಷಟ್ಪದೀರೂಪದ ಶತಕ ಗ್ರಂಥವನ್ನೂ ರಚಿಸಿದ್ದಾನೆ. ಮೊದಲನೆಯದು ಮೂಲ ಕಥೆಗಳನ್ನನುಸರಿಸಿ ರಚಿತವಾದ ಸ್ವತಂತ್ರ ಕೃತಿಯಾದರೆ, ಎರಡನೆಯದು ಅಮರುಕ ಕವಿಯ ಸಂಸ್ಕೃತ 'ಅಮರುಕ' ಗ್ರಂಥದ ಕನ್ನಡ ಅನುವಾದವಾಗಿದೆ.

3.3.0 ಕಾಲ

ದೇಪರಾಜನ ಕಾಲ ಕ್ರಿ.ಶ. ೧೪೧೦ ಎಂದು ನಿರ್ಧರಿತವಾಗಿದೆ. ವಿಜಯನಗರದ ರಾಜರ ಮೂಲಪುರಷನಾದ ಸಂಗಮನಿಗೆ ಕಂಪ ಎಂಬ ಒಬ್ಬ ಮಗನಿದ್ದ. ಈ ಕಂಪನ ತಮ್ಮನಾದ ಬುಕ್ಕರಾಯನಿಗೂ (೧೩೫೩-೧೩೭೭) ಕಂಪ ಎಂಬ ಮಗನಿದ್ದನು. ಕವಿ ದೇಪರಾಜ ಈ ಎರಡನೆಯ ಕಂಪನ ಮಗ ಆದ್ದರಿಂದ ಇವನ ಕಾಲ ಸುಮಾರು ೧೪೧೦ ಎಂದು ತಿಳಿದು ಬರುತ್ತದೆ.

3.3.1 ಸೊಬಗಿನ ಸೊನೆ

ಸೊಬಗಿನ ಸೊನೆ ಇಪ್ಪತ್ತಾರು ಸಂಧಿಗಳಿಂದ ಕೂಡಿದ ದೊಡ್ಡ ಸಾಂಗತ್ಯ ಗ್ರಂಥ. ಇದರಲ್ಲಿ ಸುಮಾರು ಎರಡು ಸಾವಿರ ಪದ್ಯಗಳಿವೆ. ಕೆಲವು ಪ್ರತಿಗಳಲ್ಲಿ ಈ ಕಥೆ ಮುಂದುವರಿದು, ಇನ್ನೂ ಹೆಚ್ಚು ಪದ್ಯಗಳು ದೊರೆಯುತ್ತವೆ. ಇದರಲ್ಲಿ ಸುರಭಿವತಿ, ಕಂಜರೆ, ವಸಂತೆ, ಬರಗೆ ಪತ್ರಿಣಿ ಮೊದಲಾದ ಏಳು ಮಂದಿ ಸ್ತ್ರೀಯರ ಶೃಂಗಾರ ಕಥೆಗಳು ಚಿತ್ರಿತವಾಗಿವೆ. ಈ ಎಲ್ಲ ಕಥೆಗಳನ್ನೂ ಒಟ್ಟುಗೂಡಿಸಿರುವ ಒಬ್ಬನೇ ಕಥಾನಾಯಕನೆಂದರೆ ವಿಕ್ರಮ ಅಥವಾ ಜಸಗಂಪರಾಯ.

'ಸೊಬಗಿನ ಸೊನೆ' ಕೃತಿಯಲ್ಲಿ ಶೃಂಗಾರಪರವಾದ ಕಥೆಗಳು ಇವೆ. ಜಯಶೇಖರನ ಮಡದಿ ಸುರಭಿವತಿಯ ಕಥೆಯಲ್ಲದೆ ಕಂಜರೆ, ವಸಂತೆ, ಬರಣೆ, ಪತ್ರಿಣಿ, ಶೇಖರ, ವಿಕ್ರಮ, ಮಾಳವ ಮೊದಲಾದವರ ಕಥೆಗಳು ಈ ಕಾವ್ಯದಲ್ಲಿ ಮುಖ್ಯವಾದವು. ಸುರಭಿವತಿ ಒಮ್ಮೆ ಹಂಸಗಳು ಮರಿಗಳೊಡನೆ ನಲಿವುದನ್ನು ನೋಡಿ ಮಕ್ಕಳ ಮೋಹದಿಂದ ಬಿಳಿಸೀರೆಯುಟ್ಟು ಮಲಗುವ ಮನೆ ಸೇರಿ ಹಂಸೆದುಪ್ಪಳು ಹಾಸುಗೆಯಲ್ಲಿ ಮಲಗುವುದು, ರಾಜ ಬರುವುದು, ಮಧುರನೆಂಬ ಅರಗಿಳಿಯ ಚಾತುರ್ಯ, ರಾಜನ ತಪಸ್ಸು, ಗಿರಿಜೆಯ ಮುಡಿಯ ಮಂದಾರದರಳನ್ನು ಶಿವ ಕರುಣಿಸುವುದು, ರಾಣಿ ಗರ್ಭವತಿಯಾಗುವುದು, ವಿಕ್ರಮನೆಂಬ ಮಗನ ಜನನ ಇವೆಲ್ಲ ಹಳಸಿದ ಸಂಗತಿಗಳೆನಿಸಬಹುದು. ವಿಕ್ರಮನೂ ಮಾಳವನೂ ರಕ್ಕಸನಿಂದ ಕಂಜರೆಯನ್ನು ಬಿಡಿಸುವ ಭಾಗ, ಶಬರರಾಜ ಶಬರಿಯರ ಜೀವಂತ ಚಿತ್ರ, ಗೆಳತಿ ವಸಂತೆಗಾಗಿ ಸಖಿಲಲಿತೆ ತಪಸ್ಸಿಗೆ ತೊಡಗುವ ಹಾಗೂ ವಿಕ್ರಮನಿಗಾಗಿ ಮಧುರನು ಉರಿಗಿಚ್ಚು ಹೋಗುವ ತ್ಯಾಗದ ಚಿತ್ರಗಳು ಹೃದ್ಯವಾಗಿವೆ.

3.3.1.0 ಆಕರ

'ಸೊಬಗಿನ ಸೊನೆ' ಯಲ್ಲಿ ಬರುವ ಶೃಂಗಾರ ಕಥೆಗಳಿಗೆ ದೇಪರಾಜ ಯಾವ ಆಕರವನ್ನು ಆಶ್ರಯಿಸಿದ್ದಾನೆ ಎಂಬುದು ನಿಖರವಾಗಿ ತಿಳಿದುಬರುವುದಿಲ್ಲ. ಕಥಾಸರಿತ್ಸಾಗರ, ಬೃಹತ್ ಕಥಾಕೋಶ, ದಶಕುಮಾರ ಚರಿತೆ - ಮೊದಲಾದ ಕವೆಗಳಿಂದ ಕಥೆಗಳ ಭಾಗಗಳನ್ನೂ ಆಯ್ದುಕೊಂಡು ತನ್ನದೇ ಆದ ಒಂದು ವಿಶಿಷ್ಟಕೃತಿ ಕಟ್ಟಿದ್ದಾನೆ. ನೇಮಿಚಂದ್ರನ 'ಲೀಲಾವತಿ' ಕಾವ್ಯವನ್ನು ಗಮನಿಸಿದ್ದಾನೆ. ಸುರಭಿಶೇಖರನ ಕಥೆ ಹರಿಹರನ ರಗಳೆಗಳ ಕಥೆಗಳನ್ನು ನೆನಪಿಸುತ್ತದೆ. ರೋಷಭಾಸ್ಕರ ಮುನಿಯ ವನದ ಪ್ರಸಂಗದಲ್ಲಿ ರಾಘವಾಂಕನ 'ಹರಿಶ್ಚಂದ್ರ ಕಾವ್ಯದ' ಪ್ರಭಾವವಿದೆ. ಶೃಂಗಾರವರ್ಣನೆಯಲ್ಲಿ ನೇಮಿಚಂದ್ರನನ್ನು ಅನುಕರಿಸಿದ್ದಾನೆ.

3.3.1.1 ವಿಮರ್ಶೆ

ದೇಪರಾಜ ಉತ್ತಮ ವರ್ಗದ ಕವಿ. ಅವನಿಗೆ ವರ್ಣನೆಯಲ್ಲಿ ಆಸಕ್ತಿ. ಸಮದ ಹೇಳಿಕೆಗಳು ಹೇರಳವಾಗಿದ್ದೂ ಅಲ್ಲಲ್ಲಿ ಕಡಿಮೆ ಸೊಗಸು ಕಂಡುಬಂದರೂ ಕೆಲವೊಮ್ಮೆ ಅವನ ಅಸಾಧಾರಣ ಶಕ್ತಿ ವ್ಯಕ್ತವಾಗುತ್ತದೆ. ಅಧ್ಭುತಗಳು ಅಘಟನಾಘಟನೆಗಳೂ ಪವಾಡಗಳೂ ಇಲ್ಲಿ ಲೀಲಾಜಾಲವಾಗಿ ಜರುಗುತ್ತವೆ. ಪತ್ರಿಣಿಯ ಲಾವಣ್ಯವನ್ನು ವರ್ಣಿಸುವವಲ್ಲಿ ಕವಿ ತಾನೂ ಮೈಮೆರತು ಓದುಗರನ್ನೂ ಮೈಮರೆಸುತ್ತಾನೆ. ಸೊಬಗಿನ ಸೋನೆಯ ಕಥೆಯಲ್ಲಿ ಜೈನ ಪುರಾಣಗಳ ಭವಾಳಿಗಳ ಪ್ರಭಾವವಿದೆ. ಆದರೆ ನಿರೂಪಣೆಯಲ್ಲಿ ಅಲ್ಲಿನ ತೊಡಕು ಇಲ್ಲಿ ಇರುವುದಿಲ್ಲ. ಇಲ್ಲಿನ ನಡೆ ನೇರ ಹಾಗೂ ಸರಳ. ಕಾವ್ಯದಲ್ಲಿ ಅಧಿಕ ನಾಟಕೀಯ ಗುಣ ತುಂಬಿಕೊಂಡಿದೆ.

3.4 ಶಿಶುಮಾಯಣ (೧೪೨೭)

ದೇಪರಾಜನಂತೆ ಶಿಶುಮಾಯಣನು ಕನ್ನಡದ ಸಾಂಗತ್ಯದ ಆರಂಭಕಾರನೆಂಬ ಅಭಿಪ್ರಾಯವೂ ಇತ್ತು. ಆದರೆ ಕಾಲದ ದೃಷ್ಟಿಯಿಂದ ಗಮನಿಸಿದಾಗ ಶಿಶುಮಾಯಣನಿಗೆ ಈ ಪಟ್ಟ ಸಿಗುವ ಬದಲಿಗೆ ದೇಪರಾಜನಿಗೆ ಸಲ್ಲುತ್ತದೆ. ಶಿಶುಮಾಯಣ 'ಅಂಜನಾ ಚರಿತೆ' ಮತ್ತು 'ತ್ರಿಪುರದಹನ ಸಾಂಗತ್ಯ' ಎಂಬ ಹೆಸರಿನ ಎರಡು ಸಾಂಗತ್ಯ ಕೃತಿಗಳನ್ನು ಬರೆದಿದ್ದಾನೆ. ಅಂಜನಾಚರಿತೆ ಗಾತ್ರದಲ್ಲಿಯೂ ಗುಣದಲ್ಲಿಯೂ ದೊಡ್ಡಕಾವ್ಯ.

3.4.0 ಕಾಲ, ದೇಶ

ಶಿಶುಮಾಯಣನ ಕಾಲ ೧೪೨೭ ಎಂದು ನಿರ್ಧರಿತವಾಗಿದೆ. ಈತನ ವಂಶಜರು ಹೊಯ್ಸಳ ದೇಶಕ್ಕೆ ಸೇರಿದವರು ' ಕಾವೇರಿಯ ಕಾಲುವೆಯ ಬಳಿಯ ನಯನಾಪುರದವರು (ಕಣ್ಣಾನೂರು) ಇವನ ಪೂರ್ವಜರು ನೇಮಿತೀರ್ಥಂಕರ ಜಿನಾಲಯದಲ್ಲಿ ಪ್ರಸಿದ್ಧ ವರ್ತಕರಾಗಿದ್ದವರು. ತಂದೆ ಬೊಮ್ಮಸೆಟ್ಟಿ ತಾಯಿ ನೇಮಾಂಬಿಕೆ (ಇವರ ಮಗನೇ ನಮ್ಮ ಕವಿ ಶಿಶುಮಾಯಣ).

3.4.1. ಕೃತಿಗಳು

ಈಗಾಗಲೇ ನಿಮಗೆ ತಿಳಿಸಿರುವಂತೆ ಶಿಶುಮಾಯಣನು 'ತ್ರಿಪುರದಹನ ಸಾಂಗತ್ಯ' ಮತ್ತು 'ಅಂಜನಾ ಚರಿತೆ' ಈ ಎರಡು ಕೃತಿಗಳನ್ನು ರಚಿಸಿದ್ದಾನೆ.

3.4.1.0 ತ್ರಿಪುರದಹನ ಸಾಂಗತ್ಯ

ಶಿಶುಮಾಯಣನ ಮೊದಲ ಕೃತಿ ಇದು. ತ್ರಿಪುರದಹನವೆಂದ ಕೂಡಲೆ ನಮಗೆ ಶೈವ ಸಂಪ್ರದಾಯದ ಪುರಾಣ ಪ್ರಸಿದ್ಧ ಕಥೆ ಜ್ಞಾಪಕಕ್ಕೆ ಬರುತ್ತದೆ ಅಲ್ಲವೇ. ತಾರಕಾಸುರನ ಮೂವರು ಮಕ್ಕಳಾದ ತಾರಕ್ಷ (ಸುವರ್ಣಪುರ) ಕಮಲಾಕ್ಷ(ರಜತಪುರ)ವಿದ್ಯುನ್ಮಾಲಿ (ಆಯಸ = ಕಬ್ಬಿಣಪುರ) ಇವರನ್ನು ಮತ್ತು ಇವರ ಪುರಗಳನ್ನು ಪರಮೇಶ್ವರನು ಪುಷ್ಯನಕ್ಷತ್ರಯೋಗದಲ್ಲಿ ಒಂದೇ ಬಾಣದಿಂದ ಸುಟ್ಟು ಬಿಟ್ಟನೆಂಬ ಕಥೆಯಿದೆ. ಆದರೆ ಶಿಶುಮಾಯಣ ಈ ಕಥೆಯನ್ನು ಜೈನ ಧರ್ಮ ತತ್ವಕ್ಕೆ ಅನುಗುಣವಾಗಿ ಅನ್ವಯಿಸಿಕೊಂಡು ಅಥವಾ ಬದಲಾಯಿಸಿಕೊಂಡು ಕಾವ್ಯವನ್ನು ಕಟ್ಟಿದ್ದಾನೆ.

ಜನನ, ಜರಾ, ಮರಣ ಎಂಬ ಮೂರು ಊರುಗಳನ್ನೂ ಪುರಪರಮೇಶ ಆದೀಶ್ವರ ಸುಟ್ಟು ಉರುಬಿದ ಎಂಬ ಚಮತ್ಕಾರದ ಕಥೆಯನ್ನು ಇಲ್ಲಿ ಸ್ವಾರಸ್ಯಕರವಾಗಿ ಹೆಣೆದಿದ್ದಾನೆ.

ಅವಿನಯವೆಂಬ ವನ, ಜ್ಞಾನಾವರಣೀಯಾದಿ ಅಷ್ಟದುರ್ಗಗಳು, ಅತಿಕಾಂಕ್ಷೆಯೆಂಬ ಅಗಳು (ಕಂದರ) ಪರೀಕ್ಷಹವೆಂಬ ಕೊತ್ತಳ ಮೊದಲಾದುವನ್ನು ಜನನ, ಜರಾ, ಮರಣವೆಂಬ ಮೂರು ಪುರಗಳು ಬಳಸಿದ್ದುವು. ಮೋಹಸುರನೆಂಬ ಭೂಕಾಂತ ಇವನ್ನು ಪಾಲಿಸುತ್ತಿದ್ದ. ಮಾಯೆ ಅತನ ಪ್ರಾಣವಲ್ಲಭೆ, ನಾರಕ, ನರ, ಸುರ, ತಿರಿಯಂಚ (ತಿರ್ಯಕ್) ಎಂಬ ನಾಲ್ಕರು ಮಕ್ಕಳು. ಕ್ರೋಧ ಲೋಭ ಮಾಯ ಎಂಬ ಮಂತ್ರಿಗಳು. ಆದಿಜಿನೇಶ್ವರನು ಪದ್ಮಾಸನವೆಂಬ ಅಚ್ಚು, ಆರಾಧನೆಯೆಂಬ ಬಲುಗಾಲಿ, ಸಮ್ಯಕ್ತ್ವ ಕೀಲುಗಳು, ೮೪ಲಕ್ಷ ಗುಣಗಳ ನೇಣು, ಧ್ಯಾನದನೊಗ ಇವುಗಳಿಂದಾದ ರಥಕ್ಕೆ ಸದ್ವ್ರತವೆಂಬ ಉತ್ತಮ ವಾಜಿಗಳನ್ನು ಹೂಡಿದ. ದಶಧರ್ಮವೆಂಬ ಧನಸ್ಸು ಕ್ಷಮೆಯೆಂಬ ಖಡ್ಗ, ಸಂಯಮವೆಂಬ ಖೇಟಕ ಸಿದ್ಧಪಡಿಸಿ ಹೊರಟ. ಅಪರಾಜಿತವೆಂಬ ಬಾಣ ಬಿಟ್ಟು, ಮೋಹಾಸುರನನ್ನು ತಲ್ಲಣಗೊಳಿಸಿದ. ಪಾದಕ್ಕೆರಗಿದ ಮೋಹಾಸುರನಿಗೆ ಅಭಯಕೊಟ್ಟ. ಪುರಪರಮೇಶ್ವರ ಜನನ, ಜರಾ, ಮರಣವೆಂಬ ತ್ರಿಪುರ ಸುಟ್ಟು, ತ್ರಿಜಗಕೆ ಪತಿಯಾಗಿ ಮೋಕ್ಷ ಪಡೆದ. ಮುಕ್ತಿಭಾವತಿ ವಧುವಾದಳು. ಈ ಕಾವ್ಯದ ಹೊಸ ದೃಷ್ಟಿ ಮೆಚ್ಚತಕ್ಕದ್ದೆ. ಇದು ಪ್ರಜ್ಞಾವಂತ ಕವಿಯ ಕೈವಾಡ. ಇದರಲ್ಲಿ ಕಥೆ ಗೌಣವಾಗಿ ತೆಳುಹಂದರವಾಗಿ ಇದೆ. ಜೈನತತ್ತ್ವ ಅಡರಿದೆ.

3.4.1.1 ಅಂಜನಾ ಚರಿತೆ

ಇದು ಜೈನರಾಮಾಯಣ ಪರಂಪರೆಗೆ ಸೇರಿದ ಕಾವ್ಯ. ಅಂಜನಾ ದೇವಿ ಮಹೇಂದ್ರಪುರದ ದೊರೆ ಮಹೇಂದ್ರನ ಮಗಳು. ಪವನಂಜಯನ ಮಡದಿ. ಹನುಮಂತನ ತಾಯಿ. ಜೈನಪುರಾಣಗಳಲ್ಲಿ ಬರುವ ೨೪ಜನ ಕಾಮದೇವರಲ್ಲಿ ಹನುಮಂತ (ಅಣುವ) ನೂ ಒಬ್ಬ. ಅವನ ತಾಯಿ ಅಂಜನಾದೇವಿಯ ಕಥೆ ಜೈನವಾಙ್ಮಯದಲ್ಲಿ ಬಹು ಪ್ರಚುರವಾಗಿದೆ. ಹಸ್ತಿಮಲ್ಲನೆಂಬ ಕವಿ (೧೩ನೆಯ ಶತಮಾನ) 'ಅಂಜನಾ-ಪವನಂಜಯ' ನಾಟಕ ಬರೆದಿದ್ದಾನೆ. ಕವಿ ಶಿಶುಮಾಯಣನಿಗೆ ರವಿಷೇಣನ ಪದ್ಮಪುರಾಣವೇ ನೇರ ಆಕರ ಗ್ರಂಥವಾಗಿದೆ. ಇದರಲ್ಲಿ ಅಂಜನೆಯೇ ಕೇಂದ್ರ ಬಿಂದು. ಆಕೆಯ ಬದುಕಿನ ಏರಿಳಿತಗಳನ್ನೂ, ಕಷ್ಟದ ಪರೀಕ್ಷೆಯ ದಿನಗಳನ್ನೂ ಸಹನಶೀಲತೆಯನ್ನೂ ಕವಿ ಮನೋಜ್ಞವಾಗಿ ಚಿತ್ರಿಸಿದ್ದಾನೆ. ಹನುಮಂತನು ಪಂಚಾಣುವ್ರತ ಕೈಗೊಂಡು ತಪದಿಂದ ಪಂಚೆಂದ್ರಿಯಗಳನ್ನು ನಿಗ್ರಹಿಸಿ ಮುಕ್ತಿಗೆ ಪಾತ್ರನಾದ ಚಿತ್ರಣದಿಂದ ಕಾವ್ಯ ಮುಗಿದಿದೆ. ಅಂಜನೆಯಂತೆ ಪವನಂಜಯ, ಹನುಮಂತ ಮೊದಲಾದ ಪ್ರಮುಖ ಪಾತ್ರಗಳೂ ಸಜೀವವಾಗಿ ಮೂಡಿಬಂದಿವೆ. ಅಂಜನಾಚರಿತೆ ಕಥೆ ಮತ್ತು ವರ್ಣನಾ ದೃಷ್ಟಿಯಿಂದ ಸೊಗಸಾದ ಕಾವ್ಯ. ಯಾವುದೇ ಕವಿಗೆ ಗೌರವ ತಂದುಕೊಡುವ ಗಣ್ಯ ಕೃತಿ.

3.5 ನಿಜಗುಣ ಶಿವಯೋಗಿ

ಬಸವಣ್ಣನವರಿಗಿಂತ ಸ್ವಲ್ಪ ಹಿಂದೆ ನಿಜಗುಣದೇವ ಎಂಬ ವಚನಕಾರ ಇದ್ದ. ನಿಜಗುಣಶಿವಯೋಗಿ ಎಂಬ ಪರ್ಯಾಯ ನಾಮವೂ ಇವನಿಗಿರುವುದು ಕಂಡು ಬರುತ್ತದೆ. ಜೊತೆಗೆ ನಿಜಗುಣಶಿವಯೋಗಿ ಎಂಬ ಹೆಸರಿನವನೇ ಇನ್ನೊಬ್ಬ ಕವಿ ಕನ್ನಡದಲ್ಲಿ ಇದ್ದಾನೆ. ಈತನ ಕಾಲ ೧೬ನೇ ಶತಮಾನ ಎಂದು ವಿದ್ವಾಂಸರು ವಾದಿಸಿದ್ದಾರೆ. ಇಲ್ಲಿ ನಾವು ಅಧ್ಯಯನ ಮಾಡುತ್ತಿರುವ ನಿಜಗುಣಶಿವಯೋಗಿ ಈ ಇಬ್ಬರಿಗಿಂತ ಬೇರೆಯಾದವನು. ಈ ಅಂಶ ನಿಮಗೆ ಜ್ಞಾಪಕದಲ್ಲಿರಲಿ.

3.5.0 ಕಾಲ

ನಿಜಗುಣಶಿವಯೋಗಿಯ ಕಾಲದ ಬಗ್ಗೆ ಸಾಕಷ್ಟು ವಾದವಿವಾದಗಳಿವೆ. ಕವಿಚರಿತೆಯಲ್ಲಿ ಈತನ ಕಾಲ ಸುಮಾರು ೧೫೦೦ ಎಂದು ಹೇಳಲಾಗಿದೆ. ೧೭ನೇ ಶತಮಾನದ ಮಧ್ಯಾವಧಿಗೆ ಸೇರಿದ ಷಡಕ್ಷರಿ ತನ್ನ 'ರಾಜಶೇಖರ ವಿಳಾಸ' ದಲ್ಲಿ ನಿಜಗುಣಶಿವಯೋಗಿಯ ಉಲ್ಲೇಖ ಮಾಡಿದ್ದಾನೆ. ಇದರಿಂದ ಈತ ೧೭ನೆಯ ಶತಮಾನಕ್ಕಿಂತ ಹಿಂದಿನವನೆಂಬುದು ತಿಳಿಯುತ್ತದೆ. ೧೬೫೦ ರವನು ಎನ್ನಲಾದ ಅಮಲಾನಂದನ

ಉಲ್ಲೇಖ ನಿಜಗುಣನ 'ವಿವೇಕಚಿಂತಾಮಣಿ'ಯಲ್ಲಿದೆ. ಆದರೆ ಅದರ ಪ್ರಾಚೀನ ಹಸ್ತಪ್ರತಿಗಳಲ್ಲಿ ಉಲ್ಲೇಖ ಇಲ್ಲದಿರುವುದರಿಂದ ಇದು ಸೇರಿಸಿದ್ದಿರಬೇಕೆಂಬುದು ಬಿ. ಶಿವಮೂರ್ತಿಶಾಸ್ತ್ರಿಗಳ ಅಭಿಪ್ರಾಯ. ವಿದ್ಯಾರಣ್ಯರ ಪಂಚದಶಿ ಮತ್ತು ಜೀವನ್ಮುಕ್ತಿ ವಿವೇಕ ಗ್ರಂಥಗಳನ್ನು ನಿಜಗುಣಶಿವಯೋಗಿಗಳು ನೋಡಿದ್ದರು ಎಂಬುವರಲ್ಲಿ ಸಂದೇಹವಿಲ್ಲ ಎಂದು ಬೇಂದ್ರೆಯವರು ಅಭಿಪ್ರಾಯಪಟ್ಟಿದ್ದಾರೆ. ಇದು ದಿಟವಾದರೆ ನಿಜಗುಣಶಿವಯೋಗಿ ೧೫ನೆಯ ಶತಮಾನದ ತರುವಾಯದವನಾಗುತ್ತಾನೆ ಎಂದು ರಂ.ಶ್ರೀ ಮುಗಳಿ ಅವರು ಅಭಿಪ್ರಾಯಪಡುತ್ತಾರೆ. ಈ ಅಂಶಗಳನ್ನು ಅಧರಿಸಿ ನಿಜಗುಣಶಿವಯೋಗಿ ೧೫ ನೆಯ ಶತಮಾನದ ಈಚೆಗೆ ೧೭ನೆಯ ಶತಮಾನದ ಆಚೆಗೆ ಒಳಪಡುವ ಅವಧಿಯಲ್ಲಿ ಬಂದುಹೋದವನೆಂದು ತಿಳಿಯಬಹುದಾಗಿದೆ.

3.5.1 ದೇಶ

ನಿಜಗುಣ, ನಿಜಗುಣಾರಾಧ್ಯ, ನಿಜಗುಣಯೋಗಿ, ನಿಜಗುಣ ದೇಶಿಕೇಂದ್ರ, ನಿಜಗುಣಯತಿ ಇವು ನಿಜಗುಣ ಶಿವಯೋಗಿಯ ಪರ್ಯಾಯನಾಮಗಳು. ಈತನ ಸ್ಥಳ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಚಿಲುಕವಾಡಿ ಗ್ರಾಮ. ಇಲ್ಲಿನ ಶಂಭುಲಿಂಗನ ಬೆಟ್ಟವನ್ನು ತನ್ನ ಸಾಧನೆಯ ಕ್ಷೇತ್ರವನ್ನಾಗಿ ಮಾಡಿಕೊಂಡು ಇಲ್ಲಿಯೇ ತನ್ನೆಲ್ಲ ಕೃತಿಗಳನ್ನು ರಚನೆ ಮಾಡಿದಂತೆ ತೋರುತ್ತದೆ. ಈತ ಮೊದಲು ಸಂಸಾರಿಯಾಗಿದ್ದು, ಚಿಲುಕವಾಡಿಯ ಸುತ್ತಮುತ್ತದ ಪ್ರದೇಶದ ಅರಸನಾಗಿದ್ದನೆಂದೂ, ಮುಂದೆ ಸಂಸಾರದಲ್ಲಿ ವಿರಕ್ತಿ ಉಂಟಾಗಿ ಸನ್ಯಾಸ ಸ್ವೀಕರಿಸದನೆಂದೂ ತಿಳಿದು ಬರುತ್ತದೆ. ಶಂಭುಲಿಂಗನ ಬೆಟ್ಟದ ಗವಿಯಲ್ಲಿ ತಪಸ್ಸು ಮಾಡಿ ಅಪಾರವಾದ ಜ್ಞಾನವನ್ನು ಸಿದ್ಧಿಸಿಕೊಂಡನೆಂದು ಹೇಳಲಾಗುತ್ತದೆ. ತನ್ನ ವಂಶ ವಿವರ, ಗುರುಪರಂಪರೆ ಮುಂತಾದ ವೈಯಕ್ತಿಕ ವಿಚಾರಗಳ ಬಗೆಗೆ ಈತ ಏನನ್ನೂ ಹೇಳಿಕೊಳ್ಳದೇ ಇರುವುದರಿಂದ ಈ ಬಗೆಗೆ ಖಚಿತವಾದ ತಿಳಿವಳಿಕೆಗಳು ಮೂಡಿಲ್ಲ. ಷಡಕ್ಷರಿ ಈತನನ್ನು ಸ್ಮರಿಸಿರುವುದರಿಂದಲೂ, ಅರುವತ್ತಮೂರು ಪುರಾತನ ಸ್ತೋತ್ರ ಗೀತೆಗಳನ್ನು ಈತ ರಚಿಸಿರುವುದರಿಂದಲೂ ಈತನ ಕೃತಿಗಳಲ್ಲಿ ವೀರಶೈವರ ಸರ್ವೋತ್ತಮತ್ವದ ಪ್ರತಿಪಾದನೆ, ಶಿವಯೋಗ ಪಕ್ಷಪಾತ, ಶಿವಾಧಿತ್ಯದ ವರ್ಣನೆಗಳಿರುವುದರಿಂದಲೂ ಈತ ವೀರಶೈವನೆಂದು ನಿರ್ಣಯಿಸಲಾಗಿದೆ.

3.5.2 ಕೃತಿಗಳು

ವಿವೇಕಚಿಂತಾಮಣಿ, ಕೈವಲ್ಯಪದ್ಧತಿ, ಪುರಾತನರ ತ್ರಿವಿದಿ, ಅನುಭವಸಾರ, ಪರಮಾರ್ಥಪ್ರಕಾಶಿಕೆ, ಪರಮಾನುಭವಬೋಧೆ, ಪರಮಾರ್ಥಗೀತೆ ಇವು ನಿಜಗುಣಶಿವಯೋಗಿ ಕನ್ನಡದಲ್ಲಿ ರಚನೆ ಮಾಡಿದ ಕೃತಿಗಳು. ಇವುಗಳಲ್ಲಿ ಮೊದಲ ಮೂರು ಸ್ವತಂತ್ರ ಗ್ರಂಥಗಳು. ಉಳಿದವು ಅನುವಾದಗಳು. ಇವುಗಳಲ್ಲದೆ ಸಂಸ್ಕೃತದಲ್ಲಿ ಆತ್ಮತರ್ಕಚಿಂತಾಮಣಿ ಮತ್ತು ದರ್ಶನಸಾರ ಎಂಬ ಗ್ರಂಥಗಳನ್ನು ಸಂಸ್ಕೃತದಲ್ಲಿ ಬರೆದಂತೆ ಪ್ರತೀತಿ ಇದೆ. ಆದರೆ ಅವು ಉಪಲಬ್ಧವಿಲ್ಲ. ದೊರಕಿರುವ ಗ್ರಂಥಗಳಲ್ಲಿ ಶಂಭುಲಿಂಗ ಎಂಬ ಅಂಕಿತವಿದೆ.

3.5.2.0 ಪರಮಾನುಭವಬೋಧೆ

'ಪರಮಾನುಭವಬೋಧೆ'ಯು ಸಾಂಗತ್ಯದಲ್ಲಿ ರಚನೆಯಾಗಿರುವ ಒಂದು ವೇದಾಂತ ಗ್ರಂಥ. ಇದರಲ್ಲಿ ೬ ಸಂಧಿಗಳು, ೧೨೨ ಸೂತ್ರಗಳು, ೯೮೫ ಪದ್ಯಗಳು ಇವೆ. ಯಾಜ್ಞವಲ್ಕ್ಯ ಮತ್ತು ಮೈತ್ರೇಯಿಯವರ ಸಂವಾದ ರೂಪದಲ್ಲಿ ಅದ್ವೈತ ವೇದಾಂತವನ್ನು ಸರಳವಾಗಿ ನಿರೂಪಿಸುವ ಅಮೂಲ್ಯ ಕೃತಿ ಇದು. ಪತಿ ಪತ್ನಿಯರ ಆತ್ಮೀಯ ಪರಿಸರದಲ್ಲಿ ಆಧ್ಯಾತ್ಮಕ್ಕೆ ಸಂಬಂಧಿಸಿದ ತನ್ನ ಮನದಾಳದ ಸಂದೇಹಗಳನ್ನು ಮೈತ್ರೇಯಿ ತನ್ನ ಪತಿಯ ಮುಂದಿಡುವಳು. ಅಷ್ಟೇ ಆತ್ಮೀಯವಾಗಿ ಪತಿ ಆ ಸಂದೇಹಗಳನ್ನು ಪರಿಹರಿಸುವನು. ಅಧ್ಯಾತ್ಮದಂತಹ ನೀರಸ ಹಾಗೂ ಕ್ಲಿಷ್ಟ ವಿಷಯವನ್ನು ಅತ್ಯಂತ ಸರಳವಾಗಿ ಹಿತಮಿತವಾಗಿ ಓರ್ವ ಅನುಭವಿ ಅಧ್ಯಾಪಕನು ತನ್ನ ಶಿಷ್ಯರಿಗೆ ಬೋಧಿಸುವ ರೀತಿಯಲ್ಲಿ ಯಾಜ್ಞವಲ್ಕ್ಯ ಮತ್ತು ಮೈತ್ರೇಯಿಯರ ವ್ಯಾಜ್ಯದಿಂದ ನಿರೂಪಿಸಲಾಗಿದೆ. ಇಲ್ಲಿ ನಿಜಗುಣ

ಲಕ್ಷ್ಯದಲ್ಲಿರಿಸಿಕೊಂಡಿರುವುದು ಮುಮುಕ್ಷುಗಳನ್ನಷ್ಟೇ ಅಲ್ಲ, ಯೋಗಿಜನರನ್ನೂ ಕೂಡ. ಇಲ್ಲಿ ಆತ ಉಪನಿಷತ್ತುಗಳ ಆತ್ಮದರ್ಶನ ವಿದ್ಯೆಯನ್ನು ಸಂಗ್ರಹಿಸಿ ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ಕನ್ನಡ ಸಾಂಗತ್ಯ ಪದ್ಯಗಳಲ್ಲಿ ಹೇಳಿದ್ದಾನೆ.

3.5.3 ಇತರೆ ಕೃತಿಗಳು

ಈ ಕವಿ ಸಾಂಗತ್ಯ ಕೃತಿಗಳನ್ನು ಇಲ್ಲಿ ಮುಖ್ಯವಾಗಿ ಗಮನಿಸಲಾಗುತ್ತಿದ್ದರೂ, ಈ ಕವಿ ಬರೆದಿರುವ ಇನ್ನಿತರ ಕೃತಿಗಳ ಬಗ್ಗೆಯೂ ವಿವರವಾಗಿ ತಿಳಿದುಕೊಳ್ಳುವುದು ಅವಶ್ಯಕವೆಂದು ಭಾವಿಸಿ, ನಿಜಗುಣಶಿವಯೋಗಿಗಳ ಇನ್ನಿತರ ಕೃತಿಗಳನ್ನು ವಿವರವಾಗಿ ನಿಮ್ಮ ಗಮನಕ್ಕೆ ತರಬಯಸುತ್ತಿದ್ದನೆ.

3.5.3.0 ವಿವೇಕಾ ಚಿಂತಾಮಣಿ

ನಿಜಗುಣ ಶಿವಯೋಗಿಯ ವಿವೇಕಾಚಿಂತಾಮಣಿಯು ಹತ್ತು ಪರಿಚ್ಛೇದಗಳಲ್ಲಿ ವಿವಿಧ ವಿಷಯಗಳನ್ನೊಳಗೊಂಡ ಒಂದು ಜನಪ್ರಿಯ ವಿಶ್ವಕೋಶವಾಗಿದೆ. ಗದ್ಯದಲ್ಲಿ ನಿರೂಪಿತವಾಗಿರುವ ಈ ಕೃತಿ ನಿಜಗುಣನ ಗ್ರಂಥ ಸಮುದಾಯಕ್ಕೆ ಒಂದು ಪ್ರವೇಶಿಕೆಯ ಕೈಪಿಡಿಯಾಗಿದೆ. ಇದರಲ್ಲಿರುವ ಭುವನಕ್ಲೇಶ ಸಾಹಿತ್ಯ, ಸಂಗೀತ, ಶಕುನ, ಜ್ಯೋತಿಷ್ಯ ಮುಂತಾದ ಹಲವು ವಿಷಯಗಳು ಈ ಕೃತಿಗೆ ವಿಶ್ವಕೋಶದ ಸ್ವರೂಪವನ್ನು ಕೊಟ್ಟಿವೆ. ಆದರೂ ಇಲ್ಲಿ ನಿಜಗುಣನಿಗೆ ಮುಖ್ಯವಾಗಿರುವುದು ವೇದಾಂತದ ಮತ್ತು ಶುದ್ಧಶೈವಧರ್ಮದ ನಿರೂಪಣೆ ಎಂಬುದು ಕೃತಿಯನ್ನು ಸಮಗ್ರವಾಗಿ ಅವಲೋಕಿಸಿದಾಗ ತಿಳಿಯುತ್ತದೆ.

ಮೊದಲನೇ ಪರಿಚ್ಛೇದದಲ್ಲಿ ವೇದಾಂತವನ್ನೂ, ಎರಡನೇ ಪರಿಚ್ಛೇದದಲ್ಲಿ ಶಿವಾಗಮ ಸಿದ್ಧಾಂತವನ್ನೂ ನಿರೂಪಿಸಿ, ಎರಡನೇ ಪರಿಚ್ಛೇದದ ಕೊನೆಯಲ್ಲಿ ವೇದಾಂತ ಸಿದ್ಧಾಂತಗಳೆರಡರ ಸಮನ್ವಯರೂಪದ ಷಟ್‌ಸ್ಥಲ ಸಹಿತ ವೀರಶೈವವನ್ನು ವಿವರಿಸಿದೆ. ಮೂರನೇ ಪರಿಚ್ಛೇದದ ಮೊದಲಲ್ಲಿ ಷಟ್‌ತ್ರಿಂಶತ್ ತತ್ವಗಳ ಮತ್ತು ಭೂತ ಪಂಚೀಕರಣದ ವಿಚಾರವನ್ನು ಸಂಗ್ರಹವಾಗಿ ಹೇಳಿ, ಉಳಿದಂತೆ ಆರನೇ ಪರಿಚ್ಛೇದದವರೆಗೆ ಬ್ರಹ್ಮಾಂಡದ ವಿವರವಾದ ವರ್ಣನೆಯನ್ನು ಮಾಡಲಾಗಿದೆ. ಆ ಅವಧಿಯಲ್ಲೇ ನಾಲ್ಕನೇ ಪರಿಚ್ಛೇದದಲ್ಲಿ ಭರತಖಂಡದ ವರ್ಣನೆಯನ್ನು ಮಾಡುತ್ತ ಸಂಗೀತ ಮತ್ತು ಸಾಹಿತ್ಯವನ್ನು ಕುರಿತಂತೆ ಕೆಲವು ಶಾಸ್ತ್ರೀಯ ವಿಚಾರಗಳನ್ನು ಕೊಟ್ಟಿದೆ. ಏಳನೇ ಪರಿಚ್ಛೇದದಲ್ಲಿ ಬ್ರಹ್ಮಾಂಡದಿಂದ ಹೊರಗೆ ಪೃಥ್ವಿ ಮೊದಲಾದ ಪಂಚಭೂತಗಳಿಂದ ಹಿಡಿದು ಮಾಯಾ ತತ್ವದವರೆಗಿನ ರುದ್ರಪ್ರಪಂಚದ ವಿವರವಿದೆ. ಆಕಾಶ, ಅಹಂಕಾರ, ಬುದ್ಧಿ, ಗುಣ, ಪ್ರಕೃತಿ, ಪುರುಷ, ರಾಗ, ಅವಿದ್ಯೆ, ನಿಯತಿ, ಕಲೆ, ಕಾಲ, ಮಾಯೆ ಎಂಬ ತತ್ವ ವಿಚಾರವೂ ಇದೆ. ಎಂಟನೇ ಪರಿಚ್ಛೇದದಲ್ಲಿ ಮಾಯಾ ತತ್ವದಿಂದ ಹಿಡಿದು ಪರಶಿವತತ್ವಾತೀತದವರೆಗಿನ ತತ್ವಗಳನ್ನು ಹೇಳಿದೆ. ಷಟ್‌ತ್ರಿಂಶತ್ ತತ್ವಗಳ ಸಂಪೂರ್ಣ ವಿವರವಿರುವುದು ಈ ಏಳು ಮತ್ತು ಎಂಟನೇ ಪರಿಚ್ಛೇದಗಳಲ್ಲೇ. ಉಪಸಂಹಾರ ರೂಪವಾಗಿ ಒಂಬತ್ತನೇ ಪರಿಚ್ಛೇದದಲ್ಲಿ ಜೀವರ ಇಹ ಪರಗತಿಯನ್ನೂ ಕಟ್ಟಕಡೆಯ ಹತ್ತನೇ ಪರಿಚ್ಛೇದದಲ್ಲಿ ಜೀವರ ಕಾಲಗತಿಯನ್ನು ಹೇಳಿದೆ. ಹೀಗೆ ವಿವೇಕ ಚಿಂತಾಮಣಿ ಇಡಿಯಾಗಿ ಮಾನವನ ಇಹ ಪರವನ್ನು ಕುರಿತುದೇ ಆಗಿದೆ.

ಇದನ್ನೆಲ್ಲ ವೇದಪುರಾಣಶಾಸ್ತ್ರ ಸಮ್ಮತವಾಗಿ ನಿರೂಪಿಸಿರುವಂತೆ ನಿಜಗುಣನು ಹೇಳಿಕೊಂಡಿದ್ದಾನೆ. ಪರಮೇಶ್ವರನಿಂದ ಪ್ರಣೀತವಾದ ಆಗಮ, ಆಮ್ನಾಯಗಳೆರಡನ್ನೂ ಆಧಾರವಾಗಿ ಉಳ್ಳ ಸ್ಮೃತಿ ಇತಿಹಾಸ ಪುರಾಣಗಳಿಗೆ ಅನುಸಾರವಾಗಿ ಅನುಭಾವಿಗಳು ಹೌದೆನ್ನುವಂತೆ, ಸ್ವಕಪೋಲ ಕಲ್ಪಿತವಾದುದು. ಯಾವುದೂ ಇಲ್ಲದಂತೆ ಸತ್ಯ ಸಂಗತಿಗಳನ್ನೇ ಇಲ್ಲಿ ಹೇಳಿರುವುದಾಗಿ ನಿಜಗುಣನೇ ಸ್ಪಷ್ಟಪಡಿಸಿದ್ದಾನೆ.

3.5.3.1 ಕೈವಲ್ಯ ಪದ್ಧತಿ

ಕೈವಲ್ಯ ಪದ್ಧತಿ ಅನುಭಾವಗೀತೆಗಳ ಸಂಕಲನ. ಹಾಡುಗಬ್ಬಗಳಲ್ಲಿ ರಚನೆಯಾಗಿರುವ ಇವರಲ್ಲಿ ೫ ಸ್ಥಲಗಳಿವೆ; ೧೨೪ ಹಾಡುಗಳಿವೆ. ಈ ಹಾಡುಗಳು ರಾಗ, ತಾಳ, ಪಲ್ಲವಿ, ಅನುಪಲ್ಲವಿ, ಚರಣ

ಇವುಗಳಿಂದ ಕೂಡಿವೆ. ಶಿವಕಾರುಣ್ಯಸ್ಥಲ, ಜೀವಸಂಬೋಧನಾಸ್ಥಲ, ನೀತಿಕ್ರಿಯಾಚರ್ಯಸ್ಥಲ, ಯೋಗಪ್ರತಿಪಾದನಾಸ್ಥಲ, ಜ್ಞಾನಪ್ರತಿಪಾದನಾಸ್ಥಲ ಇವು ಸ್ಥಲಗಳಿಗೆ ಇಟ್ಟ ಹೆಸರುಗಳು. ಮೊದಲ ಎರಡು ಭಕ್ತಸ್ಥಲವನ್ನೂ, ಮೂರನೆಯದು ಮಹೇಶಸ್ಥಲವನ್ನೂ ನಾಲ್ಕನೆಯದು ಪ್ರಾಣಲಿಂಗಿಸ್ಥಲವನ್ನೂ, ಐದನೆಯದು ಶರಣ ಹಾಗೂ ಐಕ್ಯಸ್ಥಲಗಳನ್ನೂ ಹೋಲುತ್ತವೆ. ಇಲ್ಲಿಯ ಸ್ಥಲಕಲ್ಪನೆ ಸಾಧಕನ ಅನುಭವದ ವಿವಿಧ ಹಂತಗಳನ್ನು ಧ್ವನಿಪೂರ್ಣವಾಗಿ ಸಂಕೇತಿಸುತ್ತದೆ. ಈ ಅರ್ಥದಲ್ಲಿ ನಿಜಗುಣರ ಸ್ಥಲಕಲ್ಪನೆ ವಿಶಿಷ್ಟವಾದುದು.

ವಿವೇಕಚಿಂತಾಮಣಿಯಲ್ಲಿ ಶುದ್ಧ ಅದ್ವೈತ ಪಾತ್ರದ ಮೂಲಕ ಸ್ವಲ್ಪ ದೂರ ಹರಿದು ಕದಡಿದಂತೆ ಕಾಣುವ ವೀರಶೈವ ಸಿದ್ಧಾಂತಗಂಗೆಯು ಕ್ರಿಯಾ, ಚರ್ಯಾ, ಯೋಗ, ಜ್ಞಾನ ಎಂಬ ಆಗಮಿಕವಾದ ನಾಲ್ಕು ನೆಲೆಗಳಲ್ಲಿ ಕವಲಾಗಿ ತಿಳಿಯಾಗಿ ಹರಿದಿದೆ ಈ ಕೈವಲ್ಯ ಪದ್ಧತಿಯಲ್ಲಿ.

3.5.3.2 ಪುರಾತನರ ತ್ರಿವಿಧಿ

ಪುರಾತನರ ತ್ರಿವಿಧಿ ಭಕ್ತಿಗೀತೆಗಳ ಸಂಕಲನವಾಗಿದೆ. ಇದರಲ್ಲಿ ಎಪ್ಪತ್ತೇಳು ತ್ರಿಪದಿಗಳಿವೆ. ಪುರಾತನ ಶಿವಭಕ್ತರಾದ ಅರುವತ್ತಮೂರು ಮಂದಿ ಶರಣರನ್ನು ಇಲ್ಲಿ ಸ್ತುತಿಸಲಾಗಿದೆ. ಹಾಗಾಗಿ ಈ ಕೃತಿ ಸ್ತೋತ್ರ ಸಾಹಿತ್ಯದ ಗುಂಪಿಗೆ ಸೇರುತ್ತದೆ. ತಮಿಳುನಾಡಿನಲ್ಲಿ ಶೈವಧರ್ಮದ ಪುನರುತ್ಥಾನಕ್ಕೆ ಶ್ರಮಿಸಿದ ಶಿವಭಕ್ತರು (ನಾಯನ್ಮಾರರು) ಕ್ರಿ.ಶ. ೫ ನೇ ಶತಮಾನದಿಂದ ೮ನೇ ಶತಮಾನದವರೆವಿಗೆ ಜೀವಿಸಿದ್ದರು. ಈ ಭಕ್ತರಲ್ಲಿ ಪ್ರಸಿದ್ಧರಾದವರು ೬೩ಮಂದಿ. ಇವರನ್ನು ಅರವತ್ತುಮೂವರು ಪುರಾತನರು ಎಂದು ಕೆರೆಯುವರು. ಪುರಾತನ ತ್ರಿವಿಧಿಯಲ್ಲಿ ಸ್ತುತಿಸಿರುವುದು ಇವರನ್ನೇ.

ನಿಜಗುಣಶಿವಯೋಗಿಗೆ ಈ ಪುರಾತನ ಭಕ್ತರು ಶಿವನ ಸಾಕ್ಷಾತ್ ರೂಪರು. ಚಿನ್ನವು ಆಭರಣವಾಗಿ ಹಲವು ಹೆಸರುಗಳನ್ನು ಪಡೆಯುವಂತೆ ಒಬ್ಬನೇ ಆದ ಪರಶಿವನು ಪುರಾತನರ ಹಲವು ನಾಮರೂಪಗಳಲ್ಲಿ ಸೇರಿಹೋಗಿರುವನಂತೆ. ಈ ಶರಣರು ಪಾರ್ವತೀಶ್ವರನಿಗಿಂತ ಮಿಗಿಲೆಂದು ಭಾವಿಸಿರುವ ನಿಜಗುಣ ಈ ಶರಣ ಸಂತತಿಯನ್ನು ಸ್ತುತಿರೂಪದಲ್ಲಿ ಹಾಡಿ ಹರಸಿರುವನು. ಒಂದೊಂದು ತ್ರಿಪದಿಯಲ್ಲಿ ಒಬ್ಬೊಬ್ಬ ಭಕ್ತನ ಮುಖ್ಯವಾದ ಜೀವಿತ ಸಂಗತಿಯನ್ನು ನೆನೆಸಿರುವುದು. ಇದು ನಿತ್ಯಪಾರಾಯಣದ ಜಪವಾಗಬೇಕೆಂದು ಕವಿಯ ಬಯಕೆ. ಆದ್ದರಿಂದಲೇ ಇದು ಸ್ತೋತ್ರರೂಪದಲ್ಲಿದೆ ಕವಿಯೇ ಹೇಳಿರುವಂತೆ ಇದನ್ನು ಪ್ರೀತಿಯಿಂದ ಕೇಳಿದವನ್ನು ಕೃತಕೃತ್ಯನು. ಇದನ್ನು ಅನಂತ ಮಹಿಮಾಂಬುನಿಧಿಯಾದ ಶಂಭುವು ಸ್ವೀಕರಿಸಿ, ಸಂತಶ್ರೇಷ್ಠರಿಂದ ಹಾಡಿಸುತ್ತಿರಲಿ ಎಂಬುದು ಕವಿಯ ಪ್ರಾರ್ಥನೆ. ಅಂತಲೇ ವೀರಶೈವರು ಇದನ್ನು ಕಂಠಪಾಠ ಮಾಡಿಕೊಂಡು ಸಂಜೆ ಮುಂಜಾನೆ ಹಾಡುವ ಪರಿಪಾಠವುಂಟು.

3.5.3.3 ಅನುಭವಸಾರ

'ಅನುಭವಸಾರ' ಎಂಬುದು ತ್ರಿಪದಿ ರೂಪದಲ್ಲಿರುವ ಒಂದು ವೇದಾಂತ ಗ್ರಂಥ. ಇದರಲ್ಲಿ ೮ ಸಂಧಿಗಳು ೩೫ ತ್ರಿಪದಿಗಳು ಇವೆ. ಸಾಧಕರಿಗೆ ತಿಳಿಯುವಂತೆ ಸಕಲ ವೇದಾಂತ ಸಾರವನ್ನು ಅನುಭವಸಾರವಾಗಿ ಹೇಳುತ್ತಿರುವುದಾಗಿ ಈ ಕೃತಿಯ ಆರಂಭದಲ್ಲಿ ನಿಜಗುಣಶಿವಯೋಗಿ ಹೇಳಿಕೊಂಡಿದ್ದಾನೆ. ಶ್ರುತಿಸಮ್ಮತವಾಗಿ ಇದನ್ನು ಹೇಳುತ್ತಿರುವುದರಿಂದ ಇದು ಅರಸನ ಅಂಕಿತ ಒತ್ತಿದ ರಾಯಸದಂತೆ ಉಪಾದೇಯ. ಅರಸನ ರಾಯಸ ಹೇಗೆ ಎಲ್ಲರ ವಿಶ್ವಾಸಕ್ಕೆ ಪಾತ್ರವೋ ಹಾಗೆ ತಮ್ಮ ಈ ಕೃತಿಕೂಡ ಎಲ್ಲರ ವಿಶ್ವಾಸಕ್ಕೆ ಪಾತ್ರ ಎಂಬ ಆತ್ಮವಿಶ್ವಾಸದ ಮಾತುಗಳನ್ನು ಹೇಳಿದ್ದಾನೆ. ಗುರು, ಶಿಷ್ಯರ ಸಂವಾದದಂತೆ ಪ್ರಶ್ನೋತ್ತರ ರೂಪದಲ್ಲಿ ನಿರೂಪಣೆಗೊಂಡು ಹೊಸ ಹೊಸ ಯುಕ್ತಿಗಳನ್ನು ಅನುಮಾನ (ಪ್ರಮಾಣ)ಗಳನ್ನು ಮುಂದೊಡ್ಡಿ ಹೇಳಿದ ಈ ಅನುಭವಸಾರವು ಹೆಸರಿಗೆ ತಕ್ಕಂತೆ ಚಿಕ್ಕದೂ ಚೊಕ್ಕವಾದುದೂ ಆಗಿದೆ.

3.5.3.4 ಪರಮಾರ್ಥ ಪ್ರಕಾಶಿಕೆ

ಚೆನ್ನಸದಾಶಿವಯೋಗಿಯು ಸಂಸ್ಕೃತದಲ್ಲಿ ರಚಿಸಿರುವ 'ಶಿವಯೋಗ ಪ್ರದೀಪಿಕೆ' ಎಂಬ ಕೃತಿಯ ಕನ್ನಡ ರೂಪ ಪರಮಾರ್ಥ ಪ್ರಕಾಶಿಕೆ. ನಿಜಗುಣನ ಗದ್ಯಕೃತಿಯಾದ ಇದು ಐದು ಪರಿಚ್ಛೇದಗಳಿಂದ ಕೂಡಿದೆ. ಇದರಲ್ಲಿ ಯೋಗಶಾಸ್ತ್ರವು ಗುರು, ಶಿಷ್ಯ ಸಂವಾದ ರೂಪದಲ್ಲಿ ಸರಳವಾಗಿ ನಿರೂಪಿತವಾಗಿದೆ. ಇದೊಂದು ಅನುವಾದಿತ ಕೃತಿಯಾಗಿದ್ದರೂ ಇದರ ಮಹಾನುಭಾವತ್ವ ಮತ್ತು ಮಹಾದಾರ್ಶನಿಕತ್ವದ ಫಲವಾಗಿ ಹೇಳಿರುವ ವಿಷಯಗಳನ್ನು ಪರಮಾರ್ಥಪ್ರಕಾಶಿಕೆಯಲ್ಲಿ ವಿಸ್ತೃತವಾಗಿ ಹೇಳಲಾಗಿದೆ.

3.5.3.5 ಪರಮಾರ್ಥಗೀತೆ

ಸಂಸ್ಕೃತದಲ್ಲಿ ಪ್ರಸಿದ್ಧವಾಗಿರುವ ಯೋಗವಾಸಿಷ್ಠದ ಕನ್ನಡ ಅನುವಾದ 'ಪರಮಾರ್ಥಗೀತೆ' ಮಂದಾನಿಲ ರಗಳೆಯಲ್ಲಿ ಗುರು, ಶಿಷ್ಯರ ಪ್ರಶ್ನೋತ್ತರ ರೂಪದಲ್ಲಿದೆ. ಹನ್ನೊಂದು ಗತಿಗಳಾಗಿ ವಿಂಗಡಣೆಯಾಗಿರುವ ಈ ಕೃತಿಯಲ್ಲಿ ೧೪೬೬ ಚರಣಗಳಿವೆ. ಪ್ರತಿಯೊಂದು ಗತಿಯ ಪ್ರಾರಂಭದಲ್ಲಿ ಸೂತ್ರರೂಪವಾದ ಒಂದೊಂದು ಕಂದಪದ್ಯವಿದೆ. ಮೊದಲ ಆರು ಗತಿಗಳಲ್ಲಿ 'ಸಾಧ್ಯ' ವನ್ನು ಹೇಳಿ ಮುಂದಿನ ಗತಿಗಳಲ್ಲಿ 'ಸಾಧನ' ವಿಧಾನವನ್ನು ತಿಳಿಸಲಾಗಿದೆ. ಅಂದರೆ ಸಾಧ್ಯಭಾಗದಲ್ಲಿ ಆತ್ಮನು ಪಂಚವಿಂಶತಿ ತತ್ತ್ವಾತ್ಮಕ ಶರೀರದಲ್ಲಿ ಬಂಧಿಯಾದ ಬಗೆಯನ್ನೂ, ಸಾಧನ ಭಾಗದಲ್ಲಿ 'ಅರಿವಿನ ಸಪ್ತಭೂಮಿಕೆ' ಗಳನ್ನೂ ತಿಳಿಯ ಹೇಳಿ, ಕಟ್ಟಕಡೆಯದಾದ ಹನ್ನೊಂದನೇ ಗತಿಯಲ್ಲಿ ಜೀವನ್ಮುಕ್ತನ ಸ್ಥಿತಿಯನ್ನು ಪ್ರಶಂಸಿಸುತ್ತ ಗ್ರಂಥವನ್ನು ಸಮಾಪ್ತಿಗೊಳಿಸಲಾಗಿದೆ.

3.5.3.6 ಕೃತಿಗಳ ಭಾಷೆ, ಶೈಲಿ

ನಿಜಗುಣಶಿವಯೋಗಿಯ ಶೈಲಿಯಲ್ಲಿ ಲಾಲಿತ್ಯವಿದೆ, ಮಾಧುರ್ಯವಿದೆ, ನಾದಸಂಪತ್ತಿಯಿದೆ. 'ಕೈವಲ್ಯಪದ್ಧತಿ' ಕೃತಿಯಲ್ಲಿ ಇವುಗಳನ್ನು ಸ್ಪಷ್ಟವಾಗಿ ಕಾಣಬಹುದು. ಆತ ಕವಿಯೂ ಹೌದು, ಶಾಸ್ತ್ರಕಾರನೂ ಹೌದು. ಕವಿಯಾಗಿ, ಅನುಭಾವಿಯಾಗಿ 'ಕೈವಲ್ಯಪದ್ಧತಿ'ಯಲ್ಲಿ ಆತನ ವಿಶಿಷ್ಟ ವ್ಯಕ್ತಿತ್ವ ಕಂಡಬಂದರೆ, ಶಾಸ್ತ್ರಕಾರನಾಗಿ ಆತನ ಪ್ರೌಢಿಮೆಯನ್ನು ವಿವೇಕ ಚಿಂತಾಮಣಿ, ಅನುಭವಸಾರ, ಪರಮಾನುಭವಬೋಧೆ, ಪರಮಾರ್ಥಪ್ರಕಾಶಿಕೆಗಳಲ್ಲಿ ಗುರುತಿಸಬಹುದು. 'ವಿವೇಕಚಿಂತಾಮಣಿ'ಯಲ್ಲಿನ ಗದ್ಯ ಸಂಗ್ರಹಗದ್ಯ. ಆತ ವಿಷಯವನ್ನು ಸಂಗ್ರಹಿಸುವಲ್ಲಿ ತೋರುವ ಶ್ರದ್ಧೆ ಅದನ್ನು ಅಡಕವಾಗಿ ತಿಳಿಯಹೇಳುವಲ್ಲಿಯೂ ಕಂಡುಬರುತ್ತದೆ. ವಿಷಯಗಳನ್ನು ಸೂತ್ರ ರೂಪದಲ್ಲಿ ಅಥವಾ ಭಾಷ್ಯ ರೂಪದಲ್ಲಿ ತಿಳಿಸುವುದು ಆತನಲ್ಲಿ ಒಂದು ಅದ್ವಿತೀಯ ಕಲೆ. ಪರಮಾನುಭವಬೋಧೆ, ಅನುಭವಸಾರ, ಪರಮಾರ್ಥಗೀತೆಗಳಲ್ಲಿ ಅವರು ಒಳ್ಳೆಯ ಸೂತ್ರಕಾರನೂ ಭಾಷ್ಯಕಾರನೂ ಆಗಿರುವುದನ್ನು ನಾವು ಗುರುತಿಸಬಹುದು. ಸಂಸ್ಕೃತದಲ್ಲಿರುವ ವೇದಾಂತ, ಸಿದ್ಧಾಂತಗಳನ್ನು ಸುಲಭವಾಗಿ ತಿಳಿಯಲಾಗದ ಜನರಿಗೆ ಅದರಲ್ಲಿರುವ ಸಾರತರವಾದ ಸತ್ವಾರ್ಥಗಳನ್ನು ಸಂಗ್ರಹಿಸಿ ಹೇಳಿರುವನು; ಆ ಮೂಲಕ ಭಾರತೀಯ ತತ್ವಶಾಸ್ತ್ರದ ತಿಳಿವಳಿಕೆಗೆ ತನ್ನ ಕೃತಿಗಳನ್ನು ಪ್ರವೇಶಿಕೆಗಳಾಗಿ ಮಾಡಿರುವನು.

ನಿಜಗುಣಶಿವಯೋಗಿ ತನ್ನ ಕೃತಿಗಳನ್ನು ಹಲವು ಶ್ರುತಿಗಳಿಂದ ಹಲವನುಭವದಿಂದ ಹಲವು ದೃಷ್ಟಾಂತಯುಕ್ತಿಗಳಿಂದ ಸ್ವಾದ್ಯಯೋಗ್ಯವಾಗುವಂತೆ ರಚಿಸಿದ್ದಾನೆ. ಆತ ಕೊಡುವ ಉಪಮೆ, ನಾಣ್ಣುಡಿ ಮುಂತಾದವಂತೂ ಅರ್ಥಪೂರ್ಣವಾಗಿರುತ್ತವೆ.

3.5.3.7 ಕೃತಿಗಳ ಮಹತ್ವ

ವೀರಶೈವಧರ್ಮವನ್ನು ಪ್ರತಿಪಾದಿಸುವಲ್ಲಿ ನಿಜಗುಣಶಿವಯೋಗಿ ತನಗಿಂತ ಪೂರ್ವದಲ್ಲಿದ್ದ ಶಿವಚಾರ್ಯ, ಶ್ರೀಪತಿಪಂಡಿತ ಮುಂತಾದ ವೀರಶೈವ ಸಿದ್ಧಾಂತಕಾರರನ್ನು ಸ್ಮರಿಸಿಲ್ಲ ಮತ್ತು ಅವರಂತೆ

ಬ್ರಹ್ಮಸೂತ್ರಗಳನ್ನು ತನ್ನ ಸಿದ್ಧಾಂತಕ್ಕೆ ಪ್ರಸ್ಥಾನವಾಗಿ ಸ್ವೀಕರಿಸಲು ಇಲ್ಲ. ಈ ಮಟ್ಟಿಗೆ ಆತ ತನ್ನ ಸಿದ್ಧಾಂತವನ್ನು ಊಹಾಪೋಹಗಳ ಮೇಲೆ ಕಟ್ಟದೆ ಉಪನಿಷದಾದಿಗಳ ಗಟ್ಟಿ ನೆಲದ ಮೇಲೆ ಕಟ್ಟಿ ಅದನ್ನು ಅಂತರ್ಮುಖಿಗೊಳಿಸುವುದರ ಮೂಲಕ ವಿಶ್ವಧರ್ಮವನ್ನಾಗಿ ಮಾಡಿದನು. ಈ ದೃಷ್ಟಿಯಿಂದ ವೀರಶೈವಧರ್ಮವನ್ನು ಕುರಿತಂತೆ ಸಾರಸಮಗ್ರವಾದ ಒಂದು ಅಚ್ಚ ಸಿದ್ಧಾಂತವನ್ನು ಬರೆದವರಲ್ಲಿ ಮೊದಲಿಗನೆಂಬ ಶ್ರೇಯಸ್ಸು ನಿಜಗುಣನಿಗೇ ಸಲ್ಲುತ್ತದೆ. ನಿಜಗುಣನಿಗಿಂತ ಹಿಂದಿದ್ದ ಮಾಯಿದೇವ, ಮಹಾಲಿಂಗ, ಕರೆಯ ಪದ್ಮರಸ, ಜಕ್కಣ್ಣ ಮುಂತಾದವರು ಮುಖ್ಯವಾಗಿ ಆಚರಣಾತ್ಮಕವಾದ ಷಟ್‌ಸ್ಥಲದ ದೃಷ್ಟಿಯಿಂದ ಕೃತಿಗಳನ್ನು ಬರೆದಿರುವರೇ ಹೊರತು ಅವರ ಗ್ರಂಥಗಳಿಗೆ ನಿಜಗುಣನ ಗ್ರಂಥಗಳಿಗಿರುವ ಸೈದ್ಧಾಂತಿಕ ವ್ಯಾಪ್ತಿಯನ್ನಾಗಲಿ, ವಿಭಜಯನೆನ್ನಾಗಲಿ, ಸಮಗ್ರತೆಯನ್ನಾಗಲಿ ನೀಡಿಲ್ಲ. ನಿಜಗುಣನ ಕೃತಿಗಳು ಇಡಿಯಾಗಿ ಒಂದು ಸಂಸ್ಕೃತಿಯ ಮತ್ತು ಒಂದು ಜನಾಂಗದ ಆದರ್ಶ ಶ್ರದ್ಧೆ ನಂಬಿಕೆ ಪೂಜೆ ಯೋಗ ಮುಂತಾದೆಲ್ಲವನ್ನೂ ಒಳಗೊಂಡ ಒಂದು ಪುರಾತನ ಜೀವನ ವಿಧಾನವನ್ನು ನಮ್ಮ ಕಣ್ಣ ಮುಂದೆ ವರ್ಣರಂಜಿತವಾಗಿ ಅದ್ಭುತವಾಗಿ ತೆರೆದಿಡುತ್ತವೆ. ಮೇಲಾಗಿ ಇಲ್ಲಿ ಮಿಕ್ಕ ಧಾರ್ಮಿಕ ಕೃತಿಗಳಲ್ಲಿನ ಜಾತೀಯತೆ ಇಲ್ಲವೇ ಇಲ್ಲ. ಕೇವಲ ಶುದ್ಧ ಆತ್ಮದ ನೆಲೆಯಲ್ಲಿ ಮಾನವನಿಗೆ ಕೊಡಬೇಕಾದ ಉತ್ತಮ ದರ್ಶನ ಒಂದನ್ನು ಇಲ್ಲಿ ಕೊಡಲಾಗಿದೆ. ಈತನ ಕೃತಿಗಳನ್ನು ಓದಿದರೆ, ಅವು ಕುರಿತಿರುವುದು ಒಣತತ್ತ್ವವನ್ನವಲ್ಲವೆಂಬುದು ಮೊದಲ ಓದಿಗೆ ಮನದಟ್ಟಾಗಿ ಎರಡನೆಯ ಓದಿಗೆ ಮಾನವದೇಹ ರಚನೆ, ನರಮಂಡಲ ವಿಜ್ಞಾನ, ಮಾನಸಿಕ ವಿಕಾರ, ಮಾಯಕಾರ, ಯೋಗ, ಜ್ಞಾನ ಮುಂತಾಗಿ ಎಲ್ಲ ವಿವರಗಳ ಪರಿಚಯವನ್ನು ನಿಜಗುಣನ ಕೃತಿಗಳು ಒದಗಿಸುತ್ತವೆ.

3.6 ಕನಕದಾಸರು

ಪುರಂದರದಾಸರು ಮತ್ತುಕನಕದಾಸರು ದಾಸಸಾಹಿತ್ಯದ ಅಶ್ವಿನಿದೇವತೆಗಳೆಂದು ಖ್ಯಾತಿ ಪಡೆದಿದ್ದಾರೆ. ಕನಕದಾಸರು ಕನ್ನಡದ ಶ್ರೇಷ್ಠ ಸಂತಕವಿ, ಅನುಭಾವಿ ಮತ್ತು ಹರಿದಾಸರು. ತಮ್ಮ ಕಾವ್ಯಗಳು ಹಾಗು ಕೀರ್ತನೆಯಿಂದ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಅಗ್ರಗಣ್ಯರಲ್ಲಿ ಒಬ್ಬರಾಗಿದ್ದಾರೆ. ಪುರಂದರದಾಸರಿಗೆ ಸಮಯಕದವರು ಸ್ವತಂತ್ರ ಕಾಂತಿಯುಳ್ಳವರೂ ಆಗಿ ಅದೇ ಕಾಲದಲ್ಲಿ ಜೀವಿಸಿದರು. ಜನರ ಆಡುಭಾಷೆಯಲ್ಲಿ ಸತ್ವಯುತವಾಗಿ ಬರೆದ ಕೀರ್ತಿ ಇವರದಾಗಿದೆ. ಬಸವೇಶ್ವರರ ಸಮಕಾಲೀನರಾದ ಅನೇಕ ವಚನಕಾರರು ಸಮಾಜದ ನಾನಾ ವರ್ಗಗಳಿಂದ ಬಂದವರು. ಹಾಗೆಯೇ ಕನಕದಾಸರೂ ಸಮಾಜದ ಕೆಳವರ್ಗದಿಂದ ಬಂದವರು. ತಮ್ಮ ಸಾಧನೆಯಿಂದ ಶ್ರೇಷ್ಠ ದಾಸರೆಂಬ ಕೀರ್ತಿಗೆ ಭಾಜನರಾದರು. ತಮ್ಮ ಸುತ್ತಲಿನ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಪ್ರಯತ್ನಿಸಿದ್ದಾರೆ. ಅವರ ಕಾವ್ಯಗಳು ಅಂದು ಕನಕದಾಸರು ಅನುಭವಿಸಿದ ನೋವುನಲಿವುಗಳಿಗೆ ಸ್ಪಂದಿಸಿವೆ.

3.6.0 ಕಾಲ ದೇಶ

ಕನಕದಾಸರು ಪುರಂದರದಾಸರ ಸಮಕಾಲೀನರು. ಕ್ರಿ.ಶ. ಸುಮಾರು ೧೫೦೮ ರಿಂದ ೧೬೦೬ ಎಂದು ಇವರ ಕಾಲವನ್ನು ಜಿ. ವರದರಾಜರಾಯರು ಸೂಚಿಸುತ್ತಾರೆ. ೧೫೫೦ ರಂ. ಶ್ರೀ ಮುಗಳಿಯವರು ಕೊಡುವ ಕಾಲ. ಆರ್. ನರಸಿಂಹಾಚಾರ್ಯರೂ ಇದೇ ಕಾಲವನ್ನು ಕೊಟ್ಟಿದ್ದಾರೆ. ಕನಕದಾಸರು ಕೃಷ್ಣದೇವರಾಯನೊಡನೆ ನೇರ ಸಂಪರ್ಕ ಹೊಂದಿದ್ದರೆಂಬ ವಿಚಾರವಿದೆ. ೧೫೨೫-೨೬ರಲ್ಲಿ ಕನಕದಾಸರು ವ್ಯಾಸರಾಯರಿಂದ ಮಂತ್ರೋಪದೇಶ ಪಡೆದರೆಂಬ ವಿವರಗಳು ದೊರೆಯುತ್ತವೆ. ಈ ಅಂಶಗಳನ್ನು ಆಧರಿಸಿ ಕನಕದಾಸರು ಹದಿನಾರನೇ ಶತಮಾನದಲ್ಲಿ ಜೀವಿಸಿದ್ದರೆಂದು ತಿಳಿಯುವುದಕ್ಕೆ ಅಡ್ಡಿಯಿಲ್ಲ. ವರದರಾಜರಾಯರು ಕೊಡುವ ೧೫೦೮ ರಿಂದ ೧೬೦೬ ರ ಅವಧಿಯನ್ನು ಒಪ್ಪಿ ಮುಂದುವರಿಯ ಬಹುದಾಗಿದೆ.

ಕನಕದಾಸರ ಕೃತಿಗಳಲ್ಲಿ 'ಕಾಗಿನೆಲೆಯಾದಿಕೇಶವ' ಎಂಬ ಅಂಕಿತ ಕಂಡುಬರುತ್ತದೆ. ಜೊತೆಗೆ 'ಬಾಡದಾದಿಕೇಶವ', 'ಚೆನ್ನ ಶ್ರೀರಂಗಪಟ್ಟಣದ ರಂಗೇಶ', 'ಬಂಕಾಪುರದ ಲಕುಮಿನರಸಿಂಹ' ಎಂಬ

'ಮೋಹನತರಂಗಿಣಿ'ಯ ಕಥಾನಕವು ದೀರ್ಘ ವರ್ಣನೆಗಳಿಂದ ಕಿಕ್ಕಿರಿದು ತಡೆತಡೆದು ಸಾಗುತ್ತದೆ. ಅಸಾಧ್ಯ ಅದ್ಭುತ ಸನ್ನಿವೇಶಗಳು ಹೆಚ್ಚಾಗಿವೆ. ಕೆಲವು ಕರುಣ ಮತ್ತು ವೀರರಸದ ಪ್ರಸಂಗಗಳು ಚಿತ್ತವನ್ನು ಸೆಳೆಯುತ್ತವೆ. ಮೋಹನತರಂಗಿಣಿಯ ಮುಖ್ಯ ಮೋಹನವೆಂದರೆ ವಿವಿಧ ವರ್ಣನೆಗಳಲ್ಲಿಯ ಸ್ವಭಾವೋಕ್ತಿ ಮತ್ತು ಕಲ್ಪಕತೆ. ಒಟ್ಟಿನಲ್ಲಿ ಪೌರಾಣಿಕ ಕಥೆಯ ಮೂಲಕ ತತ್ಕಾಲಿನ ಜನಜೀವನವನ್ನು ಚಿತ್ರಿಸಿ, ಚಿರಂತನವಾದ ಭಕ್ತಿ ಸಂದೇಶವನ್ನೂ ಬೀರಿ ಈ ಕೃತಿ ಸಫಲವಾಗಿದೆ.

3.6.1.1 ಇತರ ಕೃತಿಗಳು

ಮೋಹನತರಂಗಿಣಿಯ ಜೊತೆಗೆ ಕನಕದಾಸರ ಇನ್ನಿತರ ಕೃತಿಗಳ ಬಗ್ಗೆಯು ಇಲ್ಲಿ ನಾವು ಪರಿಚಯ ಮಾಡಿಕೊಳ್ಳೋಣ.

3.6.1.1.0 ನಳ ಚರಿತ್ರೆ

ಭಾಮಿನೀಷಟ್ಪದಿಯಲ್ಲಿ ರಚಿತವಾಗಿರುವ 'ನಳಚರಿತ್ರೆ'ಯಲ್ಲಿ ಒಂಬತ್ತು ಸಂಧಿಗಳು, ೪೮೧ ಪದ್ಯಗಳು ಇವೆ. ಪುರಾಣಪ್ರಸಿದ್ಧವಾದ ನಳೋಪಾಖ್ಯಾನ ಈ ಕಾವ್ಯದ ವಸ್ತು. ಮಹಾಭಾರತದಿಂದ ಮುಖ್ಯಕಥೆಯನ್ನು ಎತ್ತಿಕೊಂಡು ಹಲಕೆಲವು ಹೃದ್ಯವಾದ ಮಾರ್ಪಾಡುಗಳನ್ನು ಕನಕದಾಸರು ಇಲ್ಲಿ ಮಾಡಿಕೊಂಡಿದ್ದಾರೆ. ಮೋಹನತಂರಗಿಣಿಯಂತೆ ಇದೂ ಸಹ ಶೃಂಗಾರಕಾವ್ಯ. ಪ್ರಸಿದ್ಧವಾದ ನಳ-ದಮಯಂತಿಯರ ಪ್ರಣಯ ಮತ್ತು ದಾಂಪತ್ಯದ ಕಥೆ ತುಂಬಾ ಸ್ವಾರಸ್ಯವಾಗಿ ನಿರೂಪಿತವಾಗಿದೆ. ಆದರೂ ಕವಿ ಇಲ್ಲಿ ಶೃಂಗಾರಕ್ಕಿಂತ ತ್ಯಾಗಕ್ಕೆ ಹೆಚ್ಚು ಒತ್ತು ಕೊಟ್ಟಿರುವುದು ಕಂಡುಬರುತ್ತದೆ. ಪೌರಾಣಿಕ ಪಾತ್ರಗಳಿಗೆ ಮಾನವೀಯ ಕಳೆ ತುಂಬಿದ್ದೇ ಇಲ್ಲಿನ ವೈಶಿಷ್ಟ್ಯ.

ನಳಚರಿತ್ರೆಯಲ್ಲಿ ಕೂಡ ಕನಕದಾಸರು ಸಮಕಾಲೀನ ವಿಜಯನಗರದ ಇತಿಹಾಸ ಮಿಣುಕು ಹಾಕುವಂತೆ ಮಾಡಿದ್ದಾರೆ. ರಕ್ಕಸತಂಗಡಿಯ ಪರಾಭವದ ಅನಂತರ ಪುನಃ ವಿಜಯನಗರದವರು ಅಧಿಕಾರಕ್ಕೆ ಬಂದದ್ದು ಈ ಕೃತಿಯನ್ನು ರಚಿಸುವ ಕಾಲಕ್ಕೆ ಅವರ ಮನಸ್ಸಿನಲ್ಲಿದ್ದಿರಬಹುದು. ಮಹಾಭಾರತದ ನಳೋಪಾಖ್ಯಾನವನ್ನು ಕನ್ನಡನಾಡಿನಲ್ಲಿ ಜನಪ್ರಿಯಗೊಳಿಸಿದ ಶ್ರೇಯಸ್ಸು ಕನಕದಾಸರದು. ಈ ಜನಪ್ರಿಯತೆಗೆ ಕಾರಣ ದಾಸರು ಬಳಸಿರುವ ಅಚ್ಚಗನ್ನಡ ನುಡಿಗಟ್ಟುಗಳು. ಜನರ ಆಡುಭಾಷೆಯಲ್ಲಿ ಕೃತಿ ರಚಿಸಿದರೆ ಅದು ಬಹುಬೇಗನೆ ಅವರ ಹೃದಯವನ್ನು ತಟ್ಟುತ್ತದೆ ಎಂಬುದಕ್ಕೆ ಈ ಕೃತಿ ಸಾಕ್ಷಿ. ನಳ-ದಮಯಂತಿಯರ ಆದರ್ಶಪ್ರೇಮ, ಶೃಂಗಾರ, ಪುನರ್‌ಮಿಲನ ಇವುಗಳನ್ನು ಚಿತ್ರಿಸುವಲ್ಲಿ ಕನಕದಾಸರು ಕುಸುರಿಗೆಲಸ ಗೈದಿದ್ದಾರೆ. ತಮ್ಮ ಪ್ರೌಢಿಮೆಯನ್ನು ಕರುಣ ರಸದಲ್ಲೂ ಮೆರೆದಿದ್ದಾರೆ. ನಳ-ದಮಯಂತಿರಯರ ಉದಾತ್ತ ಪಾತ್ರಗಳು ಇಲ್ಲಿ ಕಣ್ಣೆದುರು ಎದ್ದು ನಿಲ್ಲುತ್ತವೆ. ರಾಜ್ಯವನ್ನು ಕಳೆದುಕೊಂಡು ಹಲವಾರು ಕೋಟಲೆಗಳಿಗೆ ಒಳಗಾದ ಆ ದಂಪತಿಗಳ ಕರುಣ ಚಿತ್ರವು ಹೃದಯಸ್ಪರ್ಶಿಯಾಗಿದೆ. ಕನಕದಾಸರ ಕಾವ್ಯ ಶಕ್ತಿಯ ಹೆಚ್ಚಳಕ್ಕೆ ನಿದರ್ಶನವಾಗಿದೆ.

3.6.1.1.1 ರಾಮಧಾನ್ಯ ಚರಿತ್ರೆ

ರಾಮಧಾನ್ಯಚರಿತ್ರೆ ಭಾಮಿನೀಷಟ್ಪದಿಯಲ್ಲಿ ರಚಿತವಾಗಿದೆ. ಸುಮಾರು ೧೫೬ ಪದ್ಯಗಳಿವೆ. ಕನ್ನಡದಲ್ಲಿ ಅಪರೂಪವಾದ ಸ್ವಕಲ್ಪಿತ ಕಥಾವಸ್ತು ಇದರದು. ತುಂಬಾ ಚಮತ್ಕಾರಪೂರ್ವಕವಾಗಿ ಅಷ್ಟೇ ಪ್ರಗತಿಪರ ಮನೋಭಾವದೊಡನೆ ವಸ್ತುವಿನ ನಿರ್ವಹಣೆ ಸಾಗಿದೆ. ದೇವರು ಬಡವರ ಕೈವಾರಿ: ಭಕ್ತರ ಪಕ್ಷಪಾತಿ ಎಂಬುದನ್ನು ಸೂಚಿಸುವ ರೀತಿಯಲ್ಲಿ ರಾಗಿ ಮತ್ತು ಭತ್ತಗಳ ನಡುವೆ ವಾದ ನಡೆಯಿಸಿ ಅದರಲ್ಲಿ ರಾಗಿ ಗೆದ್ದಿತೆಂದೂ ಅದಕ್ಕೆ ರಾಮನು 'ರಾಘವ' ಎಂಬ ತನ್ನ ಹೆಸರನ್ನಿತ್ತನೆಂದೂ ಇದರಲ್ಲಿ ಕಲ್ಪಿಸಲಾಗಿದೆ. ಈ ಕಲ್ಪಿತಕಥೆಯಲ್ಲಿ ಕವಿ ತನ್ನ ಭಾಗವತ ಮನೋಭಾವವನ್ನೂ ಜನತಾದೃಷ್ಟಿಯನ್ನೂ ಪ್ರಕಟಗೊಳಿಸಿದ್ದಾನೆ.

ವಿಸ್ತಾರ ವರ್ಣನೆ ಮತ್ತು ಮಹಾಕಾವ್ಯದ ಲಕ್ಷಣಗಳಿಂದ ಈ ಕಾವ್ಯ ಹೊರತಾಗಿದೆ. ಧಾನ್ಯಗಳ ಪಾತ್ರವನ್ನು ರಚಿಸಿಕೊಂಡಿರುವುದರಿಂದ ಒಂದು ರೂಪಕಕಾವ್ಯದಂತೆಯೂ ಕೆಲಸ ಮಾಡುತ್ತದೆ. ಕನಕದಾಸರು ತಾವು ಸಮಾಜದಲ್ಲಿ ಅನುಭವಿಸಿದ ದುಃಖದುಮ್ಮಾನಗಳನ್ನು ಬಹುಶಃ ಈ ಕಾವ್ಯದಲ್ಲಿ ವ್ಯಕ್ತಪಡಿಸಿರಬೇಕು. ಅಧಿಕಾರ ಐಶ್ವರ್ಯಗಳನ್ನು ತೊರೆದು ಹೊರಬಂದು ಭಕ್ತರಾಗಿ ಅಧ್ಯಾತ್ಮಿಕ ವಲಯದ ಪ್ರವೇಶವನ್ನು ಪಡೆಯಲು ಹೋದಾಗ ಕನಕದಾಸರು ಜಾತಿ ಸಮಸ್ಯೆಯ ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳಬೇಕಾಯಿತು. ದಾಸರು ಮೇಲುವರ್ಗದವರ ನಿಂದೆ, ಮೂದಲಿಕೆಗಳಿಗೆ ಒಳಗಾದರು ಎಂಬುದು ಸತ್ಯಸಂಗತಿ. ಆದ್ದರಿಂದಲೇ ರಾಗಿಯ ಮೂಲಕ ಬಡವರನ್ನು ಅವರು ಎತ್ತಿಹಿಡಿದಿರಬೇಕು. ಈ ಜಾತಿಯ ಸಂಘರ್ಷವನ್ನು ಅವರು ನೇರವಾಗಿ ಹೇಳಿಕೊಳ್ಳಲು ತಮ್ಮ ಕೃತಿಗಳಲ್ಲಿ ಸಾಧ್ಯವಾಗಲಿಲ್ಲ. ರಾಮಧಾನ್ಯ ಚರಿತ್ರೆಯನ್ನು ಸಂಪಾದಿಸಿದ ದೇಜಗೌ ಅವರು ಅದಕ್ಕೆ ಬರೆದ ಮುನ್ನುಡಿಯಲ್ಲಿ 'ಇದೊಂದು ಸುಂದರವಾದ ಮತ್ತು ಕಾಂತಿಯುತವಾದ ವಿಡಂಬನ ಕಾವ್ಯ. ಬಿಂಕಗುಳಿಗಳ ಮತಾಂಧರ ಮತ್ತು ಪಟ್ಟಭದ್ರ ಹಿತಾಸಕ್ತರ ಮೂಗು ಕೆತ್ತಿ ಅವರ ಓರೆ ಕೋರೆಗಳನ್ನು ತಿದ್ದಬೇಕೆಂಬುದೇ ಕವಿಯ ಪ್ರತಿಜ್ಞೆಯಾಗಿದೆ. ಜೊತೆಗೆ ಈ ಓರೆಕೋರೆಗಳು ಸಾಮಾನ್ಯರಿಗೆ ಗ್ರಹಿಕೆಯಾಗಿ ಅವರು ಎಚ್ಚತ್ತು ಕೊಳ್ಳಬೇಕೆಂಬುದು ಅವರ ಆಶಯವಾಗಿದೆ. ಸತ್ಯ ಅಸತ್ಯಗಳ ನಡುವೆ ರಾಜಿಯ ಸೂತ್ರ ಸಲ್ಲದೆಂಬುದು ಕವಿಯ ದೃಢ ನಿಲುವಾಗಿದೆ ಎಂದಿದ್ದಾರೆ.

3.6.1.1.2 ಹರಿಭಕ್ತಿ ಸಾರ

ಹರಿಭಕ್ತಿಸಾರವು ೧೨೦ ಭಾಮಿನೀಷಟ್ಪದಿಗಳನ್ನುಳ್ಳ ಕೃತಿ. ಹರಿನಾಮಸ್ತುತಿ ಮತ್ತು ಪ್ರಾರ್ಥನೆಗಳನ್ನು ಒಳಗೊಂಡಿದೆ. ಭಕ್ತಿ, ನೀತಿ, ವೈರಾಗ್ಯಗಳ ಉನ್ನತ ಶಿಖರವನ್ನು ಏರಿದ್ದನ್ನು 'ಹರಿಭಕ್ತಿಸಾರ'ದಲ್ಲಿ ಕಾಣಬಹುದು. ಪ್ರತಿಯೊಂದು ಪದ್ಯವೂ ಕೊನೆಗೊಳ್ಳುವುದು 'ರಕ್ಷಿಸು ನಮ್ಮನನವರತ' ಎಂದು. ಪ್ರಾರಂಭದ ೧೬ ಪದ್ಯಗಳು ಸಂಸ್ಕೃತಮಯ. ಅನಂತರ ನಾವು ಕಾಣುವುದು ಸುಲಭಕನ್ನಡ ಭಾಷೆಯ ಬಳಕೆ. ಕನಕದಾಸರ ಆಧ್ಯಾತ್ಮಿಕ ಜೀವನದ ಕೊನೆಯ ಕೃತಿ ಹರಿಭಕ್ತಿಸಾರ. ಅನನ್ಯ ಭಕ್ತಿಯಿಂದ ಶ್ರೀಹರಿಯನ್ನು ಭಜಿಸುವುದೇ ಮುಕ್ತಿಗೆ ದಾರಿ ಎಂಬುದನ್ನು ಅವರು ಇಲ್ಲಿ ಪ್ರತಿಪಾದಿಸಿದ್ದಾರೆ. ನಮ್ಮ ಸಂಸ್ಕೃತಿಯ ಸಾರಸಂಗ್ರಹ ಈ ಕೃತಿಯಲ್ಲಿದೆ. ಪರಮಾತ್ಮನೇ ತತ್ತ್ವ, ಭಕ್ತಿ ಪ್ರಪತ್ತಿಗಳ ಹಿತ-ಮುಕ್ತಿ ಪುರುಷಾರ್ಥ. ನಿರ್ಮಲ ಭಕ್ತಿಯನ್ನು ಜೊತೆಗೆ ಪ್ರತಿಪಾದಿಸಲಾಗಿದೆ. ಭಗವಂತನ ಒಲಿದರೆ ಹುಲ್ಲುಕಡ್ಡಿಯು ಬೆಟ್ಟವಾಗಬಲ್ಲದು ಎಂಬುದು ಅವರ ಅಚಲ ವಿಶ್ವಾಸ. ಈ ಕೃತಿಯಲ್ಲಿ ಅಲ್ಲಲ್ಲಿ ಕುಮಾರವ್ಯಾಸನ ಪ್ರಭಾವವನ್ನು ಕಾಣಬಹುದಾಗಿದೆ. 'ಹರಿಭಕ್ತಿಸಾರ'ದ ನಿರರ್ಗಳವಾದ ಓಟ, ಅದರಲ್ಲಿ ವ್ಯಕ್ತವಾಗಿರುವ ಜೀವನದ ಅನನ್ಯವಾದ ಭಾವ, ಅನನ್ಯ ಶರಣಾಗತಿ ಅತ್ಯಂತ ಹೃದಯಸ್ಪರ್ಶಿಯಾಗಿದೆ.

3.6.1.1.3 ಕೀರ್ತನೆಗಳು

ಕನಕದಾಸರ ವ್ಯಕ್ತಿತ್ವದ ಜೀವಾಳವು ಅವರ ಕೀರ್ತನೆಗಳಲ್ಲಿ ಮೂಡಿರುತ್ತದೆ. ಅವರ ಭಕ್ತಿತರಂಗಿಣಿ ಅವುಗಳಲ್ಲಿ ಹೊರಸೂಚಿ ಹರಿದಿದ್ದಾಳೆ. ಅವರು ಮುಖ್ಯವಾಗಿ ಭಾಗವತಕವಿ; ಅಂದರೆ ಹರಿಭಕ್ತಿಯ ಸರ್ವಾರ್ಪಣದ ಮತ್ತು ವಿಶಾಲ ಮನೋಭಾವದ ಪ್ರತಿಪಾದಕ. ಮಧ್ವ, ರಾಮಾನುಜ ಮತಗಳ ಸಾರವನ್ನು ಒಪ್ಪಿಯೂ ತಿರುತಿರುಗಿ ಯಾವುದಾದರೊಂದು ಮತದ ನಿರ್ದಿಷ್ಟ ಪ್ರಚಾರವನ್ನು ಮಾಡುವ ಗೊಡವೆಗೆ ಅವರು ಹೋದಂತಿಲ್ಲ. ಏಕಾಂತಭಕ್ತಿ, ನೀತಿಧರ್ಮವನ್ನು ಕನಕದಾಸರ ಕೀರ್ತನೆಗಳು ಬೋಧಿಸುತ್ತವೆ; ಡಂಭಾಚಾರ, ಸಂಕುಚಿತ ಮನೋವೃತ್ತಿಗಳನ್ನು ಖಂಡಿಸುತ್ತವೆ. ದಾಸಕೂಟದ ಸಾಮಾನ್ಯ ಕ್ರಮದಂತೆ ದೇವತಾಸ್ತುತಿ, ನಾಮಸ್ಮರಣೆಯ ಹಾಡುಗಳು ಇವರಲ್ಲಿಯೂ ಇವೆ. ಆದರೆ ಅವು ವೆಗ್ಗಳವಾಗಿಲ್ಲ. ನೀತಿ, ತತ್ತ್ವ ಪ್ರಧಾನವಾದ ಕೀರ್ತನೆಗಳು ಮಾತ್ರ ಹೆಚ್ಚಿವೆ. ಪುರಂದರದಾಸರಂತೆ ಬೋಧಕನ ಆವೇಶವು ಕನಕದಾಸರಲ್ಲಿಯೂ ಸಹಜವಾಗಿದೆ. ಆದರೆ ಕನಕದಾಸರಲ್ಲಿ ವಿಚಾರಸ್ವಾತಂತ್ರ್ಯ ಹೆಚ್ಚು. ಜನಜೀವನದ, ಜನಭಾಷೆಯ ಅರಿವೂ ಹೆಚ್ಚು. ಬೋಧನಾಪರ ಕೀರ್ತನೆಗಳಲ್ಲಿ ಉಚಿತವಾದ ಉಪಮೆ ರೂಪಕಗಳಿಂದ ತತ್ತ್ವನೀತಿಗಳಿಗೆ ಕವಿತ್ವದ ಪರಿವೇಶ ಕಟ್ಟಿದ ಸೊಗಸುಗಾರಿಕೆ ಇದೆ. ಒಮ್ಮೊಮ್ಮೆ ಇಡೀ ಕೀರ್ತನೆ ರೂಪಕದ

ವಿಸ್ತಾರವಾಗಿ ಸೊಗಸುತ್ತದೆ. ಸಮಾಜವಿಮರ್ಶೆ ಮತ್ತು ಜೀವನಚರಿತ್ರೆಗಳಿಗೆ ಮೀಸಲಾದ ಎಷ್ಟೋ ಕೀರ್ತನೆಗಳಿರುತ್ತವೆ. ಅವುಗಳಲ್ಲಿ ಕನಕದಾಸರು ಸಮಾಜದ ಕುಂದು ಕೊರತೆಗಳನ್ನು ಮುಚ್ಚುಮರೆಯಿಲ್ಲದೆ ಬಯಲಿಗೆಳೆದಿದ್ದಾರೆ. ಅವರ ಕಳಕಳಿ ನೈಜ, ಮಾತು ಹರಿತ, ನಿರೀಕ್ಷಣೆ ತೀವ್ರ ಎಂಬುದು ತಿಳಿಯುತ್ತದೆ. ಅವರ ಕಿರುನುಡಿಗಳು ಕೆಲವು ಸಲ ಕಿಡಿಯಂತೆ ಸಿಡಿಯುತ್ತವೆ. ಕುಲವಿಚಾರವನ್ನು ಕುರಿತ ಈ ಕೀರ್ತನೆಯನ್ನು ನೋಡಬೇಕು.

ಕುಲಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ

ಕಸರೊಳು ತಾವರೆ ಪುಟ್ಟಲು ಆದ ತಂದು
ಬಿಸಜನಾಭನಿಗರ್ಪಿಸಲಿಲ್ಲವೆ

ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು
ವಸುಧೆಯೊಳಗೆ ಭೂಸುರರುಣ್ಣಲಿಲ್ಲವೆ!!

ಮೃಗಗಳ ಮೈಯಲಿ ಪುಟ್ಟಿದ ಕಸ್ತೂರಿ
ತೆಗೆದು ಪೂಸುವರು ಭೂಸುರರೆಲ್ಲರೂ
ಬಗೆಯಿಂದ ನಾರಾಯಣನ್ಯಾವ ಕುಲದವ
ಅಗಜಾವಲ್ಲಭನ್ಯಾತರ ಕುಲದವನು

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ್ಮಾಂತರಾತ್ಮ ನೆಲೆಯಾದಿಕೇಶವ
ಆತನೊಲಿದ ಮ್ಯಾಲೆ ಯಾತರ ಕುಲವಯ್ಯ!!

ಈ ಕೀರ್ತನೆಯಲ್ಲಿ ಕನಕದಾಸರ ವಿಚಾರಸ್ವಾತಂತ್ರ್ಯ, ಅದನ್ನು ಸಾರುವ ಮನೋಧರ್ಮ ಅದಕ್ಕೆ ಆರಿಸಿದ ಉಪಮೆಗಳ ಸ್ವಾರಸ್ಯ ಇವನ್ನು ಗಮನಿಸಬೇಕು. ಅಂತರಂಗದ ಆಳವಾದ ಅನುಭವವನ್ನೂ ಭಕ್ತಿಯ ನಿರ್ಭರತೆಯನ್ನೂ ತಿಳಿಸುವ ಅವರ ಕೀರ್ತನೆಗಳು ಕನ್ನಡ ನುಡಿಗೆ ತೊಡವಾದ ಭಾವಗೀತೆಗಳಾಗಿವೆ. 'ತನು ನಿನ್ನದು ಜೀವನ ನಿನ್ನದು', 'ತಲ್ಲಣಿಸದಿರು ಕಂಡ್ಯ ತಾಳು ಮನವೇ', 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ', ' ನನ್ನಿಂದ ನಾನೇ ಜನಿಸಿ ಬಂದೆನೇ' - ಈ ಮೊದಲಾದವುಗಳಲ್ಲಿ ಭಾವಗೀತೆಯ ಸತ್ವ ಮತ್ತು ಭಕ್ತಿ ಸಮರಸವಾಗಿದೆ. ಮೊದಲಿನೆರಡನ್ನು ಕೂಡಿ ನೋಡಿದರೆ ಪರಮಾತ್ಮನಲ್ಲಿ ಅವನ ಸಮರ್ಪಣ ಭಾವವು ಎಷ್ಟು ಮಾಗಿತ್ತು. ಅದರಿಂದ ಚಿಂತೆ-ಭೀತಿಗಳೆಲ್ಲ ಮಾಯವಾಗಿ ಸಹನೆ-ಶಾಂತಿಗಳಲ್ಲಿ ಅವನ ಮನಸ್ಸು ಎಷ್ಟು ಸ್ಥಿರವಾಗಿ ಮುಳುಗಿತ್ತು ಎಂಬುದನ್ನು ತಿಳಿಯಲು ಬರುತ್ತದೆ. ಅವರ ನಿರೂಪಣಾ ಪದ್ಧತಿಯಲ್ಲಿಯ ಕವಿತಾಸತ್ತ್ವವು ಹೃದಯವನ್ನು ಸೂರೆಗೊಳ್ಳುತ್ತದೆ.

ಒಗಟಿನಂತಹ ಹಾಡು ಮತ್ತು ಬೆಡಗಿನ ಪದಗಳಿಗೆ ಮುಂಡಿಗೆಗಳು ಎಂಬ ಹೆಸರಿದೆ. ಈ ಪ್ರಕಾರದಲ್ಲಿ ಕನ್ನಡ ಸಾಹಿತ್ಯಕ್ಕೆ ಕನಕದಾಸರು ನೀಡಿದ ಕೊಡುಗೆ ಅಮೂಲ್ಯವಾದುದು. ತತ್ತ್ವಜ್ಞಾನ, ಆತ್ಮಾನುಭವಗಳನ್ನು ಅವರಿಲ್ಲಿ ವಿವರಿಸಿದ್ದಾರೆ. ಅಂದಿನ ಸಮಾಜಕ್ಕೆ ಕಹಿಗುಳಿಗೆಗಳನ್ನು ತಿನ್ನಿಸಿದ್ದಾರೆ. ಪಂಡಿತರಿಗೆ ಮುಂಡಿಗೆಗಳ ಮೂಲಕ ಸವಾಲೆಸಗಿದ್ದಾರೆ. ವಿಡಂಬನೆಯ ಮೂಲಕ ಸಮಾಜದ ಅಂಕು-ಡೊಂಕುಗಳನ್ನು ತಿದ್ದಲು ಪ್ರಯತ್ನಿಸಿದ್ದಾರೆ. ಕಟ್ಟಿಗೆಯ ದೊಡ್ಡ ತೊಲೆಯನ್ನು ಹೇಗೆ ಎತ್ತಲು ಸಾಧ್ಯವಿಲ್ಲವೊ ಹಾಗೆಯೇ ಕನಕದಾಸರ ಈ ಬಗೆಯ ಹಾಡುಗಳು ಸುಲಭವಾಗಿ ಅರ್ಥ ಮಾಡಲು ಸಾಧ್ಯವಿಲ್ಲವೆಂದೇ ಇವುಗಳಿಗೆ ಮುಂಡಿಗೆಗಳೆಂದು ಕರೆದಿರಬಹುದು. ಕನಕದಾಸರು ಮುಂಡಿಗೆ ರಚಿಸಲು

ರತಿ - ಮನ್ಮಥ, ಉಷಾ - ಅನಿರುದ್ಧರ ಪ್ರೇಮಗಾಥೆಯನ್ನು ದಾಸರು ಅತ್ಯಂತ ಸೊಗಸಾಗಿ ಕಾವ್ಯದಲ್ಲಿ ನಿರೂಪಿಸಿದ್ದಾರೆ. ಮಹಾಭಾರತ, ಭಾಗವತ ಮತ್ತು ಪುರಾಣಗಳಿಂದ ಕಥಾವಸ್ತುವನ್ನು ಆಯ್ದುಕೊಳ್ಳಲಾಗಿದೆ. ದೈವೀ ಪಾತ್ರಗಳನ್ನು ಶೃಂಗಾರ ಕಾವ್ಯವೊಂದರಲ್ಲಿ ಜೀವಂತವಾಗಿರಿಸಿದ ಶ್ರೇಯಸ್ಸು ಈ ಕಾವ್ಯದ್ದು. ಜೊತೆಗೆ ರಾಜಕೀಯದ ಉದ್ದೇಶವೂ ಇರುವಂತಿದೆ. ಇದನ್ನು 'ಕೃಷ್ಣಚರಿತೆ' ಎಂದು ಕರೆದುದರಲ್ಲೇ ಆ ಸೂಚನೆ ಇರಬಹುದು. ವರ್ಣನಾ ಭಾಗಗಳಲ್ಲಿ ಕೃಷ್ಣದೇವರಾಯನ ಕಾಲದ ವಿವಿಧ ಜೀವನವನ್ನು ಬಣ್ಣಿಸಲಾಗಿದೆ. ಹಾಗಾಗಿ ವಿಜಯನಗರದ ಸಮಕಾಲೀನ ಜೀವನವನ್ನು ನಮ್ಮ ಕಣ್ಮುಂದೆ ಪೌರಾಣಿಕ ಪಾತ್ರಗಳ ಹಿನ್ನೆಲೆಯಲ್ಲಿ ತೆರೆದು ನಿಲ್ಲಿಸುವ ಯತ್ನವೂ ಈ ಕೃತಿಯಲ್ಲಿ ಇದೆ ಎನ್ನಬಹುದು.

ಶ್ರೀ ಕೃಷ್ಣನೇ ಮೊದಲಾದ ಪುರಾಣ ವ್ಯಕ್ತಿಗಳನ್ನು ಅವಲಂಬಿಸಿಯೇ ರಚಿತವಾದದ್ದು 'ಮೋಹನ ತರಂಗಿಣಿ' ಪೂರ್ಣವಾಗಿ ಪುರಾಣಕಥೆಯನ್ನೇ ಆಧರಿಸಿದರೂ ಈ ಕಥೆ ಪ್ರತಿಭಾನ್ವಿತ ಕವಿಯ ಕೈಯಲ್ಲಿ ಹೊಸರೂಪವನ್ನು ಪಡೆದು ಕಾವ್ಯದ ಸತ್ವನ್ನು ತಾನಾಗಿಯೇ ಹೆಚ್ಚಿಸಿಕೊಂಡಿದೆ. ಇದರಲ್ಲಿ ಬರುವ ಪಾತ್ರಸೃಷ್ಟಿ, ಜೀವನದೃಷ್ಟಿ, ವರ್ಣನಾವೈಖರಿ, ಪದಲಾಲಿತ್ಯ ಎಲ್ಲವೂ ವಿಶಿಷ್ಟತೆಯಿಂದ ಕೂಡಿ ಜೀವಂತವಾಗಿ ಓದುಗರಲ್ಲಿ ಉಲ್ಲಾಸವನ್ನುಂಟುಮಾಡುತ್ತವೆ. ಇದಕ್ಕೆ ಕಾರಣ ಕನಕದಾಸರ ವಿಶೇಷ ಅಧ್ಯಯನ, ವಿಶಿಷ್ಟ ಪ್ರತಿಭೆ.

ಕೃಷ್ಣ, ರುಕ್ಮಿಣಿ, ರತಿ, ಕಾಮ, ಶಂಬರಾಸುರ, ಅನಿರುದ್ಧ, ಬಾಣ, ಉಷೆ, ಚಿತ್ರಲೇಖೆ ಮೊದಲಾದ ಎಲ್ಲ ವ್ಯಕ್ತಿಗಳೂ ಈ ಕಾವ್ಯದಲ್ಲಿ ಜೀವಂತ ವ್ಯಕ್ತಿಗಳಾಗಿ ಮೆರೆಯುತ್ತಾರೆ. ಅನಿರುದ್ಧನನ್ನು ಬಾಣನು ಸೆರೆಯಲ್ಲಿಟ್ಟಿರುವನೆಂದು ತಿಳಿದು ಶ್ರೀ ಕೃಷ್ಣನು ಕೂಡಲೆ ಯುದ್ಧಕ್ಕೆ ನಡೆಯುತ್ತಾರೆ. ಅನಿರುದ್ಧನಿಂದ ತನಗೊದಗುವ ಕೇಡನ್ನು ತಪ್ಪಿಸಿಕೊಳ್ಳಲೋಸುಗ ಮಗವನ್ನು ಕದ್ದೊಯ್ದು ಶಂಬರನು ದೈತ್ಯನಾದರೂ ತಾನು ಮಗುವನ್ನು ಕೊಲ್ಲಲು ಇಚ್ಛಿಸುವುದಿಲ್ಲ. ಪ್ರಾಣರಕ್ಷಣೆಗೋಸ್ಕರ ಕದ್ದೊಯ್ದ ಮಗುವನ್ನು ಪಾಪಕ್ಕೆ ಹೆದರಿ ಸಮುದ್ರದಲ್ಲಿ ಬಿಸುಡುತ್ತಾನೆ. ಬಾಣಾಸುರನು ತಾನು ಸಹಸ್ರ ತೋಳುಗಳನ್ನು ಪಡೆದು ಅಜೇಯನೆನಿಸಿಕೊಂಡು ಅತ್ಯಂತ ವೈಭವದಿಂದ ಮೆರೆಯುತ್ತಿದ್ದರೂ ಶ್ರೇಷ್ಠ ಶಿವಭಕ್ತನಾಗಿ ಕಂಗೊಳಿಸುತ್ತಾನೆ. ಹೀಗೆ ಇಲ್ಲಿ ಬರುವ ಎಲ್ಲ ವ್ಯಕ್ತಿಗಳಲ್ಲಿಯೂ ಮಾನವ ಸಹಜವಾದ ಕೋಪ, ತಾಪ, ದಯೆ, ಭಕ್ತಿಗಳೆಲ್ಲವನ್ನೂ ಕಾಣಬಹುದು.

ಸೌರಾಷ್ಟ್ರ, ದ್ವಾರಕಾಪುರ, ಕುಸುಮಾವಟಿ, ಶೋಣಿತಪುರ ಇವುಗಳ ನಗರವರ್ಣನೆ, ಕಾಮದಹನ, ಬಾಣಾಸುರನ ಶಿವಪೂಜೆ ಮೊದಲಾದ ಸನ್ನಿವೇಶ ಚಿತ್ರಣ, ಯುದ್ಧವರ್ಣನೆ ಇತ್ಯಾದಿ ವರ್ಣನಾ ಭಾಗಗಳನ್ನು ಸವಿವರವಾಗಿ ಕಣ್ಣಿಗೆ ಕಟ್ಟುವಂತೆ ಬಿಡಿಸಲಾಗಿದೆ. ಇಲ್ಲೆಲ್ಲಾ ಕನಕದಾಸರ ಸಮಕಾಲೀನ ಜೀವನದ ತುಣುಕುಗಳು ಸಿಕ್ಕುತ್ತವೆ. ದ್ವಾರಕಾಪುರದ ವರ್ಣನೆಯನ್ನೇ ನೋಡಬಹುದು. ಅಲ್ಲಿ ಧರ್ಮಿಷ್ಠರಿಂದ ನಿರ್ಮಿತವಾದ ಅರವಟ್ಟಿಗೆಗಳು, ಸೋಮಸೂರಿಯ ವೀಥಿ, ವೀಥಿಯಿಕ್ಕೆಲದಲ್ಲಿ ಹೇಮನಿರ್ಮಿತ ಸೌದದೋಳಿ, ಸುರಗಿ ಸೇವಂತಿಗೆ ಮಂದ ಮಂದಾರ ಪಾದರಿ ಕಂಚಿ ಕಣಿಗಿಲೆ ದವನ ಕೆಂಜಾಜಿಗಳನ್ನು ರಾಶಿಯಾಗೊಟ್ಟಿಕೊಂಡ ಪುಷ್ಪದಂಗಡಿಗಳು, ಕರ್ಪೂರ ಕಸ್ತೂರಿ ಪುಣುಗು ಜವಾಜಿ ಮೊದಲಾದ ಸುಗಂಧದ ಅಂಗಡಿಗಳು, ಉತ್ತತ್ತೆ ಖರ್ಜೂರ ದ್ರಾಕ್ಷಿ ಸಕ್ಕರೆ ಬೆಲ್ಲ, ತಾನೇ ತಾನಾಗಿ ಕಳಿತ ಹಣ್ಣುಗಳು ಮೊದಲಾದವುಗಳ ಅಂಗಡಿ ಸಾಲುಗಳನ್ನು ನೋಡಿದರೆ ಕಣ್ಣಿಗೆ ಕಟ್ಟಿದಂತಹ ದೃಶ್ಯ ಒಡಮೂಡುತ್ತದೆ. ಹಾಗೆಯೇ ವಿಜಯನಗರದ ವೈಭವ ಕೂಡ.

ಸ್ವತಃ ದಂಡನಾಯಕರಾದ ಕನಕದಾಸರಿಗೆ ಯುದ್ಧವರ್ಣನೆಯಲ್ಲಿ ಹೆಚ್ಚು ಆಸಕ್ತಿಯಿದ್ದಿತೆಂಬುದು ಅಸಹಜವಲ್ಲ. ಉಷಾ - ಅನಿರುದ್ಧರ ಪ್ರಣಯ ಕೊನೆಗೆ ಕೃಷ್ಣ-ಬಾಣಾಸುರರ ಯುದ್ಧವಾಗಿ ರೂಪತಾಳುತ್ತದೆ. ಇದಕ್ಕೆ ಮೊದಲು ಅನಿರುದ್ಧನನ್ನು ಹಿಡಿದು ತರುವಂತೆ ಬಾಣಾಸುರ ಕುಂಭಾಂಡನನ್ನು ಕಳುಹಿಸಿದಾಗ ಕುಂಭಾಂಡನಿಗೂ ಅನಿರುದ್ಧನಿಗೂ ನಡೆದ ಯುದ್ಧದ ಘೋರ ದೃಶ್ಯಗಳನ್ನು ಕನಕದಾಸರು ಬಿಡಿಸಿದ್ದಾರೆ. ಕೃಷ್ಣ-ಬಾಣಾಸುರರ ಯುದ್ಧ ಹರಿ-ಹರರ ಸಮಾನತ್ವವನ್ನು ಸಾರುವ ಮೂಲಕ ಕಾವ್ಯದ ಕಥೆಗೆ ಮಂಗಳವನ್ನು ಹಾಡುತ್ತದೆ.

ವಿಸ್ತಾರವಾಗಿ ಸೊಗಸುತ್ತದೆ. ಸಮಾಜವಿಮರ್ಶೆ ಮತ್ತು ಜೀವನಚರಿತ್ರೆಗಳಿಗೆ ಮೀಸಲಾದ ಎಷ್ಟೋ ಕೀರ್ತನೆಗಳಿರುತ್ತವೆ. ಅವುಗಳಲ್ಲಿ ಕನಕದಾಸರು ಸಮಾಜದ ಕುಂದು ಕೊರತೆಗಳನ್ನು ಮುಚ್ಚುಮರೆಯಿಲ್ಲದೆ ಬಯಲಿಗೆಳೆದಿದ್ದಾರೆ. ಅವರ ಕಳಕಳಿ ನೈಜ, ಮಾತು ಹರಿತ, ನಿರೀಕ್ಷಣೆ ತೀವ್ರ ಎಂಬುದು ತಿಳಿಯುತ್ತದೆ. ಅವರ ಕಿರುನುಡಿಗಳು ಕೆಲವು ಸಲ ಕಿಡಿಯಂತೆ ಸಿಡಿಯುತ್ತವೆ. ಕುಲವಿಚಾರವನ್ನು ಕುರಿತ ಈ ಕೀರ್ತನೆಯನ್ನು ನೋಡಬೇಕು.

ಕುಲಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ

ಕಸರೊಳು ತಾವರೆ ಪುಟ್ಟಲು ಆದ ತಂದು
ಬಿಸಜನಾಭನಿಗರ್ಪಿಸಲಿಲ್ಲವೆ

ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು
ವಸುಧೆಯೊಳಗೆ ಭೂಸುರರುಣ್ಣಲಿಲ್ಲವೆ!!

ಮೃಗಗಳ ಮೈಯಲಿ ಪುಟ್ಟಿದ ಕಸ್ತೂರಿ
ತೆಗೆದು ಪೂಸುವರು ಭೂಸುರರೆಲ್ಲರೂ
ಬಗೆಯಿಂದ ನಾರಾಯಣನ್ಯಾವ ಕುಲದವ
ಅಗಜಾವಲ್ಲಭನ್ಯಾತರ ಕುಲದವನು

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ್ಮಾಂತರಾತ್ಮ ನೆಲೆಯಾದಿಕೇಶವ
ಆತನೊಲಿದ ಮ್ಯಾಲೆ ಯಾತರ ಕುಲವಯ್ಯ!!

ಈ ಕೀರ್ತಿನೆಯಲ್ಲಿ ಕನಕದಾಸರ ವಿಚಾರಸ್ವಾತಂತ್ರ್ಯ, ಅದನ್ನು ಸಾರುವ ಮನೋಧರ್ಮ ಅದಕ್ಕೆ ಆರಿಸಿದ ಉಪಮೆಗಳ ಸ್ವಾರಸ್ಯ ಇವನ್ನು ಗಮನಿಸಬೇಕು. ಅಂತರಂಗದ ಆಳವಾದ ಅನುಭವವನ್ನೂ ಭಕ್ತಿಯ ನಿರ್ಭರತೆಯನ್ನೂ ತಿಳಿಸುವ ಅವರ ಕೀರ್ತನೆಗಳು ಕನ್ನಡ ನುಡಿಗೆ ತೊಡವಾದ ಭಾವಗೀತೆಗಳಾಗಿವೆ. 'ತನು ನಿನ್ನದು ಜೀವನ ನಿನ್ನದು', 'ತಲ್ಲಣಿಸದಿರು ಕಂಡ್ಯ ತಾಳು ಮನವೇ', 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ', ' ನನ್ನಿಂದ ನಾನೇ ಜನಿಸಿ ಬಂದೆನೇ' - ಈ ಮೊದಲಾದವುಗಳಲ್ಲಿ ಭಾವಗೀತೆಯ ಸತ್ವ ಮತ್ತು ಭಕ್ತಿ ಸಮರಸವಾಗಿದೆ. ಮೊದಲಿನೆರಡನ್ನು ಕೂಡಿ ನೋಡಿದರೆ ಪರಮಾತ್ಮನಲ್ಲಿ ಅವನ ಸಮರ್ಪಣ ಭಾವವು ಎಷ್ಟು ಮಾಗಿತ್ತು. ಅದರಿಂದ ಚಿಂತೆ-ಭೀತಿಗಳೆಲ್ಲ ಮಾಯವಾಗಿ ಸಹನೆ-ಶಾಂತಿಗಳಲ್ಲಿ ಅವನ ಮನಸ್ಸು ಎಷ್ಟು ಸ್ಥಿರವಾಗಿ ಮುಳುಗಿತ್ತು ಎಂಬುದನ್ನು ತಿಳಿಯಲು ಬರುತ್ತದೆ. ಅವರ ನಿರೂಪಣಾ ಪದ್ಧತಿಯಲ್ಲಿಯ ಕವಿತಾಸತ್ತ್ವವು ಹೃದಯವನ್ನು ಸೂರೆಗೊಳ್ಳುತ್ತದೆ.

ಒಗಟಿನಂತಹ ಹಾಡು ಮತ್ತು ಬೆಡಗಿನ ಪದಗಳಿಗೆ ಮುಂಡಿಗೆಗಳು ಎಂಬ ಹೆಸರಿದೆ. ಈ ಪ್ರಕಾರದಲ್ಲಿ ಕನ್ನಡ ಸಾಹಿತ್ಯಕ್ಕೆ ಕನಕದಾಸರು ನೀಡಿದ ಕೊಡುಗೆ ಅಮೂಲ್ಯವಾದುದು. ತತ್ತ್ವಜ್ಞಾನ, ಆತ್ಮಾನುಭವಗಳನ್ನು ಅವರಿಲ್ಲಿ ವಿವರಿಸಿದ್ದಾರೆ. ಅಂದಿನ ಸಮಾಜಕ್ಕೆ ಕಹಿಗುಳಿಗೆಗಳನ್ನು ತಿನ್ನಿಸಿದ್ದಾರೆ. ಪಂಡಿತರಿಗೆ ಮುಂಡಿಗೆಗಳ ಮೂಲಕ ಸವಾಲೆಸಗಿದ್ದಾರೆ. ವಿಡಂಬನೆಯ ಮೂಲಕ ಸಮಾಜದ ಅಂಕು-ಡೊಂಕುಗಳನ್ನು ತಿದ್ದಲು ಪ್ರಯತ್ನಿಸಿದ್ದಾರೆ. ಕಟ್ಟಿಗೆಯ ದೊಡ್ಡ ತೊಲೆಯನ್ನು ಹೇಗೆ ಎತ್ತಲು ಸಾಧ್ಯವಿಲ್ಲವೊ ಹಾಗೆಯೇ ಕನಕದಾಸರ ಈ ಬಗೆಯ ಹಾಡುಗಳು ಸುಲಭವಾಗಿ ಅರ್ಥ ಮಾಡಲು ಸಾಧ್ಯವಿಲ್ಲವೆಂದೇ ಇವುಗಳಿಗೆ ಮುಂಡಿಗೆಗಳೆಂದು ಕರೆದಿರಬಹುದು. ಕನಕದಾಸರು ಮುಂಡಿಗೆ ರಚಿಸಲು

ಹಿಂದಿನ ವಚನಕಾರರ ಕೃತಿಗಳು ಪ್ರೇರಣೆ ನೀಡಿರಬಹುದು. ಶಬ್ದ ಚಮತ್ಕಾರ, ಪೌರಾಣಿಕ ಘಟನೆ ಇವುಗಳನ್ನು ಅವರ ಮುಂಡಿಗೆಗಳು ಒಳಗೊಂಡಿವೆ.

3.6.2 ಭಾಷೆ ಶೈಲಿ

ಕನಕದಾಸರು ತಮ್ಮ ಸುತ್ತಣ ಜೀವನದ ಬಗೆಗೆ ಹೇಗೆ ಜೀವಂತ ಪ್ರಜ್ಞೆಯುಳ್ಳವರಾಗಿದ್ದರೋ ಅಷ್ಟರಮಟ್ಟಿಗೆ ತಮ್ಮ ಸುತ್ತಣ ಜನಭಾಷೆಯ ಬಗೆಗೂ ಎಚ್ಚರವನ್ನು ಕಾಯ್ದುಕೊಂಡಂತೆ ತೋರುತ್ತದೆ. ಆದುದರಿಂದಲೇ ಅವರ ಕೃತಿಗಳ ಶೈಲಿ ಬಹುಮಟ್ಟಿಗೆ ದೇಸೀಯತೆಯ ಲಕ್ಷಣಗಳನ್ನು ತುಂಬಿಕೊಂಡಿದೆ. ಅವರ ಶೈಲಿಯಲ್ಲಿ 'ನಾಡೊಳಗುಳ್ಳ ಜಾಣಜಾಣೆಯರೊಡನಾಡುವ ಸವಿಮಾತುಗಳನ್ನು 'ಹಾಡುಗಬ್ಬ' ವಾಗಿ ವಿಸ್ತರಿಸುವ ಜಾಣ್ಮೆ ಕಂಡುಬರುತ್ತದೆ. ಅವರಲ್ಲಿ ಕೇವಲ ಸುಶಿಕ್ಷಿತ ಸಮಾಜದ ಭಾಷೆ ಮಾತ್ರವಲ್ಲ. ಅವರು ಹುಟ್ಟಿ ಬೆಳೆದು ಬಂದ ಅಶಿಕ್ಷಿತ ಸಮಾಜದ ಭಾಷೆಯೂ ಯಥಾವತ್ತಾಗಿ ಬಂದಿದೆ. 'ದೇವೀ ನಮ್ಮದ್ಯಾವರು ಬಂದರು', 'ಬನ್ನಿರೇ ನೋಡಬನ್ನಿರೇ', 'ಆತನೊಲಿದಮ್ಯಾಲೆ ಯಾತರ ಕುಲವಯ್ಯ' ಎನ್ನುವಂತಹ ಅಭಿವ್ಯಕ್ತಿಗಳು ಇದಕ್ಕೆ ನಿದರ್ಶನ. ಅಷ್ಟೇ ಅಲ್ಲ ಅವರು ಸಾಕಷ್ಟು ಪೂರ್ವಕವಿಗಳ ಕಾವ್ಯಾಭ್ಯಾಸ ಮಾಡಿ ಪ್ರೌಢಭಾಷೆಯ 'ವ್ಯುತ್ಪತ್ತಿ'ಯನ್ನು ಪಡೆದವರಾಗಿದ್ದರೂ, ಅವರ ಕೃತಿಗಳಲ್ಲಿ ಆಡಂಬರವಿಲ್ಲದ ಸಂಸ್ಕೃತವು ತಿಳಿಯಾದ ತಿರುಳ್ಗನ್ನಡದೊಂದಿಗೆ ಹೊಂದಿದ ಸಮರಸತೆಯನ್ನು ಗುರುತಿಸಬಹುದು. ಸರಳತೆ ಹೃದ್ಯತೆಗಳೇ ಅವರ ಶೈಲಿಯ ವಿಶಿಷ್ಟತೆಯ. ಎಲ್ಲಿಯೂ ಭಾಷೆ ಪೆಡಸಾಗಿಲ್ಲ; ಎತ್ತಿಕೊಂಡ ವಸ್ತು-ಭಾವಗಳಿಗೆ ಉಚಿತವಾಗಿ, ಸರಳವದ ಮಾತುಗಳಲ್ಲಿ ವಿಶೇಷವಾದ ಅರ್ಥವನ್ನು ವಿಸ್ತರಿಸುತ್ತಾ ಹೋಗುತ್ತದೆ. 'ಮನವೆನ್ನ ಮಾತ ಕೇಳದು ಕಾಣೊ ಗೋವಿಂದ', 'ಅಹುದಾದರಹುದೆನ್ನಿ ಅಲ್ಲವಾದರಲ್ಲವೆನ್ನಿ', 'ದೇವರಿಲ್ಲದ ಗುಡಿಯು ಹಾಳುಬಿದ್ದಂಗಡಿಯು... ಕರ್ಮವಿಲ್ಲದ ಗಂಡು ಕರಿಯ ಒನಕೆಯ ತುಂಡು' - ಈ ಮಾತುಗಳಲ್ಲಿರುವ ಲಾಲಿತ್ಯ ಮತ್ತು ಸರಳತೆ 'ಬೀಜ ವೃಕ್ಷದೊಳಾಯ್ತು, ವೃಕ್ಷಕ್ಕೆ ಬೀಜವಾರಿಂದಾಯ್ತು',' ಸತ್ತವರಿಗಳಲೇಕೆ ತನ್ನನು ಹೆತ್ತವರು ಹೊತ್ತವರುಗಳು ಸತ್ತುಹೋಗುವರಲ್ಲದುಳಿವರೆ?'- ಈ ಪ್ರಶ್ನೆಶೈಲಿಯಲ್ಲಿ ಪ್ರಕಟವಾಗುವ ವೈಚಾರಿಕ ಮನೋಧರ್ಮ; 'ಹೂಡಿರಲು ಮರ ಮುಟ್ಟು ಮಾಂಸದ ಗೋಡೆ ಚರ್ಮದ ಹೊದಿಕೆ ನರಗಳ ಕೂಡೆ ಹಿಂಡಿಗೆ ಬಿಗಿದ ಮನೆಯೊಳಗಾತ್ಮನಿರುತಿರಲು'-ಇಂತಹ ವರ್ಣನೆಗಳಿಂದ ಮೈದಾಳಿ ನಿಲ್ಲುವ ಪ್ರತಿಮಾ ವೈಭವ ಇವುಗಳು ಕನಕದಾಸರ ಶೈಲಿಯ ವಿಶಿಷ್ಟತೆಯನ್ನು ಎತ್ತಿಹಿಡಿದು ಅವರು ನಿಜವಾದ ಕವಿಗಳು ಎನ್ನುವುದನ್ನು ತೋರಿಸುತ್ತವೆ.

ಹದಿನಾರನೆಯ ಶತಮಾನದಲ್ಲಿ ಪ್ರಚಲಿತವಾದ ವಿವಿಧ ಛಂದೋರೂಪಗಳಲ್ಲಿ ಕನಕದಾಸರು ಸಲೀಸಾಗಿ ಬರೆಯಬಲ್ಲರು;ಕೀರ್ತನೆಗಳ ಧಾಟಿಯಲ್ಲಿ, ಸಾಂಗತ್ಯದಲ್ಲಿ ಅವರ ಪ್ರಯೋಗ ಗಮನಾರ್ಹವಾಗಿದೆ. ಷಟ್ಪದಿ ಕೀರ್ತನೆ - ಸಾಂಗತ್ಯ ಈ ಮೂರು ರೀತಿಗಳಲ್ಲೂ ಪ್ರಧಾನವಾದ ದೇಸೀಯತೆ, ತಿಳಿಯಾಗಿ ನಿರರ್ಗಳವಾಗಿ ಎಂತಹ ಸಾಮಾನ್ಯ ಓದುಗನ ಮನಸ್ಸನ್ನೂ ಸೂರೆಗೊಳ್ಳುವಂತಿದೆ. ಅವರ ಷಟ್ಪದಿಗಳಲ್ಲಿ ಹರಿಭಕ್ತಿಸಾರ, ರಾಮಧಾನ್ಯ ಚರಿತದಲ್ಲಿ ಅಲ್ಲಲ್ಲಿ, ನಳಚರಿತ್ರೆಯಲ್ಲಿ ವಿಶೇಷವಾಗಿ ಕುಮಾರವ್ಯಾಸದ ಪ್ರಭಾವವಿದೆ; ಅವರ ಕೀರ್ತನೆಗಳಲ್ಲಿ ಪುರಂದರದಾಸರ ಛಾಯೆಯಿದೆ: ಅವರ 'ಕನಕನ ಮುಂಡಿಗೆ'ಗಳೆಂಬ ಕೆಲವು ರಚನೆಗಳಲ್ಲಿ ಬೆಡಗಿನ ವಚನಗಳ ಅನುಕರಣವಿದೆ. ಆದರೆ ಈ ನೆಳಲು ಬೆಳಕಿನ ನಡುವೆ ಕನಕದಾಸರು ತಮ್ಮ ತೇಜಸ್ಸನ್ನು ಕಳೆದುಕೊಂಡಿಲ್ಲ.

3.6.3 ಮಹತ್ವ

ಕನಕದಾಸರು ದಾಸರಲ್ಲಿ ಕವಿಗಳು; ಅದೇ ಅವರ ವೈಶಿಷ್ಟ್ಯ. ಅವರನ್ನು ಬಿಟ್ಟರೆ ದಾಸಪರಂಪರೆಯ ಉಳಿದೆಲ್ಲರೂ ಪ್ರಧಾನವಾಗಿ ಕೀರ್ತಕಾರರು: ಕವಿಗಳಲ್ಲ. ಕನಕದಾಸರ ವ್ಯಕ್ತಿತ್ವ ದಾಸಪರಂಪರೆಯ 'ಭಕ್ತಿಪ್ರಜ್ಞೆ'ಗೆ ಒಳಗಾದರೂ, ಅವರ ಭಕ್ತಿಭಾವ ಕಾವ್ಯಪ್ರಜ್ಞೆಗೆ ಮೂಲಭಿತ್ತಿಯಾಗಿ ಪರಿಣಮಿಸಿತು.

ಆದಕಾರಣವೇ ಅವರು ಕೇವಲ ಕೀರ್ತನಕಾರರಾಗಿ ಮಾತ್ರವಲ್ಲದೆ ಕನ್ನಡದ ಕವಿಗಳ ಸಾಲಿನಲ್ಲಿಯೂ ನಿಲ್ಲಬಲ್ಲವರಾಗಿದ್ದಾರೆ. ಉಳಿದ ದಾಸರಿಗಿಂತ ಭಿನ್ನವಾದ ಕಾವ್ಯಪ್ರಜ್ಞೆ ಕನಕದಾಸರಲ್ಲಿದೆ ಎಂಬ ಸಂಗತಿ ಅವರ ಕೃತಿಗಳನ್ನು ಪರಿಶೀಲಿಸಿದರೆ ಸ್ಪಷ್ಟವಾಗುತ್ತದೆ. ಅವರ 'ಸಾಹಿತ್ಯ ಕೃತಿ'ಗಳೊಂದಿಗೆ ಹೋಲಿಸಿದರೆ ಅವರ 'ಕೀರ್ತನೆ'ಗಳು ಸಂಖ್ಯೆಯಲ್ಲಿ ತೀರಾ ಕಿರಿದಾಗಿಯೇ ಗೋಚರಿಸುತ್ತವೆ. ಅವರ ಕೀರ್ತನೆಗಳನ್ನೂ ಮತ್ತು ಹರಿಭಕ್ತಿಸಾರವನ್ನೂ ಒಂದು ಮುಖವಾಗಿ ಇರಿಸಿಕೊಂಡರೆ, ಅವರ ನಳಚರಿತ್ರೆ, ಮೋಹನತರಂಗಿಣಿ, ರಾಮಧಾನ್ಯ ಚರಿತ್ರೆ ಇವುಗಳನ್ನೇ ಬೇರೊಂದು ಮುಖವಾಗಿ ಇರಿಸಬಹುದು. ಈ ಎರಡು ಮುಖಗಳಲ್ಲಿ ಒಂದು ಸಂಪೂರ್ಣ ಭಕ್ತಿಸಾಹಿತ್ಯ, ಇನ್ನೊಂದು ಭಕ್ತನೂ ಆದ ಕವಿಯಿಂದ ನಿರ್ಮಿತವಾದ ಸಾಹಿತ್ಯ. ಒಂದು ವ್ಯಕ್ತಿನಿಷ್ಠ ಕೀರ್ತನೆಗಳ ಮೂಲಕ ಗೌರವವನ್ನು ಸಲ್ಲಿಸಿದ್ದಲ್ಲದೆ ವಸ್ತುನಿಷ್ಠ ಕೃತಿಗಳನ್ನು ರಚಿಸುವುದರ ಮೂಲಕ ಕವಿಗಳ ಸಾಲಿಗೂ ಸೇರಿದ್ದಾರೆ. ಒಟ್ಟಿನಲ್ಲಿ ಕನಕದಾಸರ ವ್ಯಕ್ತಿತ್ವ ವ್ಯಕ್ತಿನಿಷ್ಠ ಹಾಗೂ ವಸ್ತುನಿಷ್ಠ ಮುಖಗಳಲ್ಲಿ ಅಭಿವ್ಯಕ್ತಿಯನ್ನು ಪಡೆದದ್ದು ಒಂದು ವಿಶೇಷತೆಯಾಗಿ ತೋರುತ್ತದೆ.

ಪುರಂದರದಾಸರ ಕೀರ್ತನೆಗಳ ಸಂಖ್ಯೆಗೆ ಹೋಲಿಸಿದರೆ ಕನಕದಾಸರ ಕೀರ್ತನೆಗಳು ಅತ್ಯಲ್ಪವಾಗಿ ಕಾಣುತ್ತವೆ. ಆದರೆ ಕನಕದಾಸರ ಕೀರ್ತನೆಗಳ ಸತ್ವವನ್ನು ಗಮನಿಸಿದರೆ, ಅವು ಪುರಂದರದಾಸರ ಕೀರ್ತನೆಗಳ ಸತ್ವದೊಂದಿಗೆ ಸಮಸ್ಪರ್ಧಿಯಾಗಬಲ್ಲವು. ಹಾಗೆ ನೋಡಿದರೆ ಪುರಂದರದಾಸರ ಕೀರ್ತನೆಗಳಿಗಿಂತ ಕನಕದಾಸರ ಕೀರ್ತನೆಗಳಲ್ಲಿ ಕಾವ್ಯಗುಣ ಒಂದು ಕೈ ಮಿಗಿಲಾಗಿಯೇ ಇರುವಂತೆ ತೋರುತ್ತದೆ. ಅದಕ್ಕೆ ಕಾರಣ ಕನಕದಾಸರು ಪ್ರಧಾನತಃ ಕವಿಗಳು ಎನ್ನುವುದೇ ಆಗಿದೆ.

ಪುರಂದರದಾಸರ ಕೃತಿಗಳ ನಿಜವಾದ ವಿಶೇಷತೆ ಇರುವುದು ಅವುಗಳು ಪ್ರಕಟಿಸುವ ಸಮಕಾಲೀನ ಜೀವನದ ಚಿತ್ರಣದಲ್ಲಿ. ಸಾಮಾಜಿಕ ಪ್ರಜ್ಞೆ ಎಂದರೆ ಕೇವಲ ರಾಜ-ಮಹಾರಾಜರ ಭೋಗ-ವೈಭವ ಜೀವನ ಪ್ರಜ್ಞೆ ಎನ್ನುವ ಭ್ರಮೆಯ ಗರಬಡಿದ ಎಷ್ಟೋ ಕವಿಗಳ ರಚನೆಯಿಂದ ಬೇಸತ್ತವರಿಗೆ, ಕನಕದಾಸರ ಕೃತಿಗಳಲ್ಲಿ ಸಮಕಾಲೀನ ಜೀವನದ ಯಥಾವತ್ತಾದ ಸಹಜ ವರ್ಣನೆಗಳನ್ನು ಕಂಡು ನಿಜಕ್ಕೂ ಸಂತೋಷವಾಗುತ್ತದೆ. ಅವರ ಕೀರ್ತನೆಗಲ್ಲಿ ತಕ್ಕಮಟ್ಟಿಗೆ, 'ಮೋಹನತರಂಗಿಣಿ' ಯಲ್ಲಿ ವಿಶೇಷವಾಗಿ ಇದು ಕಾಣಿಸುತ್ತದೆ.

ಕನಕದಾಸರು ತಮ್ಮ ಕವಿ ವಿಶಿಷ್ಟವಾದ ಸಹಜ ಪ್ರತಿಭೆಯಿಂದ, ಮನಸ್ಸಿನ ಉದಾರತೆಯಿಂದ, ವಸ್ತುವೈವಿಧ್ಯ ಹಾಗೂ ಛಂದೋವೈವಿಧ್ಯಗಳಿಂದ, ಸಮಕಾಲೀನ ಜೀವನ ಪ್ರಜ್ಞೆಯಿಂದ, ಪಂಥಬದ್ಧವಲ್ಲದ ಉದಾತ್ತ ವ್ಯಕ್ತಿತ್ವದಿಂದ ದಾಸಪರಂಪರೆಯಲ್ಲಿ ಮಾತ್ರವಲ್ಲದೆ ಕನ್ನಡ ಕವಿಗಳ ಪಂಕ್ತಿಯಲ್ಲಿಯೂ ವಿಶಿಷ್ಟವಾದ ಸ್ಥಾನವನ್ನು ಸಂಪಾದಿಸಿಕೊಂಡಿದ್ದಾರೆ.

3.7 ಇತರೆ ಸಾಂಗತ್ಯ ಕವಿಗಳು

ಈ ಅವಧಿಯಲ್ಲಿ ಸಾಂಗತ್ಯ ಕೃತಿಗಳನ್ನು ರಚಿಸಿದ ಕವಿಗಳಲ್ಲಿ ವಿಜಯಣ್ಣ (೧೪೩೦)ಕಲ್ಯಾಣಕೀರ್ತಿ (೧೪೩೯) ತೆರಕಣಾಂಬಿ ಬೊಮ್ಮರಸ (೧೪೮೫) ಮೂರನೆಯ ಮಂಗರಸ (೧೫೦೮) ಸಾಳ್ವ (೧೫೫೦) ವಾದಿರಾಜ (೧೫೭೦) ಗೋವಿಂದ ವೈದ್ಯ (೧೬೫೦) ಮೊದಲಾದವರು ಮುಖ್ಯರೆನಿಸಿದ್ದಾರೆ. ಇವರಲ್ಲಿ ಕೆಲವು ಕವಿ, ಕೃತಿಗಳನ್ನು ನಾಲ್ಕೈದು ವಾಕ್ಯಗಳಲ್ಲಿ (ತುಂಬಾಸಂಕ್ಷಿಪ್ತವಾಗಿ) ಪರಿಚಯ ಮಾಡಿಕೊಳ್ಳೋಣ.

3.7.0 ಕಲ್ಯಾಣ ಕೀರ್ತಿ (೧೪೩೯)

ಈತನ ಕಾಲ ೧೪೩೯. ಇವನು ಸಂಸ್ಕೃತದಲ್ಲಿ ಜಿನಯಜ್ಞಫಲೋದಯ ಮತ್ತು ಯಶೋಧರ ಚರಿತೆ ಕಾವ್ಯಗಳನ್ನೂ ಕನ್ನಡದಲ್ಲಿ ಅನುಪ್ರೇಕ್ಷೆ, ಕಾಮನಕಥೆ, ಜ್ಞಾನಚಂದ್ರಾಭ್ಯುದಯ, ಜಿನಸ್ತುತಿ, ತತ್ತ್ವಭೇದಾಷ್ಟಕ, ಚಿನ್ಮಯಚಿಂತಾಮಣಿ, ಫಣಿಕುಮಾರ ಚರಿತೆ ಮೊದಲಾದ ಕಾವ್ಯಗಳನ್ನೂ ರಚಿಸಿದ್ದಾನೆ.

ಕಾಮನಕಥೆ ಇದು ಸಾಂಗತ್ಯದಲ್ಲಿದೆ. ೨೨ನೆಯ ತೀರ್ಥಕರನಾದ ನೇಮಿನಾಥನ ಕಾಲದಲ್ಲಿದ್ದ ಕೃಷ್ಣನ ಮಗನಾದ ಪ್ರದ್ಯುಮ್ನನ ಚರಿತೆಯನ್ನು ಜೈನ ಪರಂಪರೆಗೆ ಅನುಗುಣವಾಗಿ ನಿರೂಪಿಸುವ ಕಾವ್ಯವಾಗಿದೆ ಇದು.

3.7.1 ವಿಜಯಣ್ಣ (೧೪೪೮)

ಈತನ ಕಾಲ ೧೪೪೮. ಕೃತಿ ದ್ವಾದಶಾನುಪ್ರೇಕ್ಷೆ. ಇದರಲ್ಲಿ ಅಧ್ರುವಾನುಪ್ರೇಕ್ಷೆ, ಶರಣಾನುಪ್ರೇಕ್ಷೆ, ಏಕತ್ವಾನುಪ್ರೇಕ್ಷೆ, ಅನ್ಯತ್ವಾನುಪ್ರೇಕ್ಷೆ, ಸಂಸಾರಾನುಪ್ರೇಕ್ಷೆ, ಲೋಕಾನುಪ್ರೇಕ್ಷೆ, ಅಶುಚಿತ್ವಾನುಪ್ರೇಕ್ಷೆ, ಅಪ್ರವಾನುಪ್ರೇಕ್ಷೆ, ಸಂಮಾನುಪ್ರೇಕ್ಷೆ, ನಿರ್ಜರಾಮಪ್ರೇಕ್ಷೆ, ಧರ್ಮಾನುಪ್ರೇಕ್ಷೆ ಬೋಧಿದುರ್ಲಭಾನು ಪ್ರೇಕ್ಷೆ ಎಂಬ ಹನ್ನೆರಡು(ದ್ವಾದಶ)ಅನುಪ್ರೇಕ್ಷೆಗಳನ್ನು ನಿರೂಪಿಸಲಾಗಿದೆ.

ಅನುಪ್ರೇಕ್ಷೆಗಳೆಂದರೆ ಚಿಂತನೆ, ಪರಿಭಾವನೆ ಎಂದರ್ಥ. ಯಾವುದೇ ಒಂದು ಜೀವ ಚತುರ್ಗತಿಗಳಲ್ಲಿನ ತೋಳಲಾಟಕ್ಕೆ ಕಾರಣವಾದ ಕರ್ಮಬಂಧವನ್ನು ಕಳಚಿಕೊಂಡು ಸದ್ಗತಿಯತ್ತ ನಡೆಯಲು ನೆರವಾಗಿ ನಿಲ್ಲುವ ಚಿಂತನೆಗಳಿವು. ಜೈನ ತತ್ವದಲ್ಲಿ ಬರುವ ಈ ಹನ್ನೆರಡು ಅನುಪ್ರೇಕ್ಷೆಗಳನ್ನು ಈ ಕಾವ್ಯ ಜನಪ್ರಿಯಗೊಳಿಸುವ ಧಾಟಿಯಲ್ಲಿ ಪರಿಚಯಾತ್ಮಕ ಗತಿಯಲ್ಲಿ ಸಂಯೋಜಿತವಾಗಿದೆ. ಸಾಂಗತ್ಯದ ಜತೆಗೆ ಅಲ್ಲಲ್ಲಿ ಕಂದಗಳೂ ವೃತ್ತಗಳೂ ಬಂದು ಕಾವ್ಯದ ರಚನೆ ವೈವಿಧ್ಯಮಯವಾಗಿದೆ, ಚೋತೋಹಾರಿಯಾಗೂ ಇದೆ.

3.7.2 ತೆರಕಣಾಂಬಿ ಬೊಮ್ಮರಸ (೧೪೮೫)

ಬೊಮ್ಮರಸ ಎಂಬ ಹೆಸರಿನ ಕನ್ನಡ ಕವಿಗಳು ನಾಲ್ಕು ಜನರಿದ್ದಾರೆ. ಅವರಲ್ಲಿ ತೆರಕಣಾಂಬಿಯ ಬೊಮ್ಮರಸನು ಜೈನಕವಿ. ಈತನನ್ನು ತೆರಣಾಂಬಿ ಬೊಮ್ಮರಸನೆಂದು ಕರೆಯುವುದು ರೂಢಿ.

1.7.2.0 ಕಾಲ ದೇಶ

ಈತನ ಕಾಲ ಕ್ರಿ.ಶ. ೧೪೮೫. ವಿಜಯನಗರದ ಪ್ರೌಢದೇವರಾಯನ (೧೪೧೯ -೧೪೪೬) ಆಸ್ಥಾನದಲ್ಲಿ ವಿದ್ವಾಂಸರನ್ನು ಜಯಿಸಿ ಜಯಪತ್ರವನ್ನು ಪಡೆದು ಕೀರ್ತಿಶಾಲಿಯಾದ ವಾದೀಭಸಿಂಹ ನೇಮಿಚಂದ್ರಾಚಾರ್ಯನ ಮಗ ಬೊಮ್ಮರಸೋಪಾಧ್ಯಾಯ. ಈ ಬೊಮ್ಮರಸೋಪಾದ್ಯಯನ ಮಗನೇ ತೆರಕಣಾಂಬಿ ಬೊಮ್ಮರಸ. ತೆರಕಣಾಂಬಿ (ತ್ರಿಕದಂಬಪುರ) ಇಂದು ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿರುವ ಗ್ರಾಮವಾಗಿದೆ.

3.7.2.1 ಕೃತಿಗಳು

ತೆರಕಣಾಂಬಿ ಬೊಮ್ಮರಸನು ಸನತ್ಕುಮಾರ ಚರಿತೆ ಮತ್ತು ಜೀವಂಧರ ಚರಿತೆ ಎಂಬ ಎರಡು ಕಾವ್ಯಗಳನ್ನು ರಚಿಸಿದ್ದಾನೆ. ಸನತ್ಕುಮಾರ ಚರಿತೆ ಭಾಮಿನೀಷಟ್ಪದಿಯಲ್ಲಿ ರಚಿತವಾಗಿದ್ದರೆ, ಜೀವಂಧರ ಚರಿತ್ರೆ ಸಾಂಗತ್ಯ ಛಂದಸ್ಸಿನಲ್ಲಿ ರಚಿತವಾಗಿದೆ.

3.7.2.1.0 ಜೀವಂಧರ ಚರಿತೆ

ಈ ಕಾವ್ಯದಲ್ಲಿ ೨೦ ಸಂಧಿಗಳಿದ್ದು ೧೪೧೯ ಪದ್ಯಗಳಿವೆ. ಜೈನ ವಾಙ್ಮಯದಲ್ಲಿ ಚಿರಪರಿಚಿತವಾದ ವಸ್ತುವನ್ನು ಈ ಕಾವ್ಯ ಒಳಗೊಂಡಿದೆ. ರಾಜಪುರಿ ನಗರದ ಅರಸನಾದ ಸತ್ಯಂಧರನ ಮಗನೇ ಜೀವಂಧರರಾಜ. ಈ ಜೀವಂಧರನು ಜೈನರ ೨೪ ಜನ ತೀರ್ಥಂಕರರಲ್ಲಿ ಅಂತಿಮನಾದ ವರ್ಧಮಾನ ಮಹಾವೀರನ

ಕಾಲದಲ್ಲಿದ್ದವನು. ಈತನು ಜೈನ ಪುರಾಣಗಳಲ್ಲಿ ಪ್ರಸಿದ್ಧ ಪುರುಷನಾಗಿರುವುದಲ್ಲದೆ ಜೈನರ ೨೪ ಜನ ಕಾಮದೇವರಲ್ಲಿ ಒಬ್ಬನಾಗಿದ್ದಾನೆ. ಈತನನ್ನು ಕುರಿತು ಸಂಸ್ಕೃತ ಪ್ರಾಕೃತ ಕನ್ನಡ ತಮಿಳು ಮೊದಲಾದ ಭಾಷೆಗಳಲ್ಲಿ ಹಲವಾರು ಕಾವ್ಯಗಳು ರಚಿತವಾಗಿವೆ. ಕನ್ನಡದಲ್ಲಿ ಜೀವಂಧರ ತೀರ್ಥಂಕರನನ್ನು ಕುರಿತು ಭಾಸ್ಕರ, ತೆರಕಣಾಂಬಿ ಬೊಮ್ಮರಸ, ಕೋಟೇಶ್ವರ ಮೊದಲಾದ ಕವಿಗಳು ಕಾವ್ಯ ಬರೆದಿದ್ದಾರೆ. ಈ ಹಲವಾರು ಕಾವ್ಯಗಳಲ್ಲಿ ಬೊಮ್ಮರಸನ ಕಾವ್ಯಕ್ಕೆ ಸರಳತೆ ಮತ್ತು ಆಕರ್ಷಕ ನಿರೂಪಣೆಯ ದೃಷ್ಟಿಯಿಂದ ವಿಶಿಷ್ಟ ಸ್ಥಾನವಿದೆ. ಕನ್ನಡದಲ್ಲಿ ಜೀವಂಧರನನ್ನು ಕುರಿತಾದ ಮೊದಲ ಕಾವ್ಯವೆಂಬ ಹೆಗ್ಗಳಿಗೂ ಇದು ಪಾತ್ರವಾಗಿದೆ. ಸಾಂಗತ್ಯವನ್ನು ಕಾವ್ಯಮಾಧ್ಯಮಕ್ಕೆ ಅಳವಡಿಸಿದ ಆರಂಭದ ಗಣ್ಯಕವಿಗಳಲ್ಲಿ ಒಬ್ಬನೆಂದು ತೆರಕಣಾಂಬಿ ಬೊಮ್ಮರಸನನ್ನು ಪರಿಗಣಿಸಬೇಕಾಗುತ್ತದೆ.

3.8 ಪರೀಕ್ಷೆ ಪ್ರಶ್ನೆಗಳು

1. ಸಾಂಗತ್ಯದಲ್ಲಿ ಮೊದಲು ಕಾವ್ಯ ರಚಿಸಿದ ಕವಿ ಮತ್ತು ಕೃತಿಯನ್ನು ತಿಳಿಸಿ.

....

....

....

2. ಸಾಂಗತ್ಯ ಮೂಲದ ಬಗ್ಗೆ ಟಿಪ್ಪಣಿ ಬರೆಯಿರಿ.

....

....

....

3. ಸಾಂಗತ್ಯ ಎಂದರೇನು? ತಿಳಿಸಿ.

....

....

....

4. ಶಿಶುಮಾಯಣನ ಕಾಲ ಮತ್ತು ಕೃತಿಗಳನ್ನು ತಿಳಿಸಿ.

....

....

....

5. 'ಸೊಬಗಿನ ಸೊನೆ' ಕೃತಿಯ ಬಗ್ಗೆ ಟಿಪ್ಪಣಿ ಬರೆಯಿರಿ.

....

....

....

6. ನಿಜಗುಣಶಿವಯೋಗಿ ಸಾಂಗತ್ಯದಲ್ಲಿ ಬರೆದಿರುವ ಕೃತಿ ಯಾವುದು? ತಿಳಿಸಿ.

....

....

....

7. ನಿಜಗುಣಶಿವಯೋಗಿಯ ಇನ್ನಿತರ ಕೃತಿಗಳನ್ನು ಪಟ್ಟಿಮಾಡಿ.

....

....

....

8. ನಿಜಗುಣಶಿವಯೋಗಿಯ ಕಾಲ ಮತ್ತು ದೇಶದ ಬಗ್ಗೆ ಟಿಪ್ಪಣಿ ಬರೆಯಿರಿ.

....

....

....

9. ನಿಜಗುಣಶಿವಯೋಗಿಯ ಕೃತಿಗಳ ವಸ್ತು ಮತ್ತು ರೂಪಗಳನ್ನು ತಿಳಿಸಿ.

....

....

....

10.ನಿಜಗುಣಶಿವಯೋಗಿಯ ಕೃತಿಗಳ ಶೈಲಿ ಮತ್ತು ಮಹತ್ವದ ಬಗೆಗೆ ತಿಳಿಸಿ.

....

....

....

11. ಕನಕದಾಸರ ಕಾಲ - ದೇಶವನ್ನು ತಿಳಿಸಿ.

....

....

....

12. ' ಮೋಹಿನಿ ತರಂಗಿಣಿ'ಯ ಬಗ್ಗೆ ಟಿಪ್ಪಣಿ ಬರೆಯಿರಿ.

....

....

....

13. ಕನಕದಾಸರ ಕೃತಿಗಳನ್ನು ಹೆಸರಿಸಿ.

....

....

....

14. ಕನಕದಾಸರ ಕಾವ್ಯಗಳ ವಸ್ತುವಿಶೇಷತೆಯನ್ನು ಒಂದೊಂದು ವಾಕ್ಯದಲ್ಲಿ ಪರಿಚಯಿಸಿಕೊಡಿ.

....

....

....

15. ದಾಸಪರಂಪರೆಯಲ್ಲಿ ಕನಕದಾಸರ ವಿಶೇಷತೆ ಏನು ?

....

....

....

16. ಸಾಂಗತ್ಯದಲ್ಲಿ ಕೃತಿ ರಚನೆ ಮಾಡಿರುವ ಕವಿಗಳನ್ನು ತಿಳಿಸಿ.

....

....

....

17. ಕಲ್ಯಾಣಕೀರ್ತಿ ಕಾಲ ತಿಳಿಸಿ.

....

....

....

18. ದ್ವಾದಶಾನುಪ್ರೇಕ್ಷೆ ಕೃತಿಯ ಕರ್ತೃ ಯಾರು?

....

....

....

19. ತೆರಕಣಾಂಬಿ ಬೊಮ್ಮರಸ ಕಾಲ ಯಾವುದು?

....

....

....

20. ತೆರಕಣಾಂಬಿ ಬೊಮ್ಮರಸ ಬರೆದ ಕೃತಿಗಳು ಯಾವುವು? ತಿಳಿಸಿ.

....

....

....

21. ಜೀವಂಧರ ಚರಿತೆಯ ವಸ್ತುವಿನ ವಿಶೇಷತೆ ಏನು?

....

....

....

22. ಕನಕದಾಸರ 'ರಾಮಧಾನ್ಯ ಚರಿತೆ' ಕುರಿತು ಬರೆಯಿರಿ.

....

....

....

23.ಸಾಳ್ವನ ಗ್ರಂಥದ ಹೆಸರೇನು? ತಿಳಿಸಿ.

....

....

....

24. 'ಕಂಠೀರವ ನರಸರಾಜ ವಿಜಯ' ದ ಕರ್ತೃ ಯಾರು?

....

....

....

25. 'ಕಾಮನಕಥೆ' ಕೃತಿಯ ಕರ್ತೃ ಯಾರು?

....

....

....

26. ಸಾಂಗತ್ಯ ಕವಿಗಳ ವೈಶಿಷ್ಟ್ಯತೆಯನ್ನು ಪಟ್ಟಿಮಾಡಿ ಬರೆಯಿರಿ.

....

....

....

3.8 ಸಾರಾಂಶ

ಕನ್ನಡ ಸಾಹಿತ್ಯದಲ್ಲಿ ಸಾಂಗತ್ಯ ಕಾಣಿಸಿಕೊಂಡಿದ್ದು ತುಂಬಾ ತಡವಾಗಿ. ಸಾಂಗತ್ಯ ಷಟ್ಪದಿರೂಪಗಳಾದ ಮೇಲೆ ಬಂದದ್ದು. ಒಂದೂವರೆ ಸಾವಿರ ವರ್ಷಗಳ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸಾಂಗತ್ಯದ ಚರಿತ್ರೆ ಕೇವಲ ಅಯ್ದು ನೂರು ವರ್ಷಗಳಷ್ಟು ಮಾತ್ರ. ಸಾಂಗತ್ಯ ಮೊದಲು ನಮ್ಮ ಕಣ್ಣಿಗೆ ಬೀಳುವುದು ಹದಿನೈದನೆಯ ಶತಮಾನದ ಅರುಣೋದಯದಲ್ಲಿ. ದೇಪರಾಜನ 'ಸೊಬಗಿನ ಸೊನೆ' ಕೃತಿಯೇ ಮೊದಲ ಸಾಂಗತ್ಯ ಗ್ರಂಥವಾಗಿದೆ. ಶಿಶುಮಾಯಣನ 'ತ್ರಿಪುರದಹನ ಸಾಂಗತ್ಯ' ರತ್ನಾಕರವರ್ಣಿಯ 'ಭರತೇಶವೈಭವ' ಮೂರನೆಯ ಮಂಗರಸನ 'ನೇಮಿಜಿನೇಶ ಸಂಗತಿ' ನಂಜುಂಡಕವಿಯ 'ಕುಮಾರರಾಮಸಾಂಗತ್ಯ' ಶಿಶುಮಾಯಣನ 'ಅಂಜನಾ ಚರಿತೆ' ಪಾಯಣವರ್ಣಿಯ 'ಜ್ಞಾನಚಂದ್ರ ಚರಿತೆ' ಮೊದಲಾದ ಕೃತಿಗಳು ಈ ಪ್ರಕಾರದಲ್ಲಿ ಕಾಣಿಸಿಕೊಂಡಿರುವ ಹಿರಿಯ ಕಾವ್ಯಗಳಾಗಿವೆ. ಷಟ್ಪದಿ ಹೇಗೆ ಕುಮಾರವ್ಯಾಸನಲ್ಲಿ ಪರಮಸಿದ್ಧಿಯನ್ನು ಕಂಡುಕೊಂಡಿತೋ ಅದೇ ರೀತಿ ಸಾಂಗತ್ಯ ರತ್ನಾಕರವರ್ಣಿಯಲ್ಲಿ ತನ್ನ ವೈಭವ ಶಿಖರವನ್ನು ಕಂಡುಕೊಂಡಿತು. ಆತನ 'ಭರತೇಶವೈಭವ' ಕನ್ನಡದ ಶ್ರೇಷ್ಠ ಮಹಾಕಾವ್ಯಗಳಲ್ಲಿ ಒಂದೆಂದು ಪರಿಗಣಿತವಾಗಿದೆ.

ಸಾಂಗತ್ಯದಲ್ಲಿ ಕೃತಿ ರಚನೆ ಮಾಡಿದ ಕವಿಗಳಲ್ಲಿ ಕನಕದಾಸರು, ನಿಜಗುಣಶಿವಯೋಗಿಗಳು, ಸಂಚಿಯ ಹೊನ್ನಮ್ಮ ಮೊದಲಾದವರು ಅಂಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ. 'ಮೋಹನ ತರಂಗಿಣಿ', 'ಪರಮಾನುಭವಬೋಧೆ' 'ಹದಿಬದೆಯ ಧರ್ಮ' ಇವು ಈ ಪ್ರಕಾರದಲ್ಲಿ ಕಂಡುಬರುವ ಇನ್ನಿತರ ಉತ್ತಮಕಾವ್ಯಗಳು. ಸಾಳ್ವನ 'ವೈದ್ಯ ಸಾಂಗತ್ಯ' ತೆರಕಣಾಂಬಿ ಬೊಮ್ಮರಸ 'ಜೀವಂಧರ ಚರಿತೆ' ಗೋವಿಂದ ವೈದ್ಯನ 'ಕಂಠೀರವ ನರಸರಾಜವಿಜಯ' ವಿಜಯಣನ 'ದ್ವಾದಶಾನುಪ್ರೇಕ್ಷೆ' ಹೆಸರಿಸಬಹುದಾದ ಇನ್ನಿತರ ಕೃತಿಗಳಾಗಿವೆ.

3.9 ಸ್ವಪರೀಕ್ಷೆ ಪ್ರಶ್ನೆಗಳಿಗೆ ಉತ್ತರಗಳು

1. ಈ ಪ್ರಶ್ನೆಗೆ ನೀವೇ ಉತ್ತರ ಹುಡುಕಿ ಬರೆಯಿರಿ.

2. ಸಾಂಗತ್ಯ ಎಂದರೆ ಸಂಗತಿಯಿಂದ ಕೂಡಿದ್ದು ಎಂದರ್ಥ. ಸಂಗತಿ ಎಂದರೆ ಮೇಳದೊಡನೆ ಸಾಗುವ ಗತಿ ಎಂದರ್ಥ ವಾದ್ಯವಿಶೇಷ ದೊಡನೆ ಸಾಗುವ ಹಾಡಾಗಿರುವುದರಿಂದಲೇ ಸಾಂಗತ್ಯ ಎಂಬ ಹೆಸರು ಬಂದಿದೆ.

4. ಶಿಶುಮಾಯಣನ ಕಾಲ ೧೪೨೭. ಶಿಶುಮಾಯಣ ಅಂಜನಾ ಚರಿತೆ ಮತ್ತು ತ್ರಿಪುರದಹನ ಸಾಂಗತ್ಯ ಎಂಬ ಎರಡು ಕೃತಿಗಳನ್ನು ಬರೆದಿದ್ದಾನೆ.

5. ಈ ಪ್ರಶ್ನೆಗೆ ನೀವೇ ಉತ್ತರ ಬರೆಯಿರಿ.

6. ನಿಜಗುಣಶಿವಯೋಗಿಯ 'ಪರಮಾನುಭವಬೋಧೆ' ಸಾಂಗತ್ಯದಲ್ಲಿ ರಚಿತವಾಗಿದೆ.

7. ವಿವೇಕಚಿಂತಾಮಣಿ, ಕೈವಲ್ಯಪದ್ಧತಿ, ಪುರಾತನರ ತ್ರಿವಿಧಿ, ಅನುಭವಸಾರ, ಪರಮಾರ್ಥಪ್ರಕಾಶಿಕೆ, ಪರಮಾರ್ಥಗೀತೆ ಇವು ನಿಜಗುಣಶಿವಯೋಗಿಯ ಕೃತಿಗಳು. ಸಂಸ್ಕೃತದಲ್ಲಿ ಅತ್ಮತರ್ಕಚಿಂತಾಮಣಿ ದರ್ಶನಸಾರ ಎಂಬ ಕೃತಿಗಳನ್ನು ರಚಿಸಿದನೆಂದು ಪ್ರತೀತಿಯಿದೆ. ಇವು ಉಪಲಬ್ಧವಿಲ್ಲ.

8. ನಿಜಗುಣಶಿವಯೋಗಿಯ ಕಾಲ ಸುಮಾರು ೧೫೦೦. ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಚಿಲಕವಾಡಿ ಗ್ರಾಮದವರು. ಇಲ್ಲಿನ ಶಂಭುಲಿಂಗಬೆಟ್ಟ ಈತನ ಕಾರ್ಯಕ್ಷೇತ್ರ. ಚಿಲಕವಾಡಿಯ ಸುತ್ತಮುತ್ತಲ ಪಾಳೆಯಪಟ್ಟಿನ ದೊರೆಯಾಗಿದ್ದ ಈತ ವೈರಾಗ್ಯಪರನಾಗಿ ಇಲ್ಲಿ ತಪಸ್ಸನ್ನಾಚರಿಸಿ ಜ್ಞಾನ ಸಂಪಾದಿಸಿದನೆಂದು ಹೇಳಲಾಗಿದೆ. ಶೈವ ಪರಂಪರೆಯ ಅದ್ವೈತಸಿದ್ಧಾಂತ, ವೇದ, ಉಪನಿಷತ್ತು ಪುರಾಣಾದಿಗಳನ್ನು ಚೆನ್ನಾಗಿ ತಿಳಿದಿದ್ದ ಈತ ಮಹಾತತ್ತ್ವಜ್ಞಾನಿ ಎನಿಸಿಕೊಂಡಿದ್ದಾನೆ.

9. ಪುರಾತನ ಶಿವಭಕ್ತಿಚಾರಿತ್ರ ನಿರೂಪಣೆ, ಸ್ತುತಿ ವೇದವೇದಾಂತಗಳ ಶಿವಾದ್ವೈತ ಸಿದ್ಧಾಂತ ನಿರೂಪಣೆ ಈತನ ಕೃತಿಗಳ ವಸ್ತು. ತ್ರಿಪದಿ ಸಾಂಗತ್ಯ ರಗಳೆ ಹಾಗೂ ಗದ್ಯರೂಪಗಳಲ್ಲಿ ಈತ ಕೃತಿಗಳನ್ನು ರಚಿಸಿದ್ದಾನೆ.

10. ನಿಜಗುಣಶಿವಯೋಗಿ ಶೈಲಿ ನಡುಗನ್ನಡ ಶೈಲಿಯಲ್ಲಿದೆ. ಆತನ ಶೈಲಿಯಲ್ಲಿ ಲಾಲಿತ್ಯವಿದೆ, ಮಾಧುರ್ಯವಿದೆ, ನಾದಸಂಪತ್ತಿಯಿದೆ. ವಿಷಯಗಳನ್ನು ಸೂತ್ರರೂಪದಲ್ಲಿ ಅಥವಾ ಭಾಷ್ಯರೂಪದಲ್ಲಿ ತಿಳಿಸುವುದು ಆತನ ಅದ್ವಿತೀಯ ಕಲೆ. ನಿಜಗುಣಶಿವಯೋಗಿ ಕೊಡುವ ಉಪಮೆ, ನಾಣ್ನುಡಿ ಮುಂತಾದವು ಅರ್ಥಪೂರ್ಣವಾಗಿವೆ. ಕೇವಲ ಶುದ್ಧ ಆತ್ಮದ ನೆಲೆಯಲ್ಲಿ ಮಾನವನಿಗೆ ಕೊಡಬೇಕಾದ ಉತ್ತಮ ದರ್ಶನವೊಂದನ್ನು ಆತನ ಕೃತಿಗಳಲ್ಲಿ ಕೊಡಲಾಗಿದೆ.

11. ಕನಕದಾಸ ಕಾಲ ಸುಮಾರು ೧೫೦೮ ರಿಂದ ೧೬೦೬ ಎಂದು ತಿಳಿದು ಬರುತ್ತದೆ. ಧಾರವಾಡ ಜಿಲ್ಲೆಯ ಬಾಡ ಕನಕದಾಸರ ಜನ್ಮ ಸ್ಥಳ ಕಾಗಿನೆಲೆ. ಬಂಕಾಪುರ, ಬೇಲೂರು ಈತನ

ಕಾರ್ಯಕ್ಷೇತ್ರಗಳು. ಕೊನೆಯ ದಿನಗಳನ್ನು ಕಾಗಿನೆಲೆಯಲ್ಲಿ ಕಳೆದಿರಬಹುದು ಎಂದು ತಿಳಿಯಲು ಆಸ್ಪದವಿದೆ.

12. ಈ ಪ್ರಶ್ನೆಗೆ ನೀವೇ ಉತ್ತರ ಬರೆಯಿರಿ.

13. ಮೋಹನ ತರಂಗಿಣಿ, ರಾಮಧಾನ್ಯಚರಿತ್ರೆ, ನಳಚರಿತ್ರೆ, ಹರಿಭಕ್ತಿಸಾರ, ನರಸಿಂಹಸ್ತವನ ಕೃತಿಗಳಲ್ಲಿದೆ ಅಸಂಖ್ಯಾತ ಕೀರ್ತನೆಗಳನ್ನು ಇವರು ರಚಿಸಿದ್ದಾರೆ.

14. ಕೃಷ್ಣ-ರುಕ್ಮಿಣಿ, ರತಿ-ಮನ್ಮಥ, ಉಷಾ-ಅನಿರುದ್ಧರ ಪ್ರಣಯಗಾಥೆಯನ್ನು 'ಮೋಹನತರಂಗಿಣಿ' ಯಲ್ಲಿ ನಿರೂಪಿಸಲಾಗಿದೆ. ಪ್ರಸಿದ್ಧ 'ನಳೋಪಾಖ್ಯಾನ'ದಲ್ಲಿ ಬರುವ ನಳದಮಯಂತಿಯ ಕಥೆ'ನಳ ಚರಿತ್ರೆ'ಯ ವಸ್ತು. ಇವೆರಡೂ ಶೃಂಗಾರ ಕಾವ್ಯಗಳು. ಸಮಕಾಲೀನ ಬದುಕಿನ ವಿಶೇಷತೆಗಳನ್ನು ಈ ಕೃತಿಗಳಲ್ಲಿ ಮೇಳೈಸುವ ಯತ್ನ ಮಾಡಲಾಗಿದೆ. 'ರಾಮಧಾನ್ಯ ಚರಿತ್ರೆ'ಒಂದು ವಿಶಿಷ್ಟಕಾವ್ಯ. ರಾಗಿ ಮತ್ತು ಭತ್ತದ ಜಗಳವನ್ನು ಪ್ರತಿಮಾತ್ಮಕವಾಗಿ ನಿರೂಪಿಸಲಾಗಿದೆ. ರಾಮನ ಮಧ್ಯಸ್ಥಿಕೆಯನ್ನು ತಂದು ಪುರಾಣದ ಆಯಾಮವನ್ನು ಕಲ್ಪಿಸಲಾಗಿದೆ. ದೀನದಲಿತರ ಪರವಾದ ನಿಲುವನ್ನು ಇಲ್ಲಿ ವ್ಯಕ್ತಗೊಳಿಸಲಾಗಿದೆ. 'ಹರಿಭಕ್ತ ಸಾರ' ಹರಿನಾಮಸ್ತುತಿ ಮತ್ತು ಪ್ರಾರ್ಥನೆಯನ್ನು ಒಳಗೊಂಡ ಕಾವ್ಯ.

15. ದಾಸಪರಂಪರೆಯಲ್ಲಿ ಕನಕದಾಸರು ಅಂಗ್ರಪಂಕ್ತಿಯ ಸ್ಥಾನದಲ್ಲಿ ನಿಲ್ಲುತ್ತಾರೆ. ಕೀರ್ತನಕಾರರು ಮಾತ್ರವಲ್ಲ ಕವಿಯೂ ಹೌದು. ಇದು ಮಿಕ್ಕ ಯಾವ ಹರಿದಾಸರಲ್ಲಿಯೂ ಕಾಣದ ವಿಶೇಷತೆ. ಕನಕದಾಸರು ಸಮಾಜದ ಕೆಳಸ್ತರದಿಂದ ಬಂದವರಾಗಿದ್ದು ಸಮಾಜದ ಕಟುವಾಸ್ತವವನ್ನು ಅನುಭವಿಸಿದವರಾಗಿದ್ದಾರೆ. ಇದರಿಂದ ಅವರ ರಚನೆಗಳು ಹೆಚ್ಚು ಹೃದ್ಯವೆನಿಸಿ ಚಿಕಿತ್ಸಕ ದೃಷ್ಟಿಕೋನದಿಂದ ಕೂಡಿವೆ.

16. ಈ ಪ್ರಶ್ನೆಗೂ ನೀವೇ ಉತ್ತರ ಬರೆಯಿರಿ.

17. 'ದ್ವಾದಶಾನುಪ್ರೇಕ್ಷೆ'ಕೃತಿಯ ಕರ್ತೃ ವಿಜಯಣ್ಣ.

18. ಕಲ್ಯಾಣಕೀರ್ತಿಯ ಕಾಲ ೧೪೩೯.

19. 'ತೆರಕಣಾಂಬಿ ಬೊಮ್ಮರಸನ ಕಾಲ ಕ್ರಿ.ಶ. ಸು. ೧೪೫೮.

20. ಅಂಜನಾಚರಿತೆ' ಮತ್ತು 'ತ್ರಿಪುರದಹನ ಸಾಂಗತ್ಯ'ಇವೆರಡು ಕೃತಿಗಳನ್ನು ತೆರಕಣಾಂಬಿ ಬೊಮ್ಮರಸ ಬರೆದಿದ್ದಾನೆ. ಈ ಎರಡೂ ಕೃತಿಗಳು ಸಾಂಗತ್ಯದಲ್ಲಿ ರಚಿತವಾಗಿವೆ.

21. ಪಾಠ ಓದಿಕೊಂಡು ಈ ಪ್ರಶ್ನೆಗೆ ನೀವೇ ಉತ್ತರ ಬರೆಯಿರಿ.

22. ಈ ಪ್ರಶ್ನೆಗೂ ನೀವೇ ಉತ್ತರ ಬರೆಯಿರಿ.

23. ಸಾಳ್ವನ ಗ್ರಂಥದ ಹೆಸರು 'ವೈದ್ಯಸಾಂಗತ್ಯ'

24. 'ಕಂಠೀರವ ನರಸರಾಜ ವಿಜಯ'ದ ಕರ್ತೃ ಗೋವಿಂದ ವೈದ್ಯ

25. 'ಕಾಮನ ಕಥೆ' ಕೃತಿಯ ಕರ್ತೃ ಕಲ್ಯಾಣಕೀರ್ತಿ.

26. ಪಾಠ ಓದಿ ಪ್ರಶ್ನೆ ೨೬ಕ್ಕೆ ನೀವೇ ಉತ್ತರ ಬರೆಯಿರಿ.

3.10 ಪರಾಮರ್ಶನ ಗ್ರಂಥಗಳು

1. ಕನ್ನಡ ಸಾಹಿತ್ಯ ಚರಿತ್ರೆ : ರಂ. ಶ್ರೀ ಮುಗಳಿ.
2. ಪ್ರಾಚೀನ ಕನ್ನಡ ಸಾಹಿತ್ಯರೂಪಗಳು : ರಂ.ಶ್ರೀ ಮುಗಳಿ.
3. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂಪುಟ 9 ಸಾಂಗತ್ಯ ಕವಿಗಳು : ಹಂಪನಾಗರಾಜಯ್ಯ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ : ಎಂ. ಮರಿಯಪ್ಪ ಭಟ್ಟ.
5. ಕನ್ನಡ ಸಾಹಿತ್ಯ ಚರಿತ್ರೆ : ತ.ಸು.ಶಾಮರಾಯ.
6. ಕನ್ನಡ ಸಾಹಿತ್ಯ ಚರಿತ್ರೆಯ ಘಟ್ಟಗಳು : ಎಸ್.ಎಸ್. ಹಿರೇಮಠ
7. ಕನ್ನಡ ಸಾಹಿತ್ಯ ಸಂಗಾತಿ : ಕೀರ್ತಿನಾಥ ಕುರ್ತುಕೋಟಿ.

ಸಂಚಿಕೆ - 3
ಕನ್ನಡ ಸಾಹಿತ್ಯ ಚರಿತ್ರೆ - ನಡುಗನ್ನಡ ಸಾಹಿತ್ಯ

ಘಟಕ - 4
ಸಾಂಗತ್ಯ ಕವಿಗಳು : ನಂಜುಂಡ ಕವಿ, ರತ್ನಾಕರವರ್ಣಿ, ಸಂಚಿಯ ಹೊನ್ನಮ್ಮ

ಪರಿವಿಡಿ :

4.0 ಘಟಕದ ಉದ್ದೇಶ

- ಈ ಘಟಕದಲ್ಲಿ ನೀವು ಪ್ರಮುಖ ಸಾಂಗತ್ಯ ಕವಿ-ಕೃತಿಗಳ ಪರಿಚಯ ಮಾಡಿಕೊಳ್ಳುವಿರಿ.
- ಈ ಘಟಕದಲ್ಲಿ ನೀವು ನಂಜುಂಡ ಕವಿಯ ಕಾಲ ದೇಶ ಕೃತಿಗಳ ಪರಿಚಯ ಮಾಡಿಕೊಳ್ಳುವಿರಿ.
- ಕನ್ನಡದ ಮೊದಲ ಐತಿಹಾಸಿಕ ವೀರ ಕಾವ್ಯವಾದ 'ಕುಮಾರ ರಾಮನ ಸಾಂಗತ್ಯ' ಕೃತಿಯ ಬಗ್ಗೆ ವಿಶೇಷ ಜ್ಞಾನವನ್ನು ಸಂಪಾದಿಸುವಿರಿ.
- ಮಹಾಕವಿ ರತ್ನಾಕರವರ್ಣಿಯ ಕಾಲ ದೇಶ ಕೃತಿಗಳ ಬಗ್ಗೆ ತಿಳಿಯುವಿರಿ.
- ಸಾಂಗತ್ಯ ಪ್ರಕಾರದ ಮೇರುಕೃತಿ 'ಭರತೇಶ ವೈಭವದ' ಬಗ್ಗೆ ತಿಳಿಯುವಿರಿ.
- ಸಂಚಿಯ ಹೊನ್ನಮ್ಮ ಕಾಲ ದೇಶ ಕೃತಿಗಳ ಬಗ್ಗೆ ಪರಿಚಯವನ್ನು ಹೊಂದುವಿರಿ.
- 'ಹದಿಬದೆಯ ಧರ್ಮ' ಕೃತಿಯ ವಸ್ತು ವಿಶೇಷತೆಯನ್ನು ಮನಗಾಣುವಿರಿ.

4.1 ಪೀಠಿಕೆ

ಈವರೆಗಿನ ಅಧ್ಯಯನದಲ್ಲಿ ನೀವು ಚಂಪೂ, ವಚನ, ರಗಳೆ, ಷಟ್ಪದಿ, ಕೀರ್ತನೆ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿರುವ ಕವಿ ಕೃತಿಗಳ ಬಗ್ಗೆ ಸಾಕಷ್ಟು ಪರಿಜ್ಞಾನವನ್ನು ತಿಳಿವಳಿಕೆಯನ್ನು ಹೊಂದಿರುವಿರಿ. ಈಗ ಸಾಂಗತ್ಯದ ಪ್ರಕಾರದಲ್ಲಿ ಕೃತಿ ರಚಿಸಿ ಹೆಸರು ಪಡೆದಿರುವ ದೇಪರಾಜ, ಶಿಶುಮಾಯಣ, ನಿಜಗುಣಶಿವಯೋಗಿ, ಕನಕದಾಸರು ಮೊದಲಾದವರ ಬಗ್ಗೆ ಈಗಷ್ಟೇ ಹಿಂದಿನ ಘಟಕದಲ್ಲಿ ಓದಿರುವಿರಿ. ಪ್ರಸ್ತುತ ಘಟಕದಲ್ಲಿ ಸಾಂಗತ್ಯ ಪ್ರಕಾರದಲ್ಲಿ ಅತ್ಯುತ್ಕೃಷ್ಟ ಕಾವ್ಯಗಳನ್ನು ರಚಿಸಿ ಕನ್ನಡ ಸಾಹಿತ್ಯದಲ್ಲಿ ಅಜರಾಮರರಾಗಿ ಉಳಿದಿರುವ ನಂಜುಂಡ ಕವಿ, ರತ್ನಾಕರವರ್ಣಿ, ಸಂಚಿಯ ಹೊನ್ನಮ್ಮ ಇವರ ಕಾಲ, ದೇಶ, ಕೃತಿಗಳ ಬಗ್ಗೆ ವಿಶದವಾಗಿ ತಿಳಿದುಕೊಳ್ಳಲು ಪ್ರಯತ್ನಿಸೋಣ.

ಈಗಾಗಲೇ ಸಾಂಗತ್ಯ ಎಂದರೇನು ? ಹಾಗೂ ಸಾಂಗತ್ಯದ ಮೂಲ, ಈ ಪ್ರಕಾರದಲ್ಲಿ ಮೊದಲು ಕೃತಿ ರಚಿಸಿದ ಕವಿ, ಸಾಂಗತ್ಯದ ಪ್ರಕಾರದಲ್ಲಿ ಕಾಣಸಿರುವ ಪ್ರಮುಖ ಕವಿ ಕೃತಿಗಳ ಬಗ್ಗೆ ಒಂದು ಸ್ಥೂಲ ಪರಿಚಯವನ್ನು ನಾವು ಮಾಡಿಕೊಂಡಿದ್ದೇವೆ. ನಂಜುಂಡ ಕವಿಯ 'ಕುಮಾರ ರಾಮನ ಸಾಂಗತ್ಯ' ಅಥವಾ 'ರಾಮನಾಥ ಚರಿತೆ' ಕನ್ನಡದ ಮೊತ್ತ ಮೊದಲ ಒಂದು ಐತಿಹಾಸಿಕ ವೀರ ಕಾವ್ಯ. ರತ್ನಾಕರವರ್ಣಿಯ 'ಭರತೇಶ ವೈಭವ' ಸಾಂಗತ್ಯ ಪ್ರಕಾರದಲ್ಲಿ ಉದಿಯಿಸಿರುವ ಕನ್ನಡದ ಒಂದು ಶ್ರೇಷ್ಠ ಮಹಾಕಾವ್ಯ. ಪತಿವ್ರತಧರ್ಮವನ್ನು ಬೋಧಿಸುವ ಸಂಚಿಯ ಹೊನ್ನಮ್ಮನ ಕೃತಿ 'ಹದಿಬದೆಯ ಧರ್ಮ' ಕನ್ನಡ ಸಾಹಿತ್ಯದಲ್ಲಿ ಕಾಣಿಸಿರುವ ಒಂದು ಅಪರೂಪದ ಕೃತಿ ಇವುಗಳ ಬಗ್ಗೆ ಈ ಘಟಕದಲ್ಲಿ ವಿವರವಾದ ಅಧ್ಯಯನಕ್ಕೆ ತೊಡಗಲು ಮುಂದಾಗೋಣ. ಹೀಗೆ ಹೇಳುವಾಗ ಒಂದು ಮಾತನ್ನು ಮರೆಯುವಂತಿಲ್ಲ ಸಾಂಗತ್ಯ ಪ್ರಕಾರದಲ್ಲಿ ನೇಮಿಜಿನೇಶ ಸಾಂಗತ್ಯ (ಮಂಗರಸ) ಪ್ರಭಂಜನ ಚರಿತೆ (ಮೂರನೆಯ ಮಂಗರಸ), ವೈದ್ಯಸಾಂಗತ್ಯ (ಸಾಳ್ವ), ವೈಕುಂಠವರ್ಣನೆ (ವಾದಿರಾಜ), ಶೃಂಗಾರ ಕಥೆ (ಪದ್ಮರಸ) ಕಂಠೀರವಸರಸ ರಾಜವಿಜಯ (ಗೋವಿಂದ ವೈದ್ಯ) ಮೊದಲಾದ ಕಾವ್ಯಗಳು ರಚನೆಯಾಗಿದ್ದರೂ ಆ ಎಲ್ಲಾ ಕೃತಿಗಳ ವಿವರವಾದ ಚರ್ಚೆಗೆ ಇಲ್ಲಿ ನಾವು ತೊಡಗುವುದು ಅಪ್ರಸ್ತುತ. ಆದ್ದರಿಂದ ನಂಜುಂಡ ಕವಿ, ರತ್ನಾಕರವರ್ಣಿ, ಸಂಚಿಯ ಹೊನ್ನಮ್ಮನ ಬಗ್ಗೆ ಮಾತ್ರ ಇಲ್ಲಿ ವಿವರವಾಗಿ ತಿಳಿದುಕೊಳ್ಳಲು ಪ್ರಯತ್ನಿಸೋಣ.

4.2 ನಂಜುಂಡ ಕವಿ

ಭಿನ್ನ ಧರ್ಮಗಳ ಸಂಸ್ಕಾರ ವಿಶೇಷಕ್ಕೆ ಒಳಗಾದ ಅಪರೂಪದ ಕನ್ನಡ ಕವಿಗಳಲ್ಲಿ ಒಬ್ಬ ನಂಜುಂಡ. ಇವನಾಗಲಿ ಇವನ ಪೂರ್ವಿಕರಾಗಲಿ ಮೊದಲಿಗೆ ಜೈನರಾಗಿದ್ದು ಆಮೇಲೆ ವೀರಶೈವ ಧರ್ಮವನ್ನು ಸ್ವೀಕರಿಸಿದಂತೆ ಕಾಣುತ್ತದೆ. ಜೊತೆಗೆ ವೀರ ಮತ್ತು ವಿದ್ವತ್ತುಗಳೆರಡನ್ನೂ ಮೈಗೂಡಿಸಿಕೊಂಡ ಮನೆತನ ಇವನದು. ಜಯನೃಪಕಾವ್ಯದ ಕರ್ತೃ ಮೂರನೆಯ ಮಂಗರಸ ಇವನ ದೊಡ್ಡಪ್ಪ. ಚೆಂಗಾಳ್ವದೊರೆ ನಂಜರಾಜನಿಗಾಗಿ ಯುದ್ಧಮಾಡಿ ಮಡಿದ ಎರಡನೆಯ ವಿಜಯ ಇವನ ಚಿಕ್ಕಪ್ಪ. ವಿಜಯನೃಪಾಲ ಈತನ ತಾತನೆಂದೂ ತಿಳಿದುಬರುತ್ತದೆ. ಕೆಲವು ಪುರಾಣಾಂಶಗಳಿಂದ ಕೂಡಿದ್ದರೂ ಕನ್ನಡದ ಮೊತ್ತಮೊದಲ ಚಾರಿತ್ರಿಕ ಕಾವ್ಯವೆನಿಸಿರುವ ಕೃತಿಯೊಂದನ್ನು ರಚಿಸಿ, ಧಾರ್ಮಿಕ ವಿಷಯಕವಾದ ಕೃತಿಗಳಿಂದ ಇಡಿಕಿರಿದಿದ್ದ ಕನ್ನಡ ಸಾಹಿತ್ಯಕ್ಕೆ ಸ್ವಲ್ಪಮಟ್ಟಿಗೆ ವೈವಿಧ್ಯತೆಯನ್ನು ಕಲ್ಪಿಸಿಕೊಟ್ಟವನು ನಂಜುಂಡ ಕವಿ.

4.2.0 ಕಾಲ

ನಾವು ಇಲ್ಲಿ ಅಭ್ಯಾಸ ಮಾಡುವ ನಂಜುಂಡಕವಿಯೇ 'ಕಂಠೀರವ ನರಸರಾಜ ಚರಿತ್ರೆ'ಯನ್ನೂ 'ಕಪೋತವಾಕ್ಯ' ವೆಂಬ ಕಾವ್ಯವನ್ನೂ ಬರೆದನೆಂದು ಭಾವಿಸಿ, ಬಿ.ಎಲ್. ರೈಸ್ ಅವರು ಈತನ ಕಾಲವನ್ನು ೧೬೫೦ ಎಂದು ಗುರುತಿಸಿರುತ್ತಾರೆ. ಆದರೆ ಈ ಕಾವ್ಯಗಳನ್ನು ಬರೆದ ಕವಿಗಳೇ ಬೇರೆಯವರು ಎಂಬುದು ಈಗ ಸಿದ್ಧವಾಗಿದೆ. ಆದ್ದರಿಂದ ಬಿ.ಎಲ್. ರೈಸ್ ಅವರು ಸೂಚಿಸಿರುವ ಕಾಲ ಸಮ್ಮತವಾದುದಲ್ಲ. ಎಸ್.ಜಿ.ನರಸಿಂಹಾಚಾರ್ಯರು ನಂಜುಂಡಕವಿಯೂ ಕುಮಾರರಾಮನೂ ಸಮಕಾಲೀನರೆಂದೂ, ಕುಮಾರರಾಮ ಓರಂಗಲ್ಲಿನ ಪ್ರತಾಪರುದ್ರದೇವನಲ್ಲಿ ಸೇನಾಧಿಕಾರಿಯಾಗಿದ್ದನೆಂದೂ ಹೇಳಿ ನಂಜುಂಡಕವಿಯ ಕಾಲ ೧೪ನೆಯ ಶತಮಾನ ಎಂದಿದ್ದಾರೆ. ಪ್ರತಾಪರುದ್ರದೇವನಕಾಲ ೧೨೯೫ ರಿಂದ ೧೩೨೩. ಕುಮರರಾಮ ಈತನ ಸಮಕಾಲೀನನೆಂಬುದು ನಿಜ. ಆದರೆ ನಂಜುಂಡಕವಿಯ ಕೊಡುವ ತನ್ನ ವಂಶವಿವರಗಳ ಪ್ರಕಾರ ಈತ ಕುಮಾರರಾಮನ ಸಮಕಾಲೀನನಾಗುವುದು ಸಾಧ್ಯವಿಲ್ಲ. ಆರ್.ನರಸಿಂಹಾಚಾರ್ಯರು ನಂಜುಂಡ ಕವಿ ಕೊಡುವ ತನ್ನ ವಂಶವಿವರಗಳನ್ನು ಪರಿಶೀಲಿಸಿ ಈತ ೧೫೦೨ ರಿಂದ ೧೫೩೩ರ ಕಾಲಕ್ಕೆ ಸೇರಿದ ಚೆಂಗಾಳ್ವ ನಂಜರಾಜನ ಆಶ್ರಯ ಪಡೆದಿದ್ದನೆಂದು ಹೇಳಿ ೧೫೨೫ ನಂಜುಂಡ ಕವಿಯ ಕಾಲ ಇರಬಹುದು ಎಂದಿದ್ದಾರೆ. ಜಿ. ವರದರಾಜರಾಯರು ನಂಜುಂಡಕವಿ ಕೊಡುವ ವಂಶವಿವರಗಳು ಹಾಗೂ ಪುರಾತತ್ತ್ವ ಇಲಾಖೆಯವರ ವರದಿಗಳನ್ನೂ; ಹಿಂದಿನ ವಿದ್ವಾಂಸರ ಅಭಿಪ್ರಾಯಗಳನ್ನೂ ಪರಿಶೀಲಿಸಿ ೧೫೧೨ ರ ತರುವಾಯ ನಂಜುಂಡ ಕವಿ ತನ್ನ ಕೃತಿಯನ್ನು ರಚಿಸಿರಬಹುದು ಎಂದಿದ್ದಾರೆ. ೧೫೯೯ರಲ್ಲಿದ್ದ ಪದ್ಮರಸ ಕವಿ ಶೃಂಗಾರಕಥೆ ಎಂಬ ತನ್ನ ಕೃತಿಯಲ್ಲಿ ಕುಮಾರರಾಮನ ಕಥೆಯ ಉಲ್ಲೇಖ ಮಾಡಿದ್ದಾನೆ. ಇದು ನಂಜುಂಡ ಬರೆದ ಕಾವ್ಯವನ್ನು ಕುರಿತ ಉಲ್ಲೇಖವೇ ಆಗಿದ್ದಲ್ಲಿ ಈತ ೧೬ ನೇ ಶತಮಾನದ ಅವಧಿಯಲ್ಲಿ ಅಥವಾ ಅದಕ್ಕೂ ಪೂರ್ವದಲ್ಲಿ ಜೀವಿಸಿದ್ದಾನೆಂದಾಗುತ್ತದೆ. ಒಟ್ಟಾರೆ ಆರ್. ನರಸಿಂಹಾಚಾರ್ಯರ ಪರಿಶೀಲನೆ ಸಮರ್ಪಕವಾಗಿದ್ದು, ಅವರು ಕೊಡುವ ೧೫೨೫ ರ ಕಾಲವನ್ನೇ ನಂಜುಂಡಕವಿಯ ಕೃತಿರಚನಾಕಾಲವೆಂದು ಬಹುತೇಕ ಒಪ್ಪಲಾಗಿದೆ.

4.2.1 ದೇಶ

ನಂಜುಂಡಕವಿಯದು ವೀರ ಮತ್ತು ವಿದ್ವತ್ತುಗಳನ್ನು ಮೈಗೂಡಿಸಿಕೊಂಡ ಮನೆತನ ಎಂದು ಮೇಲೆ ಹೇಳಲಾಗಿದೆ. ಈತನ ವಂಶಸ್ಥರು ಮೈಸೂರು ಜಿಲ್ಲೆಯ ಕಲ್ಲಹಳ್ಳಿಯ ಸುತ್ತಲಿನ ಪ್ರದೇಶವನ್ನೊಳಗೊಂಡ ಪಾಳೆಯಪಟ್ಟಿಗೆ ಪ್ರಭುಗಳಾಗಿದ್ದಂತೆ ತೋರುತ್ತದೆ. ಪಿರಿಯಾಪಟ್ಟಣ, ಹುಣಸೂರು, ಕೃಷ್ಣರಾಜಸಾಗರ ತಾಲ್ಲೂಕುಗಳು ಹಾಗೂ ಸೋಮವಾರಪೇಟೆ ತಾಲ್ಲೂಕಿನ ಭಾಗಗಳನ್ನು ಒಳಗೊಂಡಿದ್ದ ಚಂಗನಾಡನ್ನು ಆಳುತ್ತಿದ್ದ ಚಂಗಾಳ್ವರೆಂಬ ರಾಜವಂಶಸ್ಥರಿಗೆ ಅಮಾತ್ಯರಾಗಿ ಸೇವೆ

ಸಲ್ಲಿಸುತ್ತಿದ್ದ ಮನೆತನವೆಂದೂ ತಿಳಿದುಬರುತ್ತದೆ. ಇದು ಹೇಗೋ ಇರಲಿ ನಂಜುಂಡಕವಿ ಚಂಗಾಳ್ವ ನಂಜರಾಜನ ಆಶ್ರಯದಲ್ಲಿದ್ದು ಕಾವ್ಯರಚಿಸಿದನೆಂದು ಸದ್ಯಕ್ಕೆ ತಿಳಿಯಬಹುದು. ಮಾಧವ ಎಂಬುದು ಈತನ ತಂದೆಯ ಹೆಸರೆಂದೂ, ವಿಜಯನೃಪಾಲ ತಾತನೆಂದೂ ಈತನ ಉಲ್ಲೇಖಗಳಿಂದಲೇ ತಿಳಿಯುತ್ತದೆ. ವಿಜಯನೃಪಾಲನ ಇನ್ನೊಬ್ಬ ಮಗ ಮಂಗರಸ ನಂಜುಂಡಕವಿಯ ದೊಡ್ಡಪ್ಪ (ಹಿರಿಯಪ್ಪ) ನೆಂದು ಭಾವಿಸಲಾಗಿದೆ. ನಂಜುಂಡ ಕವಿಯೊ ಈತನ ಪೂರ್ವಿಕರೊ ಮೊದಲು ಜೈನರಾಗಿದ್ದು ಆಮೇಲೆ ವೀರಶೈವ ಮತಾವಲಂಬಿಗಳಾದ್ದಂತೆ ತೋರುತ್ತದೆ. ನಂಜುಂಡಕವಿ ಜೈನಮತದ ಬಗೆಗೆ ಒಲವುಳ್ಳ ಸಂಗತಿ ಆತನ ಕಾವ್ಯದಿಂದ ಗೊತ್ತಾಗುತ್ತದೆ.

4.2.2 ಕೃತಿಗಳು

ನಂಜುಂಡಕವಿಯು 'ಕುಮಾರರಾಮನ ಕಥೆ' ಎಂಬ ಕಾವ್ಯವನ್ನು ಬರೆದಿದ್ದಾನೆ. 'ಕುಮಾರರಾಮನ ಸಾಂಗತ್ಯ', 'ರಾಮನಾಥನಚರಿತ' ಎಂದೂ ಇದನ್ನು ಕರೆಯಲಾಗುತ್ತದೆ. ಸಾಂಗತ್ಯದಲ್ಲಿರುವ ಈ ಕೃತಿ ನಡುನಡುವೆ ಷಟ್ಪದಿಗಳನ್ನು ಒಳಗೊಂಡಿದೆ.

'ಕುಮಾರರಾಮನ ಸಾಂಗತ್ಯ' ಒಂದು ವೀರಕಾವ್ಯ. ವೀರಕಾವ್ಯವನ್ನು ಬರೆಯಲು ತನಗಿರುವ ವಿಶೇಷವಾದ ಅರ್ಹತೆಯನ್ನು ನಂಜುಂಡಕವಿ ಕಾವ್ಯಾರಂಭದ ಮಾತುಗಳಲ್ಲಿ ಹೇಳಿಕೊಂಡಿದ್ದಾನೆ. ತನ್ನ ಚಿಕ್ಕಪ್ಪ ಯುದ್ಧವೀರನಾಗಿದ್ದು ಯುದ್ಧದಲ್ಲೇ ಸತ್ತನೆಂದು ಹೇಳುವ ಮೂಲಕ ತಾನು ಸ್ವತಃ ಯುದ್ಧಗಳನ್ನೂ, ಯುದ್ಧದ ಪರಿಣಾಮಗಳನ್ನೂ ಕಂಡಿದ್ದನೆಂಬುದನ್ನು ಸೂಚಿಸುತ್ತಿರುವಂತಿದೆ. ವೀರ ರಾಮನಾಥನ ಚರಿತ್ರೆಯನ್ನು ಹೇಳುವುದು ತನಗೆ ಉಚಿತವೆಂದು ಕೋವಿದರು ಹೇಳಿದುದರಿಂದ ಬರೆಯುತ್ತಿರುವುದಾಗಿ ಹೇಳಿಕೊಂಡಿದ್ದಾನೆ.

ರಾಮನಾಥ ಚರಿತೆಯಲ್ಲಿ ೧೨ ಆಶ್ವಾಸಗಳು, ೪೭ ಸಂಧಿಗಳು, ೫೮೦೭ ಪದ್ಯಗಳು ಇವೆ.

4.2.2.0 ಆಕರ

'ಇದು ಪುಣ್ಯಕಥೆಯಲ್ಲಿದು ಪೂರ್ವಚರಿತದಲ್ಲಿದು ಪುರಾಣದೊಳುಕ್ತವಲ್ಲ' ಎಂಬಂತಹ ಮಾತುಗಳನ್ನು ಬರೆಯುತ್ತಾ ನಂಜುಂಡಕವಿ ತನ್ನ ಕಾವ್ಯದ ವಸ್ತುವಿನ ನಿರ್ದೇಶನವನ್ನು ಮಾಡಲು ಯತ್ನಿಸಿರುವಂತಿದೆ. ಇವನ 'ರಾಮನಾಥಚರಿತ' ಕನ್ನಡದ ಮೊತ್ತ ಮೊದಲ ಐತಿಹಾಸಿಕ ಕಾವ್ಯವೆಂದು ಹೆಸರಾಗಿದೆ. ಈ ಕಾವ್ಯದ ಕಥಾನಾಯಕ ಒಬ್ಬ ಇತಿಹಾಸವೀರ. ವೀರ ಮತ್ತು ಶೀಲಗಳ ಸಾಮರಸ್ಯ ಮೌಲ್ಯದ ಪ್ರತೀಕದಂತಿರುವ ಈ ಇತಿಹಾಸ ಪ್ರಸಿದ್ಧ ವ್ಯಕ್ತಿಯ ಸುತ್ತ ಕ್ರಮೇಣ ಕಥೆಗಳು ಹುಟ್ಟಿಕೊಳ್ಳುತ್ತಾ ಹೋಗಿ ಕಡಗೆ ಇವನೊಬ್ಬ ಆರಾಧ್ಯ ವ್ಯಕ್ತಿಯಾದ. ಹಾಗಾಗಿ ಈತನ ಕಥೆಯಲ್ಲಿ ಚಾರಿತ್ರಿಕ ಅಂಶಗಳಂತೆ ಐತಿಹ್ಯ ಮತ್ತು ಪುರಾಣ ಅಂಶಗಳೂ ಕೂಡಿಕೊಂಡಿವೆ. ಹೀಗೆ ಜನಸಮುದಾಯದಲ್ಲಿ ಬೆಳೆದ ಇತಿಹಾಸ ವೀರನೊಬ್ಬನನ್ನು ಕಥಾನಾಯಕನನ್ನಾಗಿ ಮಾಡಿಕೊಂಡ ಹೆಗ್ಗಳಿಕೆ ನಂಜುಂಡಕವಿಯದು. ಕನ್ನಡದಲ್ಲಿ ಜನಪದದಿಂದ ರೂಪುಗೊಂಡ ಇತಿಹಾಸವೀರನೊಬ್ಬನ ಕಥಾವಸ್ತುವನ್ನು ಕಾವ್ಯಕ್ಕೆ ತಂದುಕೊಂಡುದು ನಂಜುಂಡಕವಿಯಲ್ಲಿಯೇ ಮೊದಲು.

ನಂಜುಂಡಕವಿ ರಾಮನಾಥ ಚರಿತವನ್ನು ಬರೆಯುವ ಕಾಲಕ್ಕೂ ಕುಮಾರರಾಮನು ಬದುಕಿದ್ದ ಕಾಲಕ್ಕೂ ಸುಮಾರು ೨೦೦ ವರ್ಷಗಳಷ್ಟು ಅಂತರವಿದೆ. ಇಷ್ಟು ಹಿಂದಿನ ಕಥಾವಸ್ತುವನ್ನು ಆಧರಿಸಿ ಕಾವ್ಯ ಬರೆಯ ಹೊರಟಾಗ ಕವಿಗಿದ್ದ ಐತಿಹಾಸಿಕ ಮಾಹಿತಿ ಕಡಿಮೆಯೆಂದೇ ಹೇಳಬೇಕು. ಆಗ ಕವಿಗಿದ್ದ ಉಪಾಯವೆಂದರೆ ತನ್ನವರೆಗೆ ಜನಮನದಲ್ಲಿ ಹರಡಿಕೊಂಡಿದ್ದ ಕಥಾಸಾಮಗ್ರಿಗೆ ರೂಪುಕೊಡುವುದು. ಜೊತೆಗೆ 'ಪುರಾಣ ಪುಣ್ಯಕಥೆ' ಯ ಜಾಡನ್ನು ತೊರೆದು 'ಇತಿಹಾಸ ಕಥೆ' ಯನ್ನು ಕಾವ್ಯಕ್ಕೆ ವಸ್ತು ಮಾಡಿಕೊಂಡಾಗ ಜನರು ತನ್ನ ಕಾವ್ಯವನ್ನು ಸ್ವೀಕರಿಸುತ್ತರೋ ಇಲ್ಲವೋ ಎಂಬ ಶಂಕೆ ಕವಿಯನ್ನು

ಕಾಡಿರಲೂಬಹುದು. ಹಾಗಾಗಿ 'ಕಥೆಯ ವಿಚಾರಿಸಿ ನೋಡಿದಡಿದು ಪುಣ್ಯಕಥೆಯಲ್ಲದಲ್ಲ' ಎಂದು ಹೇಳುತ್ತ ಇತಿಹಾಸದ ವಸ್ತುವಿಗೆ ಪೌರಾಣಿಕ ಚೌಕಟ್ಟನ್ನು ಕೊಡುವ ಕೆಲಸವನ್ನೂ ಕವಿ ಮಾಡಿದ್ದಾನೆ. ಇದು ಸಾಲದೆಂಬಂತೆ, ಕುಮಾರರಾಮನನ್ನು ಅರ್ಜುನನ ಅವತಾರವೆಂದು ಕಲ್ಪಿಸಿ ನಿಜವಾದ ಒಂದು ಪುರಾಣವನ್ನೆ ಸೃಷ್ಟಿಸಿಬಿಟ್ಟಿದ್ದಾನೆ.

4.2.2.1 ಕಥಾವಸ್ತು

ಕುಮಾರರಾಮನಿಗೆ ಸಂಬಂಧಿಸಿದಂತೆ ಲಭ್ಯವಿರುವ ಐತಿಹಾಸಿಕ ಸಂಗತಿಗಳ ಜೊತೆಗೆ ಪ್ರಚಲಿತವಿದ್ದ ಐತಿಹ್ಯ ಹಾಗೂ ಪುರಾಣ ಅಂಶಗಳನ್ನೂ ಕಲ್ಪಿತ ಸಂಗತಿಗಳನ್ನೂ ಬೆರೆಸಿ ತನ್ನ ಕಾವ್ಯದಲ್ಲಿ ನಂಜುಂಡಕವಿ ರೂಪಿಸಿಕೊಂಡ ಕಥಾವಸ್ತು ಹೀಗಿದೆ. ಗಂಧರ್ವನಾಗಿದ್ದ ಅರ್ಜುನ ಶಿವಾಣಿಯ ಪ್ರತಿಜ್ಞೆ ಕಾರಣವಾಗಿ ಹೊಸಮಲೆದುರ್ಗದ ದೊರೆಯಾದ ಕಂಪಿಲನ ಪಟ್ಟದರಸಿ ಹರಿಹರದೇವಿಗೆ ಮಗನಾಗಿ ಹುಟ್ಟಿದ. ಇವನಿಗೆ ಕುಮಾರರಾಮ ಎಂದು ಹೆಸರಾಯಿತು. ಊರ್ವಶಿ ರತ್ನಾಜಿಯಾಗಿ ಜನಿಸಿದಳು. ಕಂಪಿಲನ ಕಿರಿಯ ಮಡದಿಯಾಗಿ ಹೊಸಮಲೆದುರ್ಗದ ಅರಮನೆ ಸೇರಿದಳು. ಬೆಳೆದು ದೊಡ್ಡವನಾದ ಕುಮಾರರಾಮ ಪರಾಕ್ರಮವನ್ನು ಮೆರೆದು ಹುಳಿಹೇರುಗೌಡ ಮುಂತಾದವರ ಸೊಕ್ಕಡಗಿಸಿದ. ದಿಲ್ಲಿಯ ಸುಲ್ತಾನನಿಂದ ತಪ್ಪಿಸಿಕೊಂಡು ಓಡಿಬಂದ ಖಾದುರಖಾನನಿಗೆ ಆಶ್ರಯ ನೀಡಿ ನೇಮಿಖಾನನ ಸೈನ್ಯವನ್ನು ಹಿಮ್ಮೆಟ್ಟಿಸಿದ. ಶೂಲದ ಹಬ್ಬದಲ್ಲಿ ರಾಮನನ್ನು ಕಂಡು ರತ್ನಾಜಿಗೆ ಮೋಹವಂಕುರಿಸಿತು. ಕುಮಾರರಾಮ ಮತ್ತು ಆತನ ಗೆಳೆಯರು ಮುತ್ತಿನ ಚೆಂಡಾಟವಾಡಬೇಕೆಂದು ಬಯಸಿದ ದಿನ ಕಂಪಿಲರಾಯ ಬೇಟೆಗೆ ಹೋಗಿದ್ದ. ಆಟದಲ್ಲಿ ಸಿಡಿದ ಚೆಂಡು ರತ್ನಾಜಿಯ ಅಂತಃಪುರಕ್ಕೆ ಹೋಗಿ ಬಿದ್ದಿತು. ಕಾಮಾತುರಳಾದ ರತ್ನಾಜಿ ಚೆಂಡನ್ನು ರಕ್ಷಿಸಿದ ರಾಮನ ಮೇಲೆ ಬಿದ್ದಳು. ಧೃಢ ಮನಸ್ಸಿನವನಾದ ರಾಮ ಆಕೆಯನ್ನು ಜರಿದು ನಿವಾರಿಸಿ ಅಲ್ಲಿಂದ ಹೇಗೋ ಪಾರಾಗಿ ಬಂದ. ರತ್ನಾಜಿ ರಾಮನ ಮೇಲೆ ಸೇಡಿನ ಭಾವನೆಯನ್ನು ತಳೆದು ಸಲ್ಲದ ಅಪವಾದ ಹೊರಿಸಿದಳು.ಸುಳ್ಳನ್ನು ನಂಬಿದ ಕಂಪಿಲ ರಾಮನನ್ನು ಕೊಲ್ಲಲು ಆಜ್ಞೆಮಾಡಿದ. ಮಂತ್ರಿ ಬೈಚಪ್ಪ ರಾಜನ ದುಡುಕನ್ನು ತಿಳಿದು ಉಪಾಯದಿಂದ ರಾಮನಿಗೆ ನೆಲಮಾಳಿಗೆಯಲ್ಲಿ ರಕ್ಷೆ ನೀಡಿದ. ರಾಮನ ಮರಣ ವಾರ್ತೆಯನ್ನು ಕೇಳಿದ ಸುಲ್ತಾನ ಹೊಸಮಲೆದುರ್ಗವನ್ನು ಮುತ್ತಲು ಸೈನ್ಯವನ್ನು ಕಳುಹಿಸಿದ. ಸಂದರ್ಭದ ಬಿಕ್ಕಟ್ಟನ್ನು ತಿಳಿದ ರಾಮ ವೇಷಮರೆಸಿಕೊಂಡುಬಂದು ನೇಮಿಯನ್ನು ಹಿಮ್ಮೆಟ್ಟಿಸಬೇಕಾಯಿತು. ರಾಮ ಬದುಕಿರುವುದನ್ನು ತಿಳಿದು ಕಂಪಿಲ ಸಂತೋಷಪಟ್ಟ. ತಕ್ಕು ಬಯಲಾದೀತೆಂದು ಹೆದರಿ ರತ್ನಾಜಿ ನೇಣು ಹಾಕಿಕೊಂಡಳು. ಮಾತಂಗಿಯ ಭರವಸೆಯ ಮೇಲೆ ಸುಲ್ತಾನ ಮತ್ತೆ ಯುದ್ಧ ಘೋಷಿಸಿದ. ಪೂರ್ವಜನ್ಮದ ಸೇಡಿಗಾಗಿ ಕಾಯುತ್ತ ಸುಲ್ತಾನನಲ್ಲಿ ಮಾತಂಗಿಯಾಗಿದ್ದ ಗಾಂಧಾರಿಯೊಡನೆ ಹೋರಾಡಬೇಕಾಯಿತು. ಪುರುಷ ವೇಷದಾರಿಣಿಯಾಗಿದ್ದ ಅವಳು ಸ್ತ್ರೀಯೆಂದು ತಿಳಿದಾಗ ರಾಮ ಶಸ್ತ್ರತ್ಯಾಗ ಮಾಡಿದ. ಇದೇ ಸಮಯವೆಂದು ಆಕೆ ಆತನ ಶಿರವನ್ನು ಕತ್ತರಿಸಿದಳು. ರಾಮನ ಪರಾಕ್ರಮಕ್ಕೆ ಮರುಳಾಗಿ ಆತನನ್ನುಮದುವೆಯಾಗಲು ಬಯಸಿದ್ದ ಸುಲ್ತಾನನ ಮಗಳು ರಾಮನ ಮರಣವನ್ನು ತಿಳಿದು ಪ್ರಾಣಬಿಟ್ಟಳು. ಹೊಸದುರ್ಗ ಕೊನೆಗೂ ಸುಲ್ತಾನನ ವಶವಾಯಿತು.

4.2.2.2 ಪಾತ್ರ ಪರಿಚಯ

'ರಾಮನಾಥಚರಿತೆ' ಕಾವ್ಯದ ಪಾತ್ರಗಳಲ್ಲೆಲ್ಲಾ ಕೇಂದ್ರವ್ಯಕ್ತಿಯಾಗಿ ನಿಲ್ಲುವವನು ಕುಮಾರರಾಮನೆ. ಉಳಿದ ಪಾತ್ರಗಳೆಲ್ಲಾ ಅವನ ಪೋಷಕರಾಗಿಯೋ, ಹಿತೈಷಿಗಳಾಗಿಯೋ, ಹಿತಶತ್ರುಗಳಾಗಿಯೋ. ಶತ್ರುಗಳಾಗಿಯೋ ಕಾಣಿಸಿಕೊಳ್ಳುತ್ತವೆ. ಕುಮಾರರಾಮನನ್ನು ಬಿಟ್ಟರೆ ಕಾವ್ಯದ ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಳ್ಳುವ ಪಾತ್ರಗಳು ಕಂಪಿಲ, ಬೈಚಪ್ಪ ಮತ್ತು ರತ್ನಾಜಿ ಈ ಮೂರು. ಇವುಗಳ ಸ್ಥೂಲ ಪರಿಚಯವನ್ನಷ್ಟೇ ಇಲ್ಲಿ ಮಾಡಿಕೊಳ್ಳಬಹುದು.

4.2.2.2.0 ಕುಮಾರರಾಮ

ಕುಮಾರರಾಮನೇ ಕಾವ್ಯದ ಕಥಾನಾಯಕ. ಈತನ ಸಮಗ್ರ ಜೀವನವೇ ಕೃತಿಯ ಮುಖ್ಯ ವಸ್ತು. ಕಂಪಿಲನ ಮಗನಾದ ಈತನನ್ನು ಅರ್ಜುನನ ಅವತಾರವೆಂದೂ, ದೈವಾಂಶ ಪುರುಷನೆಂದೂ ಕವಿ ಕಲ್ಪಿಸಿದ್ದಾನೆ. ನಂಜುಂಡನಪಾಲಿಗೆ ಕಾರಣಿಕ ಪುರುಷನಾದ ಈತ ಚಿಕ್ಕಂದಿನಿಂದಲೇ ತರುಣ ವೀರನೆನ್ನಿಸುತ್ತಾನೆ. ವಯಸ್ಸು ಚಿಕ್ಕದಾದರೂ ವರ್ಚಸ್ಸು ಮಿಗಿಲಾದದ್ದು. ಕಂಪಿಲನ ಏಳಿಗೆಯನ್ನು ಸಹಿಸದ ಬಲ್ಲಾಳ, ಜಗತಾಪಿ, ಪ್ರತಾಪರುದ್ರ, ಕಿಪತಿ, ಕಪಿಲೇಶ್ವರರ ಹಮ್ಮನ್ನು ಮುರಿಯುತ್ತಾನೆ. ಹನ್ನೆರಡು ವರ್ಷ ತುಂಬುವ ವೇಳೆಗಾಗಲೇ ಅಕ್ಕ ಪಕ್ಕದ ರಾಜರುಗಳನ್ನೆಲ್ಲಾ ಸದುಗಿಸಿ ತಂದೆಯ ಸಾಮ್ರಾಜ್ಯವನ್ನು ವಿಸ್ತರಿಸಿ, ಸುಭದ್ರಗೊಳಿಸುತ್ತಾನೆ. ಈತನ ಪರಾಕ್ರಮಾದಿಗಳು ಮನೆಮಾತಾಗಿ ದೂರದ ದಿಲ್ಲಿಯವರೆಗೂ ತಲುಪಿ ಸುಲ್ತಾನನ ಮಗಳು ತನ್ನನ್ನೇ ಅರ್ಪಿಸಿಕೊಳ್ಳುತ್ತಾಳೆ. ಸುಲ್ತಾನ ಕಂಪಿಲನ ಸ್ನೇಹ ವನ್ನು ಬಯಸುತ್ತಾನೆ. ಈ ಸ್ನೇಹ ತಿರಸ್ಕಾರ ಮತ್ತು ಸುಲ್ತಾನನ ಕಣ್ತಪ್ಪಿಸಿಕೊಂಡು ಬಂದ ಬಾದೂರನಿಗೆ ಆಶ್ರಯ ನೀಡಿದುದು ಸುಲ್ತಾನನ ದೃಷ್ಟಿಯಿಂದ ಅಪರಾಧಿಗಳಾಗಿ ಕಂಡು ಆತನ ಆಕ್ರೋಶಕ್ಕೆ ಕಂಪಿಲ ಮತ್ತು ಕುಮಾರರಾಮರು ಒಳಗಾಗುತ್ತಾರೆ. ಸುಲ್ತಾನನ ಸೇನೆಯೊಡನೆ ಎರಡು ಬಾರಿ ದಂಡೆತ್ತಿ ಬಂದ ನೇಮಿ ಕುಮಾರರಾಮನನ್ನು ಎದುರಿಸಲಾರದೆ ಹಿಮ್ಮೆಟ್ಟುತ್ತಾನೆ.ಯಾವುದೋ ಪೂರ್ವವೈರದ ಸೇಡಿಗಾಗಿ ಸಮಯ ನಿರೀಕ್ಷಿಸುತ್ತಾ ಸುಲ್ತಾನನ ಬಳಿ ಮಾತಂಗಿಯಾಗಿದ್ದ ಗಾಂಧಾರಸ್ತ್ರೀ ಪುರುಷವೇಷಧಾರಿಯಾಗಿ ಬಂದು ಕುಮಾರರಾಮನ ಸಾವಿಗೆ ಕಾರಣಳಾಗುತ್ತಾಳೆ.

ಕುಮಾರರಾಮನ ಮಹಿಮೆಗೆ ಆತನ ಕಲಿತನ ಹೇಗೆ ಕಾರಣವೋ ಹಾಗೆಯೇ ಆತನ ಪರನಾರಿ ಸೋದರತ್ವವೂ ಕಾರಣ. ನಂಜುಂಡನ ಕುಮಾರರಾಮನು ಈ ಗುಣವನ್ನು ಗಣಪದವಿಯಲ್ಲಿರುವಾಗಲೇ ಪ್ರಕಟಿಸುತ್ತಾನೆ. ಇನ್ನು ಜೀವನವೇ ಈ ಮಹಿಮೆಗೆ ಮೀಸಲಾಗುತ್ತದೆ. ಕುಮಾರರಾಮನು ಸೌಂದರ್ಯಕ್ಕೂ ಹೆಸರುವಾಸಿಯಾಗಿ ಚೆನ್ನಿಗರಾಯನೆನಿಸಿದ್ದನು. ಆತನಿಗೆ ಮನಸೋಲದ ಮಹಿಳೆಯರಿರಲಿಲ್ಲ. ಆದರೆ ರಾಮನಾದರೋ ಪರಸ್ತ್ರೀಯರು ತನಗೆ ತಾಯಿ ಸಮಾನವೆಂದೂ, ಅಕ್ಕ ತಂಗಿಯರ ಸಮಾನವೆಂದೂ ಧೃಡವಾಗಿ ನಂಬಿದ್ದನು. ಕಂಪಿಲ ರತ್ನಾಜಿಯನ್ನು ಮದುವೆಯಾಗಿ ಮನೆಗೆಕರೆತಂದ ದಿನವೇ ತಾಯಿ ಹಿರಿಯಾಲದೇವಿ ಮಗನ ಕಾಲಿಗೆ ಪರನಾರಿಸೋದರನೆಂಬ ಪೆಂಡೆಯವನ್ನು ತೊಡಿಸಿ ಆತನಿಂದ ವಾಗ್ದಾನವನ್ನು ಪಡೆಯುವಳು. ಚೆಂಡನ್ನು ಬೇಡಲು ಬಂದ ರಾಮನನ್ನು ಮರುಳು ಮಾಡಲು ರತ್ನಾಜಿ ಯತ್ನಿಸುವ ಪ್ರಸಂಗ ಕಾವ್ಯದಲ್ಲಿ ಅದ್ಭುತವಾಗಿ ಚಿತ್ರಿತವಾಗಿದೆ. ಮೊದಮೊದಲು ರಾಮ ಚಿಕ್ಕಮ್ಮನ ವರ್ತನೆಗೆ ನಾಚಿದನು,ಅನಂತರ ಜುಗುಪ್ಸೆಗೊಂಡು ಆಕೆಯನ್ನು ತಿರಸ್ಕರಿಸಿ ಹೊರಬರುತ್ತಾನೆ. ಇದರಿಂದೊದಗಿದ ಕಂಟಕವನ್ನು ರಾಮ ಬೈಚಪ್ಪನ ನೆರವಿನಿಂದ ಗೆದ್ದ. ಆದರೆ, ಕಡೆಗೂ ಈ ವೀರನಿಗೆ ಸ್ತ್ರೀಯೇ ಮೃತ್ಯುವಾಗಿ ಪರಿಣಮಿಸಿದಳು. ತನ್ನ ಪರಸ್ತ್ರೀ ಗೌರವ ಭಾವನೆಯೇ ಅವನ ಸಾವಿಗೆ ಕಾರಣವಾಯಿತು. ಮಾತಂಗಿಗೆ ತಾನು ತೋರಿದ ಔದಾರ್ಯವೇ ಅವನಿಗೆ ಉರುಳಾಯಿತು. ಕುಮಾರರಾಮನ ಅಕಾಲ ಮರಣ ಅವನಿಗೆ ಭೂಷಣವಾಗಿರುವಂತೆ ಅವನ ಸದ್ಗುಣದ ಪ್ರತಿಫಲವಾದ ಈ ದುರಂತವೂ ಅವನ ಅಗ್ಗಳಿಕೆಗೆ ಕೈಗಂಬವಾಗಿದೆ. ನಂಜುಂಡನ ಕುಮಾರರಾಮ ಕಲಿಗಳಲ್ಲಿ ಕಲಿ, ಶುಚಿಗಳಲ್ಲಿ ಶುಚಿ.

ಕುಮಾರರಾಮ ಮರೆಹೊಕ್ಕವರಿಗೆ ತೋರುತ್ತಿದ್ದ ಔದಾರ್ಯವನ್ನೂ ಸ್ನೇಹಶೀಲ ಗುಣವನ್ನೂ ಲಕ್ಷಿಸಬೇಕು. ಬಾದೂರನಿಗೆ ತೋರುವ ಸೌಜನ್ಯ ಸ್ತುತ್ಯಾರ್ಹವಾದದ್ದು. ಸಹೋದರ ಕಾಟಣ್ಣನ ಮೇಲೆ ಇಟ್ಟಿದ್ದ ಮಮತೆಯನ್ನು ಮಿತ್ರ ದೇಪಿಶೆಟ್ಟಿಲಿಂಗನ ಮೇಲೂ ತೋರುತ್ತಾನೆ. ಕುದುರೆ ಬೊಲ್ಲನನ್ನು ಪಡೆದ ಬಗೆ, ಅದರೊಂದಿಗಿನ ಪ್ರಾಣಸ್ನೇಹ ಅನನ್ಯವಾದದ್ದು.

4.2.2.2.1 ಕಂಪಿಲ

ಇತಿಹಾಸದಲ್ಲಿ ಸಿಗುವ ಕಂಪಿಲನ ವ್ಯಕ್ತಿಚಿತ್ರಕ್ಕೂ ಕಾವ್ಯದಲ್ಲಿ ಕಾಣಸಿಗುವ ವ್ಯಕ್ತಿಚಿತ್ರಕ್ಕೂ ತುಂಬಾ ವ್ಯತ್ಯಾಸವಿದೆ. ಚರಿತ್ರೆಯಲ್ಲಿ ಕಂಪಿಲನು ಪ್ರಖ್ಯಾತನಾದ ಸೇನಾನಾಯಕನಾಗಿ ಕಂಡುಬರುತ್ತಾನೆ. ಹೆಬ್ಬುಲಿ ಕಂಪಿಲ ಎಂದು ಕೈಫಿಯತ್ತಿನಲ್ಲಿ ವರ್ಣಿಸಲಾಗಿದೆ. ನಂಜುಂಡಕವಿ ತನ್ನ ಕಾವ್ಯದ ಮೊದಲಲ್ಲಿ ಮಾತ್ರ ಕಂಪಿಲನಿಗೆ ಸ್ವಲ್ಪ ಪ್ರಾಶಸ್ತ್ಯವನ್ನು ಕೊಟ್ಟು, ಅನಂತರ ತನ್ನ ಸಂಪೂರ್ಣ ಲಕ್ಷ್ಯವನ್ನು ಕುಮಾರರಾಮನ ಪಾತ್ರದ ಬೆಳವಣಿಗೆಗೆ ಕೇಂದ್ರೀಕರಿಸುತ್ತಾನೆ. ಯಾವ ಯುದ್ಧವನ್ನೇ ತೆಗೆದುಕೊಂಡರೂ ರಾಮಗೇ ಪ್ರಾಶಸ್ತ್ಯ ಹೆಚ್ಚು. ಕಂಪಿಲ ದೂರದ ಪ್ರೇಕ್ಷಕನಾಗಿ ಉಳಿಯುತ್ತಾನೆ. ಸಮಭಾಗಿಯಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಈತನನ್ನು ಅಂಜುಬುರುಕನಂತೆಯೂ ಚಿತ್ರಿಸಲಾಗಿದೆ. ಕಿರಿಯ ಹೆಂಡತಿಯ ಮೇಲಿನ ಕಂಪಿಲನ ವ್ಯಾಮೋಹವಂತೂ ಅವನನ್ನು ವಿವೇಕಶೂನ್ಯನನ್ನಾಗಿ ಮಾಡಿದೆ. ರತ್ನಾಜಿ ಹೊರಿಸಿದ ಆರೋಪಗಳನ್ನು ನಂಬಿ ಮಗನ ಮೇಲೆ ಕ್ರುದ್ಧನಾದ ಕಂಪಿಲ ಅಮಾತ್ಯ ಬೈಚಪ್ಪ ಎಷ್ಟು ಎಚ್ಚರಿಸಿದರೂ ಬದಲಾಗುವುದೇ ಇಲ್ಲ. ನೇಮಿಯ ಎರಡನೇ ಆಕ್ರಮಣ ಅವನ ಅಸ್ತಿತ್ವವನ್ನು ಪೂರ್ಣ ಅಳಿಸಿಹಾಕುತ್ತದೆ. ಇಲ್ಲದ ಮಗನಿಗಾಗಿ ಅಪತ್ತಿನಲ್ಲಿ ಪರಿತಪಿಸುತ್ತಾನೆ. ಮಂತ್ರಿಯ ಅವಹೇಳನಕ್ಕೆ ಎಡೆಮಾಡಿಕೊಡುತ್ತಾನೆ.

ಇಡೀ ಕಾವ್ಯದಲ್ಲಿ ಕಂಪಿಲ ಉಳಿಯುವುದು ಅಮಿತವಾದ ಪುತ್ರವಾತ್ಸಲ್ಯದ ತಂದೆಯಾಗಿ. ರತ್ನಾಜಿಯ ಪ್ರಕರಣ ಅವನನ್ನು ಕುರುಡಾಗಿಸಿತೆಂಬುದನ್ನು ಬಿಟ್ಟರೆ ಉಳಿದಂತೆ ಆತ ರಾಮನ ಮೇಲಿನ ತನ್ನ ವಾತ್ಸಲ್ಯ ಮಮತೆಯನ್ನು ಎಲ್ಲೆಡೆ ತೋಡಿಕೊಳ್ಳುತ್ತಾನೆ. ತನ್ನ ಅಪ್ಪಣೆಯಂತೆ ರಾಮನ ಶಿರಶ್ಛೇದನ ಮಾಡಲಾಯಿತೆಂಬುದನ್ನು ನಂಬಿ ಮಗನಿಗಾಗಿ ಗೋಳಿಡುತ್ತಾನೆ. ಮಾತಂಗಿಯಿಂದ ರಾಮ ಹತನಾದಾಗಲೂ, ದೆಹಲಿಯಿಂದ ವಾಪಸ್ಸು ಬಂದ ಆತನ ತಲೆಯನ್ನು ಕಂಡಾಗಲೂ ವೃದ್ಧ ಕಂಪಿಲನಿಗಾದ ಸಂಕಟ ಹೇಳತೀರದು. ಕಂಪಿಲನ ಪಾತ್ರ ಎಷ್ಟೇ ದುರ್ಬಲವಾದುದೆನಿಸಿದರೂ ತನ್ನ ದುಃಸ್ಥಿತಿಯಿಂದಾಗಿ ಓದುಗರ ಅನುಕಂಪೆಗೆ ಪಾತ್ರವಾಗುತ್ತದೆ.

4.2.2.2.2 ಬೈಚಪ್ಪ

ಕಂಪಿಲನ ಅಮಾತ್ಯ ಬೈಚಪ್ಪನ ವ್ಯಕ್ತಿತ್ವ ಕಾವ್ಯದಲ್ಲಿ ಬಹಳ ಪ್ರಭಾವಶಾಲಿಯಾಗಿ ಮೂಡಿಬಂದಿದೆ. ಪ್ರತಾಪದಲ್ಲಾಗಲಿ, ಸಮಯೋಚಿತವಾದ ಕಾರ್ಯನಿರ್ವಹಣೆಯಲ್ಲಾಗಲಿ ಬೈಚಪ್ಪನಿಗೆ ಸಮಾನರಾದವರು ಕಾವ್ಯದಲ್ಲಿ ಬೇರೆ ಯಾರೂ ಇಲ್ಲ. ಕಂಪಿಲನ ರಾಜಕಾರ್ಯ ಬೈಚಪ್ಪನ ಬೆಂಬಲವಿಲ್ಲದೆ ಸಾಗದು. ಪತ್ನಿಯ ವ್ಯಾಮೋಹಕ್ಕೆ ಬಲಿಯಾಗಿ ಕಂಪಿಲ ವಿವೇಕಹೀನನಾದಾಗ ಬೈಚಪ್ಪನ ಬುದ್ಧಿವಂತಿಕೆ ಅವನ ದೊಡ್ಡ ವಿಪತ್ತನ್ನೇ ನಿವಾರಿಸಿತು. ನಂಜುಂಡನು ಈತನನ್ನು ಇಂದ್ರಾರಾಧಕನನ್ನಾಗಿ ಮಾಡಿ ಅನೇಕ ಇಂದ್ರಜಾಲಗಳನ್ನು ಇವನ ಮೂಲಕ ನೆರವೇರಿಸಿದ್ದಾನೆ. ಒಟ್ಟಿನಲ್ಲಿ ಬೈಚಪ್ಪನ ಸ್ವಾಮಿಭಕ್ತಿ, ಸಮಯಸ್ಫೂರ್ತಿ, ಪೂರ್ವಾಪರ ಆಲೋಚನೆ, ಶೌರ್ಯ, ಸೌಜನ್ಯಗಳು ಕವಿಯ ಕಣ್ಣಿಗೆ ಧಾರಳವಾಗಿ ವಿದಿತವಾಗಿವೆ. ಆತನು ಆದರ್ಶಸಚಿವನೆನ್ನಿಸಿ ಪ್ರತಿಪಕ್ಷದ ಸುಲ್ತಾನನ ಪ್ರಶಂಸೆಗೂ ಪಾತ್ರನಾಗಿದ್ದಾನೆ.

4.2.2.2.3 ರತ್ನಾಜಿ

'ರಾಮನಾಥಚರಿತೆ' ಯಲ್ಲಿ ಬರುವ ಸ್ತ್ರೀ ಪಾತ್ರಗಳಲ್ಲಿ ಪ್ರಧಾನವಾದುದು ರತ್ನಾಜಿಯ ಪಾತ್ರ. ಕಥಾನಾಯಕಿಯ ಪಟ್ಟವನ್ನೂ ಕಟ್ಟಬಹುದೆಂದು ತೋರುತ್ತದೆ. ನಂಜುಂಡನು ಈ ಪಾತ್ರಕ್ಕೆ ಪೂರ್ವಜನ್ಮದ ಪೀಠಿಕೆಯನ್ನು ಕಲ್ಪಿಸಿ, ದೇವಲೋಕದ ಊರ್ವಶಿಯೇ ಈ ಜನ್ಮದಲ್ಲಿ ರತ್ನಾಜಿಯಾಗಿ ಜನಿಸಿ, ಕುಮಾರರಾಮನಾಗಿ ಹುಟ್ಟಿ ಬಂದಿದ್ದ ಅರ್ಜುನನ ಮೇಲೆ ಮತ್ತೊಮ್ಮೆ ತನ್ನ ಮಾಯಾಜಾಲವನ್ನು ಬೀಸಿದಳೆಂಬುದಾಗಿ ನಿರೂಪಿಸಿದ್ದಾನೆ. ಜನ್ಮಾಂತರದ ನಿಮಿತ್ತ ಹೇಗಿದ್ದರೂ ಸರಿಯೆ, ಪ್ರಕೃತ ಕಾವ್ಯದಲ್ಲಿ ಚಿತ್ರಿತವಾಗಿರುವ ರತ್ನಾಜಿ ಅತ್ಯಂತ ಮಾಯಗಾತಿಯೇ ಸರಿ. ರಾಮನ ಸಮಾಗಮಕ್ಕಾಗಿ ಆಕೆ ದೇವತೆಗಳಲ್ಲಿ

ಹರಸಿಕೊಳ್ಳುವುದಾಗಲಿ, ರಾಮನ ಚಿತ್ರಪಟವನ್ನು ಕಂಡು ಪರಿತಪಿಸುವ ವಿರಹವ್ಯಾಕುಲವಾಗಲಿ, ಕಾಟನ ಜೊತೆಯಲ್ಲಿ ಹೂಡುವ ನಟನೆ, ಹಡಪದ ಬೊಲ್ಲುಗನನ್ನು ನಾಚಿಸಿ ಕಳುಹಿಸುವ ನೆಪ ಎಲ್ಲವೂ ಅವಳ ಕುಟಿಲತನವನ್ನೂ ಜಾಣತನವನ್ನೂ ವ್ಯಕ್ತಪಡಿಸುತ್ತವೆ. ರಾಮನ ಸಮ್ಮುಖದಲ್ಲಿ ಆಡುವ ಒಂದೊಂದು ಮಾತೂ ಆಕೆಯ ಸ್ವಭಾವವೆಂತಹುದೆಂಬುದನ್ನು ಪದರ ಪದರವಾಗಿ ಪರಿಚಯಿಸಿಕೊಡುತ್ತವೆ. ಯಾವ ಅಕಾರ್ಯಕ್ಕಾಗಿ ಹೆದರಿ ಕುಮಾರರಾಮ ಆಕೆಯನ್ನು ನೂಕಿ ಬಂದನೋ ಆ ಅಕಾರ್ಯದ ಅಪವಾದದನ್ನೇ ಅತನ ಮೇಲೆ ಹೊರಿಸಿದಳು. ಕುಮಾರರಾಮನ ರುಂಡವನ್ನು ಕಾಣುವತನಕ ಆಕೆಗೆ ಸಮಾಧಾನವೆನಿಸುವುದಿಲ್ಲ. ಆದರೆ ಮುಂದೆ ವಾಸ್ತವಿಕವಾದ ವೃತ್ತಾಂತವು ಬೆಳಕಿಗೆ ಬರುವ ಸನ್ನಿವೇಶ ಒದಗಿದಾಗ ಅವಳಿಗೆ ಕ್ಷಣಮಾತ್ರವೂ ಜೀವಸಹಿತ ಇರಲು ಆಗುವುದಿಲ್ಲ. ಅಂತೂ, ತನ್ನ ಕುಟಿಲತನ ಇನ್ನೂ ಪ್ರಕಟವಾಗುತ್ತಿದ್ದಂತೆಯೇ ಈಕೆ ಆತ್ಮಹತ್ಯೆ ಮಾಡಿಕೊಳ್ಳುವಳು. ಒಟ್ಟಿನಲ್ಲಿ ರತ್ನಾಜಿಯ ಪಾತ್ರ ಕುಮಾರರಾಮನ ಕಥೆಯಲ್ಲಿ ಅತ್ಯಂತ ಮಹತ್ವವುಳ್ಳದ್ದು. ಕುಮಾರರಾಮನೇ ಹೇಳುವಂತೆ, ಆತನ ಪರನಾರಿಸೋದರತ್ವವನ್ನು ಶಿವನು ಪರೀಕ್ಷಿಸಿ ನೋಡುವ ಒರೆಗಲ್ಲು ರತ್ನಾಜಿ. ಆದ್ದರಿಂದ ಆಕೆಯ ಪಾತ್ರದಲ್ಲಿ ಕಂಡುಬರುವ ಅತಿರೇಕಗಳು ರಾಮನ ಪಾತ್ರ ವೈಭವವನ್ನು ಹೆಚ್ಚಿಸುವ ಸಾಧನಗಳೆಂದು ಭಾವಿಸಬಹುದು.

4.2.2.3 ಸನ್ನಿವೇಶ ನಿರ್ಮಾಣ

ಶೂಲದ ಹಬ್ಬದ ಪ್ರಸಂಗ, ಮುತ್ತಿನ ಚೆಂಡಾಟದ ಪ್ರಸಂಗ, ರತ್ನಾಜಿಯ ಸೌಂದರ್ಯ ಹಾಗೂ ಅವಳ ವಿರಹತಾಪದ ಚಿತ್ರಣ, ಯುದ್ಧ ವಿವರಗಳು ಇವು ಸನ್ನಿವೇಶ ನಿರ್ಮಾಣದ ದೃಷ್ಟಿಯಿಂದ ರಾಮನಾಥಚರಿತದಲ್ಲಿ ಪರಿಗಣಿಸಬೇಕಾದವು. ರತ್ನಾಜಿ ಕುಮಾರರಾಮನನ್ನು ಮೋಹಿಸಿ ಆತನಿಂದ ತಿರಸ್ಕೃತಳಾದ ಸಂದರ್ಭ ಕಾವ್ಯಕ್ಕೆ ಮುಖ್ಯವಾದ ತಿರುವು ತಂದುಕೊಡುವ ಸಂದರ್ಭ. ಕಾವ್ಯ ವೀರಪುರುಷನೊಬ್ಬನ ಕಥೆಯನ್ನು ನಿರೂಪಣೆ ಮಾಡಹೊರಟಿರುವುದರಿಂದ ಯುದ್ಧ ವರ್ಣನೆಗಳೂ ಅಷ್ಟೇ ಮುಖ್ಯವಾದುವು. ಆದ್ದರಿಂದ ಈ ಎರಡು ಸಂದರ್ಭಗಳನ್ನು ಮಾತ್ರ ನಿದರ್ಶನಾರ್ಥವಾಗಿ ಇಲ್ಲಿ ಪರಿಚಯಿಸಲಾಗಿದೆ.

4.2.2.3.0 ರತ್ನಾಜಿ ಕುಮಾರರಾಮನನ್ನು ಮೋಹಿಸಿದ ಘಟನೆ

ಶೂಲದ ಹಬ್ಬದಂದು ರಾಮನನ್ನು ಕಂಡಕೂಡಲೆ ರತ್ನಾಜಿಯ ಚಿತ್ತ ಅಸ್ತವ್ಯಸ್ತವಾಯಿತು. ಆಕೆಯ ವಿರಹ ವೇದನೆ ನಿಮಿಷ ನಿಮಿಷಕ್ಕೂ ನಿಡಿದಾಯಿತು. ಇಂತಹ ಸನ್ನಿವೇಶವೊಂದು ನಂಜುಂಡನ ನಿಪುಣ ಹಸ್ತಕ್ಕೆ ಸಿಕ್ಕಿದೆ. ರತ್ನಾಜಿ ಕರುಮಾಡದಿಂದಿಳಿದು ತನ್ನ ಅರಮನೆಗೆ ಬಂದು ದೂತಿಯಾದ ಸಂಗಿಯೊಡನೆ ತನ್ನ ತಳಮಳವನ್ನು ತೋಡಿಕೊಳ್ಳತೊಡಗಿದಳು. 'ಲಕ್ಷಣೆಕೆಯ ಪಿಡಿದೊಸೆದು ಚಿತ್ರಿಗ ಕಣ್ಣೆಕ್ಕಿ ಬರೆದ ಗಂಡುರೂಪಮಿಕ್ಕಿತೋರುವ ರಾಮನ ರೂಪಿಗೆ ಮನವಿಕ್ಕಿದೆ ನಕ್ಕ' ಎಂದು ಮಾತನ್ನು ಮೊದಲು ಮಾಡುತ್ತಾಳೆ. ಮುಚ್ಚುಮರೆಯಿಲ್ಲದೆ ತನ್ನ ಅಂತರಂಗವನ್ನು ಗೆಳತಿಗೆ ತೆರೆದಿಡುತ್ತಾಳೆ. ಚತುರಳಾದ ಸಂಗಿ ರತ್ನಾಜಿಯನ್ನು ಬುದ್ಧಿವಂತಿಕೆಯಿಂದ ಸಮಾಧಾನಪಡಿಸಲು ತೊಡಗಿದಳು. ಒಡತಿಯ ಒಳಗುದಿಯನ್ನು ಅರಿತು ದೂತಿಯಾದ ಸಂಗಿ ಶೈತ್ಯೋಪಚಾರ ಮಾಡಿದಳು. ಅತಿ ವಿಸ್ತಾರವಾಗಿ ಒಡತಿಯ ರೂಪುಲಾವಣ್ಯಗಳ ವೈಭವವನ್ನೂ, ಆಕೆಯ ಆಕಾಂಕ್ಷೆಯನ್ನೂ ಪ್ರಶಂಸೆ ಮಾಡಿದಳು. ರತ್ನಾಜಿಗಾದರೋ ಮನಸ್ಸು ಮಸೆಯುತ್ತಿತ್ತು. ಕ್ಷಣಕಾಲ ಭಾವರತಿಯನ್ನೂ ಅನುಭವಿಸಿ ಭ್ರಮಿಸಿದಳು. ಮರುಗಳಿಗೆಯಲ್ಲಿ ಕುಮಾರರಾಮನ ಕನಸನ್ನೂ ಕಾಣಲಾರಂಭಿಸಿದಳು. ಬೆಳಗಾಗಲು ಆಕೆ ಕಳೆಗುಂದಿದಂತಿದ್ದಳಾದರೂ, ಇತರರಿಗೆ ಗೊತ್ತಾದೀತೆಂದು ಶಂಕಿಸಿ ಎಂದಿನಂತೆಯೇ ವ್ಯವಹರಿಸತೊಡಗಿದಳು. ಈ ಒಟ್ಟು ಸಂದರ್ಭವನ್ನು ನಂಜುಂಡನು ಬಹು ದೀರ್ಘವಾಗಿಯೂ ಪರಿಣಾಮಕಾರಿಯಾಗಿಯೂ ಚಿತ್ರಿಸಿದ್ದಾನೆ. ಆತನ ಪಾಂಡಿತ್ಯ ಪ್ರತಿಭೆಗಳು ಸಮಜೋಡಿಯಾಗಿ ನಿಂತು ಸಾಗುತ್ತವೆ. ರತ್ನಾಜಿಯ ಒಳತೋಟಿಯನ್ನು ಮನಸೆಳೆಯುವಂತೆ ಎಳೆ ಎಳೆಯಾಗಿ ಬಿಡಿಸಿ ತೋರಿಸಿದ್ದಾನೆ. ರತ್ನಾಜಿಯ ಕಾಮುಕ ಪ್ರವೃತ್ತಿ, ವಿರಹೋದ್ರೇಕ,

ಅಸಹನೀಯವಾದ ಯಾತನೆ ಇವೇ ಮೊದಲಾದವು ಈ ಪ್ರಸಂಗದ ಮುಖ್ಯಾಂಶಗಳು. ಇವುಗಳನ್ನು ಊಹೆಗೂ ಮೀರುವಷ್ಟು ದೀರ್ಘವಾಗಿ ನಂಜುಂಡನು ನಿರೂಪಿಸಿದ್ದಾನೆ. ರತ್ನಾಜಿ ಮತ್ತು ಸಂಗಿಯರ ಸಂಭಾಷಣೆಯೇ ಸಂಧಿಗಟ್ಟಲೆ ಸಾಗುತ್ತದೆ. ಶೂಲದ ಹಬ್ಬ ಮತ್ತು ಚೆಂಡಾಟಗಳ ಮಧ್ಯದ ಬಹುಭಾಗವನ್ನು ಈ ವರ್ಣನೆಗೆ ಮೀಸಲಿಟ್ಟಿದ್ದಾನೆ. ರತ್ನಾಜಿಗಿಂತ ಹೆಚ್ಚಾಗಿ ಸಂಗಿಯ ಸವಿನುಡಿಗಳು ಮೆಲ್ನುಡಿಗಳು ಅವಳ ಜಾಣತನವನ್ನು, ಕುಂಟಣಿತನದ ಪ್ರಾವೀಣ್ಯವನ್ನೂ ಪರಿಚಯ ಮಾಡಿಕೊಡುತ್ತವೆ. ಪ್ರೌಢವೂ ಗಾಢವೂ ಆದ ಈ ನಿರೂಪಣೆ ನಂಜುಂಡನ ಮಹಾಪ್ರಬಂಧದ ಸರಣಿಗೆ ತಕ್ಕಂತಿದೆ.

4.2.2.3.1 ಕುಮಾರರಾಮನ ಕಾಳಗ

'ರಾಮನಾಥಚರಿತ್ರೆ'ಯಲ್ಲಿ ನಡೆಯುವ ಯುದ್ಧಗಳಲ್ಲೆಲ್ಲಾ ಅತ್ಯಂತ ಭೀಷಣವೂ ದಾರುಣವೂ ಆದ ಯುದ್ಧ ಇದು. ಕವಿ ಇದನ್ನು ತುಂಬಾ ವೀರಾವೇಶದಿಂದ ಚಿತ್ರಿಸಿರುವುದು ಸಹಜವಾಗಿಯೇ ಇದೆ. ಈ ಸಂದರ್ಭದಲ್ಲಿ ಬರುವ ಕೋಟೆಯ ಕಾಳಗದ ವರ್ಣನೆ ಗಮನಿಸಬೇಕಾದುದು. ನಂಜುಂಡನು ಈ ಕಾಳಗದ ಒಂದೊಂದು ಅಂಶವನ್ನೂ ತಪ್ಪದೆ ಚಿತ್ರಿಸಿದ್ದಾನೆ. ಈ ಪ್ರಸಂಗ ವಾಸ್ತವವಾಗಿ ಕ್ರಿಯಾಪ್ರಧಾನವಾದುದ್ದು. ಕೋಟೆಯ ಕಾಳಗದ ಕಲ್ಪನೆ ಮನಸೆಳೆಯುವಂತೆ ಚಿತ್ರಿಸಲಾಗಿದೆ. ಈ ಸಂದರ್ಭದ ನಂಜುಂಡನ ನಿರೂಪಣೆ ಶಾಸ್ತ್ರೀಯವೂ, ಅದಷ್ಟು ಖಚಿತವೂ ಆಗಿದೆ. ಅತನು ಸನ್ನಿವೇಶದ ಗಹನತೆಯನ್ನೂ, ತೀವ್ರತೆಯನ್ನೂ ತಕ್ಕಮಟ್ಟಿಗೆ ಗ್ರಹಿಸಿದ್ದಾನೆ. ಕೋಟೆಯ ಕಾಳಗದ ಪೀಠಿಕೆ, ಉಭಯ ಪಕ್ಷಗಳ ಪ್ರತಿಭಟನೆ, ವೀರರಾಮನ ದುರಂತ ಮೊದಲಾದವುಗಳನ್ನು ಕ್ರಮವಾಗಿ ಬೆಳೆಸಿದ್ದಾನೆ. ರಾಮನ ಪರಾಕ್ರಮಕ್ಕೆ ಹೆಚ್ಚು ಗಮನವಿತ್ತಿರುವುದರಿಂದ ಕೋಟೆಯ ಕಾಳಗದ ವಿವರ ಸ್ವಲ್ಪ ಕಡಿಮೆಯಾಯಿತು ಎನಿಸುವುದೂ ಉಂಟು ಆದರೆ ಸನ್ನಿವೇಶಕ್ಕೆ ಎಷ್ಟು ಅಗತ್ಯವೋ ಅಷ್ಟರಮಟ್ಟಿಗೆ ಹಿನ್ನೆಲೆಯಾಗಿ ಬಂದಿವೆ.

ನೇಮಿ ಎರಡನೆಯ ಬಾರಿ ದಂಡೆತ್ತಿ ಬಂದ ಸಂದರ್ಭದಲ್ಲಿ ನಡೆಯುವ ಇರುಳ ಕಗ್ಗೊಲೆಯ ಚಿತ್ರ ಕೂಡ ಇಲ್ಲಿ ಗಮನಿಸಬೇಕಾದುದು. ನಂಜುಂಡ ಈ ಚಿತ್ರವನ್ನು ತುಂಬಾ ಪರಿಣಾಮಕಾರಿಯಾಗಿ ಬಿಡಿಸಿ ತೋರಿಸಿದ್ದಾನೆ.

4.2.2.4 ಕೃತಿಯ ಭಾಷೆ ಶೈಲಿ

ನಮ್ಮ ಪ್ರಾಚೀನ ಸಾಹಿತ್ಯದ ಯಾವುದೇ ಪ್ರೌಢ ಕಾವ್ಯವನ್ನು ಓದಿ ನೋಡಿದಾಗ ಅದರಲ್ಲಿ ಪಾರಂಪರಿಕವಾದ ಸಮಯಗಳೂ ಪಾಂಡಿತ್ಯಪೂರ್ಣವಾದ ಅಲಂಕಾರಾದಿಗಳೂ ಕವಿಯ ಜೀವನಾನುಭವದ ಆಧಾರದ ಮೇಲೆ ರಚಿತವಾಗುವ ಉಪಮಾನಗಳೂ ಅತ ಕಂಡು ಕೇಳಿದ ನಾಣ್ನುಡಿಗಳೂ ಗಮನಕ್ಕೆ ಬರುತ್ತವೆ. ನಂಜುಂಡಕವಿ ಕೂಡ ಇದಕ್ಕೆ ಹೊರತಲ್ಲ. ಅತ ಬಹುಮಟ್ಟಿಗೆ ವಿದ್ವಜ್ಜನಪ್ರಿಯನಾದ ಕವಿಯಾಗಿರುವುದರಿಂದ ಅತನಲ್ಲಿಯೂ ಪಂಡಿತ ಪ್ರಿಯವಾದ ಕವಿಸಮಯಗಳು, ವಿವಿಧ ಅಲಂಕಾರ ಚಮತ್ಕಾರಗಳು, ಉಪಮಾನಾದಿಗಳು ಕಂಡುಬರುತ್ತವೆ. ಅಲ್ಲದೆ, ಅತನ ಅನುಭವಕ್ಕೆ ಬಂದ ಇತರ ಸಾಮತಿಗಳು ಹೋಲಿಕೆಗಳು ಕಾವ್ಯದ ಸ್ವಾರಸ್ಯವನ್ನು ಹೆಚ್ಚಿಸಿವೆ. 'ನೀರ ತೊಲಗಿಸಿ ಪಾಲ್ಗುಡಿವ ಹಂಸೆಯವೊಲುದಾರಗುಣಗಳಿಗೊಲಿವುತ', 'ಅಹಿತ ಚಕೋರ ಜೊನ್ನಮನುಣೆ ಬಯಸುವ ತೆಱದಿಂದ','ಇಪ್ಪುಟಿನ ಜಕ್ಕವಕ್ಕಿಯ ಪೆಂಡತಿಯಂತಳಲಿದಳು' ಇಂತಹ ಕವಿ ಸಮಯಗಳ ಪ್ರಯೋಗಗಳು ಕಾವ್ಯದ ಉದ್ದಕ್ಕೂ ಕಂಡುಬರುತ್ತವೆ. ನಂಜುಂಡ ಕೊಡುವ ಪೌರಾಣಿಕ ದೃಷ್ಟಾಂತಗಳನ್ನು ನೋಡಿದರೆ ಅತನಿಗೆ ಭಾರತಕಾವ್ಯದ ಮೇಲೆ ಹೆಚ್ಚಿನ ಅಭಿಮಾನವಿದ್ದಂತಿದೆ. ತನ್ನ ಕಥಾನಾಯಕ ಅರ್ಜುನನ ಅಂಶವೆಂದು ಕಲ್ಪಿಸಿಕೊಂಡಿರುವುದರಿಂದ ಭಾರತಕಾವ್ಯದಿಂದ ಉದಾಹರಣೆಗಳನ್ನು ಮೇಲಿಂದ ಮೇಲೆ ಆರಿಸಿಕೊಟ್ಟಿದ್ದಾನೆ. 'ಕುರುಸೇನೆಗೆಂತೊರ್ವನೆ ಪಾರ್ಥನಿದಿರಾಗಿ ಧುಶವನೆಸಗಿದನೆಂಬಾ ನರರ ಸಂದೇಹನ ಪರಿಹರಿಸಿದ', 'ಮಲೆತಾನೇಕಾಂಗದೊಳಗೆ ಭೀಮಕೌರವಬಲಕಿದಿರಾಗಿನಿಂದಂತೆ', 'ಮಾರುತಿಗೆಣೆ ಪಾರ್ಥಗೆ ಪಾಟಿ ತರಣಿಕುಮಾರಗೆ ಸರಿಯೆಂದೊರೆಯುರೆ ಈ ರಾಮನನ್ನು' - ಹೀಗೆ ಹಲವಾರು ಸಾದೃಶ್ಯಗಳು

ಕುಮಾರರಾಮನಿಗೆ ಸಂಬಂಧಿಸಿದಂತೆ ಬರುತ್ತವೆ. ಉಪಮಾನಗಳ ಮೂಲಕ ನಂಜುಂಡ ಒಮ್ಮೊಮ್ಮೆ ಅಪೂರ್ವವಾದ ಚಿತ್ರಗಳನ್ನು ಕಣ್ಣಮುಂದೆ ತಂದು ನಿಲ್ಲಿಸುತ್ತಾನೆ. ಮಲ್ಲಿಗೆ ಹೂವಿನ ಸಮೂಹವನ್ನು ಕಂಡಾಗ ಚಿತ್ತಜಕೀರ್ತಿಲತೆಯ ಬಿತ್ತುಗಳವೊಲು ಚಿತ್ತಕಾನಂದವನೀವ ಒತ್ತಿನ ಮುಗುಳು ಮಲ್ಲಿಗೆಯವಂಗಡವೆಸೆದತ್ತಾ ಸುರವನದೊಳಗೆ ಎನ್ನುತ್ತಾನೆ. ರೂಪಾಲಂಕಾರವೆಂದರೆ ನಂಜುಂಡಕವಿಗೂ ಮೆಚ್ಚು. ಕುಮಾರರಾಮನನ್ನು ಕಂಡ ತಾಯಿಯನ್ನು ಪುಳಕ ಗುಡಿಗಟ್ಟಿದಳು ಮೈಯೊಳು ಕಣ್ಣಬೆಳಗಿನ ದೀಪವೆತ್ತಿಗಳು ಕಳುವದಾನಂದಾಶ್ರು ಜಲಪಿಡಿದಳಾ ನಳಿನವದನೆ ಸುಳಗೆ ಎಂದು ಬಣ್ಣಿಸಿದುದು ಒಪ್ಪುವಂತಿದೆ. ನಂಜುಂಡ ಪ್ರಯೋಗಿಸಿದ ನಾಣ್ನುಡಿಗಳು ಅವನ ಜೀವನಾನುಭವವನ್ನು ಸ್ವಲ್ಪಮಟ್ಟಿಗಾದರೂ ಪರಿಚಯ ಮಾಡಿಕೊಡುತ್ತವೆ. 'ಮೊಲದಾ ಕಲೆಯ ಕೋಡಿವರು ತೆಗೆದರು', 'ಕೊಲುವ ಹುಲಿಗೆ ಕೋಲುಗೊಂಡೆಗ್ಗನಂತೆ', ' ಉಗುರಿಂದ ಪೋಪುದಕೆ ಕೊಡಲಿಯ ತೆಗವೆ' - ಇಂತಹ ಹೇಳಿಕೆಗಳು ಸಾಕಷ್ಟಿವೆ.

ನಂಜುಂಡಕವಿಯ ಶೈಲಿಯಲ್ಲಿ ಹಿರಿಯ ಕವಿಗಳ ಹಿರಿಮೆಯೂ ಸ್ವತಂತ್ರವಾದ ಕಾವ್ಯಶಕ್ತಿಯೂ ಸರಿಸಮನಾಗಿ ಕಂಡುಬರುತ್ತವೆ. ಆತನ ಕಾಲದಲ್ಲಿ ಪ್ರಚಲಿತವಾಗಿದ್ದ ಸಾಮಾನ್ಯ ಕಥೆಯೊಂದನ್ನು, ಅದು ಪುರಾಣೋಕ್ತವಲ್ಲದಿದ್ದರೂ,ಧೈರ್ಯದಿಂದ ವಸ್ತುವನ್ನಾಗಿಟ್ಟುಕೊಂಡು, ಅದರಲ್ಲಿ ರಸವನ್ನೂ ಭಾವವನ್ನೂ ತುಂಬಿ ಹೇಳಿರುವ ಕವಿಯ ಶೈಲಿ ಸಾಕಾದಷ್ಟು, ಸ್ವಾದುವಾಗಿಯೂ, ಶಕ್ತಿಯುತವಾಗಿಯೂ ಇದೆ.

4.2.2.5 ಕೃತಿಯ ಮಹತ್ವ

'ರಾಮನಾಥಚರಿತ' ಕನ್ನಡದ ಮೊದಲ ಚಾರಿತ್ರಿಕ ಕಾವ್ಯ, ವೀರಕಾವ್ಯ ಎಂಬ ಅಭಿಧಾನಕ್ಕೆ ಪಾತ್ರವಾಗಿದೆ. ರಾಮನಾಥನ ಶುಚಿತ್ವ ವೀರತ್ವಗಳ ಪ್ರಕಾಶನವೇ ಕಾವ್ಯದ ಮುಖ್ಯವಾದ ಉದ್ದೇಶ. ರೂಪಾಣದ ಅಲೌಕಿಕತೆಯೊಡನೆ ಮಹಾಭಾರತದ ಪ್ರಮುಖ ಘಟನೆಗಳ ವ್ಯಾಜಾಂತರ ಸಂಯೋಜನೆ, ಸಮಕಾಲೀನ ಜೀವನದ ಸೊಗಸಾದ ಚಿತ್ರಣ, ವಿಷಮ ದಾಂಪತ್ಯದ ದುಷ್ಪರಿಣಾಮ, ಉನ್ಮತ್ತ ಶೃಂಗಾರದ ಲೋಕಕಂಟಕತ್ವ, ಶುಚಿತ್ವ, ವೀರತೆ ಇಲ್ಲಿ ಚಿತ್ರಿತವಾಗಿದೆ. ಶೈಲಿಯಲ್ಲಿ ದೇಸೀಯತೆಯ ನಯಗಾರಿಕೆ, ಅರ್ಥಸ್ಫುಟತ್ವ, ಸುಕುಮಾರತೆ ಕಂಡುಬರುತ್ತದೆ. ಹೆಣ್ಣಿನ ಕಾಮಾತರದ ಹುಚ್ಚು ಹಂಬಲವನ್ನೂ ಇನ್ನೊಂದೆಡೆ ಗಂಡಿನ ವಜ್ರಕಠೋರ ಮನೋದೃಢತೆಯನ್ನೂ ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ಶೃಂಗಾರದ ವರ್ಣನೆಯಲ್ಲಿ ಕವಿಯ ಕಲಾವಂತಿಕೆ ಅಭಿವ್ಯಕ್ತಗೊಂಡಿದೆ. ಯುದ್ಧವರ್ಣನೆಗಳು ವೀರರಸೋಪೇತವಾಗಿವೆ. ಪಾತ್ರಚಿತ್ರಣದಲ್ಲಿಯೂ ಕವಿ ಸಿದ್ಧಹಸ್ತನೆಂಬುದನ್ನು ತೋರಿಸಿದ್ದಾನೆ. ಸಾಂಗತ್ಯ ಗ್ರಂಥಗಳಲ್ಲಿ ರತ್ನಾಕರವರ್ಣಿಯ ಭರತೇಶವೈಭವವನ್ನು ಬಿಟ್ಟರೆ 'ರಾಮನಾಥಚರಿತ' ಕಾವ್ಯಸತ್ತ್ವ ಹಾಗೂ ದೃಷ್ಟಿಯಿಂದ ಅದಕ್ಕೆ ಹೆಗಲೆಣೆಯಾಗಿ ನಿಲ್ಲುವ ಸತ್ವವನ್ನು ಒಳಗೊಂಡಿದೆ.

4.3 ರತ್ನಾಕರವರ್ಣಿ

ರತ್ನಾಕರವರ್ಣಿ ಸಾಂಗತ್ಯ ಛಂದಸ್ಸಿನ ಬಹುದೊಡ್ಡ ಕವಿ. ಶೃಂಗಾರ ಪ್ರಿಯ ಎಂದು ಹೆಸರಾಗಿದ್ದಾನೆ. ಮಧುರ ಭಾವಗಳ ಅತ್ಯಂತ ವ್ಯಾಪಕ ಚಿತ್ರಗಳನ್ನೊದಗಿಸಿದ ಕವಿ ಈತ. ತನ್ನ ಕಾವ್ಯದಲ್ಲಿ ಈತ ಚಿತ್ರಿಸಿದ ಶೃಂಗಾರ ರಸ ನೈಪುಣ್ಯದ ಪರಿಣಾಮವಾಗಿಯೋ ಏನೊ ಈತನ ರಸಿಕತೆಯನ್ನು ಕಾವ್ಯ ವಿಚಕ್ಷಣತೆಯನ್ನು ಬಿಂಬಿಸುವ ಕಥೆಗಳು ಈತನ ಬಗೆಗೆ ಹುಟ್ಟಿಕೊಂಡಿವೆ. ಈ ಕಥೆಗಳ ಮೂಲ ರೇಖೆಗಳನ್ನು ಹಿಡಿದು ಈತನ ಬದುಕಿನ ವಾಸ್ತವಾಂಶಗಳನ್ನು ಗುರುತಿಸುವ ಯತ್ನವನ್ನು ವಿದ್ವಾಂಸರು ಮಾಡಿದ್ದಾರೆ. ಈತನಿಗೆ ರತ್ನಾಕರವರ್ಣಿ, ರತ್ನಾಕರಸಿದ್ಧ, ರತ್ನಾಕರ, ಅಣ್ಣ ಎಂಬ ಪರ್ಯಾಯ ನಾಮಗಳಿದ್ದಂತೆ ತಿಳಿದುಬರುತ್ತದೆ. ಇವುಗಳಲ್ಲಿ 'ರತ್ನಾಕರಸಿದ್ಧ' ಎಂಬುದು ತನಗೆ ಮೆಚ್ಚಿನ ಹೆಸರು ಎಂಬುದನ್ನು ಹೇಳಿಕೊಂಡಿದ್ದಾನೆ. ಈತ ರಾಜ ಮನೆತನಕ್ಕೆ ಸೇರಿದವನೆಂದೂ, ಮೊದಲು ಜೈನನಾಗಿದ್ದು ಆಮೇಲೆ ವೀರಶೈವ ಧರ್ಮವನ್ನು ಸ್ವೀಕರಿಸಿ ಮತ್ತೆ ಜೈನಧರ್ಮಕ್ಕೆ ವಾಪಸಾದನೆಂದೂ ಈತನ ಬಗೆಗೆ ಪ್ರಚಲಿತವಿರುವ

ಕಥೆಗಳಿಂದ ತಿಳಿದುಬರುತ್ತದೆ. ಕನ್ನಡದ ಅನೇಕ ಕವಿಗಳಂತೆ ಈತ ಸಹ ತನ್ನ ವೈಯಕ್ತಿಕ ವಿಚಾರಗಳ ಬಗೆಗೆ ಹೆಚ್ಚಿನದೇನನ್ನೂ ಹೇಳಿಕೊಂಡಿಲ್ಲ.

4.3.0 ಕವಿಯ ಕಾಲ

ಎಸ್.ಜಿ.ನರಸಿಂಹಾಚಾರ್ ಮತ್ತು ಎಂ.ಎ.ರಾಮಾನುಜಯ್ಯಂಗಾರ್ ಅವರು 'ರತ್ನಾಕರಶತಕ'ವನ್ನು ಸಂಪಾದಿಸಿ, 'ಭರತೇಶ ವೈಭವ'ದ ಕೊನೆಯಲ್ಲಿರುವ ಪದ್ಯವನ್ನು ಆಧರಿಸಿ ರತ್ನಾಕರನ ಕಾಲವನ್ನು ೧೫ ನೇ ಶತಮಾನದ ಅಂತ್ಯ ಹಾಗೂ ೧೬ ನೇ ಶತಮಾನದ ಆದಿಭಾಗ ಎಂದು ನಿರ್ಧರಿಸಿದ್ದಾರೆ. ಆರ್.ನರಸಿಂಹಾಚಾರ್ಯರು ಕೈಬರೆಹದ ಪ್ರತಿಯೊಂದರಲ್ಲಿ ಯಾವನೋ ಪ್ರತಿಕಾರನು ಪ್ರತಿ ಮಾಡಿದ ಕಾಲವನ್ನು ಗ್ರಂಥ ರಚನಾ ಕಾಲವೆಂದು ಭ್ರಮಿಸಲಾಗಿದೆ ಎಂದು ಹೇಳಿ ಈ ತೀರ್ಮಾನವನ್ನು ನಿರಾಕರಿಸಿದ್ದಾರೆ. 'ತ್ರಿಲೋಕಶತಕ' ದಲ್ಲಿ ಕಂಡುಬರುವ ಪದ್ಯವೊಂದನ್ನು ಆಧರಿಸಿ ಆರ್.ನರಸಿಂಹಾಚಾರ್ಯರು ಕ್ರಿ.ಶ. ೧೫೫೩ ರತ್ನಾಕರವರ್ಣಿಯ ಕಾಲ ಎಂದು ನಿರ್ಧರಿಸಿದ್ದಾರೆ. ಆದರೆ ದೇವಚಂದ್ರನೆಂಬ ಕವಿ ತನ್ನ 'ರಾಜಾವಳೀಕಥೆ'ಯಲ್ಲಿ ರತ್ನಾಕರವರ್ಣಿಯ 'ಭರತೇಶ ವೈಭವ' ವನ್ನು ರಚಿಸಿದ ಕಾಲವನ್ನು ಶಾಲಿವಾಹನಶಕ ೧೪೭೯ ಎಂದು ಸೂಚಿಸಿ 'ದ್ವಾದಶಾನುಪ್ರೇಕ್ಷೆ' ಎಂಬ ಕಾವ್ಯವನ್ನು ಬರೆದ ವಿಜಯಣ್ಣನ ಸಮಕಾಲೀನನೆಂದು ಹೇಳಿದ್ದಾನೆ. ದೇವಚಂದ್ರ ಸೂಚಿಸುವ ಈ ಕಾಲ ಕ್ರಿ.ಶ. ೧೫೫೭ ಕ್ಕೆ ಸೇರಿಹೋಗುತ್ತದೆಂದು ವಿದ್ವಾಂಸರು ಲೆಕ್ಕ ಹಾಕಿದ್ದಾರೆ. ಆದರೆ ವಿಜಯಣ್ಣನ ಕಾಲ ಕ್ರಿ.ಶ. ೧೫೫೦ ಎಂದು ನಿಖರವಾಗಿ ತಿಳಿದುಬರುತ್ತದೆ. ಹಾಗಾಗಿ ದೇವಚಂದ್ರ ಸೂಚಿಸುವ ಕಾಲ ಮತ್ತು ಅವನೇ ಹೇಳುವ ರತ್ನಾಕರವರ್ಣಿ ಮತ್ತು ವಿಜಯಣ್ಣರ ಸಮಕಾಲೀನತ್ವ ಎರಡೂ ವಿರುದ್ಧ ಹೇಳಿಕೆಗಳಾಗಿವೆ. ಆರ್.ನರಸಿಂಹಾಚಾರ್ಯರು ಸಮಕಾಲೀನತ್ವದ ವಿಚಾರವನ್ನು ನಿರಾಕರಿಸಿ ಕಾಲದ ಸೂಚನೆಯನ್ನು ಒಪ್ಪುತ್ತಾರೆ. ಶಾ.ಶ. ೧೩೭೯ ಎಂಬುದಕ್ಕೆ ಬದಲಾಗಿ ೧೪೭೯ ಎಂದು ದೇವಚಂದ್ರನು ಪ್ರಮಾದವಶದಿಂದ ಹೇಳಿರಬಹುದು ಎಂದು ತ.ಸು.ಶಾಮರಾಯರು ಅಭಿಪ್ರಾಯಪಡುತ್ತಾರೆ. ಹೆಚ್ಚಿನ ವಿದ್ವಾಂಸರಿಗೆ ಆರ್.ನರಸಿಂಹಾಚಾರ್ಯರ ನಿಲುವು ಇಷ್ಟವಾಗಿದೆ. ರಂ.ಶ್ರೀ. ಮುಗಳಿ ಅವರು ಸಹ ೧೬ನೇ ಶತಮಾನದ ಮಧ್ಯಭಾಗದಲ್ಲಿ ರತ್ನಾಕರರ್ಣಿ ಇದ್ದನೆಂದು ಹೇಳಿ ೧೫೬೦ನ್ನು ಕವಿಯ ಕಾಲವೆಂದು ಸೂಚಿಸಿದ್ದಾರೆ.

4.3.1 ದೇಶ

ರತ್ನಾಕರರ್ಣಿಯು ತುಳುನಾಡಿನ ನಿವಾಸಿಯಾಗಿದ್ದನೆಂಬುದನ್ನು ಆಂತರಿಕ ಮತ್ತು ಬಾಹ್ಯ ಸಾಕ್ಷ್ಯಗಳೆರಡೂ ಸ್ಪಷ್ಟಪಡಿಸುತ್ತವೆ. 'ತ್ರಿಲೋಕಶತಕ'ದಲ್ಲಿ ಕವಿ ತಾಳವಾಂಗಣದೊಳ್ವೇಣಪುರಾಂಕದೊಳ್ ಸ್ಸದಿಸಿದನಂ ರತ್ನಾಕರಾರ್ಯ' ಎಂದು ಸ್ಪಷ್ಟವಾಗಿಯೇ ಹೇಳಿಕೊಂಡಿದ್ದಾನೆ. ತಾಳವಾಂಗಣದ ವೇಣುಪುರ ಕವಿಯ ಊರು ಎಂಬುದು ಇದರಿಂದ ಸಿದ್ಧವಾಗುತ್ತದೆ. ಈ ವೇಣುಪುರವೇ ಪಶ್ಚಿಮ ಕರಾವಳಿ ತೀರದಲ್ಲಿರುವ ಈಗಿನ ಮೂಡಬಿದರೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಶಾಸನಾಧಾರಗಳೂ ಇವೆ. ರತ್ನಾಕರನು ಚಾರುತೀತಾಚಾರ್ಯ ಮತ್ತು ಹಂಸನಾಥರನ್ನು ಗುರುಗಳೆಂದು ಸ್ಮರಿಸಿದ್ದಾನೆ. ಅವನ ಕೀರ್ತನೆಗಳಲ್ಲಿ ಮಹೇಂದ್ರಕೀರ್ತಿಯ ಹೆಸರೂ ಇದೆ. 'ರತ್ನಾಕರಶತಕ'ದ ಕೊನೆಯಲ್ಲಿ ಮಹೇಂದ್ರಕೀರ್ತಿ ಎಂಬ ಹೆಸರೂ ಕಾಣಸಿಗುತ್ತದೆ. ಮಹೇಂದ್ರಕೀರ್ತಿ ಹಾಗೂ ದೇವೇಂದ್ರಕೀರ್ತಿ ಎಂಬುವ ಒಬ್ಬನೇ ವ್ಯಕ್ತಿಯನ್ನು ಸೂಚಿಸುತ್ತಿರಬಹುದು. ಹಂಸನಾಥ ಕವಿಯ ಮೋಕ್ಷಗುರು ಆಗಿರಬಹುದೆಂದು ಅಭಿಪ್ರಾಯಪಡಲಾಗಿದೆ.

4.3.2 ಕೃತಿಗಳು

ರತ್ನಾಕರರ್ಣಿಯು ರಚಿಸಿದ ಕೃತಿಗಳು ಯಾವುವು ಎಷ್ಟು, ಎಂಬ ಬಗೆಗೆ ಸಾಕಷ್ಟು ವಾದವಿವಾದಗಳು ನಡೆದಿವೆ. 'ಭರತೇಶ ವೈಭವ, ಅಪರಾಜಿತೇಶ್ವರ ಶತಕ, ತ್ರಿಲೋಕಶತಕ, ಮತ್ತು ಅಧ್ಯಾತ್ಮಗೀತೆಗಳು'

ಇವು ನಿಶ್ಚಿತವಾಗಿ ರತ್ನಾಕರವರ್ಣಿ ಕೃತವೆಂಬುದನ್ನು ನಿರ್ಣಯಿಸಿ ಆಗಿದೆ. 'ರತ್ನಾಕರಶತಕ' ವನ್ನು 'ರತ್ನಾಕರಧೀಶ್ವರಶತಕ' ಎಂತಲೂ ಹೆಸರಿಸಲಾಗಿದೆ. ಇದರ ಕರ್ತೃತ್ವದಲ್ಲಿ ಭಿನ್ನಾಭಿಪ್ರಾಯವಿದೆ. ಆರ್.ನರಸಿಂಹಾಚಾರ್ಯರು ಇದನ್ನು ರತ್ನಾಕರವರ್ಣಿಯು ರಚಿಸಿದನೆಂಬುದನ್ನು ನಿರಾಕರಿಸಿದ್ದಾರೆ. ಜಿ. ಬ್ರಹ್ಮಪ್ಪ, ಉಗ್ರಾಣ ಮಂಗೇಶರಾಯ, ಶಾಂತಿರಾಜಶಾಸ್ತ್ರಿ, ತ.ಸು.ಶಾಮರಾವ್ ಮುಂತಾದವರು ಆರ್.ನರಸಿಂಹಾಚಾರ್ಯರ ಆಕ್ಷೇಪಗಳಿಗೆ ಉತ್ತರನೀಡಿ 'ರತ್ನಾಕರಶತಕ'ವು ರತ್ನಾಕರರ್ಣಿಯಿಂದಲೇ ರಚಿತವಾಯಿತೆಂದು ವಾದಿಸಿದ್ದಾರೆ. 'ಸೋಮೇಶ್ವರಶತಕ' ವೆಂಬ ಇನ್ನೊಂದು ಶತಕಗ್ರಂಥವನ್ನು ರತ್ನಾಕರವರ್ಣಿ ರಚಿಸಿದನೆಂದು ಹೇಳಲಾಗಿದೆ. ಆದರೆ ಇದರ ಕರ್ತೃತ್ವದ ಈ ವಾದವನ್ನು ಬಹುಮಂದಿ ನಿರಾಕರಿಸಿ ಪಾಲ್ಕುರಿಕೆ ಸೋಮನಾಥನೋ ಅಥವಾ ಬೇರೊಬ್ಬ ಸೋಮನಾಥನೋ ಇದರ ಕರ್ತೃವಾಗಿರಬಹುದೆಂದು ನಿರ್ಣಯಿಸಿದ್ದಾರೆ. 'ಭರತೇಶವೈಭವ' ವೆಂಬ ಕಾವ್ಯವೂ, ಅಪರಾಜಿತೇಶ್ವರಶತಕ, ತ್ರಿಲೋಕಶತಕ ಹಾಗೂ ರತ್ನಾಕರಶತಕ ಎಂಬ ಮೂರು ಶತಕಗಳೂ 'ಅಧ್ಯಾತ್ಮ ಗೀತೆಗಳು' ಎಂಬ ಹಾಡುಗಳ ಗ್ರಂಥವೂ ರತ್ನಾಕರವರ್ಣಿಯಿಂದ ರಚಿತವಾದುವೆಂದು ಹೇಳಬಹುದು.

4.3.3 ಭರತೇಶ ವೈಭವ

'ಭರತೇಶವೈಭವ'ಕ್ಕೆ 'ಭರತೇಶ ಚರಿತೆ', 'ಭರತೇಶ ಸಂಗತಿ' ಎಂಬ ಹೆಸರುಗಳೂ ಇವೆ. ಸಾಂಗತ್ಯ ಛಂದಸ್ಸಿನ ಬಹುದೊಡ್ಡ ಕಾವ್ಯ ಇದು. ಇದರಲ್ಲಿ ಭೋಗವಿಜಯ, ದಿಗ್ವಿಜಯ, ಯೋಗವಿಜಯ, ಮೋಕ್ಷವಿಜಯ ಮತ್ತು ಅರ್ಕಕೀರ್ತಿ ವಿಜಯ ಎಂಬ ಐದು ಕಲ್ಯಾಣಗಳಿವೆ. ಇವುಗಳಲ್ಲಿ ಒಟ್ಟು ೮೦ ಸಂಧಿಗಳೂ ೯೯೦೭ ಪದ್ಯಗಳೂ ಇವೆ ಎಂಬುದು ಒಂದು ಲೆಕ್ಕಾಚಾರ. ರಾಜ ಒಡೆಯರ ನಂತರ ಅಧಿಕಾರಕ್ಕೆ ಬಂದ ಚಾಮರಾಜನ ಸಭೆಯಲ್ಲಿ 'ರತ್ನಾಕರಾರ್ಯ ವಿರಚಿತ ಭರತೇಶ್ವರ ಚರಿತೆ ಎಂಭತ್ತುನಾಲ್ಕು ಸಂಧಿಯನೋದಿದರು' ಎಂದು ದೇವಚಂದ್ರ ತನ್ನ 'ರಾಜಾವಳೀಕಥೆ' ಯಲ್ಲಿ ಹೇಳಿದ್ದಾನೆ. 'ವೃಷಭಮಾಸದಿ ತೊಡಗಿತು ಕುಂಭಮಾಸ ಸದ್ವಿಷಯದಿ ಕೃತಿ ಪೂರ್ಣವಾಯ್ತು' ಎಂದು ಕವಿ ಭರತೇಶ ವೈಭವದ ಕೊನೆಯಲ್ಲಿ ಹೇಳಿದ್ದಾನೆ. ಕೇವಲ ಒಂಭತ್ತು ತಿಂಗಳ ಅವಧಿಯಲ್ಲಿ ಸುಮಾರು ಹತ್ತು ಸಾವಿರ ಪದ್ಯಗಳಿರುವ ಈ ಕೃತಿ ರಚಿತವಾಗಿರುವುದು ಕವಿಗಿದ್ದ ಅಸಾಧಾರಣ ರಚನಾಶಕ್ತಿಯ ಕುರುಹಾಗಿದೆ.

4.3.3.0 ಆಕರ

ಭರತೇಶವೈಭವದ ರಚನೆಯ ಕಾಲಕ್ಕೆ ರತ್ನಾಕರವರ್ಣಿ ಯಾವೊಂದು ನಿರ್ದಿಷ್ಟ ಕೃತಿಯನ್ನೂ ಆಕರವಾಗಿ ಇಟ್ಟುಕೊಂಡಂತೆ ಕಾಣುವುದಿಲ್ಲ. ಏಕೆಂದರೆ ಯಾವೊಬ್ಬ ಪೂರ್ವಕವಿಯೂ ಭರತನೊಬ್ಬನ ಕಥೆಯನ್ನೇ ಪ್ರತ್ಯೇಕವಾಗಿ ತೆಗೆದುಕೊಂಡು ವಿಸ್ತಾರವಾದ ಕಾವ್ಯವೊಂದನ್ನು ರಚಿಸುವ ಕಾರ್ಯವನ್ನು ಎಸಗಿಲ್ಲ. ಈ ಕಾರ್ಯದಲ್ಲಿ ತೊಡಗಿದವರಲ್ಲಿ ರತ್ನಾಕರವರ್ಣಿಯೇ ಮೊದಲಿಗ. ಜಿನಸೇನಾಚಾರ್ಯರ 'ಪೂರ್ವಪುರಾಣ' ವೆಂಬ ಸಂಸ್ಕೃತ ಗ್ರಂಥದಲ್ಲಿಯೂ, ಆಮೇಲಿನ ಪಂಪನ 'ಆದಿಪುರಾಣ', ಚಾವುಂಡರಾಯನ 'ಚಾಮುಂಡರಾಯಪುರಾಣ' ಮೊದಲಾದ ಕನ್ನಡ ಗ್ರಂಥಗಳಲ್ಲಿಯೂ ಮೊದಲನೆಯ ತೀರ್ಥಂಕರನಾದ ಪುರುದೇವನ ಚರಿತ್ರೆಯಲ್ಲಿ ಅವನ ಮಕ್ಕಳಾದ ಭರತಚಕ್ರವರ್ತಿ ಮತ್ತು ಬಾಹುಬಲಿಯರ ಚರಿತೆ ಬಂದಿದೆ. ರತ್ನಾಕರವರ್ಣಿ ಇವುಗಳನ್ನೆಲ್ಲಾ ಅಭ್ಯಾಸ ಮಾಡಿರಬಹುದಾದರೂ ಇವುಗಳನ್ನು ಮೀರಿದ ಅದ್ಭುತದರ್ಶನದಿಂದ, ಚಿತ್ರಸಂಪತ್ತಿಯಿಂದ ಕೂಡಿ 'ಭರತೇಶ ವೈಭವ' ಒಂದು ಅನನ್ಯ ಕೃತಿಯಾಗಿದೆ. ಯಾವ ಮೊದಲಿನ ಗ್ರಂಥಗಳಲ್ಲಿಯೂ ಕಾಣದೊರೆಯದ ರೀತಿಯಲ್ಲಿ ಜೈನಧರ್ಮಕ್ಕೆ ಬಹುಶಃ ಬಾಧೆತರದಂತೆ ಭರತೇಶನ ಭವ್ಯಮೂರ್ತಿಕಲ್ಪನೆ, ಆದರ್ಶ ಜೀವನದ ಸಂಪೂರ್ಣಸಮನ್ವಯ ಸಾಧನೆ ಇವು ಒಂದು ಸಾಕಾರಸ್ಪಷ್ಟದಂತೆ ಈ ಕಾವ್ಯದಲ್ಲಿ ಕಂಡುಬರುತ್ತದೆ.

4.3.3.1 ಕಥಾವಸ್ತು

ಜೈನ ಪರಂಪರೆಗೆ ಸೇರಿದ ಅರವತ್ತಮೂರುಜನ ಶಲಾಕಾಪುರುಷರಲ್ಲಿ ಒಬ್ಬನೂ, ಆದಿತೀರ್ಥಂಕರನಾದ ವೃಷಭನಾಥನ ಮಗನೂ, ಪ್ರಥಮ ಚಕ್ರಿಯೂ ಆದ ಭರತನ ಕಥೆ 'ಭರತೇಶ ವೈಭವ'ದಲ್ಲಿ ನಿರೂಪಿತವಾಗಿದೆ. ಜೈನಧರ್ಮವು ಮಹಾಪುರುಷರೆಂದು ನಂಬುವ ಅರವತ್ತುಮೂವರನ್ನು ಅಲ್ಲಿ 'ತ್ರಿಷಷ್ಟಿಶಲಾಕಾಪುರುಷರು' ಎಂದು ಕರೆಯಲಾಗಿದೆ. ತ್ರಿಷಷ್ಟಿಶಲಾಕಾಪುರುಷರ ಕಥೆಗೆ ' ಮಹಾಪುರಾಣ' ಎಂದು ಹೆಸರು. ಜಿನಸೇನಾಚಾರ್ಯರು ಮೊತ್ತ ಮೊದಲಿಗೆ ಸಂಸ್ಕೃತದಲ್ಲಿ ಮಹಾಪುರಾಣದ ಪೂರ್ವಭಾಗವನ್ನು ರಚಿಸಿದರು ಅಲ್ಲಿ ಆದಿತೀರ್ಥಂಕರನ ಕಥೆಯೂ ಅವನ ಮಕ್ಕಳಾದ ಭರತ, ಬಾಹುಬಲಿಯರ ಕಥೆಯೂ ನಿರೂಪಿತವಾಗಿದೆ. ಅದನ್ನು ಆಧಾರವಾಗಿಟ್ಟು ಕೊಂಡು ಪಂಪ ಕನ್ನಡದಲ್ಲಿ ಆದಿಪುರಾಣವನ್ನು ರಚಿಸಿದ. ಆ ಬಳಿಕ ಚಾಮುಂಡರಾಯ 'ತ್ರಿಷಷ್ಟಿಶಲಾಕಾಪುರುಷರ ಪುರಾಣ' ವನ್ನು ಕನ್ನಡದಲ್ಲಿ ರಚಿಸಿದ. ಇದನ್ನು 'ಚಾವುಂಡರಾಯಪುರಾಣ' ಎಂದೂ ಕರೆಯಲಾಗಿದೆ. ಜಿನಸೇನಾಚಾರ್ಯರು ವಿಸ್ತಾರವಾಗಿಯೇ ನಿರೂಪಿಸಿದ ಭರತನ ಕಥೆಯನ್ನು ಈ ಇಬ್ಬರೂ ಕವಿಗಳು ಕನ್ನಡದಲ್ಲಿ ಪ್ರಥಮತೀರ್ಥಂಕರನ ಕಥೆಯೊಡನೆ ಪ್ರಥಮಚಕ್ರಿಯ ಕಥೆಯನ್ನೂ ತಂದಿದ್ದಾರೆ. ವೈದಿಕ ಸಾಹಿತ್ಯದಲ್ಲೂ ಭರತನ ಕಥೆ ಬರುತ್ತದೆ. ಭಾಗವತದ ಪಂಚಮಸ್ಕಂಧದಲ್ಲಿ ಬರುವ ಋಷಭನ ಮಗ ಭರತ ಚಕ್ರವರ್ತಿ ಕೊನೆಗೆ ತಪಸ್ವಿಯಾಗಿ, ಮುಂದೆ ಎರಡನೆಯ ಜನ್ಮದಲ್ಲಿ ಮಹಾಬ್ರಹ್ಮಜ್ಞಾನಿಯಾದ ಜಡಭರತನಾಗಿ ಹುಟ್ಟುವ ಕಥೆಯಿದೆ. ಭರತನ ಭೋಗಯೋಗಗಳು ಇಲ್ಲಿ ಎರಡು ಜನ್ಮಗಳಲ್ಲಿ ವರ್ಣಿತವಾಗಿದೆ. ಜೈನ ಮತ್ತು ವೈದಿಕ ಪರಂಪರೆಗಳು ತಮ್ಮ ತಮ್ಮ ದೃಷ್ಟಿಗನುಗುಣವಾಗಿ ಭರತನ ಪಾತ್ರವನ್ನು ನಿರೂಪಿಸಿದರೂ ಅವನ ಆಧ್ಯಾತ್ಮಿಕ ವ್ಯಕ್ತಿತ್ವದಲ್ಲಿ ಮಾತ್ರ ಭಾರತೀಯ ಆಧ್ಯಾತ್ಮಿಕ ಸತ್ವವನ್ನು ಸಮಾನರೂಪದಲ್ಲಿ ಎರಡೂ ಪರಂಪರೆಗಳು ವ್ಯಕ್ತಗೊಳಿಸಿವೆ.

ಜಿನಚರಿತ್ರೆಯಿಂದ ಚಕ್ರವರ್ತಿಚರಿತೆಯನ್ನು ಪ್ರತ್ಯೇಕಿಸಿ, ಅದೊಂದನ್ನೇ ಕಾವ್ಯಕ್ಕೆ ವಸ್ತುವಾಗಿ ಮಾಡಿಕೊಂಡು ವಿಸ್ತಾರವಾಗಿ ವರ್ಣಿಸಿರುವ ಕೃತಿಗಳಲ್ಲಿ ರತ್ನಾಕರವರ್ಣಿಯ 'ಭರತೇಶವೈಭವ'ವೇ ಮೊದಲನೆಯದೆಂದು ತೋರುತ್ತದೆ. 'ಪೇಳುವೆ ಭರತೇಶಚಕ್ರಿಯ ಕಾವ್ಯವ' ಎಂದೇ ಕಾವ್ಯವನ್ನು ಮೊದಲು ಮಾಡುತ್ತಾನೆ. "ಗಣನೆಯಿಲ್ಲದ ರಾಜ್ಯಸುಖದೊಳೋಲಾಡಿ ಧಾರುಣಿ ಮೆಚ್ಚಿ ಜಿನಯೋಗಿಯಾಗಿ ಕ್ಷಣಕೆ ಕರ್ಮವ ಸುಟ್ಟು ಜಿನನಾದ ಕಥೆ" ಭರತೇಶನ ವೈಭವ ಈ ಕಾವ್ಯದ ವಸ್ತು. ಈ ವೈಭವಕ್ಕೆ ಎರಡು ಮುಖಗಳು. ಒಂದು ಭೋಗವೈಭವ, ಇನ್ನೊಂದು ಯೋಗವೈಭವ. ಆಧ್ಯಾತ್ಮ ಶೃಂಗಾರಗಳು ಅಳವಡುವಂತೆ, ತ್ಯಾಗಭೋಗದ ಮೋಡಿ ಮೆರೆಯುವಂತೆ ಹತ್ತಾರು ಸನ್ನಿವೇಶಗಳ ಕಲ್ಪನೆಯಿಂದ ಭರತನ ಚರಿತೆ ವರ್ಣಿತವಾಗಿದೆ. ಭೋಗಯೋಗಗಳೆರಡರ ಪರಾಕಾಷ್ಠೆಯನ್ನು ಇಲ್ಲಿ ಕಾಣಬಹುದು. ದಶವಿಧಭೋಗಕಂಗನೆ ಅಡ್ಡಿ ಆದ್ದರಿಂದ ಅಂಗನಭೋಗ ವೈಭವವೂ, ಯೋಗದಲ್ಲಿ ಆತ್ಮತತ್ವವೇ ಕಡೆ ಆದ್ದರಿಂದ ಹಂಸಕಲಾವೈಭವವೂ ಭರತನ ಭೋಗಯೋಗ ವೈಭವಗಳಾಗಿ ನಿರೂಪಿತವಾಗಿವೆ. ಚಕ್ರವರ್ತಿಯ ಭೋಗವನ್ನೇ ಅಲ್ಲದೆ ಯೋಗವನ್ನೂ ವರ್ಣಿಸಿರುವುದು ರತ್ನಾಕರನ ಕಾವ್ಯದ ವೈಶಿಷ್ಟ್ಯ. ಮೊದಲು ಭೋಗಿಯಾಗಿ ಬಾಳಿದ ರತ್ನಾಕರ ಬಳಿಕ ಯೋಗಿಯೂ ಆದುದರಿಂದ ಭೋಗಯೋಗಗಳೆರಡರಿಂದಲೂ ಎರಕಗೊಂಡ ಅಪೂರ್ವ ಕಾವ್ಯವಸ್ತು ತಕ್ಕ ಅಧಿಕಾರಿಯಿಂದ ಕನ್ನಡ ಸಾಹಿತ್ಯಕ್ಕೆ ದೊರೆಯಿತು. ಕವಿಯ ವ್ಯಕ್ತಿತ್ವವೇ ಇಲ್ಲಿ ಕಾವ್ಯವಸ್ತುವಿನ ಸ್ವರೂಪವನ್ನು ನಿರ್ಧರಿಸಿದೆ.

4.3.3.2 ಪಾತ್ರಪರಿಚಯ

ರತ್ನಾಕರವರ್ಣಿ 'ಭರತೇಶವೈಭವ'ದಲ್ಲಿ ಪಾತ್ರಗಳನ್ನು ಸೃಷ್ಟಿಸಲು ಉಪಯೋಗಿಸಿದ ಹಿನ್ನೆಲೆ ಬಹುದೊಡ್ಡದು. ಈ ಹಿನ್ನೆಲೆಯ ಮೇಲೆ ಚಿತ್ರಿತವಾಗಿರುವ ಪಾತ್ರಗಳೂ ಅಸಂಖ್ಯಾತವಾದುವು. ಅವು ಬರೀ ಚಿತ್ರಣ ಮಾತ್ರವಲ್ಲ ಸ್ವಭಾವದ ಏರಿಳಿತಗಳನ್ನು ಅವನಷ್ಟು ಯಶಸ್ವಿಯಾಗಿ ಚಿತ್ರಿಸಿದವರು

ಅಪರೂಪವೆಂದೇ ಹೇಳಬಹುದು. ಕಾವ್ಯದಲ್ಲಿ ಬರುವ ಯಾವ ಪಾತ್ರದ ಬಗ್ಗೆಯೂ ಅವನು ಅನಾಸಕ್ತನಾಗಿಲ್ಲ. ಎಲ್ಲ ಸಣ್ಣ ದೊಡ್ಡ ಪಾತ್ರಗಳ ಮೈಮನಗಳನ್ನು ಹೊಕ್ಕು ಸಹೃದಯರನ್ನು ರಸದಲ್ಲಿ ತಣಿಸಬಲ್ಲ ರಚನಾ ಕೌಶಲ ಅವನಿಗೆ ಸಿದ್ಧಿಸಿದೆ. ಅವನ ಪಾತ್ರಗಳ ಪರಿಚಯದ ಈ ಸಂದರ್ಭದಲ್ಲಿ ಕೇವಲ ದಿಗ್ದರ್ಶನ ಮಾತ್ರ ಸಾಧ್ಯ.

4.3.3.3 ಭರತ

'ಭರತೇಶ ವೈಭವ' ಕಾವ್ಯದ ನಾಯಕ ಪಾತ್ರ ಭರತನದು. 'ಶ್ರೀ ಭರತೇಶ ವೈಭವವಿದು ಕೇಳಿರೂ' ಎಂದು ಕಾವ್ಯದ ಆದಿಯಲ್ಲೇ ಸಾರಿ ಹೇಳುತ್ತಾನೆ ಕವಿ. ಕವಿಯ ಮನದ ತುಂಬ, ಕಾವ್ಯದ ತುಂಬ ಭರತೇಶನಲ್ಲದೆ ಬೇರಿಲ್ಲ. ಕವಿಯಾದ ತಾನು ಸಾಮಾನ್ಯವಾದರೂ ಕಾವ್ಯಚಕ್ರಿ ಸಾಮಾನ್ಯನಲ್ಲ ಎಂಬ ಮಾತು ಕೂಡ ಬಂದಿದೆ. ಕಾವ್ಯವನ್ನು ಪ್ರಾರಂಭಿಸುವ ಮೊದಲೆ ತನ್ನ ಕಾವ್ಯನಾಯಕ ಭರತೇಶನ ವ್ಯಕ್ತಿತ್ವದ ಘನತೆ, ಪಾವಿತ್ರ್ಯತೆಯನ್ನು ರಸಿಕರ ಮನಕ್ಕೆ ಬಿಂಬಿಸುತ್ತಾನೆ ಕವಿ. ಚಕ್ರವರ್ತಿಯಾಗಿ ಅಗಣಿತ ರಾಜ್ಯಸುಖದೊಳಿದ್ದು ಜಗಮೆಚ್ಚಿಸಿ, ಜಿನಯೋಗಿಯಾಗಿ ಕ್ಷಣದಲ್ಲೇ ಕರ್ಮವ ಸುಟ್ಟು ನಿರಂಜನಾದವ ಭರತ. ಚಕ್ರವರ್ತಿಯ ಭೋಗ, ಕ್ಷಣದಲ್ಲೇ ಕರ್ಮನಾಶ ಮಾಡುವ ಜಿನಯೋಗ ಎರಡನ್ನೂ ಮೈಗೂಡಿಸಿಕೊಂಡ ಮಾಂತ್ರಿಕತೆ ರತ್ನಾಕರನ ಭರತನ ವೈಶಿಷ್ಟ್ಯ. ಈ ಕುಲರತ್ನನಿಗೆ ಆಹಾರವುಂಟು, ಆದರೆ ಮಲವಿಲ್ಲ, ಮೂತ್ರವಿಲ್ಲ. ಕರ್ಪೂರದ ಗಿರಿ ಈತ. ಕೋಮಲಾಂಗ, ಹೇಮವರ್ಣ, ಜಗವೆಲ್ಲ ಕಾಮಿಸತಕ್ಕ ಚೆನ್ನಿಗ. ಭರತನನ್ನು ನೋಡಿದರೆ ತರುಣಿಯರ ಪಾಡಂತಿರಲಿ, ಹಲ್ಲಿಲ್ಲದ ಕಣ್ಕಾಣದ ಹಣ್ಣಾದ ಮುತ್ತಮುದುಕಿಗೂ ಮೈ ಜುಮ್ಮದಟ್ಟಿಸುತ್ತಿತಂತೆ. ಯೌವ್ವನ, ಧನ, ಅಧಿಕಾರ, ಅವಿವೇಕ ಇವುಗಳಲ್ಲಿ ಒಂದಾದರೂ ಸಾಕು ವ್ಯಕ್ತಿತ್ವ ಹಾಳು ಮಾಡಲು. ಈ ನಾಲ್ಕೆಸೆಯ ವಿಷಬಂಧನದಲ್ಲಿದ್ದೂ ಮೋಕ್ಷಗಾಮಿಯಾದ ಕನ್ನಡ ರತ್ನಾಕರನ ಭರತ. ತೊಂಭತ್ತಾರು ಸಹಸ್ರ ರಾಣಿಯರಿಂದ ಸಂಸೇವ್ಯನಾಗಿ ಕೇವಲ ರಾಗರಸದಲ್ಲಿ ಮುಳುಗಿದಂತೆ ತೋರುತ್ತಿದರೂ ಭರತನು ಮಹಾಯೋಗಿ. ತೊಂಬತ್ತಾರು ಸಾವಿರ ಭರತರ ರೂಪಿಂದ ತನ್ನ ಸತಿಯರನ್ನು ತಣಿಸಿ ಕುಣಿಸಬಲ್ಲ. ಆದರೂ ಆಧ್ಯಾತ್ಮಯೋಗಿ, ಅಂತರ್ಮುಖಿ, ಮುಮುಕ್ಷು.

4.3.3.4 ಬಾಹುಬಲಿ

ಭರತನ ತಮ್ಮ ಬಾಹುಬಲಿ, ಕಲಿಯುಗದ ಮದನ. ಮದನನಿಗಿರುವ ಶೃಂಗಾರ ಸಾಧನಗಳೂ ಭೋಗಪರಿಕರಗಳೂ ಚಾಚೂ ತಪ್ಪದೆ ಭುಜಬಲಿಗೆ ಕರಗತವಾಗಿವೆ. ಮನ್ಮಥನ ಪರ್ಯಾಯ ನಾಮಗಳೂ ಅರ್ಪಿತವಾಗಿವೆ. ಜೊತೆಗೆ ಅಭಿನವ ಮದನನೆನಿಸಿದ ಬಾಹುಬಲಿ ಹೆಸರಿಗೆ ತಕ್ಕಂತೆ ಅದ್ವಿತೀಯ ಬಾಹುಬಲಿ ಸಮನ್ವಿತನಾಗಿದ್ದಾನೆ. ಈತನು ಸೋಲದ ಹೊರತು ಭರತನಿಗೆ ಚಕ್ರವರ್ತಿಯೆಂಬ ಬಿರುದು ಸಲ್ಲದು. ಇತರ ಜೈನ ಕವಿಗಳ ದೃಷ್ಟಿಯಲ್ಲಿ ಬಾಹುಬಲಿಯೇ ಭರತನಿಗಿಂತಲೂ ಹೆಚ್ಚು ಸತ್ವಶಾಲಿ, ಭರತನೊಡನೆ ಮಲ್ಲಯುದ್ಧ, ಜಲಯುದ್ಧ, ದೃಷ್ಟಿಯುದ್ಧಗಳನ್ನು ನಡೆಸಿ ಜಯಶೀಲನಾಗುತ್ತಾನೆ. ಆದರೆ ರತ್ನಾಕರನು ಧೀರೋದಾತ್ತನಾದ ತನ್ನ ಕಥಾ ನಾಯಕನಿಗೆ ಹೆಚ್ಚು ಮಹತ್ತನ್ನು ಕಲ್ಪಿಸುವುದಕ್ಕಾಗಿ ಬಾಹುಬಲಿಯ ಪ್ರಭೆಯನ್ನು ತಗ್ಗಿಸಿದ್ದಾನೆ. ರಾಜಧರ್ಮವನ್ನು ಪಾಲಿಸಹೊರಟಿರುವ ಬಾಹುಬಲಿ ಯುದ್ಧಕ್ಕೆ ಸಿದ್ಧರಾಗಿ ಹೊರಟುದು ನಿಜ. ಆದರೆ ಅಣ್ಣನ ಇದಿರಿನಲ್ಲಿ ಬಹಳ ವಿನಯದಿಂದ ನಡೆದುಕೊಳ್ಳುತ್ತಾನೆ. ಅಣ್ಣನ ಮೃದು ನುಡಿಗಳ ಕಾವಿನಲ್ಲಿ ಬೆಣ್ಣೆಯಂತೆ ಕರಗಿಹೋಗುತ್ತಾನೆ. ತಾನು ಮಾಡಿದುದು ನ್ಯಾಯವೆಂದು ಸಾಧಿಸುವ ಸಾಹಸಕ್ಕೆ ಸಹ ಕೈಯಿಕ್ಕುವುದಿಲ್ಲ. ಮೌನದಿಂದ ಸಹನೆಯಿಂದ ಅಣ್ಣನಾಡುವ ನುಡಿಗಳನ್ನೆಲ್ಲಾ ತಲೆತಗ್ಗಿಸಿಕೊಂಡು ಕೇಳಿ ಪಶ್ಚಾತ್ತಾಪದಿಂದ ದಗ್ಧನಾಗಿ ಅನುತಾಪದ, ಸಿಗ್ಗಿನ ದಾವಾನಲದಲ್ಲಿ ತನ್ನ ಮೋಹಜಾಲವನ್ನೆಲ್ಲಾ ಸುಟ್ಟು ಯೋಗಿಯಾಗುತ್ತಾನೆ.

4.3.3.5 ಪಂಡಿತೆ

ಭರತನ ಪಟ್ಟದ ರಾಣಿಯರಿಗೆ ಪಾಠ ಹೇಳಿಕೊಟ್ಟು ಅವರನ್ನು ಕಾವ್ಯಲಂಕಾರ ಶಾಸ್ತ್ರಗಳಲ್ಲಿ ಪಾರಂಗತರನ್ನಾಗಿ ಮಾಡಿದ ದಾದಿ ಈ ಪಂಡಿತೆ. ದಾದಿಯಾದರೂ ತನ್ನ ಜಾಣ್ಮೆಯಿಂದ, ವಿದ್ವತ್ತಿನಿಂದ ರಾಜನ ಮತ್ತು ಆತನ ಪರಿವಾರದವರ ಆಸರೆ ಗೌರವಗಳಿಗೆ ಪಾತ್ರಳಾದವಳು. ಸಮಯ ಬಂದಾಗ ರಾಜನನ್ನಾಗಲಿ, ರಾಣಿಯರನ್ನಾಗಲಿ ಝುಂಕಿಸಿ ನುಡಿದು ಬುದ್ಧಿಗಳಿಸುವ ಸ್ವಾತಂತ್ರ್ಯವಿದೆ ಆಕೆಗೆ. ರಾಜನ ಚಿತ್ತವೃತ್ತಿಯನ್ನನುಸರಿಸಿ ತನ್ನ ಚಾಣ್ನುಡಿಗಳಿಂದ ಆತನ ಶೃಂಗಾರ ಜೀವನವನ್ನು ಮುಂದುವರಿಸುತ್ತಾಳೆ. ಕಾವ್ಯದಲ್ಲಿ ಬರುವ ಸ್ತ್ರೀ ಸಮೂಹದ ದಿಗ್ದರ್ಶಿಕೆಯಂತೆ ತೋರುವ ಪಂಡಿತೆ ಚಿಕ್ಕ ಚಿಕ್ಕ ಪಾತ್ರಗಳನ್ನು ಕೂಡ ರತ್ನಾಕರವರ್ಣಿ ಎಷ್ಟು ರಸವತ್ತಾಗಿ ವರ್ಣಿಸುವನೆಂಬುದಕ್ಕೆ ಸಾಕ್ಷಿಯಾಗಿದ್ದಾಳೆ. ಚಿಕ್ಕದು ದೊಡ್ಡದು ಎಂಬ ತಾರತಮ್ಯವಿಲ್ಲದೆ ಕುಸುರಿಗೆಲಸವನ್ನು ಮಾಡಿರುವ ಜಾಣ್ಮೆ ರತ್ನಾಕರವರ್ಣಿಯದು.

4.3.3.6 ಸನ್ನಿವೇಶ ನಿರ್ಮಾಣ

'ಭರತೇಶ ವೈಭವ' ದಲ್ಲಿ ರತ್ನಾಕರವರ್ಣಿ ಕೊಡುವ ಚಿತ್ರಗಳನ್ನು ಶೃಂಗಾರ ಚಿತ್ರಗಳು, ಸಂಸಾರ ಚಿತ್ರಗಳು, ಯೋಗಭೋಗ ಸಮನ್ವಯಾಚಾರದ ಚಿತ್ರಗಳು ಎಂದು ವಿಂಗಡಿಸಬಹುದು. ಕಥೆಯಲ್ಲಿ ಭರತ ವೈರಾಗ್ಯಪರನಾಗಿ ಸನ್ಯಾಸದೀಕ್ಷೆ ಪಡೆದು ಮುಕ್ತಿ ಸಾಧಿಸಿದ ಚಿತ್ರವೂ ಬರುತ್ತದೆ. 'ಭರತೇಶವೈಭವ' ಮಹಾಸರೋವರದಂತೆ ಒಂದು ತುಂಬಿನಿಂತ ಸೃಷ್ಟಿ. ಅದರ ಸುದೀರ್ಘ ಸವಿಲಂಬ ತುಯ್ತದಲ್ಲಿ ಮನಸ್ಸನ್ನು ಸೆರೆಹಿಡಿಯುವ ಹತ್ತಾರು ಸಂದರ್ಭಗಳುಂಟು. ಆದರೆ ತನ್ನ ಭೂಮಾಘಾತದಿಂದ ಓದುಗನನ್ನು ಸ್ತಬ್ಧಗೊಳಿಸಬಹುದಾದ ಸಂದರ್ಭಗಳಿಲ್ಲ. ಏಕೆಂದರೆ ಕಾವ್ಯದಲ್ಲಿ ವ್ಯಕ್ತಿತ್ವದ ಮೇಲ್ಮೆಯಲ್ಲಾಗಲಿ, ಇನ್ನಾವುದೇ ನೆಲೆಯಲ್ಲಾಗಲಿ ಭರತನಿಗೆ ಒಡ್ಡಿನಿಲ್ಲುವ ಸಮರ್ಥರೇ ಇಲ್ಲ. ಭರತ ಬಾಹುಬಲಿಯನ್ನು ಎದುರುಗೊಳ್ಳುವ ಸಂದರ್ಭ ಮತ್ತು ಭರತ ವೈರಾಗ್ಯ ಹೊಂದಿ ತನ್ನ ಪೂರ್ವದ ಬದುಕಿಗೆ ಜುಗುಪ್ಸೆಪಟ್ಟು ಸನ್ಯಾಸದೀಕ್ಷೆ ಪಡೆದು ಮುಕ್ತನಾಗುವ ಸಂದರ್ಭಗಳನ್ನು ಇಲ್ಲಿ ನೋಡಬಹುದು.

4.3.3.6.0 ಭರತ ಬಾಹುಬಲಿಯನ್ನು ಎದುರ್ಗೊಂಡುದು

ಬಾಹುಬಲಿಯೊಡನೆ ಕಾಳಗ ಹೂಡಬೇಕಾಗಿ ಒದಗಿ ಬಂದ ಸಂದರ್ಭ ಭರತನ ಸತ್ವಪರೀಕ್ಷೆಯ ಸಂದರ್ಭ. ಅದು ರತ್ನಾಕರನ ಸತ್ವ ಪರೀಕ್ಷೆಯ ಸಂದರ್ಭವೂ ಹೌದು. ಏಕೆಂದರೆ ಎಲ್ಲ ಕಡೆಗೆ ದಿಗ್ವಿಜಯ ಪಡೆದು ತಾನು ಅಜೇಯನೆಂಬ ಅಹಂಕಾರದಿಂದ ಮುನ್ನಡೆದ ಚಕ್ರವರ್ತಿಯೆಂಬುದಾಗಿ ಭರತೇಶನನ್ನು ಎಲ್ಲ ಮೂಲಗಳು ನಿರೂಪಿಸುತ್ತವೆ. ಅದಕ್ಕನುಗುಣವಾಗಿ ಭರತನು ಬಾಹುಬಲಿಯ ಜೊತೆ ಹೋರಾಡಬೇಕು. ಆದರೆ ರತ್ನಾಕರನ ಭರತನು ಅಹಂಕಾರಿಯಲ್ಲ; ರಾಜಯೋಗಿ. ತಮ್ಮನೊಡನೆ ಹೋರಾಟಕ್ಕೆ ನಿಲ್ಲುವುದೆಂದರೆ ಅವನ ವ್ಯಕ್ತಿ ಮಹತ್ವಕ್ಕೆ ಕುಂದು. ಅಂತೇ ಈ ಪ್ರಸಂಗದಲ್ಲಿ ಭರತೇಶ 'ಸಾಹಸಪರರ ನೋಯಿಸಬೇಕು ಸ್ವಕುಟುಂಬದ್ರೋಹವ ಮಾಳ್ಪುದು ಗುಣವೆ' ಎಂದು ತನ್ನಷ್ಟಕ್ಕೆ ಯೋಚಿಸುತ್ತಾನೆ ಭರತ. ಕೊನಗೆ ಮನಮೊಲಿಕೆಯ ಮಾತಿನಿಂದ ಬಾಹುಬಲಿಯಲ್ಲಿ ಪರಿವರ್ತನವುಂಟುಮಾಡುತ್ತಾನೆ. ಭರತ ಬಾಹುಬಲಿಯರು ಎದುರಾಗುವ ಈ ಸಂದರ್ಭ ಎರಡು ಸಮರ್ಥ ವ್ಯಕ್ತಿತ್ವಗಳ ತಾಕಲಾಟದಲ್ಲಿ ಅದ್ಭುತ ದೃಶ್ಯವೊಂದು ಮೈದಾಳಿ ನಿಲ್ಲುವ ಸಾಧ್ಯತೆಯಿತ್ತು. ಆದರೆ ಭರತನ ಮಂದ್ರಸ್ಥಾಯಿಯ ಸಾವಧಾನದ ಸ್ನೇಹಮಯ ಮಾತುಗಳಿಂದ ಪ್ರತ್ಯಕ್ಷ ತಾಗುವಿಕೆ ತಪ್ಪಿಹೋಗಿದೆ. ಆಗಿರಬಹುದಾದ ಬಾಹುಬಲಿಯ ಮಾನಸಿಕ ಹೋರಾಟ, ಕವಿಯ ದೃಷ್ಟಿ ಭರತನತ್ತ ಕೇಂದ್ರೀಕೃತವಾಗಿರುವುದರಿಂದ ಕಾವ್ಯದಲ್ಲಿ ಸ್ವರೂಪಸಿದ್ಧಿಯನ್ನು ಪಡೆದಿಲ್ಲ. ಅಹಿಂಸೆಯ ತತ್ವಕ್ಕೆ ಸರಿಯಾಗಿ, ಭರತನ ಉದಾತ್ತ ಭೂಮಿಕೆಗೆ ಸುಸಂಗತವಾಗಿ ಈ ಸಂಗತಿ ನಡೆಯುತ್ತದೆ.

4.3.3.6.1 ಭರತನ ವೈರಾಗ್ಯ ಸಂದರ್ಭ

ಮುಪ್ಪಿನಲ್ಲಿ ತನ್ನ ನರೆಗೂದಲನ್ನು ಕಂಡು ವೈರಾಗ್ಯಪರನಾದ ಭರತ ತಾನು ಅವರೆಗೆ ಬದುಕಿದ ಜೀವನದ ಬಗೆಗೆ ತೀವ್ರವಾದ ಪಶ್ಚಾತ್ತಾಪವನ್ನು ಅನುಭವಿಸುತ್ತಾನೆ. ಭರತೇಶನ ವೈರಾಗ್ಯಪರವಾದ ಈ ಪಶ್ಚಾತ್ತಾಪದ ಉದ್ಗಾರಗಳಿಂದ ರತ್ನಾಕರವರ್ಣಿಯು ಅಲ್ಲಿಯವರೆಗೂ ಹೇಳಿಕೊಂಡು ಬಂದ ಭೋಗಯೋಗ ಸಮನ್ವಯದ ಚಿತ್ರ ಹೋಳಾಗದಂತೆ ಭರತೇಶನ ಬದುಕಿನ ಕೊನೆಯ ಕ್ಷಣಗಳ ಚಿತ್ರ ತಡೆ ಹಿಡಿದಿದೆ. ಏಕೆಂದರೆ ಭರತ ತನ್ನ ಅವರೆಗಿನ ಬದುಕು ವ್ಯರ್ಥವೆಂದು ಅಂದುಕೊಂಡರೂ ಸನ್ಯಾಸ ಪಡೆದ ಕೆಲವೇ ಕ್ಷಣಗಳಲ್ಲಿ ಮುಕ್ತನಾಗಿಬಿಡುತ್ತಾನೆ. ಅಂದುಕೊಂಡುದಕ್ಕಿಂತಲೂ ಅದದ್ದು ವಾಸ್ತವ ಸತ್ಯ. ಭರತೇಶ ಮುಕ್ತನಾಗಲು ಎರಡು ಗಳಿಗೆಯೂ ಹಿಡಿಯಲಿಲ್ಲವಂತೆ. ಬಹು ಹಿಂದೆ ವೈರಾಗ್ಯಪರನಾಗಿ ಸನ್ಯಾಸದೀಕ್ಷೆ ವಹಿಸಿ ತಪಸ್ಸಿನಲ್ಲಿ ತೊಡಗಿದ ಬಾಹುಬಲಿಗೆ ತಾನು ಅಣ್ಣನ ನೆಲದಲ್ಲಿ ನಿಂತಿದ್ದೇನೆಂಬ ಚಿತ್ತಗ್ಲಾನಿ ಇದ್ದುದರಿಂದ ಕೇವಲಜ್ಞಾನ ಪ್ರಾಪ್ತವಾಗುವುದಿಲ್ಲ. ಸಂವತ್ಸರ ಕಳೆದರೂ ಬಾಹುಬಲಿಗೆ ಕೈವಲ್ಯ ಜ್ಞಾನ ಪ್ರಾಪ್ತವಾಗದಿರುವಾಗ ಭರತ ಎರಡು ಗಳಿಗೆಯಲ್ಲಿ ಮುಕ್ತವಾಗುವ ಚಿತ್ರ ಅವರೆಗಿನ ಭರತನ ಬದುಕು ಅವನು ಅಳಿದುಕೊಳ್ಳುವಂತೆ ವ್ಯರ್ಥವಲ್ಲವೆಂಬುದನ್ನು ನಿರೂಪಿಸುತ್ತದೆ. ಈ ದೃಷ್ಟಿಯಿಂದ ನೋಡಿದರೆ ಭರತ ನರೆಗೂದಲನ್ನು ಕಂಡು ವೈರಾಗ್ಯಪರನಾದುದು ಕೇವಲ ಒಂದು ನೆಪ. ಅನಂತರದ ಅವನ ಕಟುವಾದ ಆತ್ಮವ್ಯಂಗ್ಯದ ಮಾತುಗಳು ತೀವ್ರವಾದ ವೈರಾಗ್ಯದ ಉತ್ಕಟತೆಯಲ್ಲಿ ಹೊಮ್ಮಿದವು ಎಂದಷ್ಟೇ ತಿಳಿಯಬೇಕಾಗುತ್ತದೆ.

4.3.4 ಕೃತಿ ಪರಿಚಯ ಶತಕತ್ರಯ

ರತ್ನಾಕರವರ್ಣಿಗೆ ಜೈನಾಗಮಗಳು ಕರತಲಾಮಲಕವಾಗಿದ್ದುವೆನ್ನುವುದಕ್ಕೆ ಆತನ ಮೂರು ಶತಕಗಳೂ ದೊಡ್ಡ ಸಾಕ್ಷಿ. ತ್ರಿಲೋಕಶತಕ, ಅಪರಾಜಿತೇಶ್ವರ ಶತಕ, ರತ್ನಾಕರಶತಕ. ಇವುಗಳಲ್ಲಿ ಒಂದೊಂದರಲ್ಲೂ ೧೨೮ ಪದ್ಯಗಳಿವೆ. ತ್ರಿಲೋಕಶತಕವು ಕಂದಪದ್ಯದಲ್ಲಿದ್ದು ಉಳಿದೆರಡು ವೃತ್ತ ಛಂದಸ್ಸಿನಲ್ಲಿವೆ.

4.3.4.0 ತ್ರಿಲೋಕ ಶತಕ

ತ್ರಿಲೋಕಶತಕವು ಜೈನಮತಾನುಸಾರವಾದ ಲೋಕಸ್ಥಿತಿಯನ್ನು ವರ್ಣಿಸುತ್ತದೆ. ಜೈನಧರ್ಮವು ಹಿಂದೂ ಧರ್ಮಕ್ಕಿಂತ ಭಿನ್ನವಾದ ರೀತಿಯಲ್ಲಿ ಹದಿನಾಲ್ಕು ಲೋಕಗಳ ಕಲ್ಪನೆಯನ್ನೂ, ಅಲ್ಲಿನ ಜೀವಿಗಳ ಆಯಸ್ಸಿನ ಪ್ರಮಾಣದ ವಿಚಾರವನ್ನು ರತ್ನಾಕರವರ್ಣಿ ತನ್ನ ತ್ರಿಲೋಕಶತಕದಲ್ಲಿ ಹೇಳಿದ್ದಾನೆ. ಹೆಸರೇ ಸೂಚಿಸುವಂತೆ ಇದು ಲೋಕಗಳ ವರ್ಣನೆ. ಇದನ್ನು ಜೈನ ಪಾರಿಭಾಷಿಕ ಬಳಕೆಯಲ್ಲಿ ಲೋಕಾಕಾರವರ್ಣನೆ ಎನ್ನುತ್ತಾರೆ. ಜೈನ ಪುರಾಣಕಾರರೆಲ್ಲರೂ ಜಿನಸೇನಾಚಾರ್ಯರ ಮೇಲ್ಪಂಕ್ತಿಯಂತೆ ಈ ಲೋಕಾಕಾರವರ್ಣನೆಯನ್ನು ತಮ್ಮ ಪುರಾಣದ ಅವಿಭಾಜ್ಯ ಅಂಗವಾಗಿ ಅಂಗೀಕರಿಸಿ ಬಣ್ಣಿಸಿದ್ದಾರೆ. ಆದರೆ ಅವರೆಲ್ಲರೂ ಸಂಕ್ಷಿಪ್ತವಾಗಿ ಸೂಚ್ಯವಾಗಿ ಬಣ್ಣಿಸಿರುವ ವಿಚಾರವನ್ನೇ ರತ್ನಾಕರ ಇಲ್ಲಿ ವಿಸ್ತಾರವಾಗಿ ಬಣ್ಣಿಸಿದ್ದಾನೆ.

4.3.4.1 ಅಪರಾಜೀತೇಶ್ವರ ಶತಕ

ಅಪರಾಜೀತೇಶ್ವರ ಶತಕದ ವಿಷಯ ನಿರೂಪಣೆಯಲ್ಲಿ ಹೆಚ್ಚಿನ ಚಾಣ್ಮೆಯೇನೂ ಇಲ್ಲ. ನವೀನತೆಯೂ ಇಲ್ಲ: ಇಲ್ಲಿರುವುದು ಬರಿಯ ಮಾತುಗಳ ಜೋಡಣೆ: ಕಲಿಕೆಯ ಕೈಯೇ ಹೊರತು. ನುರಿತ ಕೈಯಲ್ಲ. ಹೇಳುವ ನೀತಿ ಅನುಸರಣೆಗೆ ಕಠಿಣವಾಗಿದೆ. ಸ್ವಾನುಭವದ ಕುಲುಮೆಯಲ್ಲಿ ಕಾದು, ಸುಖದುಃಖಗಳ ಸುತ್ತಿಗೆ ಪೆಟ್ಟು ತಿಂದು, ಕಠಿಣತೆಯ ಕಾಳಿಕೆಯನ್ನು ಕಳೆದುಕೊಂಡು, ಸಿದ್ಧಿಯನ್ನು ಕೂಡ

ಸಾಧಕನ ಮಾತುಗಳನ್ನಲ್ಲ, ನಾವಿಲ್ಲಿ ಕಾಣುವುದು; ಉನ್ನತ ಧ್ಯೇಯವನ್ನು ಸಾಧಿಸಹೊರಡುವ ಮುನ್ನ ನಿಶ್ಚಯಿಸಿಕೊಂಡಿರುವ ನಿಯಮ ಕಾಠಿಣ್ಯತೆಯನ್ನು.

4.3.4.2 ರತ್ನಾಕರ ಶತಕ

ರತ್ನಾಕರಶತಕದಲ್ಲಿಯಾದರೋ ಕವಿಯ ಪರಿಪಾಕಗೊಂಡ ಮನಸ್ಸಿನ ಮಾರ್ಪೊಳಪನ್ನು ಕಾಣಬಹುದು. ವೈರಾಗ್ಯ, ನೀತಿ, ಆತ್ಮವಿಚಾರಗಳು ಇಲ್ಲಿ ರಾಜಿಸುತ್ತಿವೆ. ಇಲ್ಲಿಯ ವಸ್ತುವೇನೋ ಅಪರಾಜಿತೇಶ್ವರ ಶತಕದ ವಸ್ತುವೇ. ಅಲ್ಲಿ ವಸ್ತು ನಿರೂಪಣೆಯೇ ಮುಖ್ಯವಾದ ಗುರಿಯಾಗಿದ್ದರೆ, ನೀತಿ ನಿರೂಪಣೆಯೇ ಪ್ರಮುಖವಾಗಿದ್ದರೆ, ಇಲ್ಲಿ ಅದನ್ನೇ ಹೇಳಿರುವ ಬಗೆ ಹೊಸದು. ಇಲ್ಲಿನ ಮಾತುಗಳಲ್ಲಿ ಚಮತ್ಕಾರವಿದೆ, ನಿಶ್ಚಿತತೆಯೂ ಇದೆ. ರತ್ನಾಕರನ ಧರ್ಮಪ್ರತಿಪಾದನೆಯಲ್ಲಿ ಆತನ ತತ್ವಜಿಜ್ಞಾಸೆಯಲ್ಲಿ ಒಂದು ಅಲೌಕಿಕವಾದ ಔದಾರ್ಯವಿದೆ. ಬಹುಶಃ ಮತ್ತಾವ ಜೈನ ಕವಿಯಲ್ಲಿಯೂ ಕಾಣಬರದ ಒಂದು ಸ್ವತಂತ್ರ ಮನೋವೃತ್ತಿಯಿದೆ. ಮನಗಂಡುದನ್ನು ನಿರ್ದಾಕ್ಷಿಣ್ಯವಾಗಿ ನುಡಿಯಬಲ್ಲ ಕೆಚ್ಚಿದೆ. ತನು, ರೂಪ, ವಿಭವ, ಯೌವ್ವನ, ಧನ, ಸೌಭಾಗ್ಯ, ಆಯುರಾದಿಗಳು ಮಿಂಚಿನ ಹೊಳಪಿನಂತೆ, ಮುಗಿಲಿನ ನೆಳಲಂತೆ, ಇಂದ್ರ ಧನುಸ್ಸಿನಂತೆ, ಬೊಬ್ಬುಳಿಯುರ್ಚಿನಂತೆ, ಕ್ಷಣಿಕ ಭಂಗುರವೆಂಬ ಜೈನರ ಕ್ಷಣಿಕ ವಾದ ರತ್ನಾಕರನಿಗೆ ಅಷ್ಟು ರುಚಿಸುವುದಿಲ್ಲ. ಕ್ಷಣಿಕವಾದರೂ ಅದು ಭೋಗಕ್ಕೆ ಅಯೋಗ್ಯವಲ್ಲ. ಕ್ಷಣಿಕವೆಂಬುದನ್ನು ಅರಿತು, ಭೋಗವಿಮುಖನಾಗದೆಯೇ ಶಾಶ್ವತ ಸುಖವನ್ನು ಅರಸುತ್ತಾ ಹೋಗಬೇಕೆಂಬುದು ಆತನ ಸಂದೇಶ. ಇದೇ ಭಾವವು ಭರತೇಶ ವೈಭವದಲ್ಲೂ ಇರುವುದನ್ನು ಕಾಣಬಹುದು.

4.3.5 ಅಧ್ಯಾತ್ಮ ಗೀತೆಗಳು

ತನಗಿಂತ ಹಿರಿಯರಾದ ಕವಿಗಳು ಹಾಕಿಕೊಟ್ಟ, ಜಾಡಿನಲ್ಲಿ ನಡೆದು ರತ್ನಾಕರ ಒಂದು ಮಹಾಕಾವ್ಯವನ್ನು ರಚಿಸಿ ನಂತರದಲ್ಲಿ ಸಮಕಾಲೀನ ಪ್ರಭಾವದಿಂದ ನೂರಾರು ಅಧ್ಯಾತ್ಮ ಗೀತೆಗಳನ್ನು ರಚಿಸಿರುವನು. ಇವುಗಳ ಸಂಖ್ಯೆ ಎಷ್ಟು ಎಂಬುದು ಇನ್ನೂ ನಿಖರವಾಗಿ ತಿಳಿದಿಲ್ಲ. ರತ್ನಾಕರನಿಗೆ ಕವಿತಾಶಕ್ತಿ ಒಲಿದಿತ್ತು, ಸಂಗೀತದ ಪ್ರತಿಭೆಯೂ ಇತ್ತು. ಈ ಭಾವನೆಯನ್ನು ಪುಷ್ಟೀಕರಿಸುವಂತೆ ಅವನ ಅಧ್ಯಾತ್ಮಗೀತೆಗಳಲ್ಲಿ ಗೇಯತೆ ಇದೆ, ಲಲಿತವಾದ ಓಟವಿರುವ ಸಾಹಿತ್ಯವಿದೆ. ಜೈನ ಸಂಪ್ರದಾಯದ ಈ ಹಾಡುಗಳು ಹಳಬರನೇಕರ ಬಾಯಲ್ಲಿ ಉಳಿದಿವೆ. ಆದರೆ ಇವುಗಳಿಗೆ ನಿರ್ದಿಷ್ಟವಾದ ರಾಗ ತಾಳಗಳಿಲ್ಲ. ಈ ರಚನೆಗಳಿಗೆ ನಿರ್ದಿಷ್ಟವಾದ ಅಂಕಿತವಿಲ್ಲದಿರುವುದರಿಂದ ಕರ್ತೃವನ್ನು ಗುರುತಿಸುವುದೂ ಕಷ್ಟವಾಗಿದೆ. ಹೀಗಾಗಿ ರತ್ನಾಕರನವಲ್ಲದ ರಚನೆಗಳೂ ಅವನ ರಚನೆಗಳ ಜೊತೆ ಸೇರಿರುವ ಸಾಧ್ಯತೆಗಳೂ ಇವೆ. ರತ್ನಾಕರನ ಈ ಹಾಡುಗಳು 'ಅಣ್ಣನ ಹಾಡುಗಳು' ಎಂದೂ ಪ್ರಸಿದ್ಧವಾಗಿವೆ.

4.3.6 ಭಾಷೆ ಶೈಲಿ

ರತ್ನಾಕರವರ್ಣಿ ತನ್ನ ಬೃಹತ್ ಕಾವ್ಯಗಾನದಲ್ಲಿ ಅಚ್ಚಕನ್ನಡ ದೇಸಿಯ ಸಾಂಗತ್ಯವನ್ನು ಬಳಸಿದ್ದಾನೆ. ಸಾಂಗತ್ಯವು ಹಾಡುಹಬ್ಬಕ್ಕೆ ತುಂಬಾ ಯೋಗ್ಯವಾದ ಮಟ್ಟು. ರತ್ನಾಕರ ತನ್ನ ಕಾವ್ಯದ ಮೂಲಕ ಸಾಂಗತ್ಯದ ಅಸದೃಶ್ಯ ಗುಣಗಳನ್ನು ತೋರಿಸಿಕೊಟ್ಟಿದ್ದಾನೆ. ತನ್ನ ಶೈಲಿಯ ಅಭಿವ್ಯಕ್ತಿಗೆ ಎಷ್ಟು ಸಾಧ್ಯವೋ ಅಷ್ಟು ಪ್ರಮಾಣದಲ್ಲಿ ಸಾಂಗತ್ಯವನ್ನು ದುಡಿಸಿಕೊಂಡಿದ್ದಾನೆ. ಎಲ್ಲ ಸಂದರ್ಭಗಳಲ್ಲೂ ಅವನ ಶೈಲಿಯಲ್ಲಿ ಸರಳತೆ, ಮಾಧುರ್ಯ, ಅಚ್ಚಗನ್ನಡದೇಸಿ, ಜನಪದ ಸತ್ವಗಳು ನಿಚ್ಚಳವಾಗಿ ಕಾಣಿಸುತ್ತವೆ. ರತ್ನಾಕರ ಪ್ರಾಸಪ್ರಿಯ. ಸಂಪ್ರದಾಯದ ಹಲವು ವಿಷಯಗಳನ್ನು ಕೈಬಿಟ್ಟಿದ್ದರೂ ಪ್ರಾಸವನ್ನು ಕೈಬಿಟ್ಟಿಲ್ಲ. ಅಂದ ಮಾತ್ರಕ್ಕೆ ಪ್ರಾಸಕ್ಕಾಗಿಯೇ ಪದ್ಯ ಬರೆಯುತ್ತಾನೆ ಎಂದಲ್ಲ. ಅವನ ಪದ್ಯಗಳಲ್ಲಿ ಸಹಜವಾಗಿ ಪ್ರಾಸಗಳು ಅರಳುತ್ತವೆ. ರೂಪಕಗಳೆಂದರೆ ರತ್ನಾಕರನಿಗೆ ಪಂಚಪ್ರಾಣ. ಕುಮಾರವ್ಯಾಸನಂತೆ ಅವನು ರೂಪಕಗಳಲ್ಲಿ

ಮಾತನಾಡಲು ಯತ್ನಿಸಿದ್ದಾನೆ. ಕೆಲವು ರೂಪಕಗಳಲ್ಲಿ ಕುಮಾರವ್ಯಾಸನ ಛಾಯೆಯೂ ಇದೆ. ಆದರೆ ಅವನ ರೂಪಕಗಳಲ್ಲಿ ಕಂಡುಬರುವ ತೇಜಸ್ಸು, ಅರ್ಥವಂತಿಕೆ, ನೂತನದೃಷ್ಟಿ ರತ್ನಾಕರನ ರೂಪಕಗಳಲ್ಲಿ ಕಂಡುಬರುವುದಿಲ್ಲ. ರೂಪಕಗಳ ಕಲ್ಪನೆ ಬಂದಾಗಲೆಲ್ಲ ರತ್ನಾಕರ ಸಂಸ್ಕೃತವನ್ನೂ ದೀರ್ಘ ಸಮಾಸ ಪದಗಳನ್ನೂ ಆಶ್ರಯಿಸುತ್ತಾನೆ. ರತ್ನಾಕರನ ಅಚ್ಚಕನ್ನಡ ದೇಸಿಯ ಮನೋಧರ್ಮಕ್ಕೆ ಒಗ್ಗುವ ರೂಪಕಗಳು ಕಾವ್ಯದಲ್ಲಿ ಹೆಚ್ಚಾಗಿಲ್ಲ. ಹಲವು ರೂಪಕಗಳು ಹೆಂಗಳೆಯರ ಕಣ್ಣಿನ ವರ್ಣನೆಯಲ್ಲೇ ತೃಪ್ತಗೊಂಡಿವೆ. ರತ್ನಾಕರನ ಶೈಲಿ ಉಪಮೆಗಳನ್ನು ಬಳಸಿಕೊಳ್ಳುವುದರಲ್ಲಿ ಸಾರ್ಥಕವಾಗಿದೆ. ಅವನ ಉಪಮೆಗಳ ವಿಶಿಷ್ಟ ಬಳಕೆ ಅವನಿಗೇ ಮೀಸಲಾದುದು. ಅಷ್ಟು ಸಹಜವಾಗಿ ರಸವತ್ತಾಗಿ ಉಪಮೆಗಳನ್ನು ಬಳಸಿದ್ದಾನೆ. ಉಪಮೆಗಳನ್ನು ಅರ್ಥಪೂರ್ಣವಾಗಿ ಬಳಸಿದವರಲ್ಲಿ ರತ್ನಾಕರನೂ ಒಬ್ಬ. 'ಉಪಮಾಲೋಲ' ಎಂಬ ಬಿರುದನ್ನು ರತ್ನಾಕರನಿಗೂ ಅನ್ವಯಿಸಬಹುದು. ಕುಮಾರವ್ಯಾಸನಿಗೆ ರೂಪಕ ಹೇಗೋ ಹಾಗೆ ರತ್ನಾಕರನಿಗೆ ಉಪಮೆ. ಶಬ್ದಚಿತ್ರಗಳನ್ನು ಕಂಡರಿಸುವುದರಲ್ಲಿ ರತ್ನಾಕರನ ಶೈಲಿ ಸಿದ್ಧಿ ಗಳಿಸಿದೆ. ಸಾಂಗತ್ಯದ ಪುಟ್ಟ ಛಂದಸ್ಸಿನಲ್ಲಿ, ಸರಳವಾದ ಮಾತುಗಳಲ್ಲಿ, ಯಾವ ಆರ್ಭಟವೂ ಇಲ್ಲದೆ, ಮಾತುಗಳನ್ನು ದುಂದು ಮಾಡದೆ ಮಧುರ ಭಾವಗಳನ್ನು, ಸಹಜ ಸನ್ನಿವೇಶಗಳನ್ನು ಕಣ್ಣಿಗೆ ಕಟ್ಟುವಂತೆ ಕವಿ ಚಿತ್ರಿಸಿದ್ದಾನೆ. ಇಂತಹ ಕಡೆಗಳಲ್ಲಿ ರತ್ನಾಕರನ ಅಸಾಧಾರಣ ಅಭಿವ್ಯಕ್ತಿ ಕಂಗೊಳಿಸುತ್ತದೆ.

4.3.7 ಮಹತ್ತ್ವ

ರತ್ನಾಕರರ್ಣಿಯ 'ಭರತೇಶ ವೈಭವ' ಸಾಂಗತ್ಯದಲ್ಲಿ ರಚನೆಯಾದ ಮೇರುಕೃತಿ. ಭಾಮಿನೀ ಷಟ್ಪದಿಗೆ ಕುಮಾರವ್ಯಾಸ, ರಗಳೆಗೆ ಹರಿಹರ ಹೋಗೋ ಹಾಗೆ ಸಾಂಗತ್ಯಕ್ಕೆ ರತ್ನಾಕರ. ಆಯಾ ಛಂದಸ್ಸಿಗೆ ಅವರವರು ಶ್ರೇಷ್ಠರು. ಸಮನ್ವಯಶೀಲನಾದ ರತ್ನಾಕರನು ತನ್ನ ಕೃತಿಯಲ್ಲಿ ಆಂತರಿಕ ಅನುಭವದೊಡನೆ ತಾನು ಕಂಡ ಬಾಹ್ಯ ಜೀವನದ ವಿವಿಧಾಂಗಗಳನ್ನು ವರ್ಣಿಸಿದ್ದಾನೆ. ಅವು ಹೆಚ್ಚಾಗಿ ರಾಜಜೀವನಕ್ಕೆ, ಸಂಗೀತ ನೃತ್ಯ ನಾಟಕ ಮುಂತಾದ ಸೌಖ್ಯಸಾಧನಗಳಿಗೆ ಸಂಬಂಧಪಟ್ಟುವು. ಜನಜೀವನದ ಈ ಚಿತ್ರ ವಿಜಯನಗರ ಕಾಲದ ವೈಭವವನ್ನೂ ಕವಿಯ ರಸಿಕತೆಯನ್ನೂ ತೋರಿಸುತ್ತದೆ.

'ಭರತೇಶವೈಭವ'ವು ಭರತೇಶನ ಆತ್ಮವೈಭವವಾಗಿರುವಂತೆ ರತ್ನಾಕರನ ಕಾವ್ಯವೈಭವೂ ಆಗಿದೆ. ಅದು ಒಬ್ಬ ಮಹಾಕವಿಯ ಮಹಾಕೃತಿ ಎಂಬುದು ನಿರ್ವಿವಾದ. ಪಂಪ, ಹರಿಹರ, ಕುಮಾರವ್ಯಾಸರಿಗೆ ಸರಿಜೋಡಿಯಾಗಿ ನಿಲ್ಲುವ ಮಹಾಕವಿಯೆಂದರೆ ರತ್ನಾಕರನೇ. ಸಾಂಗತ್ಯವು ಬೆಳೆಬೆಳೆಯುತ್ತ ಬಂದು ರತ್ನಾಕರನಲ್ಲಿ ಮಹಾಕಾವ್ಯದ ವಾಹಕವಾಯಿತು. ಈ ಯುಗದ ದೇಸಿ 'ಭರತೇಶ ವೈಭವ'ದಲ್ಲಿ ತನ್ನ ಚರಮಸೀಮೆಯನ್ನು ಮುಟ್ಟಿ, ಕನ್ನಡ ಸಾಹಿತ್ಯವು 'ಜನತಾಂತರ್ದೃಷ್ಟಿ' ಎಂಬ ಮಾತನ್ನು ಸಾರ್ಥಕಗೊಳಿಸಿತು.

'ಭರತೇಶವೈಭವ'ದ ನಿಲುವಿಗೆ ಕವಿಯ ಶತಕಗಳೂ ಹಾಡುಗಳೂ ಪೂರಕವಾಗಿಯೋ ಪ್ರೇರಕವಾಗಿಯೋ ನಿಲ್ಲುತ್ತವೆ. ಭರತೇಶವೈಭವವೇ ರತ್ನಾಕರನ ಪ್ರಾತಿನಿಧಿಕ ಕೃತಿ. ಅವನ ಕೀರ್ತಿ ನಿಂತದ್ದು ಭರತೇಶವೈಭವದಿಂದಲೇ ಹೊರತು ಉಳಿದ ಕೃತಿಗಳಿಂದಲ್ಲ.

4.4 ಸಂಚಿಯ ಹೊನ್ನಮ್ಮ (೧೬೮೦)

ಕನ್ನಡ ಕವಿಯತ್ರಿಯರಲ್ಲಿ ಹೊನ್ನಮ್ಮ ಹಿರಿಯ ಹೆಸರು ಗಳಿಸಿದ್ದಾಳೆ 'ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ' ಎಂಬ ಪದ್ಯವನ್ನು ಓದು ಬರಹ ಬಲ್ಲ, ಕನ್ನಡಿಗರು ಕೇಳಿದ್ದಾರೆ. ನೀವೂ ಕೂಡ ಕೇಳಿದ್ದೀರಿ. ಹೊನ್ನಮ್ಮನ 'ಹದಿಬದೆಯ ಧರ್ಮ' ತುಂಬಾ ಜನಾನುರಾಗ ಪಡೆದಿರುವ ಕೃತಿ. ಆಕೆ ದಾಂಪತ್ಯ ಜೀವನವನ್ನು ಅದರ ಕರ್ತವ್ಯ ಹೊಣೆಗಾರಿಕೆಗಳನ್ನು ಧರ್ಮದ ದೃಷ್ಟಿಯಿಂದ ನೋಡಿದ್ದಾಳೆ. ಅದಕ್ಕೆ ಮನು ಮೊದಲಾದವರ ಧರ್ಮಶಾಸ್ತ್ರಗಳೇ ಆಧಾರ. ನಿರ್ಮಲ ಸತಿಯರು ಧರ್ಮವೇ ಆ ಕೃತಿಯ ತಿರುಳು. ಸಾಧ್ವಿಯ ಚಿತ್ರವೇ ಅದರ ಸ್ಥಾಯಿ. ಸಂಸಾರವನ್ನು ಸುಖ ಶಾಂತಿ ಪ್ರೇಮ ಸಮೃದ್ಧಿ

ಸಹಿಷ್ಣುತೆಗಳಿಂದ ಪಾರುಗಾಣಿಸುವ ದಾರಿ ತೋರುವುದು ಕವಿಯಿತ್ರಿಯ ಪ್ರಯತ್ನ. ಸಂಸಾರ ಸುಖದ ಸುಗ್ಗಿಯಾಗಬೇಕೆಂದು ಆಕೆಯ ಆಶಯ.

4.4.0 ಕಾಲ ದೇಶ

ಚಿಕ್ಕದೇವರಾಜ ಒಡೆಯರ ಉಳಿಗದಾಕೆ ಹೊನ್ನಮ್ಮ. ಸಂಚಿಯ ಊಳಿಗದವಳಾಗಿದ್ದಳೆಂದು ಕೃತಿಯಿಂದಲೇ ತಿಳಿದುಬರುತ್ತದೆ. ಚಿಕ್ಕದೇವರಾಜ ಪಟ್ಟದ ರಾಣಿಯೊಡನೆ ಮೈಸೂರು ಜಿಲ್ಲೆಯ ಯಳಂದೂರಿನಿಂದ ಶ್ರೀರಂಗಪಟ್ಟಣಕ್ಕೆ ಬಂದವಳು ಈಕೆ. ದೇವರಾಜಮ್ಮಣ್ಣಿಯ ಬಾಲ್ಯ ಸ್ನೇಹಿತೆಯೂ ಸುಶೀಲೆಯೂ ಪ್ರತಿಭಾನ್ವಿತೆಯೂ ಆಗಿದ್ದ ಈಕೆ ಚಿಕ್ಕದೇವರಾಜನ ಕೃಪಾಕಟಾಕ್ಷಕ್ಕೆ ಪಾತ್ರಳಾದಳು. ಆತನ ಆಸ್ಥಾನ ವಿದ್ವಾಂಸನಾಗಿದ್ದ, 'ಮಿತ್ರವಿಂದಾ ಗೋವಿಂದ' ಕೃತಿಯ ಕರ್ತೃ ಅಳಸಿಂಗರಾರ್ಯನಲ್ಲಿ ವಿದ್ಯೆಯನ್ನು ಕಲಿತು ಕಾವ್ಯಪುರಾಣಗಳನ್ನೂ, ಧರ್ಮಶಾಸ್ತ್ರಗಳನ್ನೂ ಅಭ್ಯಾಸ ಮಾಡಿದಳು. ಈಕೆಯ ಕಾವ್ಯಶಕ್ತಿಯನ್ನು ಅರಿತ ಅಳಸಿಂಗರಾರ್ಯ ಈ ಹೊನ್ನಿ ಸರಸ ಸಾಹಿತ್ಯದ ವರದೇವತೆ, ಕಾವ್ಯಾಲಂಕಾರ ನಾಟಕಗಳ ಪವಣಿಗೆಯ ಬಲ್ಲವಳು ಎಂದು ಕೊಂಡಾಡಿದ. ಈ ಮಾತನ್ನು ಚಿಕ್ಕದೇವರಾಜ ತನ್ನ ಪಟ್ಟದ ರಾಣಿ ದೇವರಾಜಮ್ಮಣ್ಣಿಗೆ ಈ ವಿಷಯವನ್ನು ತಿಳಿಸಿ ಒಂದು ಸರಸವಾದ ಗ್ರಂಥವನ್ನು ಹೊನ್ನಮ್ಮನಿಂದ ಮಾಡಿಸು ಎಂದು ಹೇಳಿದ. ತನ್ನ ಒಡೆಯ ಮತ್ತು ಒಡತಿಯರ ಅಣತಿಯ ಮೇರೆಗೆ ಅವರ ಕೈಂಕರ್ಯಾರ್ಥವಾಗಿ ಕಾವ್ಯ ರಚನೆ ಮಾಡುತ್ತಿರುವುದಾಗಿ ಹೊನ್ನಮ್ಮ ಹೇಳಿಕೊಂಡಿದ್ದಾಳೆ.

ಹೊನ್ನಮ್ಮನ ಕಾಲವಿಚಾರವಾಗಿ ಹೆಚ್ಚಿನ ಚರ್ಚೆಗೆ ಅವಕಾಶವೇನೂ ಇಲ್ಲ. ೧೬೮೦ ಈಕೆಯ ಕಾಲ ಎಂದು ಹೇಳಲಾಗಿದೆ. ಮುಗಳಿಯವರು ೧೭೦೦ ಎಂದು ಸೂಚಿಸಿದ್ದಾರೆ. ಈಕೆಯ ಮತ, ತಂದೆ ತಾಯಿಯರು, ವೈಯಕ್ತಿಕ ಜೀವನ ಇತ್ಯಾದಿಗಳ ಬಗೆಗೆ ಹೆಚ್ಚೇನು ತಿಳಿಯುವುದಿಲ್ಲ. ಪ್ರಾಚೀನ ಕನ್ನಡ ಸಾಹಿತ್ಯದ ಅತ್ಯಂತ ವಿರಳ ಕವಿಯತ್ರಿಯರ ಗುಂಪಿಗೆ ಸೇರಿದವಳು ಎಂಬುದೇ ಹೊನ್ನಮ್ಮನ ಅಗ್ಗಳಿಕೆ. ಅರಮನೆಯ ಊಳಿಗದ ಒಂದು ಹೆಣ್ಣು ಆಳರಸರ ಗಮನ ಸೆಳೆದು ಆಸ್ಥಾನ ವಿದ್ವಾಂಸರಿಂದ ವಿದ್ಯೆ ಕಲಿತು ಕಾವ್ಯ ರಚನಾ ಸಾಮರ್ಥ್ಯವನ್ನು ಗಳಿಸದಳೆಂಬುದು ಭಾರತೀಯ ಸಾಮಾಜಿಕ ವ್ಯವಸ್ಥೆಯೊಳಗೆ ಒಂದು ವಿಶೇಷ ಸಂಗತಿ. ಈ ದೃಷ್ಟಿಯಿಂದ ಹೊನ್ನಮ್ಮ ಅತ್ಯಂತ ಮುಖ್ಯವಾದ ಕವಯಿತ್ರಿಯಾಗುತ್ತಾಳೆ.

4.4.1 ಹದಿಬದೆಯ ಧರ್ಮ

'ಹದಿಬದೆಯ ಧರ್ಮ' ಹೊನ್ನಮ್ಮ ರಚಿಸಿದ ಏಕೈಕ ಕೃತಿ. ಹೊನ್ನಮ್ಮನೇ ಈ ಕೃತಿಯನ್ನು ರಚಿಸಿದಳೆ ಎಂಬ ಸಂಶಯವೂ ವಿದ್ವಾಂಸರಿಂದ ವ್ಯಕ್ತವಾಗಿದೆ. ಅವಳ ಗುರುವಾದ ಸಿಂಗರಾರ್ಯನೇ ಇದನ್ನು ಬರೆದಿರಬಹುದೆಂಬ ಅನುಮಾನಕ್ಕೂ ಎಡೆಯಿದೆ ಎಂದು ಮುಗಳಿಯವರು ಅಭಿಪ್ರಾಯಪಡುತ್ತಾರೆ. 'ಹದಿಬದೆಯ ಧರ್ಮ' ಒಂದು ನೀತಿಕಾವ್ಯ. ಇದರಲ್ಲಿ ಕಥಾನಕವೆಂಬುದಿಲ್ಲ. ಉದಾಹರಣೆಗಾಗಿ ಅಲ್ಲಲ್ಲಿ ಚಿಕ್ಕ ಚಿಕ್ಕ ಕಥೆಗಳನ್ನು ಹೇಳಿದೆ. ಪದಿನೆಂಟು ಬಣ್ಣನೆಯೆಂದು ಬವಣೆಗೊಂಡು ಪದಗೆಟ್ಟು ಬಯಲ ಬಣ್ಣಿಸದೆ ಹದಿಬದೆಯ ಧರ್ಮವನ್ನು ಬಣ್ಣಿಸುವೆನೆಂದು ಹೊನ್ನಮ್ಮ ಹೇಳಿಕೊಂಡಿದ್ದಾಳೆ. ಪತಿವ್ರತಾಧರ್ಮದ ನೀತಿಸಂಹಿತೆಯನ್ನು ರೂಪಿಸುವುದು ಈ ಕೃತಿಯ ಉದ್ದೇಶವೆಂಬುದು ಇದರಿಂದ ತಿಳಿಯುತ್ತದೆ. ಇಂಥದೊಂದು ಗ್ರಂಥ ಈ ಹಿಂದೆ ಕನ್ನಡದಲ್ಲಾಗಲಿ ಸಂಸ್ಕೃತದಲ್ಲಾಗಲಿ ಈ ಹಿಂದೆ ಇರಲಿಲ್ಲವೆಂಬುದನ್ನು ಗಮನಿಸಬೇಕು. ಆದ್ದರಿಂದ ಹೊನ್ನಮ್ಮನ ಈ ಕೃತಿಗೆ ಒಂದು ನಿರ್ದಿಷ್ಟ ಆಕರವೂ ಇದ್ದಂತಿಲ್ಲ. ಆದಿಕಾವ್ಯದೊಳು (ರಾಮಾಯಣ) ಐದನೆಯ ವೇದದೊಳು (ಮಹಾಭಾರತ) ಮನ್ವಾಧಿಕ ಧರ್ಮಶಾಸ್ತ್ರದೊಳು (ಮನುಧರ್ಮಶಾಸ್ತ್ರ ಮುಂತಾದವು) ಹಿರಿಯರು ಹೇಳಿದ್ದನ್ನೇ ಕೃತಿಮಾಡಿ ಹೇಳುತ್ತಿರುವುದಾಗಿ ಹೊನ್ನಮ್ಮನೇ ಹೇಳಿಕೊಂಡಿದ್ದಾಳೆ. ಇದರಿಂದ ಹೊನ್ನಮ್ಮನ ಬಹುಶ್ರುತತೆಯೂ ವೇದ್ಯವಾಗುತ್ತದೆ. ಹದಿಬದೆಯ ಧರ್ಮದಲ್ಲಿ ಬಂದಿರುವ ಪತಿವ್ರತಾ ಧರ್ಮದ ನಿಯಮಗಳು, ಭಾರತೀಯ ಸ್ತ್ರೀಯ ಸ್ಥಾನಮಾನದ ವರ್ಣನೆಗಳು, ಉದಾಹರಣರೂಪದ

ಕಥೆಗಳು, ಶ್ರೀವೈಷ್ಣವ ಮತತತ್ವಗಳು ಇವೆಲ್ಲವನ್ನೂ ಅವಳು ತಾನು ಓದಿದ ಗ್ರಂಥಗಳಿಂದ ಅರಿಸಿಕೊಂಡಿದ್ದಾಳೆ. ಆದರೆ ಇವನ್ನು ಅನುವಾದಿಸುವಾಗ ಮಾತ್ರ ತನ್ನ ಅನುಭವದ ಮತ್ತು ಶೈಲಿಯ ಮುದ್ರೆಯೊತ್ತಿದ್ದಾಳೆ.

4.4.2 ಕೃತಿ ವಿಶೇಷ

'ಹದಿಬದೆಯ ಧರ್ಮ' ಸಾಂಗತ್ಯದಲ್ಲಿ ರಚನೆಯಾಗಿರುವ ಕೃತಿ. ಇದರಲ್ಲಿ ೯ ಸಂಧಿಗಳೂ ೪೭೯ ಪದ್ಯಗಳೂ ಇವೆ. ಇದು ನೀತಿಕಾವ್ಯವಾದರೂ ಕೇವಲ ನೀತಿಗ್ರಂಥದಂತೆ ನೀರಸವಾಗಿ ನಿರೂಪಿಸಿಲ್ಲ. ಹದಿಬದೆ ತನ್ನ ಪತಿಯ ಕೂಡ ಹೇಗಿರಬೇಕು. ಅಗಲಿದಾಗ ಹೇಗಿರಬೇಕು, ಅತ್ತೆ ಮಾವಂದಿರು ಮತ್ತು ಉಳಿದ ಬಳಗದೊಡನೆ ಹೇಗಿರಬೇಕು ಇತ್ಯಾದಿಗಳನ್ನು ಮಾದರಿ ನಡತೆಯ ಚಿತ್ರಗಳನ್ನು ಬಿಡಿಸಿದಂತೆ ಬಣ್ಣಿಸಿದ್ದಾಳೆ. ಹೀಗಾಗಿ ಕೃತಿ ಕಾವ್ಯರೂಪವನ್ನು ತಾಳಿದೆ. ೭ನೆಯ ಸಂಧಿ ಈ ದೃಷ್ಟಿಯಿಂದ ವಿಶೇಷವಾಗಿ ಗಮನಿಸಬೇಕಾದುದು. ಇಲ್ಲಿ ವಿರಹಿಣಿಯಾದ ಆದರ್ಶಸತಿಯ ಚಿತ್ರವನ್ನು ಹೊನ್ನಮ್ಮ ಸರಳವಾಗಿಯೂ ಕಲ್ಪನಾರಮ್ಯವಾಗಿಯೂ ಬಿಡಿಸಿದ್ದಾಳೆ. ವಿರಹದ ಉತ್ಕಟತೆ, ಪತಿಯ ನಿರೀಕ್ಷೆ, ಪತಿಯ ಪುನರಾಗಮನದಿಂದ ಉಂಟಾಗುವ ಹರ್ಷ ಪ್ರೀತಿ ಇವೆಲ್ಲ ಸೊಗಸಾಗಿ ನಿರೂಪಿತವಾಗಿವೆ. ಒಟ್ಟಿನಲ್ಲಿ 'ಹದಿಬದೆಯ ಧರ್ಮ' ದಲ್ಲಿರುವುದು ಭಾರತೀಯ ಆರ್ಷ ಪರಂಪರೆಗೆ ಸೇರಿದ ಪತಿವ್ರತಾಸ್ತ್ರೀಯ ನಡೆವಳಿಕೆಗಳು; ಆಕೆ ನಡೆದುಕೊಳ್ಳಬೇಕಾದ ಬಗೆಗಿನ ಉಪದೇಶಗಳು ಇಲ್ಲವೇ ಮಾರ್ಗಸೂಚಿಗಳು.

ಹೊನ್ನಮ್ಮನ ಸತೀಧರ್ಮವಿಷಯಕವಾದ ವಿಚಾರಗಳೆಲ್ಲ ಸಾಂಪ್ರದಾಯಿಕವೆಂಬುದು ದಿಟ. ಅದು ಅವಳಿಗೆ ಅಪರಿಹಾರ್ಯವೂ ಆಗಿತ್ತೆಂದು ತೋರುತ್ತದೆ. ಆದರೆ ಅಕ್ಕಮಹಾದೇವಿಯಂತಹ ದಿಟ್ಟ ವಚನಕಾರ್ತಿ ತನ್ನ ಅನುಭವ ವಿಶೇಷಗಳಿಗೆ ಅಭಿವ್ಯಕ್ತಿಯನ್ನು ನೀಡಿ ಪರಂಪರೆಯ ಬದುಕಿನಲ್ಲಿ ಅಲ್ಲೋಲವೆಬ್ಬಿಸಿದ ನಂತರವೂ ಇಲ್ಲಿ ಒಂದು ಹೆಣ್ಣಿನಿಂದ ಹೆಣ್ಣಿನ ವಿಷಯಕವಾದ ಸಾಂಪ್ರದಾಯಿಕ ಮೌಲ್ಯಗಳ ಪುನರ್ ಪ್ರತಿಷ್ಠಾಪನಾ ಕಾರ್ಯ ನಡೆಯುತ್ತಿರುವುದು ಒಳ್ಳೆಯ ಬೆಳವಣಿಗೆ ಎನಿಸುವುದಿಲ್ಲ. ಸತೀಧರ್ಮಕ್ಕಿಂತ ಮಿಗಿಲಾದ ಧರ್ಮವಿಲ್ಲ ಎಂದು ಅವಳು ಮತ್ತೆ ಮತ್ತೆ ಹೇಳುತ್ತಿರುವುದು, ಪುರುಷಪ್ರಧಾನ ಮನೋಧರ್ಮದ ಆರ್ಯ ವ್ಯವಸ್ಥೆ ರೂಪಿಸಿದ ಋಷಿಧರ್ಮವನ್ನು ಎರಡನೆಯದಾಗಿಸುವ ಹವಣಿಕೆಯಿರುವುದು ಹೊನ್ನಮ್ಮನ ದಿಟ್ಟತನದ ಸೂಚಕ ಎಂದು ಹೇಳಬಹುದು. ಆದರೂ, ಅವಳು ಹೇಳುವ ಮಿಗಿಲಾದ ಸತೀಧರ್ಮ ಸತಿಯಾದವಳು ಮಾಡುವ ಪತಿಯ ಪಾದಪೂಜೆಯನ್ನೂ ಸರ್ವವಿಧದಲ್ಲೂ ಸತಿ ಪತಿಯಾನುಸಾರಿಣಿಯಾಗಿರುವುದನ್ನೂ ಅವಲಂಬಿಸಿದೆ ಎಂಬಂತಹ ಅವಳ ಪ್ರತಿಪಾದನೆ ಮಾತ್ರ ಒಪ್ಪತಕ್ಕುದಲ್ಲ. ಇಂತಹ ಮಾತುಗಳೆಲ್ಲ ಹೊನ್ನಮ್ಮ ಪರಂಪರೆಯ ಪರವಾಗಿಯೇ ಇದ್ದಾಳೆ ಎಂಬುದನ್ನು ಸಾಬೀತುಪಡಿಸುತ್ತವೆ. ಹೊನ್ನಮ್ಮ ತನ್ನ ಸಾಂಪ್ರದಾಯಿಕ ನಿಲುವುಗಳ ನಡುವೆಯೂ ಶ್ರೇಷ್ಠವಾದುದನ್ನು ಎತ್ತಿ ಹಿಡಿಯುತ್ತಾಳೆಂಬುದು ಸಮಾಧಾನದ ಸಂಗತಿ.

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು
ಕುವರನಾದೊಡೆ ಬಂದ ಗುಣವೇನದರಿಂದೆ
ಕುವರಿಯಾದೊಡೆ ಕುಂದೇನು

ಎಂಬಂತಹ ರೂಢಿ ವಿರುದ್ಧವಾದ ಹೊಸ ಮಾತುಗಳನ್ನು ಹೇಳಿದ್ದಾಳೆ. ಸತೀಧರ್ಮದೊಡನೆ ಕೆಲವು ಕಡೆ ಪತಿಧರ್ಮವನ್ನೂ ತಿಳಿಸಿದ್ದಾಳೆ. ೬ ನೆಯ ಸಂಧಿಯಲ್ಲಿ ಇದು ತುಂಬಾ ಕಾವ್ಯಮಯವಾಗಿ ಬಂದಿದೆ.

ಅರಿಯದ ಪೆಣ್ಣಾದರಿಸಿಯಂಜಿಕೆಗಳ
ಪರಿಪುಗೆಯ್ಯದೆ ಬಲ್ಮೆದೋರೆ
ತರಿಸಂದು ಮಳೆಗೆ ಬಾಯ್ದೆರೆವ ಚಾದಗೆಯೊಳು
ಬರಸಿಡಿಲೆರಗಿದಂತೆ
ಮುಗುದೆ ನಾಚಿಕೆಗೊಳೆ ಮುದ್ದಿಸಿ ತಿಳುಪದೆ
ಪಗೆಸಾಧಿಸಿ ಬಲ್ಮೆದೋರೆ
ಉಗುರೊಳು ಬಾಜಿಪ ಬೀಣೆಗೊನಕೆಗೊಂಬ
ಬಗೆಯೆನಿಪುದು ಭಾವಿಪೊಡೆ

4.4.3 ಭಾಷೆ ಶೈಲಿ

'ಹದಿಬದೆಯ ಧರ್ಮ'ದ ಶೈಲಿ ಹೊನ್ನಮ್ಮನ ಸ್ವಂತ ಸತ್ವದಿಂದಲೂ ತಿರುಮಲಾರ್ಯ ಸಿಂಗರಾರ್ಯರ ಪ್ರಭಾವದಿಂದಲೂ ಮಾದರಿಯ ಅಚ್ಚಗನ್ನಡವೆನಿಸಿದೆ. ಎರರುಮರಿವಂತೆ ಎಳವಾತುಗಳಿಂದ ಹೇಳಿದ ಸೊಲ್ಲಾಗಿದೆ. ಸಂಸ್ಕೃತ ಪದಗಳನ್ನು ಮಿತವಾಗಿ, ದೇಶ್ಯ ಪದಗಳನ್ನು ತದ್ಭವಗಳನ್ನು ವಿಶೇಷವಾಗಿ ಬಳಸಿದ್ದಾಳೆ ಹೊನ್ನಮ್ಮ. ಅವಳ ಬಾಷೆ ಪ್ರೌಢಿಮೆಯನ್ನು ಮೆರೆದರೂ ಕ್ಲೇಶವೆನಿಸದಿರುವುದಕ್ಕೆ ಅವಳ ದೇಶೀಪ್ರಿಯತೆಯೇ ಕಾರಣ. ಒಡೆಯ, ಊಳಿಗ, ನೋಂಪಿ, ಓಲಗ, ಜಸ, ಬಿಜ್ಜ, ಬಿಡುಗಣ್ಣ, ಬಣ್ಣನೆ, ಬೈತಲೆವಣೆ ಇಂತಹ ಮಾತುಗಳ ಪೋಣಿಕೆಯಿಂದ ಅವಳ ಭಾಷಾಸರಣಿ ಮೃದುವಾಗಿದೆ. ಕನ್ನಡ ದೇಶಿ ಇಂಪಾಗಿದೆ. ಕಾವ್ಯದಲ್ಲಿರುವ ಸಹಜ ಪ್ರಾಸ, ತಿಳಿಯಾದ ಓಟ ಆಕೆ ಸರಸ ಸಾಹಿತ್ಯದ ವರದೇವತೆ ಎಂಬ ಪ್ರಶಂಸೆಗೆ ಅರ್ಹಳೆಂಬುದನ್ನು ತೋರಿಸಿಕೊಡುತ್ತದೆ.

4.5 ಸ್ವಪರೀಕ್ಷೆ ಪ್ರಶ್ನೆಗಳು

1. ನಂಜುಂಡ ಕವಿಯ ಕಾಲ, ದೇಶ ಮತ್ತು ರಾಜಾಶ್ರಯವನ್ನು ತಿಳಿಸಿ.

....

....

....

2. 'ರಾಮನಾಥ ಚರಿತ'ದ ವಸ್ತುವಿನ ವೈಶಿಷ್ಟ್ಯವನ್ನು ಕುರಿತು ಬರೆಯಿರಿ.

....

....

....

3. 'ರಾಮನಾಥ ಚರಿತ'ದ ಮುಖ್ಯ ಪಾತ್ರಗಳು ಯಾವುವು?

....

....

....

4. ಕುಮಾರ ರಾಮನ ಪಾತ್ರದ ವಿಶೇಷತೆಯೇನು?

....

....

....

5. 'ರಾಮನಾಥ ಚರಿತ'ದ ಮುಖ್ಯ ಸನ್ನಿವೇಶಗಳಾವುವು?

....

....

....

6. 'ರಾಮನಾಥ ಚರಿತ'ದ ಸ್ವರೂಪ ಶೈಲಿ ಮಹತ್ವವನ್ನು ತಿಳಿಸಿ.

....

....

....

7. ರತ್ನಾಕರವರ್ಣಿಯ ಕಾಲದೇಶಾದಿ ವಿಚಾರಗಳನ್ನು ಕುರಿತು ಬರೆಯಿರಿ.

....

....

....

8. ರತ್ನಾಕರವರ್ಣಿಯ ಕೃತಿಗಳಾವುವು? ಅವುಗಳ ವಸ್ತುವಿಶೇಷತೆಗಳೇನು? ತಿಳಿಸಿ.

....

....

....

9. ಭರತೇಶವೈಭವದ ರೂಪ ಸ್ವರೂಪ ಹಾಗೂ ದೃಷ್ಟಿಕೋನವನ್ನು ತಿಳಿಸಿ.

....

....

....

10. ಭರತೇಶವೈಭವ ಯಾವ ಛಂದಸ್ಸಿನಲ್ಲಿದೆ? ಅದರ ಭಾಷೆ ಶೈಲಿಯ ಬಗ್ಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

....

....

....

11. ರತ್ನಾಕರವರ್ಣಿ ಮತ್ತು ಅವನ ಕೃತಿಯ ಮಹತ್ವವೇನು?

....

....

....

12. ಸಂಚಿಯ ಹೊನ್ನಮ್ಮನ ಕಾಲ ಯಾವುದು?

....

....

....

13. ಹೊನ್ನಮ್ಮ ಯಾವ ರಾಜರ ಆಶ್ರಮದಲ್ಲಿ ಸಂಚಿಯ ಉಳಿಗದಳಾಗಿದ್ದಳು?

....

....

....

14. 'ಹದಿಬದೆಯ ಧರ್ಮ' ಕೃತಿಯ ವಸ್ತು ವೈಶಿಷ್ಟ್ಯವೇನು?

....

....

....

4.6 ಸಾರಾಂಶ

ನಂಜುಂಡಕವಿ : ಸುಮಾರು ೧೫೨೫ ನಂಜುಂಡಕವಿಯ ಕಾಲ. ಪಿರಿಯಾಪಟ್ಟಣ (ಮೈಸೂರು ಜಿಲ್ಲೆ) ಈತನ ಸ್ಥಳವಾಗಿರಬಹುದು. ಚಂಗಾಳ್ವದೊರೆ ನಂಜರಾಜನ ಆಶ್ರಯದಲ್ಲಿದ್ದುಕೊಂಡು ಕಾವ್ಯ ರಚಿಸಿದಂತೆ ತೋರುತ್ತದೆ. 'ರಾಮನಾಥಚರಿತೆ' ಅಥವಾ 'ಕುಮಾರರಾಮನ ಸಾಂಗತ್ಯ' ಎಂಬುದು ಈತನ ಕೃತಿ. ಸಾಂಗತ್ಯ ಛಂದಸ್ಸಿನಲ್ಲಿರುವ ಇದು ವೀರಕಾವ್ಯ, ಕನ್ನಡದ ಮೊತ್ತ ಮೊದಲ ಐತಿಹಾಸಿಕ ಕಾವ್ಯ ಎನಿಸಿಕೊಂಡಿದೆ. ಇದರಲ್ಲಿ ೧೨ ಆಶ್ವಾಸಗಳು, ೪೭ ಸಂಧಿಗಳು, ೫೮೦೭ ಪದ್ಯಗಳು ಇವೆ. ಜನಪದ ಪರಂಪರೆಗೆ ಸೇರಿಹೋದ ಕನ್ನಡನಾಡಿನ ವೀರಪುರುಷನೊಬ್ಬನ ಬದುಕನ್ನು ಆಧರಿಸಿದ ಈ ಕಾವ್ಯ ಲೌಕಿಕ ಸಂಗತಿಗಳನ್ನು ಪುರಾಣದ ನೆಲೆಗಟ್ಟಿನಲ್ಲಿ ನಿರೂಪಿಸುತ್ತದೆ.

ಕುಮಾರರಾಮ ಕಾವ್ಯದ ಕೇಂದ್ರ ವ್ಯಕ್ತಿ. ಇಡೀ ಕಾವ್ಯ ಈ ಪಾತ್ರದ ಬೆಳವಣಿಗಾಗಿ ರೂಪಿತವಾಗಿದೆ. ತನಗಿಂತ ಸುಮಾರು ೨೦೦ ವರ್ಷಗಳಷ್ಟು ಹಿಂದೆ ಇದ್ದ ಐತಿಹಾಸಿಕ ವ್ಯಕ್ತಿಯೊಬ್ಬನನ್ನು ಕಥಾನಾಯಕನನ್ನಾಗಿ ಮಾಡಿಕೊಂಡು ಕಾವ್ಯ ರಚಿಸಲು ಹೊರಟ ಕವಿ ಲಭ್ಯವಿರುವ ಇತಿಹಾಸದ ಸಂಗತಿಗಳ ಜೊತೆಗೆ ಪ್ರಚಲಿತವಿದ್ದ ಐತಿಹ್ಯಗಳು ಹಾಗೂ ಪುರಾಣದ ಅಂಶಗಳನ್ನೂ ಕಲ್ಪಿತ ಅಂಶಗಳನ್ನೂ ಬೆರಸಿ ಕಾವ್ಯದ ಕಥೆಯನ್ನು ರೂಪಿಸಿಕೊಂಡಿದ್ದಾನೆ. ಕುಮಾರರಾಮನನ್ನು ಅರ್ಜುನನ ಅವತಾರ ಎಂದು ಕಲ್ಪಿಸಿಕೊಂಡಿದ್ದಾನೆ. ಆತನನ್ನು ಮೋಹಿಸಿ ತಿರಸ್ಕೃತಳಾಗುವ ಆತನ ಚಿಕ್ಕಮ್ಮ ರತ್ನಾಜಿಯನ್ನು ಊರ್ವಶಿಯ ಅವತಾರವೆಂದು ಹೇಳುತ್ತಾನೆ. ಅವನೊಡನೆ ಯುದ್ಧಕ್ಕಿಳಿದು ಅವನ ಸಾವಿಗೆ ಕಾರಣಳಾಗುವ ಮಾತಂಗಿಯನ್ನು ಪೂರ್ವಜನ್ಮದ ಯಾವುದೋ ಸೇಡಿಗಾಗಿ ಅವತಿರಸಿದ ಗಾಂಧಾರ ಸ್ತ್ರೀ ಎಂದುಕೊಳ್ಳುತ್ತಾನೆ. ಕುಮಾರರಾಮನ ಪೌರುಷಕ್ಕೆ

ಮರುಳಾಗಿ ತನ್ನನ್ನು ಅವನಿಗೆ ಒಪ್ಪಿಸಿಕೊಂಡ ದೆಹಲಿ ಸುಲ್ತಾನನ ಮಗಳು ರಾಮನ ಸಾವನ್ನು ಕೇಳಿ ತಾನೂ ಸಾಯುವುದರ ವಾಸ್ತವಿಕತೆ ಪ್ರಶ್ನಾರ್ಹವೆನಿಸಿದರೂ, ಕಾವ್ಯದ ಕಲಾತ್ಮಕ ನೆಲೆಗಟ್ಟಿನ ದೃಷ್ಟಿಯಿಂದ ಅತ್ಯಂತ ರಮ್ಯವಾಗಿ ಗೋಚರಿಸುತ್ತದೆ. ಕಾವ್ಯ ಕಥಾ ಸರಣಿಯಲ್ಲಿ ಅನುಸರಿಸಿದ ಜನಪದ ಧಾಟಿಗೆ ಉತ್ತಮ ಸಾಕ್ಷಿಯಾಗಿದೆ.

ಕುಮಾರರಾಮನ ವೀರ ಮತ್ತು ಶುಚಿತ್ವದ ವ್ಯಕ್ತಿತ್ವದ ವಿಕಾಶವನ್ನು ಸಾಧಿಸುತ್ತಾ ನಿರೂಪಣೆಗೊಳ್ಳುವ ಕಾವ್ಯ ತನ್ನೊಳಗಿನ ಇತರ ಎಲ್ಲ ಪಾತ್ರಗಳನ್ನು ತನ್ನ ಪ್ರಧಾನ ಧ್ಯೇಯಕ್ಕೆ ಪೂರಕವಾಗಿಯೋ ಪೋಷಕವಾಗಿಯೋ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಬುದ್ಧಿವಂತಿಕೆ ಮತ್ತು ಸಮಯಪ್ರಜ್ಞೆಯ ನೈಪುಣ್ಯತೆಯಿಂದ ಸ್ವಂತ ವ್ಯಕ್ತಿತ್ವದೊಡನೆ ಕಾವ್ಯದಲ್ಲಿ ಹೊಳೆಯುವ ಇನ್ನೊಂದು ಪಾತ್ರ ಮಂತ್ರಿ ಬೈಚಪ್ಪನದು. ಕಥನಗತಿಯನ್ನು ನಿಯಂತ್ರಿಸಿ ಉದ್ದೇಶಿತ ಗುರಿಯಲ್ಲಿ ಕೊಂಡೊಯ್ಯುವಲ್ಲಿ ಈ ಪಾತ್ರ ವಹಿಸುವ ಜವಾಬ್ದಾರಿ ಮಹತ್ವದ್ದು. ರಾಮನಾಥ ಚರಿತೆ ಉತ್ತಮ ಕಾವ್ಯ ಬಂಧವನ್ನು ಹೊಂದಿರುವ, ಸಮಕಾಲೀನ ಬದುಕು ಮತ್ತು ಭಾಷೆಯ ವಿಶೇಷತೆಗಳೊಡನೆ ದೇಸೀ ಛಂದಸ್ಸಿನಲ್ಲಿ ನಿರೂಪಿತವಾದ ಉತ್ತಮ ಕಾವ್ಯ.

ರತ್ನಾಕರವರ್ಣಿ : ಜೈನ ಕವಿ ೧೫೬೦ ಈತನ ಕಾಲ. 'ಭರತೇಶ ವೈಭವ' ಎಂಬ ಕೃತಿಯನ್ನು ಸಾಂಗತ್ಯದಲ್ಲಿ ರಚಿಸಿದ್ದಾನೆ. ಇದಲ್ಲದೆ ಅಪರಾಜಿತೇಶ್ವರ ಶತಕ, ತ್ರಿಲೋಕಶತಕ, ರತ್ನಾಕರಶತಕ ಮತ್ತು ಅಧ್ಯಾತ್ಮ ಗೀತೆಗಳನ್ನೂ ರಚಿಸಿದ್ದಾನೆ. ಭರತೇಶ ವೈಭವ ಸಾಂಗತ್ಯದಲ್ಲಿ ರಚನೆಯಾದ ಅತಿದೊಡ್ಡ ಕಾವ್ಯ, ಮುಖ್ಯವಾದುದು ಕೂಡ. ಜೈನ ಶಲಾಕಾಪುರುಷರಲ್ಲಿ ಒಬ್ಬನೂ ಆದಿ ತೀರ್ಥಕರನ ಮಗನೂ, ಪ್ರಥಮ ಚಕ್ರಿಯೂ ಆದ ಭರತನ ಕಥೆ ಈ ಕಾವ್ಯದಲ್ಲಿ ಬಿತ್ತರಗೊಂಡಿದೆ. ಭರತೇಶನೇ ಈ ಕೃತಿಯ ನಾಯಕ. ಈತನ ಲೌಕಿಕ ಬದುಕಿನ ಸುಖಭೋಗವನ್ನೂ ಅಧ್ಯಾತ್ಮಿಕ ಸಾಧನೆಯ ಅತಿಶಯತೆಯನ್ನೂ ಈ ಕೃತಿ ವಿಸ್ತಾರವಾದ ಭೂಮಿಕೆಯಲ್ಲಿ ವರ್ಣಿಸುತ್ತದೆ. ಯೋಗ ಭೋಗ ಸಮನ್ವಯ ತತ್ವವನ್ನು ಭರತನ ಕಥೆಯ ಮೂಲಕ ಕವಿ ಪ್ರತಿಪಾದಿಸಿದ್ದಾನೆ. ಇದಕ್ಕೆ ತಕ್ಕಂತೆ ಮೂಲ ಮಹಾಪುರಾಣದಲ್ಲಿ ಬರುವ ಭರತಚಕ್ರಿಯ ಕಥೆಯ ಮೂಲಕ ಕವಿ ಪ್ರತಿಪಾದಿಸಿದ್ದಾನೆ. ಇದಕ್ಕೆ ತಕ್ಕಂತೆ ಮೂಲ ಮಹಾಪುರಾಣದಲ್ಲಿ ಬರುವ ಭರತಚಕ್ರಿಯ ಕಥೆಯಲ್ಲಿ ಹಲವಾರು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾನೆ. ಭರತ, ಬಾಹುಬಲಿ, ಪಂಡಿತೆ, ರತ್ನಾಜಿ ಮೊದಲಾದ ಭರತನ ಹಲವಾರು ಮಡದಿಯರು, ರತ್ನಾಜಿಯ ತಂಗಿ ಕುಸುಮಾಜಿ, ಹೀಗೆ ರತ್ನಾಕರವರ್ಣಿಯ ಕಾವ್ಯದ ಪಾತ್ರಗಳ ಸಂಖ್ಯೆ ಬೆಳೆಯುತ್ತಾ ಹೋಗುತ್ತದೆ. ಆದರೆ ಪೂರ್ಣ ವ್ಯಕ್ತಿತ್ವದೊಡನೆ, ವಿಕಾಸ ಹೊಂದಿ ತನ್ನ ಸ್ಪಷ್ಟ ಅಸ್ತಿತ್ವವನ್ನು ಭರತನ ಪಾತ್ರ ಸ್ಥಾಪಿಸಿಕೊಳ್ಳುವಂತೆ ಉಳಿದ ಪಾತ್ರಗಳು ಬೆಳೆಯುವುದಿಲ್ಲ. ಕವಿ ರತ್ನಾಕರವರ್ಣಿ ಶೃಂಗಾರಪ್ರಿಯ ಎಂದು ಹೆಸರುವಾಸಿಯಾದವನು ಶೃಂಗಾರಮಯವಾದ ಚಿತ್ರಣಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಿದ್ದಾನೆ. ಹಾಗೆಯೇ ಅಧ್ಯಾತ್ಮ ಆಚಾರ ವೈರಾಗ್ಯಗಳಿಗೆ ಕೂಡ. ಅಹಿಂಸಾಪರಧೋರಣೆ ಕವಿಯಲ್ಲಿರುವುದರಿಂದ ಹಿಂಸೆಗೆ ಕಾರಣವಾಗುವ ಯುದ್ಧದ ಚಿತ್ರಗಳನ್ನು ಆದಷ್ಟು ನಿವಾರಣೆ ಮಾಡಿಕೊಂಡಿದ್ದಾನೆ. ಸರಸ ಸಲ್ಲಾಪಗಳು, ಮೃದು ಆಲಾಪಗಳಿಂದ ಕೂಡಿ ಕಾವ್ಯ ಒಂದು ಬಗೆಯ ಮಾರ್ದವತೆಯನ್ನು ಸಾಧಿಸಿದೆ. ಕವಿಯ ಐಹಿಕ ಜೀವನದ ಬಗೆಗಿನ ಕಳಕಳಿ ಇದರಿಂದ ವ್ಯಕ್ತವಾಗುತ್ತದೆ.

ರತ್ನಾಕರವರ್ಣಿಯ ತ್ರಿಲೋಕಶತಕ ಜೈನ ಪರಂಪರೆಗೆ ಅನುಗುಣವಾಗಿ ಲೋಕಾಕಾರ ವರ್ಣನೆಯಲ್ಲಿ ತೊಡಗಿದೆ; ಕಂದಪದ್ಯದಲ್ಲಿದೆ. ಅಪರಾಜಿತೇಶ್ವರ ಮತ್ತು ರತ್ನಾಕರಶತಕಗಳು ವೃತ್ತ ಛಂದಸ್ಸಿನಲ್ಲಿವೆ. ರತ್ನಾಕತಶತಕ ಪರಿಪಕ್ವ ಮನಸ್ಸಿನ ಹೊಳಪಿನಿಂದ ಕೂಡಿದೆ. ನೀತಿ, ಆತ್ಮ ವಿಚಾರಗಳು ಇಲ್ಲಿ ನಿರೂಪಿತವಾಗಿವೆ. ಅಧ್ಯಾತ್ಮಿಕ ಗೀತೆಗಳು ಹಾಡುಗಳ ರೂಪದಲ್ಲಿವೆ. ಕೀರ್ತನೆಗಳ ಪ್ರಭಾವ ಇರುವುದನ್ನು ಇಲ್ಲಿ ಕಾಣಬಹುದು. ಅವನ ಸಂಗೀತ ಪರಿಜ್ಞಾನಕ್ಕೂ ಇವು ಸಾಕ್ಷಿಯಾಗಿವೆ.

ಹೊನ್ನಮ್ಮ : ಕನ್ನಡದ ಅಪರೂಪದ ಕವಿಯತ್ರಿಯರಲ್ಲಿ ಒಬ್ಬಳು ೧೭೦೦ ಈಕೆಯ ಕಾಲ. ಚಿಕ್ಕದೇವರಾಜನ ಆಶ್ರಯದಲ್ಲಿ ಸಂಚಿಯ ಉಳಿಗದವಳಾಗಿದ್ದಳು. 'ಸಂಚಿಯ ಹೊನ್ನಮ್ಮ' ಎಂದೇ ಪ್ರಸಿದ್ಧಳಾಗಿದ್ದಾಳೆ. ಮೈಸೂರು ಜಿಲ್ಲೆಯ ಯಳಂದೂರು ಈಕೆಯ ಹುಟ್ಟೂರು. ಚಿಕ್ಕದೇವರಾಜನ ಪಟ್ಟದರಾಣಿಯೊಡನೆ ಶ್ರೀರಂಗಪಟ್ಟಣ ಸೇರಿದಳು. 'ಹದಿಬದೆಯ ಧರ್ಮ' ಈಕೆಯ ಕೃತಿ. ಸಾಂಗತ್ಯದಲ್ಲಿದೆ. ೯ ಸಂಧಿಗಳು ೪೭೯ ಪದ್ಯಗಳು ಇವೆ. ಪತಿವ್ರತಾಧರ್ಮದ ನೀತಿಸಂಹಿತೆಯನ್ನು ರೂಪಿಸುವ ಉದ್ದೇಶದಿಂದ ರಚನೆಯಾಗಿದೆ. ರಾಮಾಯಣ, ಮಹಾಭಾರತ, ಮನುಧರ್ಮಶಾಸ್ತ್ರ ಮುಂತಾದ ಪ್ರಾಚೀನ ಗ್ರಂಥದಲ್ಲಿ ಉಕ್ತವಾಗಿರುವ ಸತೀ ಧರ್ಮವನ್ನು ಅವಲಂಭಿಸಿ ಕೃತಿರಚನೆ ಮಾಡುತ್ತಿರುವುದಾಗಿ ಹೊನ್ನಮ್ಮ ಕೃತಿಯಲ್ಲಿ ಹೇಳಿಕೊಂಡಿದ್ದಾಳೆ. ಇದೊಂದು ನೀತಿ ಕಾವ್ಯ. ತತ್ವ ನಿರೂಪಣೆಯನ್ನು ನಿದರ್ಶನಾತ್ಮಕವಾಗಿ ತಂದಿರುವುದರಿಂದ ಕಾವ್ಯದ ಸೊಗಸನ್ನು ಪಡೆದಿದೆ. ಸಂಸ್ಕೃತ ಮಿಶ್ರವಾದ ಪ್ರೌಢ ಬರೆವಣಿಗೆ ಇಲ್ಲಿದ್ದರೂ, ತದ್ಭವಗಳು ಅಚ್ಚಗನ್ನಡ ಶಬ್ದಗಳ ಹೆಚ್ಚಳದಿಂದ ದೇಸಿ ಪ್ರಜ್ವಲಿಸಿದೆ. ಹಾಗಾಗಿ ಸುಲಲಿತವಾಗಿ ಓದಿಸಿಕೊಳ್ಳುತ್ತದೆ.

(ಈ ಘಟಕದ ಪಾಠವನ್ನು ಸಿದ್ಧಪಡಿಸಲು ಕನ್ನಡ ಸಾಹಿತ್ಯ ಪತ್ರಿಕೆ, ಕುಮಾರವ್ಯಾಸಯುಗ ಸಂಚಿಕೆ -3 ರ ಪಾಠದ ನೆರವನ್ನು ಪಡೆದುಕೊಳ್ಳಲಾಗಿದೆ.)

4.7 ಸ್ವಪರೀಕ್ಷೆ ಪ್ರಶ್ನೆಗಳಿಗೆ ಉತ್ತರಗಳು

1. ನಂಜುಂಡಕವಿಯ ಕಾಲ ಸುಮಾರು ೧೫೨೫. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣವನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸುತ್ತಿದ್ದ ಚಂಗಾಳ್ವರ ನಂಜರಾಜನ ಆಶ್ರಯದಲ್ಲಿದ್ದನೆಂದು ಹೇಳಲಾಗಿದೆ. ಆದ್ದರಿಂದ ಪಿರಿಯಾಪಟ್ಟಣ ಈತನ ಸ್ಥಳವೆಂದು ತಿಳಿಯಬಹುದು.

2. ರಾಮನಾಥ ಚರಿತ ನಂಜುಂಡಕವಿ ಬರೆದ ಕಾವ್ಯ. ಇತಿಹಾಸ ವೀರ ಕುಮಾರರಾಮನನ್ನು ಕುರಿತ ಕಾವ್ಯ ಇದು. ಐತಿಹಾಸಿಕ ವ್ಯಕ್ತಿಯೊಬ್ಬನ ಜೀವನವನ್ನು ವಸ್ತುವಾಗಿರಿಸಿಕೊಂಡುದರಿಂದ 'ರಾಮನಾಥ ಚರಿತೆ' ಚಾರಿತ್ರಿಕ ಕಾವ್ಯವೆನಿಸಿದೆ. ಕನ್ನಡದ ಮೊದಲ ಚಾರಿತ್ರಿಕ ಕಾವ್ಯ ಎಂಬ ಹೆಸರನ್ನು ಪಡೆದಿದೆ. ಚರಿತ್ರಾಂಶಗಳ ಜೊತೆಗೆ ಐತಿಹ್ಯ ಹಾಗೂ ಪುರಾಣದ ಅಂಶಗಳನ್ನು ಈ ಕಾವ್ಯ ಒಳಗೊಂಡಿದೆ. ಕುಮಾರರಾಮ ಕಾವ್ಯದ ನಾಯಕ, ಕಂಪಿಲ, ಬೈಚಪ್ಪ, ರತ್ನಾಜಿ, ಮಾತಂಗಿ, ನೇಮಿ ಇವು ಈ ಕಾವ್ಯದ ಇತರ ಮುಖ್ಯ ಪಾತ್ರಗಳು. ಸುಲ್ತಾನ ಮತ್ತು ಆತನ ಮಗಳ ಪಾತ್ರವನ್ನೂ ಇಲ್ಲಿ ಸೇರಿಸಬಹುದು.

4. ಕುಮಾರರಾಮ 'ರಾಮನಾಥಚರಿತೆ'ಯ ಕೇಂದ್ರವ್ಯಕ್ತಿ. ಈ ಪಾತ್ರದ ಸುತ್ತಲೂ ಕಾವ್ಯದ ಘಟನೆಗಳೂ ಸನ್ನಿವೇಶಗಳೂ ಹೆಣೆಯಲ್ಪಟ್ಟಿವೆ. ಪರನಾರಿಸೋದರನಾಗಿ, ಅಸಾಮಾನ್ಯ ವೀರನಾಗಿ ನಿರೂಪಿಸಲಾಗಿದೆ. ವೀರ ಮತ್ತು ಶುಚಿತ್ವಕ್ಕೆ ಹೆಸರಾದ ಪಾತ್ರ ಇದಾಗಿದೆ.

5. ಶೂಲದ ಹಬ್ಬದ ಪ್ರಸಂಗ, ಮುತ್ತಿನ ಚೆಂಡಾಟದ ಪ್ರಸಂಗ, ರತ್ನಾಜಿ ಕುಮಾರರಾಮನನ್ನು ಮೋಹಿಸಿ ಆತನಿಂದ ತಿರಸ್ಕೃತಳಾಗುವ ಪ್ರಸಂಗ ಹಾಗೂ ಯುದ್ಧದ ಪ್ರಸಂಗಗಳು ರಾಮನಾಥಚರಿತದ ಮುಖ್ಯ ಸನ್ನಿವೇಶಗಳು.

6. ರಾಮನಾಥಚರಿತೆ ಸಾಂಗತ್ಯ ಛಂದಸ್ಸಿನಲ್ಲಿ ರಚನೆಯಾಗಿದೆ. ಇದರಲ್ಲಿ ೧೨ ಆಶ್ವಾಸಗಳು, ೪೭ ಸಂಧಿಗಳು, ೫೮೦೭ ಪದ್ಯಗಳು ಇವೆ. ಶೈಲಿಯಲ್ಲಿ ದೇಸಿ ಮತ್ತು ಮಾರ್ಗ ವಿಧಾನದ ಸಮ್ಮಿಲನವಿದೆ. ಪುರಾಣೋಕ್ತವಲ್ಲದಿದ್ದರೂ ಪ್ರಚಲಿತವಿದ್ದ ಸಾಮಾನ್ಯ ಕಥೆಯೊಂದನ್ನು ವಸ್ತುವಾಗಿಟ್ಟುಕೊಂಡು, ಅದರಲ್ಲಿ ರಸವನ್ನೂ ಭಾವವನ್ನೂ ತುಂಬಿ ಹೇಳಿರುವ ಕವಿಯ ಶೈಲಿ

ಸಾಕಷ್ಟು ಸ್ವಾದುವಾಗಿಯೂ, ಶಕ್ತಿಯುತವಾಗಿಯೂ ಇದೆ. ಮೊದಲ ಚಾರಿತ್ರಿಕ ಕಾವ್ಯವೆನಿಸಿದೆ. ಸಾಂಗತ್ಯದಲ್ಲಿ ರಚನೆಯಾದ ಉತ್ತಮ ಕೃತಿಗಳಲ್ಲಿ ಒಂದಾಗಿದೆ.

7. ಸುಮಾರು ೧೫೬೦ ರತ್ನಾಕರವರ್ಣಿಯ ಕಾಲ. ತುಳುನಾಡಿನ ನಿವಾಸಿ ತಾಳವಾಂಗಣದ ವೇಣುಪುರ ಈತನ ಊರು. ಈ ವೇಣುಪುರವೇ ಈಗಿನ ಮೂಡಬಿದಿರೆ ಎಂದು ಅಭಿಪ್ರಾಯಪಡಲಾಗಿದೆ. ಜೈನ ಕವಿ ಹುಟ್ಟಿನಿಂದ ಜೈನವಾಗಿದ್ದು ಆಮೇಲೆ ವೀರಶೈವಮತವನ್ನು ಸ್ವೀಕರಿಸಿ ಮತ್ತೆ ಜೈನಧರ್ಮಕ್ಕೆ ಹಿಂದಿರುಗಿದನೆಂಬ ಪ್ರತೀತಿ ಇದೆ.

8. ಭರತೇಶವೈಭವ, ತ್ರಿಲೋಕಶತಕ, ಅಪರಾಜಿತೇಶ್ವರಶತಕ, ರತ್ನಾಕರಶತಕ, ಆಧ್ಯಾತ್ಮಿಕ ಗೀತೆಗಳು ಇವು ರತ್ನಾಕರನ ಕೃತಿಗಳು. ಭರತೇಶವೈಭವ ಜೈನ ಶಲಾಕಾಪುರುಷನಲ್ಲಿ ಒಬ್ಬನಾದ ಭರತೇಶನ ಕಥೆಯನ್ನು ನಿರೂಪಿಸುತ್ತದೆ. ತ್ರಿಲೋಕಶತಕ ಲೋಕಾಕಾರದ ವರ್ಣನೆಯನ್ನು ಕೊಡುತ್ತದೆ. ಅಪರಾಜಿತೇಶ್ವರಶತಕ ಮತ್ತು ರತ್ನಾಕರಶತಕಗಳು ಧರ್ಮವಿಚಾರವನ್ನು ಆಧ್ಯಾತ್ಮಿಕ ಅನುಭವವನ್ನು ನಿರೂಪಿಸುತ್ತವೆ. ಆಧ್ಯಾತ್ಮಿಕ ಗೀತೆಗಳು ಸ್ತೋತ್ರಜಾತಿಗೆ ಸೇರಿದ ಹಾಡುಗಳ ಸಂಕಲನ.

9. ಭರತೇಶವೈಭವ ಸಾಂಗತ್ಯ ಕೃತಿ. ೮೦ ಸಂಧಿಗಳು ೯೯೦೭ ಪದ್ಯಗಳು ಇವೆ. ಭರತೇಶನ ಯೋಗಭೋಗ ಸಮನ್ವಯ ನಿರೂಪಣೆ ಇಲ್ಲಿ ಮುಖ್ಯವಾದ ಉದ್ದೇಶ.

10. ಭರತೇಶವೈಭವ ಸಾಂಗತ್ಯದಲ್ಲಿ ರಚಿತವಾಗಿದೆ. ಅಚ್ಚಕನ್ನಡ ದೇಸಿಯನ್ನು ಇದರಲ್ಲಿ ಕಾಣುತ್ತೇವೆ. ಸರಳತೆ, ಮಾಧುರ್ಯ ಜನಪದ ಸತ್ವಗಳು ಇದರಲ್ಲಿ ನಿಚ್ಚಳವಾಗಿ ಗೋಚರಿಸುತ್ತವೆ. ಉಪಮೆಗಳನ್ನು ಹೆಚ್ಚಾಗಿ ತಂದಿದ್ದು ಈತನನ್ನು ಉಪಮಾಲೋಲ ಎನ್ನಬಹುದು ಎನಿಸಿಕೊಂಡಿದ್ದಾನೆ.

11. ತೀರ್ಥಂಕರನನ ಜೊತೆ ನಿರೂಪಿತವಾಗುತ್ತಿದ್ದ ಚಕ್ರವರ್ತಿಯ ಕಥೆಯನ್ನು ಪ್ರತ್ಯೇಕಿಸಿ ನಿರೂಪಿಸಿದವನ್ನು ರತ್ನಾಕರವರ್ಣಿ. ಅವನ ಭರತೇಶ ವೈಭವ ಕೃತಿ ಸಾಂಗತ್ಯದಲ್ಲಿ ರಚನೆಯಾದ ಶ್ರೇಷ್ಠ ಕೃತಿ ಎನಿಸಿದೆ.

12. ಸಂಚಿಯ ಹೊನ್ನಮ್ಮನ ಕಾಲ ಕ್ರಿ.ಶ. ೧೭೦೦.

13. ಹೊನ್ನಮ್ಮ ಚಿಕ್ಕದೇವರಾಯನ ಆಸ್ಥಾನದಲ್ಲಿ ಸಂಚಿಯ ಊಳಿಗದವಳಾಗಿದ್ದಳು. ಮೈಸೂರು ಜಿಲ್ಲೆಯ ಯಳಂದೂರಿನವಳಾದ ಈಕೆ ಚಿಕ್ಕ ದೇವರಾಜನ ಪಟ್ಟದರಿಸಿ ದೇವರಾಜಮ್ಮಣ್ಣಿಯೊಡನೆ ಶ್ರೀರಂಗಪಟ್ಟಣಕ್ಕೆ ಬಂದು ಸೇರಿದಳು.

14. 'ಹದಿಬದೆಯ ಧರ್ಮ' ಹೊನ್ನಮ್ಮ ಬರೆದಿರುವ ಕೃತಿ. ಇದು ಪತಿವ್ರತಧರ್ಮವನ್ನು ನಿರೂಪಿಸುತ್ತದೆ. ಸಾಂಗತ್ಯ ಛಂದಸ್ಸಿನಲ್ಲಿದೆ. ೯ ಸಂಧಿಗಳು ೪೭೫ ಪದ್ಯಗಳಿವೆ.

4.8 ಪರಾಮರ್ಶನ ಗ್ರಂಥಗಳು

1. ಕನ್ನಡ ಸಾಹಿತ್ಯ ಚರಿತ್ರೆ : ರಂ. ಶ್ರೀ ಮುಗಳಿ

2. ಸಂಕ್ಷಿಪ್ತಕನ್ನಡ ಸಾಹಿತ್ಯ ಚರಿತ್ರೆ : ಕೆ.ವೆಂಕಟರಾಮಪ್ಪ

3. ಕನ್ನಡ ಸಾಹಿತ್ಯ ಚರಿತ್ರೆ : ತ.ಸು. ಶಾಮರಾಯ

4. ಸಾಂಗತ್ಯ ಕವಿಗಳು : ಹಂಪ ನಾಗರಾಜಯ್ಯ
(ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸರ್ಗ.) ಬೆಂಗಳೂರು ವಿಶ್ವವಿದ್ಯಾನಿಲಯ.

ಟಿಪ್ಪಣಿಗಳು


ಟಿಪ್ಪಣಿಗಳು

ಟಿಪ್ಪಣಿಗಳು

ಆದೇಶ ಸಂಖ್ಯೆ : ಕರಾಮುವಿ/ಸಿಪಾವಿ/4-813/2007-08, ಚೈತ್ರ ಎಂಟರ್‌ಪ್ರೈಸಸ್, ಬೆಂಗಳೂರು ತಾ|| 08.06.2007
ಕಾಗದ : 60 ಜಿ.ಎಸ್.ಎಂ. - ಎಂ.ಪಿ.ಎಂ. ಮುಖಪುಟ 170 ಜಿ.ಎಸ್.ಎಂ. ಆರ್ಟ್
ಪರಿಮಾಣ : 1200 ಪ್ರತಿಗಳು (ಸಂಖ್ಯೆ 1ರಿಂದ 1200)


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಹಾಗೂ ಅಧ್ಯಯನ ಕೇಂದ್ರಗಳು

Regional and Study Centres of Karnataka State Open University



(ನಮೂದಿಸಿರುವ ಅಂಕಿ - ಜಿಲ್ಲೆಯಲ್ಲಿರುವ ಒಟ್ಟು ಅಧ್ಯಯನ ಕೇಂದ್ರಗಳ ಸಂಖ್ಯೆಯನ್ನು ಸೂಚಿಸುತ್ತದೆ.)

(The Number indicate the total number of study Centres existing in that districts.)


Feedback : improvement, revision and launching of new programmes
Multimedia learning material
STUDENTS
Academic and other support
Evaluation - methods and stages
INSTRUCTIONAL SYSTEM